ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕೋಲ್ಕತ್ತಾದಲ್ಲಿ ಇಂದು ವಿಂಡೀಸ್-ಭಾರತ ಕ್ವಾರ್ಟರ್

ಭಾರತಕ್ಕೆ ಮಾಡು ಇಲ್ಲವೇ ಮಡಿ ಪಂದ್ಯ, ಸೋತವರು ಹೊರಕ್ಕೆ

ಪಂದ್ಯ ಆರಂಭ: ಸಂಜೆ 7 ಗಂಟೆ

೧೧

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್: ಮೋದಿ

೦೫



ಮಂಗಳೂರು
ಭಾನುವಾರ, 1 ಮಾರ್ಚ್ 2026
ಸಂಪುಟ 47, ಸಂಚಿಕೆ 332, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ

ದಿನದ ಮಾತು

ಉತ್ತಮರ ನಡವಳಿಕೆ ವಿಚಿತ್ರ! ಅವರು ಸಂಪತ್ತನ್ನು ಹುಲ್ಲಿನಂತೆ ಹಗುರವಾಗಿ ಕಾಣುತ್ತಾರೆ. ಸಂಪತ್ತು ಬಂದಾಗ ಅದರ ಭಾರದಿಂದ ಬಾಗುತ್ತಾರೆ.

▲ಚಾಣಕ್ಯ ನೀತಿ

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ರಾಗಾ ಜೈಲಲ್ಲಿ ಕೂರಲು ತಯಾರಾ?: ಕೇಜ್ರಿ ಪ್ರಶ್ನೆ

• ಪುಟ ೫

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

• ಪುಟ ೫

ಪ.ಬಂಗಾಳದ ಮತ ಪಟ್ಟಿ: 63 ಲಕ್ಷ ಹೆಸರು ಡಿಲೀಟ್

• ಪುಟ ೫

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

• ಪುಟ ೫

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿ | ಟೆಹ್ರಾನ್‌ನಿಂದ ಗಲ್ಫ್ ರಾಜಧಾನಿವರೆಗೆ ಕ್ಷಿಪಣಿ ಮಳೆ
ಖಮೇನಿ ನಿವಾಸ ಗುರಿ; ರಕ್ಷಣಾ ಸಚಿವ, ಕಮಾಂಡರ್ ಸಾವು | ಅಮೆರಿಕ ನೆಲೆಗಳ ಮೇಲೆ ಪ್ರತಿದಾಳಿ

ಮಧ್ಯಪ್ರಾಚ್ಯ ಸಮರಾಂಗಣ



• **ಹೊಸದಿಲ್ಲಿ /ಟೆಹ್ರಾನ್/ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ವರ್ಷಗಳಲ್ಲೇ ಅತ್ಯಂತ ಗಂಭೀರ ಉಲ್ಬಣ ಸನ್ನಿವೇಶ ನಿರ್ಮಾಣವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇತೃತ್ವದಲ್ಲಿ ಶನಿವಾರ ಇರಾನ್ ವಿರುದ್ಧ ಜಂಟಿ ಸೈನಿಕ ಕಾರ್ಯಾಚರಣೆ ಆರಂಭಗೊಂಡಿದೆ. ಟೆಹ್ರಾನ್ ಡೌನ್‌ಟೌನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ಸಂಭವಿಸಿದ್ದು, ಹೊಗೆಯ ಮೋಡಗಳ ದೃಶ್ಯಗಳು ವರದಿಯಾಗಿವೆ. ಇರಾನ್‌ನ ಶಾಲೆಯೊಂದರ ಮೇಲೆ ಅಮೆರಿಕ-ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಕನಿಷ್ಠ 51 ಮಕ್ಕಳು ಮೃತಪಟ್ಟಿದ್ದಾರೆ.

ಇಸ್ರೇಲ್ ಸೈನ್ಯವು ತಿಂಗಳುಗಳ ನಿಕಟ ಮತ್ತು ಜಂಟಿ ಯೋಜನೆ ನಂತರ ಈ ದಾಳಿ ನಡೆದಿರುವುದಾಗಿ ತಿಳಿಸಿದೆ. ಪೆಂಟಗನ್ ಕಾರ್ಯಾಚರಣೆಗೆ 'ಆಪರೇಷನ್ ಎಪಿಕ್ ಫ್ಯೂರಿ' ಎಂದು ಹೆಸರಿಟ್ಟಿದ್ದು, ಇಸ್ರೇಲ್ ಇದನ್ನು 'ರೋರಿಂಗ್ ಲಯನ್' ಅಭಿಯಾನವೆಂದು ವಿವರಿಸಿದೆ.

ಖಮೇನಿ ನಿವಾಸ ಗುರಿ: ದಾಳಿಯ ಮೊದಲ ಅಲೆಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಟೆಹ್ರಾನ್ ನಿವಾಸದ ಸಮೀಪದ ಪ್ರದೇಶ ಗುರಿಯಾಗಿತ್ತು. ಅವರು ಆ ವೇಳೆಯಲ್ಲಿ ಅಲ್ಲಿದ್ದರೇ ಎಂಬುದು ಸ್ಪಷ್ಟವಾಗಿಲ್ಲ. ಮಾಧ್ಯಮ ವರದಿಗಳ ಪ್ರಕಾರ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಮತ್ತು ಭದ್ರತಾ ವ್ಯವಸ್ಥೆಯ ಹಿರಿಯ ಅಧಿಕಾರಿಗಳ ಸಭೆ ನಡೆಯುತ್ತಿದ್ದ ಸ್ಥಳಗಳನ್ನೂ ಗುರಿಯಾಗಿಸಲಾಗಿದೆ.

ಕೆಲವು ಮಾಧ್ಯಮಗಳು ವರದಿ ಮಾಡಿರುವ ಪ್ರಕಾರ, ಆಯತೊಲ್ಲಾ ಅಲಿ ಖಮೇನಿ ಅವರು ಮೃತಪಟ್ಟಿದ್ದಾರೆ ಎನ್ನಲಾಗುತ್ತಿದೆ.

➡ ಪುಟ ೪

ಅಮೆರಿಕ, ಇಸ್ರೇಲ್ ದಾಳಿ

- ಇರಾನ್ ಸುಪ್ರೀಂ ಲೀಡರ್ ಖಮೇನಿ ಕಚೇರಿ ಸುತ್ತಮುತ್ತ ಪ್ರದೇಶ ಗುರಿಯಾಗಿಸಿ ದಾಳಿ
- ಇರಾನ್‌ನ ವಿವಿಧ ನಗರಗಳಲ್ಲಿ ಭಾರೀ ಸ್ಫೋಟ, ಪಶ್ಚಿಮ ಇರಾನ್ ಸೈನಿಕ ತಾಣಗಳು
- ದಕ್ಷಿಣ ಇರಾನ್‌ನ ಬಾಲಕಿಯರ ಶಾಲೆಯಲ್ಲಿ 57 ಜನ ಸಾವು

ಇರಾನ್ ಪ್ರತಿದಾಳಿ

- ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ
- ಅಮೆರಿಕ ಸೇನಾ ನೆಲೆಗಳಾದ ಬಹ್ರೇನ್, ಕುವೈತ್ ಮತ್ತು ಕತಾರ್ ಸೇರಿ ವಿವಿಧೆಡೆ ದಾಳಿ

ಏನೆಲ್ಲಾ ಪರಿಣಾಮ?

- ಮಧ್ಯಪ್ರಾಚ್ಯದಲ್ಲಿ ವಿಮಾನ ಹಾರಾಟ ವ್ಯತ್ಯಯ
- ತಮ್ಮ ವಾಯುಪ್ರದೇಶ ತಾತ್ಕಾಲಿಕ ಮುಚ್ಚಿದ ಯುಎಇ ಮತ್ತು ಇರಾಕ್
- ಹೋರ್ಮುಜ್ ಜಲಸಂಧಿ ಪ್ರದೇಶದಲ್ಲಿ ಅಸ್ಥಿರತೆ ಉಂಟಾದರೆ ಜಾಗತಿಕ ತೈಲ ಮಾರುಕಟ್ಟೆಗೆ ಪೆಟ್ಟು



ಇರಾನ್ ರಾಜಧಾನಿ ಟೆಹರಾನ್ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ.



ಇಸ್ರೇಲ್, ಬಹ್ರೇನ್, ಕತಾರ್, ಯುಎಇ, ಸೌದಿ ಮೇಲೆ ಇರಾನ್ ದಾಳಿ

ಉದ್ವಿಗ್ನತೆಗೆ ಕಾರಣ?

- ಇತ್ತೀಚಿನ ಅಣು ಮಾತುಕತೆ ವಿಫಲವಾದದ್ದು ದಾಳಿಗೆ ಪ್ರಮುಖ ಕಾರಣ
- ಇರಾನ್ ಅಣು ಕಾರ್ಯಕ್ರಮ ಮತ್ತು ಕ್ಷಿಪಣಿ ಅಭಿವೃದ್ಧಿ ಕುರಿತು ಅಮೆರಿಕ ಆತಂಕ
- ಕಳೆದ ವರ್ಷ ನಡೆದ 12 ದಿನಗಳ ಯುದ್ಧದ ನಂತರವೂ ಮುಂದುವರಿದ ಉದ್ವಿಗ್ನತೆ

ಅಮೆರಿಕದ ಸೇನಾ ನೆಲೆಗಳೇ ಟಾರ್ಗೆಟ್

• ಪುಟ ೫

ಖಮೇನಿ ನಾಪತ್ತೆ

ಆಯತೊಲ್ಲಾ ಅಲಿ ಖಮೇನಿ ದಾಳಿಗೂ ಮೊದಲು ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ ಮತ್ತು ದಾಳಿಯ ನಂತರವೂ ಕಾಣಿಸಿಲ್ಲ. ಜೂನ್‌ನ 12 ದಿನಗಳ ಯುದ್ಧದ ವೇಳೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ನಂಬಲಾಗಿತ್ತು.

ಬಂಕರ್‌ನಲ್ಲಿ ಭಾರತೀಯರು

ಇಸ್ರೇಲ್ ನಗರಗಳಲ್ಲಿ ಸೈರನ್ ಮೊಳಗುತ್ತಿದ್ದಂತೆ ಭಾರತೀಯ ಕಾರ್ಮಿಕರು ಮತ್ತು ಕುಟುಂಬಗಳು ಭೂಗತ ಬಂಕರ್‌ಗಳಲ್ಲಿ ಆಶ್ರಯ ಪಡೆದಿದ್ದಾರೆ. ಗುಜರಾತಿ ಸಮುದಾಯಕ್ಕೆ ಈವರೆಗೆ ಹಾನಿ ವರದಿಯಾಗಿಲ್ಲ. ಭಾರತ ಗಲ್ಫ್ ಪ್ರದೇಶದ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಸಂಯಮಕ್ಕೆ ಕರೆ ನೀಡಿದೆ.

ಇಂಧನ ಬೆಲೆ ಏರಿಕೆ ಆತಂಕ

ಕ್ರೈಸಿಸ್ ಗ್ರೂಪ್‌ನ ಇರಾನ್ ಪ್ರಾಜೆಕ್ಟ್ ನಿರ್ದೇಶಕ ಅಲಿ ವೈಝ್, ಯುದ್ಧ ವಿಸ್ತರಿಸಬಹುದೆಂದು ಎಚ್ಚರಿಸಿದ್ದಾರೆ. ಹೋರ್ಮುಜ್ ಜಲಸಂಧಿ ಮೂಲಕ ಜಗತ್ತಿನ ತೈಲ ಸರಬರಾಜಿನ ಸುಮಾರು ಐದನೇ ಭಾಗ ಸಾಗುತ್ತದೆ. ಅಲ್ಪ ಅಡಚಣೆ ಕೂಡ ಇಂಧನ ಬೆಲೆ ಏರಿಕೆಗೆ ಕಾರಣವಾಗಬಹುದು ಎಂದು ತಿಳಿಸಿದ್ದಾರೆ.

ಸುರಕ್ಷಿತವಾಗಿರಲು ಸೂಚನೆ

ಅಮೆರಿಕ ದಾಳಿಯ ನಂತರ ಇರಾನ್ ಮತ್ತು ಇಸ್ರೇಲ್‌ನಲ್ಲಿರುವ ಭಾರತೀಯರು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ.

ಸ್ವಾಯತ್ತತೆ, ಪ್ರಾದೇಶಿಕ ಅಖಂಡತೆ ಗೌರವಿಸಿ

• ಪುಟ ೪

ವಿಮಾನ ಹಾರಾಟ ವ್ಯತ್ಯಯ

• ಪುಟ ೪

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ



• **ಬೆಂಗಳೂರು:** ಶಿಕ್ಷಣ ಕ್ಷೇತ್ರವನ್ನು ಅವಲೋಕಿಸಿದಾಗ ಗುಣಮಟ್ಟದ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಶಿಕ್ಷಣ ದೊರಕುತ್ತಿದೆಯೇ ಎಂದು ಯೋಚಿಸಬೇಕಿದೆ. ಇದು ಶಿಕ್ಷಕರ ತಪ್ಪಲ್ಲ. ವ್ಯವಸ್ಥೆಯ ಪರಿಣಾಮವಾಗಿ ಜಾತಿ ವ್ಯವಸ್ಥೆ ಸಮಾಜದಲ್ಲಿ ಭದ್ರವಾಗಿ ನೆಲೆಯೂರಿರುವುದರಿಂದ ಶಿಕ್ಷಣದಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆ ಮಾಡಲು ಸಾಧ್ಯವಾಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಶನಿವಾರ ಅರಮನೆ ಮೈದಾನ ತ್ರಿಪುರವಾಸಿನಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಶೈಕ್ಷಣಿಕ ಮಹಾ ಸಮ್ಮೇಳನದಲ್ಲಿ ಸಿಎಂ

➡ ಪುಟ ೪



ಕರುಳು ಕಲಕುವ ಕೇರಳ ಸ್ಟೋರಿ

▸ ವಿನಾಯಕ ಭಟ್ಟ ಮೂರೂರು

ಲವ್ ಜಿಹಾದ್‌ಗೆ ಸಿಲುಕಿದ ಹಿಂದು ಹೆಣ್ಣುಮಕ್ಕಳ ಸ್ಥಿತಿ ಯಾರಿಗೂ ಬೇಡ. ಇತ್ತ ಮನೆಯಲ್ಲೂ ನಂಬಿಕೆ ಕಳೆದುಕೊಂಡು, ಅತ್ತ ಕಟ್ಟಿಕೊಂಡವನೂ ನಂಬಿಕೆ ಉಳಿಸಿಕೊಳ್ಳದೆ, ಅಲ್ಲೂ ಸಲ್ಲಲಾಗದೆ, ಇಲ್ಲೂ ಸಲ್ಲದ ತ್ರಿಶಂಕು ಸ್ಥಿತಿ.

ಆ ಹಿಂಸೆ ಯಾರಿಗೂ ಬೇಡ. ಕೆಲವರು ಅನಿವಾರ್ಯವಾಗಿ ಒಗ್ಗಿ ಕೊಂಡರೆ ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದಿಲ್ಲವಾದರೆ ಕೊಲೆಯಾಗುತ್ತಾರೆ. ಇದ್ಯಾವುದನ್ನೂ ಮಾಡಿಕೊಳ್ಳಲಾಗದವರು ಮಕ್ಕಳನ್ನು ಹೆರುವ ಯಂತ್ರವಾಗುತ್ತಾರೆ. ಲವ್ ಜಿಹಾದ್‌ಗೊಳಗಾದ ಹಿಂದು ಹೆಣ್ಣುಮಕ್ಕಳ ಇಂತಹ ಗೊಂದಲದ ಕರುಣಾಜನಕ ಸ್ಥಿತಿಯನ್ನು ಕೇರಳ ಸ್ಟೋರಿ 2 ಸಿನಿಮಾ ಕಟ್ಟಿಕೊಡುತ್ತದೆ. ಕೇರಳ ಸ್ಟೋರಿ ಸಿನಿಮಾ ಕೇರಳವನ್ನ ಗಮನದಲ್ಲಿರಿಸಿಕೊಂಡು, ಲವ್ ಜಿಹಾದ್ ನಡೆಯುವ ಬಗೆಯನ್ನು ತೋರಿಸಿತ್ತು. ಕೇರಳ ಸ್ಟೋರಿ 2 ಸಿನಿಮಾ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಕೇರಳದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಸಿನಿಮಾ ಕತೆ ರೂಪುಗೊಂಡಿದೆ. ಒಬ್ಬ ಮುಸ್ಲಿಂ ಹುಡುಗ ತನ್ನ ಹೆಸರು-ಧರ್ಮವನ್ನು ಸಂಪೂರ್ಣ ಮರೆಮಾಚಿ ಹಿಂದು ಹುಡುಗಿಯನ್ನು ಪ್ರೀತಿಸುತ್ತಾನೆ.

➡ ಪುಟ ೪

ವಚನ ಭಾಷಾಂತರ: ಸುತ್ತೂರು ಶ್ರೀ ಶ್ಲಾಘನೆ



ಬೆಂಗಳೂರು: ಅಲ್ಲಮನ ವಚನಗಳು ತುಂಬಾ ಸಂಕೀರ್ಣವಾಗಿದ್ದು, ಇಂತಹ ಕೃತಿಗಳು ಅನುವಾದಕ್ಕೆ ನಿಲುಕುವುದಿಲ್ಲ. ಆದರೂ ಈ ಸವಾಲನ್ನು ಸ್ವೀಕರಿಸಿ, ಇಂಗ್ಲಿಷ್ ಭಾಷಾಂತರವನ್ನು ಮಾಡಿರುವುದು ಶ್ಲಾಘನೀಯ ಎಂದು ಸಚಿವ ಎಂ.ಬಿ ಪಾಟೀಲ ಹೇಳಿದರು.

ಮೈಸೂರಿನ ಜೆಎಸ್ಎಸ್ ಮಹಾವಿದ್ಯಾಪೀಠವು ಇಲ್ಲಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಶನಿವಾರ ಏರ್ಪಡಿಸಿದ್ದ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕನ್ನಡದ ಸಹಜತೆಯಲ್ಲಿ ಮೂಡಿಬಂದಿರುವ ವಚನಗಳು ಇಂಗ್ಲಿಷಿಗೆ ಅನುವಾದಗೊಳ್ಳುವುದರಿಂದ ಅದು ಜಾಗತಿಕ ಸ್ತರದಲ್ಲಿ ಪರಿಚಯವಾಗುತ್ತದೆ. ಇದರಿಂದ ಕರ್ನಾಟಕಕ್ಕೂ ನೆಲೆ-ಬೆಲೆಗಳು ಪ್ರಾಪ್ತವಾಗುತ್ತವೆ.

ವಿಜಯಪುರದಲ್ಲಿ ಜ್ಞಾನ ಯೋಗಾಶ್ರಮ ಕಟ್ಟಿ, ಆ ಊರನ್ನೇ ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದ ಶ್ರೀಸಿದ್ಧೇಶ್ವರ ಸ್ವಾಮಿಗಳು ವಚನಕಾರ ಅಲ್ಲಮಪ್ರಭುವನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಂಡಿದ್ದರು. ಅಲ್ಲದೆ, ತಮ್ಮ ಅಂತಿಮ ಇಚ್ಛಾಪತ್ರದಲ್ಲೂ ಆತನ ವಚನವನ್ನೇ ಬರೆದಿದ್ದರು. ಅಂಥ ಜ್ಞಾನಿಗಳು ಅವನ ಬಗ್ಗೆ ಬರೆದಿರುವ ಕೃತಿಯು ಈಗ ಇಂಗ್ಲೀಷಿಗೆ ಭಾಷಾಂತರವಾಗಿರುವುದು ಕನ್ನಡ ಸಂಸ್ಕೃತಿಯ ವಿಸ್ತರಣೆಯ ಭಾಗವಾಗಿದೆ ಎಂದರು.

ಸಿದ್ಧೇಶ್ವರ ಸ್ವಾಮೀಜಿಗಳು ಅಧ್ಯಯನ, ಆಧ್ಯಾತ್ಮಿಕತೆ ಮತ್ತು ವಸ್ತುನಿಷ್ಠ ನಿಲುವುಗಳಿಗೆ ಹೆಸರಾಗಿದ್ದರು. ಅವರು ಜೊತೆಯಲ್ಲೇ ಸುತ್ತಲಿನ ಪರಿಸರವನ್ನು ಕೂಡ ಅಗಾಧವಾಗಿ ಪ್ರೀತಿಸುತ್ತಿದ್ದರು. ಅವರು ಅಲ್ಲಮನ ವಚನಗಳನ್ನು ತುಂಬಾ ವಿಭಿನ್ನವಾಗಿ ವ್ಯಾಖ್ಯಾನಿಸುತ್ತಿದ್ದರು. ಇಂಗ್ಲಿಷ್ ಮೇಲೆ ಅಗಾಧ ಹಿಡಿತ ಹೊಂದಿದ್ದ ಅವರು, ವಚನ ಸಂಸ್ಕೃತಿಯನ್ನು ಹೊಸ ಬಗೆಯ ಅರ್ಥವಿಸ್ತಾರಕ್ಕೆ ಕೊಂಡೊಯ್ದರು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀಬಸವಲಿಂಗ ಸ್ವಾಮಿಗಳು, ನ್ಯಾ.ಕೃಷ್ಣ ದೀಕ್ಷಿತ್, ವಿದ್ವಾಂಸ ಮಲ್ಲೇಪುರಂ ವೆಂಕಟೇಶ, ಸಿ. ಸೋಮಶೇಖರ್ ಉಪಸ್ಥಿತರಿದ್ದರು.

ಮಕ್ಕಳು ಇತಿಹಾಸ ಸೃಷ್ಟಿಸುವಂತಾಗಲಿ: ಶಿವಕುಮಾರ್

ಬೆಂಗಳೂರು: ಇತಿಹಾಸದ ಪಾಠ ಕಲಿಸುವ ಕೆಲಸವಷ್ಟೇ ಆಗಬಾರದು. ಇತಿಹಾಸ ಸೃಷ್ಟಿಸುವಂತೆ ಮಕ್ಕಳನ್ನು ಶಿಕ್ಷಕರು ತಯಾರು ಮಾಡಿ. ನೀವು ಶಾಲೆಗೆ ಬರುವ ಮಕ್ಕಳನ್ನು ಮಾತ್ರ ಬೆಳೆಸುತ್ತಿಲ್ಲ. ಸಮಾಜವನ್ನೇ ಬೆಳೆಸುತ್ತಿದ್ದೀರಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಅರಮನೆ ಮೈದಾನ ತ್ರಿಪುರ ವಾಸಿನಿಯಲ್ಲಿ ಶನಿವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸ ಮರೆತವನು ಇತಿಹಾಸ ಸೃಷ್ಟಿಸುವುದಿಲ್ಲ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದಾರೆ. ಮಕ್ಕಳ ಕನಸ್ಸು ನನಸಾಗಿಸಲು ಶ್ರಮ, ಬದ್ಧತೆ, ಶಿಸ್ತಿರಬೇಕು. ಮಕ್ಕಳು ದೊಡ್ಡ ಕನಸ್ಸು ಕಾಣುವಂತೆ ಮಾಡಬೇಕು. ನೀವು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಹಾಕುವ ಅಡಿಪಾಯ ಕೊನೆವರೆಗೂ ಇರುತ್ತದೆ ಎಂದು ಹೇಳಿದರು.

ಉತ್ತಮವಾಗಿರುವ ಖಾಸಗಿ ಶಾಲೆಗಳು ಈ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಶಿಕ್ಷಕರನ್ನು ನೇಮಿಸಬೇಕು ಎಂದು ಸೂಚಿಸಿದ್ದೇವೆ. ಮೂರು ಶಾಲೆ ನಡೆಸುತ್ತಿರುವ ನನ್ನ ಮಗಳಿಗೂ ಸರ್ಕಾರಿ ಶಾಲೆ ದತ್ತು ಪಡೆಯುವಂತೆ ಸೂಚಿಸಿದ್ದೇನೆ. ನಮ್ಮ ಕ್ಷೇತ್ರದ ಶಾಲೆಗಳನ್ನು ದತ್ತು ಪಡೆಯಲಾಗುತ್ತಿದೆ. ನಾನು ಶಿಕ್ಷಣ ಪ್ರೇಮಿ. ಈ ಮೂಲಕ 90 ಸಾವಿರ ಶಿಕ್ಷಕರ ಹುದ್ದೆ ಭರ್ತಿ ಮಾಡಬೇಕು. ಮುಂದಿನ ದಿನಗಳಲ್ಲಿ ಇದನ್ನು ಜಾರಿ ಮಾಡುತ್ತೇವೆ ಎಂದು ಹೇಳಿದರು.



ದಾಖಲಾತಿ ಹೆಚ್ಚಿಸುವ ಗುರಿ ಹೊಂದಬೇಕು

ಮಕ್ಕಳಿಗೆ ಮೊಟ್ಟೆ, ಹಾಲು, ಶೂ-ಸಾಕ್ಸ್ ಮತ್ತು ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಯೋಜನೆಗಳನ್ನು ಚುರುಕುಗೊಳಿಸಲಾಗಿದೆ. ಈ ಬಾರಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಶೇ.20 ರಷ್ಟು ಹೆಚ್ಚಿಸುವ ಗುರಿಯನ್ನು ಶಿಕ್ಷಕರು ಹೊಂದಬೇಕು. ಕಳೆದೆರಡು ವರ್ಷಗಳಲ್ಲಿ ಸುಮಾರು 14,499 ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ಶಿಕ್ಷಕರು ಎದುರಿಸುತ್ತಿದ್ದ ವರ್ಗಾವಣೆ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಶಿಕ್ಷಕ ಸ್ನೇಹಿ ಆಡಳಿತಕ್ಕೆ ಒತ್ತು ನೀಡಲಾಗಿದೆ ಹಾಗೂ ಇತಿಹಾಸದಲ್ಲೇ ಮೊದಲ ಬಾರಿಗೆ ರಾಜ್ಯದ 46 ಸಾವಿರ ಸರ್ಕಾರಿ ಶಾಲೆಗಳಲ್ಲಿ ಏಕಕಾಲಕ್ಕೆ ಪೋಷಕರ ಸಭೆಯನ್ನು ನಡೆಸುವ ಮೂಲಕ ಶಾಲಾ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಹೆಚ್ಚಿಸಲಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ರಾಜ್ಯ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎನ್‌ಪಿಎಸ್ ರದ್ದತಿ ಭರವಸೆಯನ್ನು ಸರ್ಕಾರದ ಅವಧಿಯಲ್ಲೇ ಪೂರೈಸುವ ಮೂಲಕ ಒಪಿಎಸ್‌ನ್ನು ಮರು ಜಾರಿ ಮಾಡಬೇಕು.
■ **ಚಂದ್ರಶೇಖರ್ ನುಗ್ಗಲಿ,** ರಾಜ್ಯಾಧ್ಯಕ್ಷ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ಪ್ರಮುಖ ಬೇಡಿಕೆಗಳೇನು?

- ಎನ್‌ಪಿಎಸ್ ರದ್ದುಗೊಳಿಸಿ ಒಪಿಎಸ್ ಜಾರಿಗೊಳಿಸಬೇಕು
- ಪದವಿ ಪೂರೈಸಿದ ಶಿಕ್ಷಕರಿಗೆ ವೇತನ ಬಡ್ತಿ ನೀಡಬೇಕು
- ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ನೀಡಬೇಕು
- ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಪ್ರಾರಂಭಿಸಬೇಕು
- ಶಿಕ್ಷಕರ ಸಂಘಕ್ಕೆ ಬೆಂಗಳೂರಿನ ಗಾಂಧಿನಗರದಲ್ಲಿ ನಿವೇಶನ ಒದಗಿಸಬೇಕು
- ಶಿಕ್ಷಕರಿಗೆ ಹೆಚ್ಚುವರಿ ಕೆಲಸಗಳಿಂದ ಮುಕ್ತಿಗೊಳಿಸಬೇಕು

ಕಿರುಸುದ್ದಿ

ಬಜೆಟ್ ನಂತರ ಪಕ್ಷದಲ್ಲಿನ ಗೊಂದಲ ನಿವಾರಣೆ



ಬಾಗಲಕೋಟೆ: ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಗೊಂದಲವನ್ನು ಬಜೆಟ್ ನಂತರ ನಮ್ಮ ಪಕ್ಷದ ಹೈಕಮಾಂಡ್ ಬಗೆ ಹರಿಸಲಿದೆ. ಮುಖ್ಯಮಂತ್ರಿ ಬದಲಾವಣೆ ಇಷ್ಟು ವರ್ಷ ಎಂಬುದರ ಕುರಿತು ಎಲ್ಲಿಯೂ ಚರ್ಚೆಯಾಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಕ್ಬಾಲ್ ಹುಸೇನ್ ಡಿಕೆ ಪರ ಬ್ಯಾಟಿಂಗ್ ಮಾಡಿರುವ ಕುರಿತು ಮಾತನಾಡಿದ ಸಚಿವರು, ರಾಜ್ಯದಲ್ಲಿ ಏಳುಕೋಟಿ ಜನಸಂಖ್ಯೆ ನಮ್ಮವರು. ಒಬ್ಬರು ಹೇಳಿದರೆ ಪಕ್ಷದ ನಿರ್ಣಯ ಆಗುವುದಿಲ್ಲ. ಮುಖ್ಯಮಂತ್ರಿ ಬದಲಾವಣೆ ಕುರಿತು ಎರಡೂವರೆ ವರ್ಷ ಮೂರುವರ್ಷ ಎಂದು ಹೇಳಿಲ್ಲ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಐದು ವರ್ಷ ಅಽಕಾರ ನಡೆಸಲಿದ್ದಾರೆ ಎಂದು ಹೇಳಿದರು. ಬಾಲಕೃಷ್ಣ ಮನೆಯಲ್ಲಿ ಡಿನ್ನರ್ ಮೀಟಿಂಗ್ ಕುರಿತು ಮಾತನಾಡಿ, ಮೊದಲಿನಿಂದಲೂ ಡಿ.ಕೆ.ಶಿವುಕುಮಾರ ಸಿಎಂ ಆಗಬೇಕು ಎಂದು ಬಯಸುತ್ತಿದ್ದಾರೆ. ಬಹಿರಂಗವಾಗಿ ಕೂಡ ಹೇಳಿದ್ದಾರೆ. ಪುನ: ಹೇಳ್ತಿದ್ದಾರೆ ಅಷ್ಟೇ ಎಂದು ತಿಳಿಸಿದರು.

ಫೈನಾನ್ಸ್ ಹಾವಳಿ: ಕುಟುಂಬ ಬೀದಿ ಪಾಲು

ಬೆಳಗಾವಿ: ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಗಳ ಹಾವಳಿ ತಡೆಗೆ ರಾಜ್ಯದ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದರೂ ಕಿರುಕುಳ ಮಾತ್ರ ನಿಂತಿಲ್ಲ. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿ ಅಲಖನೂರ ಗ್ರಾಮದಲ್ಲಿ ಖಾಸಗಿ ಫೈನಾನ್ಸ್ ಕಂಪನಿಯ ಕಿರುಕುಳಕ್ಕೆ ಮೂರು ತಿಂಗಳ ಹಸುಗುಸು ಜತೆ ಕುಟುಂಬ ಬೀದಿ ಪಾಲಾಗಿದೆ. ಚಿಕ್ಕೋಡಿಯ ಸ್ಮಾಲ್ ಫೈನಾನ್ಸ್ ಕಂಪನಿಯಿಂದ ಮನೆ ಸೀಜ್ ಮಾಡಲಾಗಿದ್ದು, ಮೂರು ತಿಂಗಳ ಹಸುಗೂಸು ಸೇರಿ ಐವರು ಕುಟುಂಬಸ್ಥರು ಬೀದಿ ಪಾಲಾಗಿ ವಾಸ್ತವ್ಯ ಇಲ್ಲದೆ. ಇಡೀ ರಾತ್ರಿ ಬೀದಿಯಲ್ಲೇ ಕಳೆದಿರುವ ಮನ ಕುಲುಕುವ ಘಟನೆ ನಡೆದಿದೆ. ಹನುಮಂತ ಪಾಟೀಲ್ ಎಂಬುವವರು ತಂದೆ ಶ್ರೀಕಾಂತ್ ಪಾಟೀಲ್ ಹೃದಯ ಶಸ್ತ್ರಚಿಕಿತ್ಸೆಗಾಗಿ ಮನೆ ಅಡವಿಟ್ಟು ಸುಮಾರು 20 ಲಕ್ಷ ರೂ. ಸಾಲ ಪಡೆದಿದ್ದರು. ಕಳೆದ ವರ್ಷ ಶ್ರೀಕಾಂತ್ ನಿಧನರಾದ ಬಳಿಕ, ಆರೋಗ್ಯ ಸಮಸ್ಯೆಯಿಂದಾಗಿ ಹನುಮಂತ ಕಳೆದ ಏಳು ತಿಂಗಳಿಂದ ಕಂತು ಪಾವತಿಸಲು ಸಾಧ್ಯವಾಗಿರಲಿಲ್ಲ. ಸುಮಾರು ಏಳು ಲಕ್ಷ ರೂ. ಬಾಕಿ ಇದ್ದ ಹಿನ್ನೆಲೆಯಲ್ಲಿ ಏಕಾಏಕಿ ಬಂದ ಫೈನಾನ್ಸ್ ಕಂಪನಿಯ ಸಿಬ್ಬಂದಿ ಮನೆ ಸೀಜ್ ಮಾಡಿದ್ದರಿಂದ ಕುಟುಂಬ ತೊಂದರೆಗೆ ಸಿಲುಕಿದೆ.

ಸರ್ಕಾರದ ಮೇಲೆ ಜನರ ವಿಶ್ವಾಸ ಇಲ್ಲ: ಬೊಮ್ಮಾಯಿ

ಹಾವೇರಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಕುರ್ಚಿಯ ಗುದ್ದಾಟ ಬಜೆಟ್ ನಂತರ ತೀವ್ರವಾಗಿ ಅಂತಿಮ ಘಟಕ್ಕೆ ತಲುಪಲಿದೆ. ಅದು ಕಾದಾಟವೇ ಆಗಲಿದ್ದು, ಸಂಧಾನ ಆಗಲು ಸಾಧ್ಯವಿಲ್ಲ. ಅದು ಯಾವ ರೀತಿ ಆಗುತ್ತದೆ ಎನ್ನುವುದನ್ನು ಕಾದು ನೋಡಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸರ್ಕಾರದ ಮೇಲೆ ಜನರ ವಿಶ್ವಾಸ ಸಂಪೂರ್ಣ ಹೋಗಿದೆ ಎಂದು ಹೇಳಿದರು.

ರಾಜಕಾರಣದಲ್ಲಿ ಶಸ್ತ್ರ-ಅಸ್ತ್ರ ಬೇಕಾಗಿಲ್ಲ: ಮಾಜಿ ಸಂಸದ ಡಿ.ಕೆ. ಸುರೇಶ್

ಅದೃಷ್ಟ ಇದ್ರೆ ಅಣ್ಣ ಸಿಎಂ!



ಬೆಂಗಳೂರು: ಹಣೆ ಬರಹದಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗುತ್ತಾರೆ. ಹಣೆಬರಹ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ತಿಳಿಸಿದರು.

ಶನಿವಾರ ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿ, ಶಸ್ತ್ರ ತ್ಯಾಗದ ಪ್ರಶ್ನೆಗೆ ಉತ್ತರಿಸಿದ ಅವರು, ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲವಲ್ಲ. ಶಸ್ತ್ರ ಇದೆ ಎಂದು ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು ಎಂದು ಕೇಳಿದರು. ಆದರೆ, ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ ಎಂದರು. ಇದು ರಾಜಕಾರಣ, ಇಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ ಎಂದರು.

ಶಾಸಕರ ದೆಹಲಿ ಯಾತ್ರೆ, ವಿಚಾರ ನನಗೆ ಗೊತ್ತಿಲ್ಲ: ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಬೇಕು. ಶಾಸಕರ ಭೋಜನಕೂಟ ನಡೆದಾಗ ನಾನು ಊರಲ್ಲಿ ಇರಲಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ ಎಂದು ತಿಳಿಸಿದರು. ಅಲ್ಲದೇ, ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟವಾಗಬಹುದು. ನನಗೆ ಕಷ್ಟ ಆಗುವುದಿಲ್ಲ. ಈ ಬಗ್ಗೆ ನಾನೇಗೆ ಹೇಳಲಿ ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಶಾಸಕರ ವಿಚಾರಧಾರೆ ಶಾಸಕರಿಗೇ ಸಂಬಂಧಿಸಿದ್ದೇ ಹೊರತು, ನನಗಲ್ಲ. ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಬರುವುದಿಲ್ಲ ಎಂದರು. ಮುಖ್ಯಮಂತ್ರಿ ಆಗಲು ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ ಎಂದರು. ದಯವಿಟ್ಟು ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯೆ ನೀಡುವೆ ಎಂದರು.

ಪಕ್ಷದಿಂದ ಕೆಎಂಎಫ್ ಚುನಾವಣೆ ಅಭ್ಯರ್ಥಿ ಆಯ್ಕೆ: ಕೆಎಂಎಫ್ ಚುನಾವಣೆ ಯಾವಾಗ ಮಾಡಬೇಕು ಎಂದು ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಆಗ ಪಕ್ಷ ತೀರ್ಮಾನ ಮಾಡುವ ವ್ಯಕ್ತಿಯೇ ಸ್ಪರ್ಧೆ ಮಾಡಲಿದ್ದಾರೆ ಎಂದರು. ಆದರೆ, ನಾನು ಯಾವುದಕ್ಕೂ ಆಕಾಂಕ್ಷಿ ಅಲ್ಲ. ನಾನು ರಾಜಕೀಯ ಪಂಡಿತನಲ್ಲ ಎಂದರು.

ಕೊಟ್ಟ ಗ್ಯಾರಂಟಿ ವಾಗ್ದಾನ ಉಳಿಸಿಕೊಳ್ಳಬೇಕು: ಗ್ಯಾರಂಟಿಯು ರಾಜ್ಯದ ಜನತೆಗೆ ಕೊಟ್ಟ ನಮ್ಮ ವಾಗ್ದಾನ. ನಾವು ಅದರಂತೆ ನಡೆಯಬೇಕು. ಪಕ್ಷದ ಅಧ್ಯಕ್ಷರು, ಸಿಎಂ ಸೇರಿದಂತೆ ಚುನಾವಣೆ ಎದುರಿಸಿದ ಎಲ್ಲರೂ ಗ್ಯಾರಂಟಿ ನೀಡುವುದಾಗಿ ಹೇಳಿದ್ದಾರೆ. ಅದನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಗ್ಯಾರಂಟಿ ವಾಗ್ದಾನ ಮಾಡುವ ಮುಂಚೆ ಚಿಂತಿಸಬೇಕಿತ್ತು

ಹೊರೆಯಾದರೂ ಆಗಲಿ, ಬೇರೆಯಾದರೂ ಆಗಲಿ. ಮಾತು ಕೊಡುವ ಮುನ್ನ ಚಿಂತನೆ ಮಾಡಬೇಕಿತ್ತು. ಮಾತು ಕೊಟ್ಟಾಗಿದೆ. ಅದರಂತೆ ನಡೆಯಬೇಕು. ಐದು ವರ್ಷಗಳ ಕಾಲ ಎಷ್ಟೇ ಕಷ್ಟ ಆದರೂ ಗ್ಯಾರಂಟಿಗಳನ್ನು ರಾಜ್ಯದ ಜನತೆಗೆ ಕೊಡಬೇಕು. ಅದು ನಮ್ಮ ನಂಬಿಕೆ ಎಂದು ತಿಳಿಸಿದರು. ಸಿರಿವಂತರು ಇದನ್ನು ಪಡೆಯುತ್ತಿದ್ದರೆ ಅದು ತಪ್ಪು. ಬಡವರಿಗಾಗಿ ಗ್ಯಾರಂಟಿ ಯೋಜನೆ ತರಲಾಗಿದೆ. ಈ ಯೋಜನೆ ಎಲ್ಲರೂ ಬಳಸುತ್ತಿರುವ ಬಗ್ಗೆ ಕೆಲವರು ಮಾತನಾಡಿರಬಹುದು. ನಾವು ಕೊಟ್ಟಿರುವ ವಾಗ್ದಾನವನ್ನು ಅನುಷ್ಠಾನ ಮಾಡಲಾಗಿದ್ದು, ಇದರಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಹಿಂದೆ ಸರಿದರೆ ಮಾತಿಗೆ ತಪ್ಪಿದಂತೆ ಆಗುತ್ತದೆ ಎಂದರು.

ಶಾಸಕರ ಫಾರಿನ್ ಟೂರ್ ಬಗ್ಗೆ ಗೊತ್ತಿಲ್ಲ: ಡಿಕೆಶಿ



ಶಾಸಕರು ದೆಹಲಿಗೆ ಹೋಗುವುದೂ ಗೊತ್ತಿಲ್ಲ. ಫಾರಿನ್ ಗೆ ಹೋಗುವುದೂ ಗೊತ್ತಿಲ್ಲ. ಈ ಬಗ್ಗೆ ನನ್ನನ್ನು ಯಾರೂ ಕೇಳಿಯೂ ಇಲ್ಲ, ಈ ವಿಚಾರದಲ್ಲಿ ನಾನು ಬಾಯಿ ಹಾಕುವುದಿಲ್ಲ. ನನ್ನ ಪರವಾಗಿ 139 ಶಾಸಕರು ಸೇರಿ ಮುಖ್ಯಮಂತ್ರಿಯವರು ನನ್ನ ಬೆಂಬಲಕ್ಕೆ ಇದ್ದೇ ಇದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಪಕ್ಷ ನಾಯಕ ಆರ್. ಅಶೋಕ್ ಟೀಕೆ

ಕುರ್ಚಿ ಕಾಳಗದಿಂದ ಅಭಿವೃದ್ಧಿ ಕುಂಠಿತ



ಮಂಡ್ಯ: ಸಾವಿರ ದಿನಗಳನ್ನು ಪೂರೈಸಿ ಮುನ್ನುಗ್ಗುತ್ತಿರುವ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಸಾವಿರ ಸಮಸ್ಯೆಗಳು, ಹಗರಣಗಳು ಗೊಂದಲಗಳಿಂದ ಕೂಡಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾವಿರ ದಿನಗಳನ್ನು ಪೂರೈಸಿದ್ದರೂ, ಬರೀ ಹಗರಣಗಳು, ಕುರ್ಚಿ ಕಾಳಗ, ಶಾಸಕರ ಡಿನ್ನರ್, ಬ್ರೇಕ್‌ಫಾಸ್ಟ್ ಮೀಟಿಂಗ್‌ಗೆ ಮಾತ್ರ ಸೀಮಿತವಾಗಿದೆ ಎಂದು ಆರೋಪಿಸಿದರು.

ಆರೋಗ್ಯ ಇಲಾಖೆಗೆ ಅನಾರೋಗ್ಯ: ರಾಜ್ಯದ ಸರ್ಕಾರಿ ಆಸ್ಪತ್ರೆಗಳು ಖಾಲಿ ಖಾಲಿಯಾಗಿವೆ. ಅಗತ್ಯ ಔಷಧಗಳಿಲ್ಲ. ಈ ಸರ್ಕಾರ ಔಷಧಗಳನ್ನೇ ಖರೀದಿಸುತ್ತಿಲ್ಲ. ಸರ್ಕಾರವೂ ಸರಬರಾಜು ಮಾಡುತ್ತಿಲ್ಲ. ಇಲ್ಲವೇ ಯೂಸರ್ಸ್ ಫಂಡ್‌ನಿಂದಲೂ ಖರೀದಿ ಮಾಡದಂತೆ ಆದೇಶ ನೀಡಿದೆ. ರೋಗಿಗಳು ಚೀಟಿ ಹಿಡಿದುಕೊಂಡು ಔಷಧ ಅಂಗಡಿಗಳತ್ತ ಹೋಗುವಂತಹ ಸ್ಥಿತಿಯಿಂದಾಗಿ ಆರೋಗ್ಯ ಇಲಾಖೆಗೆ ಅನಾರೋಗ್ಯ ಕಾಡುತ್ತಿದೆ ಎಂದು ಟೀಕಿಸಿದರು.

ಮಾ. 12ರಿಂದ ವೈದ್ಯರು ಪ್ರತಿಭಟನೆಗೆ ಮುಂದಾಗಿದ್ದಾರೆ. ಸರ್ಕಾರ ಬದುಕಿದ್ದರೆ ಔಷಧಗಳನ್ನು ಖರೀದಿಸಬೇಕು. ಈ ಪರಿಸ್ಥಿತಿಗೆ ಆರೋಗ್ಯ ಸಚಿವರೇ ಕಾರಣ. ಜತೆಗೆ ಗ್ಯಾರಂಟಿಗಳು ಹೊರೆಯಾಗಿವೆ ಎಂದು ಸ್ವತಃ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಹೇಳಿದ್ದಾರೆ. ಈ ಹೊರೆಯಿಂದ ಎಲ್ಲಾ ಇಲಾಖೆಗಳಲ್ಲೂ ಶೇ. 25 ರಿಂದ 30ರಷ್ಟು ಕಡಿತವಾಗುತ್ತಿದೆ. ಯಾವ ಇಲಾಖೆಯಿಂದಲೂ ಅಭಿವೃದ್ಧಿ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಖಾತೆ ಆರಂಭಿಸಿದರು. 11-12 ಸಾವಿರ ಲಂಚ ಕೊಡದೆ ಆಗುತ್ತಿಲ್ಲ. ಸರ್ಕಾರವೇ ಡಿಜಿಟಲ್ ಖಾತೆಗಳನ್ನು ಬದಲಾವಣೆ ಮಾಡಬೇಕಿತ್ತು. ಆದರೆ ಲಂಚಕ್ಕೆ ದಾರಿ ಮಾಡಿಕೊಡಲು ಈ ಖಾತಾ ಮಾಡಿದ್ದಾರೆ ಎಂದರು.

ಹೈಕಮಾಂಡ್ ತೀರ್ಮಾನ ಅಂತಿಮ

ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ವಿಚಾರ ಹೈಕಮಾಂಡ್ ತೀರ್ಮಾನ ಮಾಡುತ್ತಾರೆ. ರಾಜ್ಯದ ಪರಿಸ್ಥಿತಿ ಬಗ್ಗೆ ಈಗಾಗಲೇ ರಾಜ್ಯ ಉಸ್ತುವಾರಿಗೆ ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ವಿಚಾರ ಇದೆ. ದೇವೇಗೌಡರೇ ಮೊದಲು ಮೈತ್ರಿ ಬೇಡ ಎಂದಿದ್ದರು, ಈಗ ಮೈತ್ರಿ ಬಗ್ಗೆ ಮಾತನಾಡಿದ್ದಾರೆ. ಹೊಂದಾಣಿಕೆ ಬಗ್ಗೆ ಆಮೇಲೆ ನೋಡೋಣ ಆದರೆ, ಸಿದ್ದರಾಮಯ್ಯ ಉಳಿದುಕೊಳ್ಳಲು ಸ್ಥಳೀಯ ಚುನಾವಣೆ ಘೋಷಣೆ ಮಾಡಲಿ ಎಂದು ತಿರುಗೇಟು ನೀಡಿದರು.

ಒಳಮೀಸಲಾತಿ ಜಾರಿ ಮಾಡಿಲ್ಲ



ಬೆಂಗಳೂರು: ಕಾಂಗ್ರೆಸ್ ಸರ್ಕಾರವು ಒಳ ಮೀಸಲಾತಿ ಜಾರಿ ಮಾಡಿಲ್ಲ. ಇಷ್ಟು ದಿನಗಳ ಕಾಲ ದಲಿತರಿಗೂ ವಂಚನೆ ಮಾಡಿ, ಇದೀಗ ಯುವ ಜನರಿಗೂ ಅನ್ಯಾಯ ಮಾಡಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಎಂದು ಕಿಡಿಕಾರಿದ್ದಾರೆ.

ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಹಳೇ ರೀತಿಯಲ್ಲೇ ಮೀಸಲಾತಿ ಕೊಡುವುದಾದರೆ ಅದು ಒಳ ಮೀಸಲಾತಿ ಆಗುವುದಿಲ್ಲ. ಒಳ ಮೀಸಲಾತಿ ಕೊಡುವುದಾದರೆ ಶೇ.17 ರಂತೆ ಕೊಡಬೇಕು. ಅದು ಆಗುವುದಿಲ್ಲ. ಕೋರ್ಟ್‌ನಲ್ಲಿ ಕೇಸಿದೆ ಎಂದರು.

ಒಳ ಮೀಸಲಾತಿಗೆ ಒಳಪಡುವ ಪರಿಶಿಷ್ಟ ಜಾತಿಗಳ ಹೋರಾಟ ಎರಡ್ಮೂರು ದಶಕಗಳಿಂದ ನಡೆಯುತ್ತಿತ್ತು. ಒಳ ಮೀಸಲಾತಿ ಮಾಡಲು ಒತ್ತಡ ಹೆಚ್ಚಾದ ಕಾರಣ ಒಂದು ತೀರ್ಮಾನಕ್ಕೆ ಬಂದು ಎಬಿಸಿಡಿ ಗುಂಪುಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿತ್ತು. ಆಗ ನಮಗೆ ಅದನ್ನು ಜಾರಿಗೊಳಿಸಲು ಅಧಿಕಾರ ಇರಲಿಲ್ಲ ಎಂದು ವಿಶ್ಲೇಷಿಸಿದರು.

ರಾಜ್ಯದಲ್ಲಿ ಯುವ ಜನತೆ ವಿರೋಧಿ ಸರ್ಕಾರ

ಬೆಂಗಳೂರು : ರಾಜ್ಯದಲ್ಲಿ ನಿರುದ್ಯೋಗಿ ಯುವ ಜನತೆಯ ವಿರೋಧಿ ಸರ್ಕಾರ ಇದೆ ಎಂದು ವಿಧಾನ ಪರಿಷತ್‌ನ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆರೋಪಿಸಿದ್ದಾರೆ. ಶನಿವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗಿದೆ. 40 ಸಾವಿರ ಹುದ್ದೆ ಭರ್ತಿ ಮಾಡಿರುವುದಾಗಿ ಸಿದ್ದರಾಮಯ್ಯ ಅವರು ಹೇಳುತ್ತಾರೆ. 40 ಸಾವಿರ ಹುದ್ದೆಯಡಿ ಯಾವ್ಯಾವ ಹುದ್ದೆ ಭರ್ತಿ ಮಾಡಿದ್ದೀರೆಂದು ಇಲಾಖಾವಾರು ಲೆಕ್ಕ ಕೊಡಿ ಎಂದು ಸವಾಲು ಹಾಕಿದರು. ಶೇ.56 ಮೀಸಲಾತಿಯಡಿ ನಾವು ಹುದ್ದೆ ಭರ್ತಿ ಮಾಡುವುದಾಗಿ ಕೋರ್ಟಿನಲ್ಲಿ ಸಮರ್ಪಕ ವಾದ ಮಂಡಿಸಿಲ್ಲ. ಇದು ಎಸ್ಸಿ,ಎಸ್ಟಿಗಳಿಗೆ ಅನ್ಯಾಯವಾಗಿದೆ ಎಂದರು.

ಇಂದು ಲಿಖಿತ ಪರೀಕ್ಷೆ

ಬೆಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಎಲ್ಲ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ (ಮಾ.1) ಲಿಖಿತ ಪರೀಕ್ಷೆ ನಡೆಸಲಿದ್ದು ಸಕಲ ತಯಾರಿ ಮಾಡಿಕೊಂಡಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚನ್ನಮ್ಮ, ಏಕಲವ್ಯ ಮಾದರಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ಶಾಲೆ, ಇಂದಿರಾಗಾಂಧಿ, ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇತ್ಯಾದಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ನೂರು ಅಂಕಗಳಿಗೆ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಒಟ್ಟು 2.31 ಲಕ್ಷ ಮಂದಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದು, 629 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬಹುತೇಕ ಎಲ್ಲ ತಾಲೂಕು ಕೇಂದ್ರಗಳಲ್ಲಿ ಕೂಡ ಪರೀಕ್ಷೆ ನಡೆಯಲಿದೆ. 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ವಿವರಿಸಿದ್ದಾರೆ.

ವಾಯವ್ಯ ಸಾರಿಗೆಗೆ ಶೀಘ್ರ ಕಿತ್ತೂರು ಚನ್ನಮ್ಮ ಎಂದು ಮರುನಾಮಕರಣ



ಬೆಳಗಾವಿ: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮನ ಹೆಸರು ಮರುನಾಮಕರಣ ಮಾಡುವ ಸಂಬಂಧ ಪ್ರಸ್ತಾವ ಸಲ್ಲಿಕೆಯಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮೋದನೆ ಪಡೆದು ಮರುನಾಮಕರಣ ಮಾಡುತ್ತೇವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.


ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮ ರಸ್ತೆ ಸಾರಿಗೆ ನಿಗಮ ಎಂದು ಶೀಘ್ರದಲ್ಲೇ ಮರುನಾಮಕರಣ ಮಾಡುತ್ತೇವೆ' ಎಂದರು.

ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ (2019ರಿಂದ 2023ರ ಅವಧಿಯಲ್ಲಿ) ಹೊಸ ಬಸ್ ಖರೀದಿಯಾಗಿಲ್ಲ. ಕೊರೋನಾ ಹಿನ್ನೆಲೆಯಲ್ಲಿ ಆಗ ಸಿಬ್ಬಂದಿ ವೇತನ ನೀಡಲು, ಡೀಸೆಲ್ ಖರೀದಿಗೂ ಕಷ್ಟದ ಪರಿಸ್ಥಿತಿ ಇತ್ತು. ಹಾಗಾಗಿ ಈಗ ಕೆಲವು ಮಾರ್ಗಗಳಲ್ಲಿ ಹಳೇ ಬಸ್‌ಗಳು ಓಡುತ್ತಿರಬಹುದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೊಸ ಬಸ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಂತ-ಹಂತವಾಗಿ ವಿವಿಧ ಮಾರ್ಗಗಳಲ್ಲಿ ಹೊಸ ಬಸ್ ಒದಗಿಸಲಾಗುತ್ತಿದೆ ಎಂದರು.

9 ಸಾವಿರ ಸಿಬ್ಬಂದಿ ನೇಮಕ

ನಾನು ಈ ಹಿಂದೆ ಸಾರಿಗೆ ಸಚಿವನಾಗಿದ್ದಾಗ, ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯಾಪ್ತಿಯಲ್ಲಿ ಹಲವು ಬಸ್ ನಿಲ್ದಾಣ, ಘಟಕ ನಿರ್ಮಿಸಿದ್ದೆ. ಈ ಸಲ ಸಾರಿಗೆ ಸಚಿವನಾದ ನಂತರ ಸಾರಿಗೆ ಸಂಸ್ಥೆಯಲ್ಲಿ 9 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದೇವೆ. ಅನುಕಂಪದ ಆಧಾರದಲ್ಲಿ 1 ಸಾವಿರ ಮಂದಿಗೆ ಕೆಲಸ ಕೊಟ್ಟಿದ್ದೇವೆ' ಎಂದರು.

ಆಯವ್ಯಯದಲ್ಲಿ ಘೋಷಿಸಿದಂತೆ ಎರಡು ಸಾವಿರ ಹೊಸ ಬಸ್ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವಾಕರಸಾ ಸಂಸ್ಥೆಗೆ ಏಳು ನೂರು ವಾಹನಗಳ ಪೈಕಿ 250 ಬಸ್ ಗಳನ್ನು ಲೋಕಾರ್ಪಣೆಗೊಳಿಸಲಾಗಿದೆ. ಬೆಳಗಾವಿ ರಾಜ್ಯದ ದೊಡ್ಡ ಜಿಲ್ಲೆಯಾಗಿದೆ ಎಂದರು.



ಸಿಲಿಕಾನ್ ಸಿಟಿಯ ರಸ್ತೆಗಳಲ್ಲಿ ಕಂಗೊಳಿಸಿದ ಗುಲಾಬಿ ಚೆರ್ರಿ ಹೂ

ಗುಲಾಬಿ ಬಣ್ಣಕ್ಕೆ ತಿರುಗಿದ ಬೆಂಗಳೂರಿನ ರಸ್ತೆಗಳು!

▸ ಮಹೇಶ್ ಹೆಗಡೆ

ಬೆಂಗಳೂರು: ಪ್ರತಿ ವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ರಸ್ತೆಗಳು ಗುಲಾಬಿ ಬಣ್ಣದ ಹೂವುಗಳಿಂದ ಕಂಗೊಳಿಸುತ್ತವೆ. ನಗರದ ಈ ಅದ್ಭುತ ಸೌಂದರ್ಯವನ್ನು ಪ್ರತಿಯೊಬ್ಬರು ಆಸ್ವಾಧಿಸಿ, ಸಂತೋಷ ಪಡುತ್ತಿದ್ದಾರೆ. ಆದರೆ ಇದರ ಹಿಂದೆ ಭಾರತೀಯ ಅರಣ್ಯ ಸೇವೆಯ(ಐಎಫ್ ಎಸ್) ಅಧಿಕಾರಿ ಸೇತುರಾಮ್ ಗೋಪಾಲರಾವ್ ನೇಗಿನಾಳ(ಎಸ್.ಜಿ. ನೇಗಿನಾಳ) ಅವರ 40 ವರ್ಷಗಳ ಹಿಂದಿನ ನಿರಂತರ ಪರಿಶ್ರಮ ಮತ್ತು ವೈಜ್ಞಾನಿಕ ಯೋಜನೆಯ ಪರಿಣಾಮವಾಗಿದೆ. ಸಿಲಿಕಾನ್ ಸಿಟಿ ಬೆಂಗಳೂರಿನ ರಸ್ತೆಗಳು ಈಗ ಟಬೂಬಿಯಾ ರೋಸಿಯಾ ಹೂವುಗಳಿಂದ ಕಂಗೊಳಿಸುತ್ತಿವೆ. ಜಪಾನಿನ ಚೆರ್ರಿ ಬ್ಲಾಸಂ ಹೂವುಗಳನ್ನು ಹೋಲುವ ಈ ಗುಲಾಬಿ ಬಣ್ಣದ ಹೂವುಗಳು ದಕ್ಷಿಣ ಅಮೆರಿಕ ಮೂಲದ್ದಾಗಿದೆ. ನಾಗರಬಾವಿ, ಕಬ್ಬನ್ ಪಾರ್ಕ್, ಲಾಲ್‌ಬಾಗ್, ಕೋರಮಂಗಲ, ಜಯನಗರ, ಸದಾಶಿವನಗರ ಸೇರಿದಂತೆ ರಾಜಧಾನಿಯ ಹಲವೆಡೆ ತಿಳಿ ಗೆಂಪು, ಬಿಳಿ ಬಣ್ಣದ ಹೂಗಳನ್ನು ಹೊತ್ತು ನಗರದ ನಿವಾಸಿಗಳ ಮನಸ್ಸಿಗೆ ಖುಷಿ ತರುತ್ತಿದೆ. ಚಳಿಗಾಲದಲ್ಲಿ ತನ್ನ ಎಲೆಗಳನ್ನು ಉದುರಿಸಿ ವಸಂತ ಋತುವಿನ ಆರಂಭದಲ್ಲಿ ಹೂವುಗಳಿಂದ ತುಂಬಿ ನಿಲ್ಲುವ ಟಬೂಬಿಯಾ ಮರಗಳು ಬೆಂಗಳೂರಿನ ಅಂದಕ್ಕೆ ಮೆರುಗು ತರುತ್ತವೆ.

40 ವರ್ಷದ ಹಿಂದಿನ ಪರಿಶ್ರಮ

1980ರ ದಶಕದಲ್ಲಿ ಬೆಂಗಳೂರು ವೇಗವಾಗಿ ಬೆಳೆಯುತ್ತಿದ್ದಾಗ, ಜನಸಂಖ್ಯೆಗನುಗುಣವಾಗಿ ರಸ್ತೆಗಳ ಅಗಲೀಕರಣಕ್ಕಾಗಿ ಸಾವಿರಾರು ಮರಗಳನ್ನು ಕಡಿಯಲಾಗಿತ್ತು. ಹಸಿರು ನಗರವಾಗಿದ್ದ ಬೆಂಗಳೂರು ಕಾಂಕ್ರೀಟ್ ಕಾಡಾಗಿ ಬದಲಾಗುತ್ತಾ, ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಆಗ ನಗರಕ್ಕೆ ಮತ್ತೆ ಹಸಿರು ಹೊದಿಕೆ ಹೆಚ್ಚಿಸಲು ಸರ್ಕಾರದ ಸೂಚನೆಯಂತೆ ಅಂದಿನ ಐಎಫ್‌ಎಸ್ ಅಧಿಕಾರಿ ಎಸ್.ಜಿ.ನೇಗಿನಾಳ ಮುಂದಾದರು. ಯಾವುದಾದರೂ ಸಸಿಗಳನ್ನು ನೆಡುವ ಬದಲಿಗೆ, ವೈಜ್ಞಾನಿಕವಾಗಿ ಮಣ್ಣಿನ ಗುಣಮಟ್ಟವನ್ನು ಅಭ್ಯಸಿಸಿ, ನಗರಕ್ಕೆ ಯಾವ ಮರಗಳು ಸೂಕ್ತವೆಂದು ನಿರ್ಧರಿಸಿದರು. ಅದರ ಪರಿಣಾಮವೆ ರಸ್ತೆ ಬದಿಯಲ್ಲಿ ನೆರಳು ನೀಡುವ ಜೊತೆಗೆ ಕಾಲೋಚಿತವಾಗಿ ಹೂ ಬಿಡುವ, ಬೇಗನೆ ಬೆಳೆಯುವ ಟಬೂಬಿಯಾ ರೋಸಿಯಾ ತಳಿಯನ್ನು ಆರಿಸಿಕೊಂಡರು ನಗರದಾದ್ಯಂತ ನೆಟ್ಟರು. 25 ರಿಂದ 100 ಅಡಿ ಎತ್ತರದವರೆಗೆ ಬೆಳೆಯುವ ಸಾಮರ್ಥ್ಯ ಹೊಂದಿರುವ ಆ ಮರಗಳೆ ಈಗ ಗುಲಾಬಿ ಬಣ್ಣದ ಹೂವೂಗಳನ್ನು ಬಿಟ್ಟು ಪ್ರತಿವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕಣ್ಣಿಗೆ ಹಬ್ಬ ನೀಡುತ್ತವೆ.



ಬೆಂಗಳೂರಿನ ಕಾಂಕ್ರೀಟ್ ಕಾಡಿನ ಮಧ್ಯೆ, ಗುಲಾಬಿ ಬಣ್ಣದ ಹೂವುಗಳಿಂದ ತುಂಬಿರುವ ನೈಜವಾದ ಮರಗಳು ಮನಸ್ಸಿಗೆ ಆನಂದವನ್ನು ನೀಡುತ್ತಿದೆ.ಈ ಸೌಂದರ್ಯದಲ್ಲಿ ಬೆಂಗಳೂರನ್ನು ನೋಡುವುದೆ ಒಂದು ಖುಷಿ.
■ **ಶ್ರೀದೇವಿ ಭಟ್,** ಹೊಸಕೆರೆಹಳ್ಳಿ ನಿವಾಸಿ

ರಾತ್ರಿಯಲ್ಲಿ ಹಸಿರು ಕಾರ್ಯಾಚರಣೆ

ನೇಗಿನಾಳ ಅವರು ಪ್ರತಿಯೊಂದು ಏರಿಯಾದ ನಿವಾಸಿಗಳ ಬಳಿ ತೆರಳಿ ಅವರ ಸಹಕಾರದೊಂದಿಗೆ ನೆಡುತೋಪು ಬೆಳೆಸಿದರು. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಹಗಲು ಹೊತ್ತಿನಲ್ಲಿ ಮರ ನೆಡುವುದು ಕಷ್ಟವಾಗಿತ್ತು. ಇದಕ್ಕಾಗಿ ನೇಗಿನಾಳ ಮತ್ತು ಅವರ ತಂಡವು ರಾತ್ರಿ ಹೊತ್ತು ಟಾರ್ಚ್ ಹಿಡಿದು ಕೆಲಸ ಮಾಡಿ, ಕೇವಲ 5 ವರ್ಷಗಳ ಅವಧಿಯಲ್ಲಿ ನಗರದಾದ್ಯಂತ ಸುಮಾರು 15 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಸಿಗಳನ್ನು ನೆಟ್ಟು ಪೋಷಿಸಿದರು. ಸಸಿಗಳ ರಕ್ಷಣೆಗಾಗಿ ಸಿಮೆಂಟ್ ರಿಂಗ್‌ಗಳ ಬದಲು ಬಿದಿರು ಮತ್ತು ಜಾಲರಿಗಳನ್ನು ಬಳಸಿ ಕಡಿಮೆ ವೆಚ್ಚದಲ್ಲಿ ಟ್ರೀ ಗಾರ್ಡ್‌ಗಳನ್ನು ನಿರ್ಮಿಸಿದ ಕೀರ್ತಿ ಇವರದು. ನೇಗಿನಾಳ ಅವರ ಈ ನಗರ ಅರಣ್ಯೀಕರಣ ಮಾದರಿಯನ್ನು ಕೇಂದ್ರ ಸರ್ಕಾರದ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿಕೊಂಡಿತು. ಇಂದು ನಾವು ನೋಡುತ್ತಿರುವ ಕಬ್ಬನ್ ಪಾರ್ಕ್ ರಸ್ತೆ, ಮೆಜೆಸ್ಟಿಕ್ ಪರಿಸರ ಮತ್ತು ಹೊರವರ್ತುಲ ರಸ್ತೆಗಳ ಹಸಿರುಕರಣ ಸಹ ಇವರ ಕೊಡುಗೆಯಾಗಿದೆ.





ಕಿರುಸುದ್ದಿ

ಮಾ.4ರಿಂದ 26ರವರೆಗೆ 'ರಾಮಾಯಣ' ಅಭ್ಯಾಸ ವರ್ಗ

ಮಂಗಳೂರು: ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ವತಿಯಿಂದ ರಾಮನವಮಿ ಹಿನ್ನೆಲೆಯಲ್ಲಿ ಶತ ಶ್ಲೋಕಿ –ಸಂಕ್ಷಿಪ್ತ 'ರಾಮಾಯಣ' ಅಭ್ಯಾಸ ವರ್ಗ 15 ಗಂಟೆಗಳ ಆನ್‌ಲೈನ್ ಪಾಠ ವಿದ್ವಾಂಸ ಜಗನ್ನಾಥ ಅಯ್ಯಂಗಾರ್, ಡಾ. ಶಿಕಾರಿಪುರ ಕೃಷ್ಣಮೂರ್ತಿ ಅವರಿಂದ ಮಾ.4ರಿಂದ 26ರವರೆಗೆ ಪ್ರತಿದಿನ ಸಂಜೆ 7ರಿಂದ 8ರವರೆಗೆ ನಡೆಯಲಿದೆ. ಮೂಲ ವಾಲ್ಮೀಕಿ ರಾಮಾಯಣದ 100 ಶ್ಲೋಕಗಳ ಅರ್ಥ–ಸ್ವಾರಸ್ಯ–ಸಂಸ್ಕೃತ ಭಾಷಾಭ್ಯಾಸ ನಡೆಯಲಿದ್ದು, ಮನೆಯಿಂದಲೇ ಭಾಗವಹಿಸಬಹುದು. ಶ್ರೀ ರಾಮನವಮಿಯಂದು ಸಮಾರೋಪ ಸಮಾರಂಭ. ವೆಚ್ಚ ವ್ಯವಸ್ಥೆ – ಸಾಹಿತ್ಯಕ್ಕಾಗಿ 200 ರೂ. ಶುಲ್ಕವಿದೆ. 200 ರೂ. ಪಾವತಿಸಿ ಹೆಸರು ನೋಂದಾಯಿಸಿ ಲಿಂಕ್ ಪಡೆಯಬಹುದು. ವಿದ್ಯಾರ್ಥಿಗಳಿಗೆ ಉಚಿತ ನೊಂದಾವಣೆಗಾಗಿ ಸುಧಾರಾವ್ ಮಂಗಳೂರು (ದೂ.9449366886), ಪದ್ಮಾ ಬೆಂಗಳೂರು (ದೂ. 9448686992) ಅವರನ್ನು ಸಂಪರ್ಕಿಸಬಹುದು ಎಂದು ಮಂಗಳೂರಿನ ಸದ್ಬೋಧ ಗುರುಕುಲ ಪ್ರಕಟಣೆ ತಿಳಿಸಿದೆ.

ವಿವೇಕಾನಂದ ಕಾಲೇಜಿನ ಭಾಗ್ಯಶ್ರೀಗೆ ಉತ್ತಮ ಸ್ತ್ರೀ ವೇಷ ಪ್ರಶಸ್ತಿ



ಪುತ್ತೂರು: ಮಂಗಳೂರಿನ ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ 'ಎಜೆಐಎಂ ಯಕ್ಷಕಲೋತ್ಸವ–2026' ಯಕ್ಷಗಾನ ಸ್ಪರ್ಧೆಯಲ್ಲಿ ವಿವೇಕಾನಂದ ಕಲಾ, ವಾಣಿಜ್ಯ ಹಾಗೂ ವಿಜ್ಞಾನ (ಸ್ವಾಯತ್ತ) ಕಾಲೇಜಿನ ಯಕ್ಷ ರಂಜಿನಿ ಘಟಕದ ವಿದ್ಯಾರ್ಥಿಗಳು ನಡೆಸಿ ಕೊಟ್ಟ 'ಸುಧನ್ವ ಮೋಕ್ಷ' ಎನ್ನುವ ಯಕ್ಷಗಾನ ಪ್ರಸಂಗದಲ್ಲಿ ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ಭಾಗ್ಯಶ್ರೀ ಕೆ. ಅವರ ಸ್ತ್ರೀ ವೇಷ ಪ್ರಭಾವತಿ ಪಾತ್ರಕ್ಕೆ ಉತ್ತಮ ಸ್ತ್ರೀ ವೇಷ ಪ್ರಶಸ್ತಿ ಲಭಿಸಿದೆ. ಅವರು ಕಾಸರಗೋಡು ತಾಲೂಕಿನ ಕುಂಚಿನಡ್ಕ ನಿವಾಸಿ ಚಂದ್ರಶೇಖರ ಶರ್ಮ ಹಾಗೂ ಉಷಾದೇವಿ ದಂಪತಿಯ ಪುತ್ರಿ.

ಪುತ್ತೂರು ದೇವಾಲಯದ 8 ಸೆಂಟ್ಸ್ ಜಾಗ ಮರುಸ್ವಾಧೀನ

ಪುತ್ತೂರು: ನಗರದ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ ಜಾಗಗಳ ಮರು ಸ್ವಾಧೀನ ಪ್ರಕ್ರಿಯೆ ಮುಂದುವರೆದಿದ್ದು, ನೆಲ್ಲಿಕಟ್ಟೆ ಪರಿಸರದಲ್ಲಿ ಸುಮಾರು 8 ಸೆಂಟ್ಸ್ ಜಾಗ ಮತ್ತು ಮನೆಯನ್ನು ಶನಿವಾರ ಮರು ದೇವಾಲಯದ ಸ್ವಾಧೀನಕ್ಕೆ ಪಡೆದುಕೊಳ್ಳಲಾಯಿತು. ನೆಲ್ಲಿಕಟ್ಟೆಯಲ್ಲಿ ಅಶ್ವತ್ಥ ಕಟ್ಟೆಯ ಹಿಂಭಾಗದಲ್ಲಿ ಹಂಚಿನ ಮನೆಯನ್ನು ಮೈಸೂರಿನಲ್ಲಿರುವ ವಾಲ್ಟರ್ ಲೋಬೊ ಎಂಬವರು ಬಾಡಿಗೆಗೆ ಕೊಟ್ಟಿದ್ದರು. ಇದು ದೇವಳದ ಜಾಗವೆಂದು ದಾಖಲೆಯಲ್ಲಿರುವುದನ್ನು ಮನಗಂಡು ದೇವಳದಿಂದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರು ಮತ್ತು ಸಮಿತಿ ಸದಸ್ಯರು ವಾಲ್ಟರ್ ಅವರಲ್ಲಿ ಸೌಹಾರ್ದ ಮಾತುಕತೆ ನಡೆಸಿದ್ದರು. ಫೆ.28 ರಂದು ಮನೆಯನ್ನು ದೇವಸ್ಥಾನಕ್ಕೆ ಹಸ್ತಾಂತರಿಸುವ ಕುರಿತು ವಾಗ್ದಾನ ನೀಡಿದಂತೆ ಬೆಳಗ್ಗೆ ದೇವಳದಿಂದ ಜಾಗವನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲಾಯಿತು. ಬಳಿಕ ಕಟ್ಟಡವನ್ನು ನೆಲಸಮಗೊಳಿಸಲಾಗಿದೆ. ಸ್ಥಳಕ್ಕೆ ಶಾಸಕ ಅಶೋಕ್ ರೈ ಭೇಟಿ ನೀಡಿದರು. ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ, ಸದಸ್ಯರು ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಶೇಷಗಿರಿ ಭಟ್ ಆತ್ಮಹತ್ಯೆ



ಬ್ರಹ್ಮಾವರ: ಬ್ರಹ್ಮಾವರ ತಾಲೂಕಿನ ಹಿರಿಯ ಪತ್ರಕರ್ತ ಹಾಗೂ ಖಾಸಗಿ ಕಾಲೇಜಿನ ಉಪಪ್ರಾಂಶುಪಾಲ ಶೇಷಗಿರಿ ಭಟ್ (45) ಅವರು ಶನಿವಾರ ಬೆಳಿಗ್ಗೆ ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಬ್ರಹ್ಮಾವರ ಕ್ರಾಸ್ಲ್ಯಾಂಡ್ ಕಾಲೇಜಿನ ಉಪಪ್ರಾಂಶುಪಾಲರಾಗಿದ್ದ ಶೇಷಗಿರಿ ಭಟ್ ಅವರು ಆರೂರಿನಲ್ಲಿರುವ ತಮ್ಮ ನಿವಾಸದಲ್ಲಿ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸೌಮ್ಯ ಮನೋಭಾವದ ವ್ಯಕ್ತಿಯಾಗಿದ್ದ ಅವರು ಬ್ರಹ್ಮಾವರ ತಾಲೂಕು ಪ್ರಜಾವಾಣಿ ಪತ್ರಿಕೆಯ ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಕಳೆದ ಕೆಲವು ದಿನಗಳಿಂದ ಅವರು, ಖಿನ್ನತೆಯಿಂದ ಬಳಲುತ್ತಿದ್ದರು ಎನ್ನಲಾಗುತ್ತಿದ್ದರೂ, ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆ ಕುರಿತು ಬ್ರಹ್ಮಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರು ಹೆಂಡತಿ, ಓರ್ವ ಪುತ್ರ ಹಾಗೂ ತಂದೆ, ತಾಯಿಯನ್ನು ಅಗಲಿದ್ದಾರೆ.

ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಜಿ. ಕುರ್ಯ, ಬ್ರಹ್ಮಾವರ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಶ್ ಗಾಣಿಗ ಅಚ್ಲಾಡಿ ಹಾಗೂ ಕ್ರಾಸ್ ಲ್ಯಾಂಡ್ ಕಾಲೇಜಿನ ಆಡಳಿತ ಮಂಡಳಿಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮಂಗಳೂರಿನ ನಂತೂರು ಜಂಕ್ಷನ್‌ಗೆ ಸಿಗಲಿದೆ ಶೀಘ್ರವೇ ಹೊಸ ರೂಪ
ಸಿದ್ಧವಾಗಿದೆ ಸಂಚಾರ ಪೊಲೀಸರ 'ಪ್ರಸ್ತಾವನೆ'



ಮಂಗಳೂರು: ನಗರದ ನಂತೂರು ಜಂಕ್ಷನ್‌ಗೆ ಈಗ ಹೊಸ ರೂಪ ನೀಡಲು ಮಂಗಳೂರು ಸಂಚಾರ ಪೊಲೀಸರು ಮುಂದಾಗಿದ್ದಾರೆ. ಈ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆ, ಸ್ಮಾರ್ಟ್ ಸಿಟಿ ಮಂಗಳೂರು, ಎನ್‌ಎಚ್‌ಎಐ ಅಧಿಕಾರಿಗಳ ಜತೆ ಚರ್ಚಿಸಿ, ಸ್ಥಳ ಪರಿಶೀಲನೆ ನಡೆಸಿ ಜಂಕ್ಷನ್‌ನಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗೆ ಪ್ರಸ್ತಾವನೆಯೊಂದು ಸಿದ್ಧಗೊಂಡಿದೆ.

ಏನಿದೆ ಈ ಪ್ರಸ್ತಾವನೆಯಲ್ಲಿ?

ನಂತೂರು ಜಂಕ್ಷನ್‌ನಲ್ಲಿ ಉಂಟಾಗುತ್ತಿರುವ ಅಪಘಾತಗಳಿಗೆ ನಿಯಂತ್ರಣ ಹೇರುವ ನಿಟ್ಟಿನಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಎಂಡಿ, ಮಂಗಳೂರು ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಎನ್‌ಎಚ್‌ಎಐ ನಿರ್ದೇಶಕರಿಗೆ ಜಂಕ್ಷನ್ ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ನಂತೂರು ಜಂಕ್ಷನ್ ಪ್ರದೇಶವನ್ನು ಸಮತಟ್ಟುಗೊಳಿಸುವುದು, ಜಂಕ್ಷನ್ ಜಾಗ ದ್ವೀಪದಂತಿರುವ ಕಾರಣ ಬೆಂಗಳೂರಿನಿಂದ ಬರುವ ವಾಹನ ಬಲಗಡೆ ತಿರುಗುವ ವೇಳೆ ಟ್ರಾಫಿಕ್ ದಟ್ಟಣೆಯಾಗುತ್ತದೆ, ಆ ದ್ವೀಪವನ್ನು ತೆರವುಗೊಳಿಸಿ ಸಿಗ್ನಲ್ ಅಳವಡಿಸುವುದು. ಮಂಗಳೂರು ನಗರದಿಂದ ಕೆಪಿಟಿ ಕಡೆ ಹೋಗುವ ರಸ್ತೆಯಲ್ಲಿ ಫ್ರೀ ಲೆಫ್ಟ್ ಪ್ರದೇಶದಲ್ಲಿ ಅಗಲೀಕರಣಗೊಳಿಸುವುದು. ಈ ಮೂಲಕ ನಾಲ್ಕು ಕಡೆಯೂ ಫ್ರೀ ಲೆಫ್ಟ್ ಮಾಡಿದಾಗ ಈ ಪ್ರದೇಶದಲ್ಲಿ ವಾಹನ ದಟ್ಟಣೆ ಕಡಿಮೆಯಾಗಲಿದೆ ಎಂದು ಪ್ರಸ್ತಾವಿಸಲಾಗಿದೆ. ಇತ್ತೀಚೆಗೆ ಅಪಘಾತವಾದ ಪ್ರದೇಶದ ಬಸ್‌ನಿಲ್ದಾಣ ಹಿಂಬದಿ ಪಾಲಿಕೆ ಜಾಗ ಇದೆ. ಹಾಗಾಗಿ ಬಸ್ ನಿಲ್ದಾಣವನ್ನು ಎಂಟು ಅಡಿ ಹಿಂದಕ್ಕೆ ಹಾಕಿ ಬಸ್‌ಲೇನ್ ಮಾಡುವುದು. ಪಾದಚಾರಿಗಳ ಸಂಚಾರಕ್ಕೆ ವ್ಯವಸ್ಥೆ ಮಾಡುವ ಕುರಿತಂತೆಯೂ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಸದ್ಯ ಈ ಪ್ರಸ್ತಾವನೆ ಪ್ರಕ್ರಿಯೆ ನಡೆಯುತ್ತಿದ್ದು, ಸ್ಮಾರ್ಟ್ ಸಿಟಿಯಿಂದ ಸಿಗ್ನಲ್ ಅಳವಡಿಕೆ ಕಾರ್ಯ ನಡೆಯಲಿದೆ. ಎಂಸಿಸಿಯಿಂದ ಬಸ್ ಲೇನ್ ಹಾಗೂ ಫ್ರಿ ಲೆಫ್ಟ್ ವ್ಯವಸ್ಥೆ ಹಾಗೂ ಉಳಿದ ಕಾರ್ಯ ಎನ್‌ಎಚ್‌ಐಯಿಂದ ಆಗಬೇಕಿದೆ. ಜಂಕ್ಷನ್‌ನಲ್ಲಿ ಎರಡು ಹೈಮಾಸ್ಟ್ ದೀಪ ಅಳವಡಿಕೆಗೂ ಪ್ರಸ್ತಾವ ಮಾಡಲಾಗಿದೆ. ಈಗಾಗಲೇ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ಸ್ಥಳ ಪರಿಶೀಲನೆಯೂ ನಡೆದಿದೆ ಎಂದು ಡಿಸಿಪಿ ರವಿಶಂಕರ್ ಮಾಹಿತಿ ನೀಡಿದರು.

ಡಿಸಿಪಿ ಮಿಥುನ್ ಅಧ್ಯಕ್ಷತೆಯಲ್ಲಿ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ನಡೆದ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಮಾಸಿಕ ಸಭೆಯಲ್ಲಿ ನಂತೂರು ವೃತ್ತದಲ್ಲಿ ಇತ್ತೀಚೆಗೆ ಸಂಭವಿಸಿದ ಅಪಘಾತದಲ್ಲಿ ಯುವತಿಯ ಸಾವಿನ ಬಗ್ಗೆ ದಲಿತ ಮುಖಂಡರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಂದರ್ಭ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ.

ಭಾವಿ ನವೋದ್ಯಮಿಗಳೊಂದಿಗೆ ಸಂಸದರ ಸಂವಾದ | ಸಕಲ ಮಾದರಿಯಲ್ಲಿ ನೆರವಿನ ಭರವಸೆ
'ಬೊಲ್ಪು' ವೇದಿಕೆಯಲ್ಲಿ ಸ್ಟಾರ್ಟಪ್ ಸ್ಟಾರ್ಸ್!



ಮಂಗಳೂರು: ದಕ್ಷಿಣ ಕನ್ನಡದ ಸಂಸದ ಕ್ಯಾ. ಬ್ರಿಜೇಶ್ ಚೌಟ ಪರಿಕಲ್ಪನೆಯಡಿ, ಮುಂದಿನ ಐದು ವರ್ಷದ ಅವಧಿಯಲ್ಲಿ ಮಂಗಳೂರನ್ನು ದೇಶದ ಪ್ರಮುಖ ಉದ್ದಿಮೆ ಕೇಂದ್ರವನ್ನಾಗಿ ಪರಿವರ್ತಿಸುವ ಗುರಿಯೊಂದಿಗೆ ಹಮ್ಮಿಕೊಂಡಿರುವ 'ಬೊಲ್ಪು – ಅವಕಾಶ ನವೋದಯ' ಯೋಜನೆಯು ಇದೀಗ ಮಹತ್ವದ ಘಟ್ಟ ತಲುಪಿದೆ.

ಮುಂದಿನ ಐದು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನಿಷ್ಠ 50 ಮಂದಿ ಸ್ಟಾರ್ಟಅಪ್‌ಗಳ ಯಶೋಗಾಥೆ ಕಾಣುವ ಉದ್ದೇಶವನ್ನು ಹೊಂದಲಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಮಂಗಳೂರಿನ ಯೆಯ್ಯಾಡಿಯಲ್ಲಿ ಪ್ರಭಾವಶಾಲಿ ಉದ್ಯಮಗಳ ನಿರ್ಮಾಣದ ವೇದಿಕೆಯಾದ 'ಬೊಲ್ಪು' ಸಂಘಟನೆ ಆಶ್ರಯದಲ್ಲಿ ಶನಿವಾರ ಏರ್ಪಡಿಸಿದ 11 ಮಂದಿ ಸ್ಟಾರ್ಟ್ ಅಪ್ ಉದ್ದಿಮೆದಾರರ ಜೊತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ವ ರೀತಿ ನೆರವು ನೀಡಲಾಗುವುದು

ಉದ್ಯಮ ಉತ್ಸಾಹಿಗಳನ್ನು ಸೂಕ್ತ ತರಬೇತುಗೊಳಿಸಿ ಉದ್ದಿಮೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನೋಡಿಕೊಳ್ಳಲಾಗುವುದು. ಕೇಂದ್ರ ಸರ್ಕಾರ ಸ್ಟಾರ್ಟ್‌ಅಪ್ ಇಂಡಿಯಾ ಆರಂಭಿಸಿ 11 ವರ್ಷ ಆಗಿದ್ದು, ಕರಾವಳಿಯಲ್ಲಿ ಉದ್ದಿಮೆ ಸ್ಥಾಪಿಸಲು 850 ಅರ್ಜಿಗಳ ಪೈಕಿ 11 ಮಂದಿ ಸ್ಟಾರ್ಟ್‌ಅಪ್‌ಗಳನ್ನು ಆಯ್ಕೆ ಮಾಡಿರುವುದು ಸಂತಸದ ವಿಚಾರ ಎಂದರು.

ಸೀಮಿತ ಚೌಕಟ್ಟಿಗೆ ಒಳಪಡಿಸಬಾರದು

ಉದ್ದಿಮೆದಾರರನ್ನು ಪ್ರೋತ್ಸಾಹಿಸಿ ಸೂಕ್ತ ಅವಕಾಶ ಕಲ್ಪಿಸಲು ಬೊಲ್ಪು ಸಂಘಟನೆ ಕಾರ್ಯ ನಿರ್ವಹಿಸುತ್ತಿದೆ. ಕರಾವಳಿ ಎಂಬುದು ಅವಕಾಶಗಳ ಸಾಗರವಾಗಿದ್ದು, ಅದನ್ನುಸರಿಯಾಗಿ ಬಳಸಿಕೊಳ್ಳಲು ಮುಂದಾಗಬೇಕು. ಉದ್ಯಮಗಳನ್ನು ಸೀಮಿತ ಚೌಕಟ್ಟಿಗೆ ಒಳಪಡಿಸದೆ ಅದನ್ನು ವಿಸ್ತರಿಸುವ ಬಗ್ಗೆ ಯೋಚಿಸಬೇಕು. ಆಗ ಮಾತ್ರ ಯಶಸ್ವಿ ಉದ್ಯಮಿಯಾಗಲು ಸಾಧ್ಯವಿದೆ. ಈಗಾಗಲೇ ಆಯ್ಕೆಯಾದ ಒಟ್ಟು 11 ಮಂದಿ ವಿವಿಧ ಉದ್ದಿಮೆ ಸ್ಥಾಪಿಸುತ್ತಿದ್ದು, ಭವಿಷ್ಯದ ಜನಾಂಗಕ್ಕೆ ಕರಾವಳಿಯಲ್ಲಿ ಉದ್ಯಮ ಸ್ಥಾಪನೆ ಅತ್ಯಗತ್ಯ. ಅದಕ್ಕಾಗಿ ವಿವಿಧ ಹಂತಗಳಲ್ಲಿ ಸಲಹೆಗಾರರು, ತರಬೇತಿ, ಹಣಕಾಸು ಸೌಲಭ್ಯ, ಮಾರುಕಟ್ಟೆ ವಿಸ್ತರಣೆ ಮುಂತಾದ ನೆರವು ನೀಡಲಾಗುವುದು ಎಂದರು.

2 ಮತ್ತು 3ನೇ ಹಂತದ ನಗರಗಳಲ್ಲಿ ಉದ್ದಿಮೆ ಸ್ಥಾಪಿಸಲು ಶೇ.60ರಷ್ಟು ಸ್ಟಾರ್ಟ್‌ಅಪ್‌ಗಳು, ಅಲ್ಲದೆ ಶೇ.50ರಷ್ಟು ಮಹಿಳೆಯರು ಕೂಡ ಮುಂದೆ ಬರಬೇಕು. ಉದ್ದಿಮೆ ಸ್ಥಾಪಿಸಿದ ಬಳಿಕ ಅದನ್ನು ಅರ್ಧದಲ್ಲೇ ಕೈಬಿಡಬಾರದು. ಉದ್ದಮದ ಸಾಧನೆ ಹಾಗೂ ಅವನತಿ ಎರಡೂ ನಮ್ಮ ಕೈಯಲ್ಲೇ ಇದೆ, ಮಂಗಳೂರು ಎಲ್ಲ ಸಾಧ್ಯತೆಗಳ ದಿಕ್ಕಿನಲ್ಲಿ ಯೋಚಿಸುತ್ತಿದೆ ಎಂಬುದನ್ನು ಮರೆಯಬಾರದು ಎಂದು ಅವರು ಇದೇ ಸಂದರ್ಭ ಹೇಳಿದರು.

ಉದ್ದಿಮೆಯ ಕುರಿತಂತೆ ಅನಿಸಿಕೆ ಹಂಚಿಕೊಂಡರು

ಯೆಯ್ಯಾಡಿಯಲ್ಲಿ ನಡೆದ ಈ ಸಂವಾದ ಕಾರ್ಯಕ್ರಮದಲ್ಲಿ ಇದೇ ಸಂದರ್ಭ 11 ಮಂದಿ ಸ್ಟಾರ್ಟ್‌ಅಪ್‌ಗಳು ತಮ್ಮ ಉದ್ದಿಮೆಯ ಕುರಿತಂತೆ ಅನಿಸಿಕೆ ವ್ಯಕ್ತಪಡಿಸಿದರು. ನವೋದ್ಯಮ ಸಂಸ್ಥಾಪಕರಿಗೆ ದಿಕ್ಸೂಚಿಯಾಗುವ ಮತ್ತು ಮಾರ್ಗದರ್ಶಕರನ್ನು ಒದಗಿಸುವ ಈ ಯೋಜನೆಗೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಅಂತಿಮ ದಿನಾಂಕದವರೆಗೆ ಒಟ್ಟು 850ಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಐಡಿಯಾಗಳ ಕುರಿತು ಅರ್ಜಿ ಸಲ್ಲಿಕೆಯಾಗಿದ್ದವು.

ಮೂರು ದಿನಗಳ ಅಡೂರು ಫಾರ್ಮ್ ಫೆಸ್ಟ್‌ಗೆ ಸಿಕ್ಕಿದೆ ಚಾಲನೆ
ಪ್ರಕೃತಿಪ್ರಿಯರಿಗೆ ಭರ್ಜರಿ ಹಬ್ಬ!



ಮುಳ್ಳೇರಿಯ: ಅಡೂರು ಗಾಳಿಮುಖ ಗೇರು ಅಭಿವೃದ್ಧಿ ಫಾರ್ಮ್ ಪ್ರಕೃತಿಯ ಹಸಿರು ಮತ್ತು ಆಕಾಶದ ಕಡುಗೆಂಪು ಬಣ್ಣಗಳು ಒಟ್ಟಿಗೆ ಸೇರುವ ಅಪರೂಪದ ಮತ್ತು ಸುಂದರವಾದ ವೀಕ್ಷಣೆಯ ಅನುಭವಕ್ಕೆ ವೇದಿಕೆಯಾಗಿದೆ. ಕಾಸರಗೋಡಿನ ಬೆಟ್ಟಗಳ ಸಂಪೂರ್ಣ ಸೌಂದರ್ಯವನ್ನು ಸೆರೆಹಿಡಿಯುವ ಮಾಯಿಲಂಕೋಟೆ ವೀಕ್ಷಣಾ ತಾಣವು ಮುಂಬರುವ ಫಾರ್ಮ್ ಫೆಸ್ಟ್‌ನ ಪ್ರಮುಖ ಆಕರ್ಷಣೆಯಾಗಿದೆ.

ಆಕರ್ಷಣೆಯ ಕೇಂದ್ರವಿದು

ಕೃಷಿ ಇಲಾಖೆಯ ಅಧೀನದಲ್ಲಿರುವ ಈ ವಿಶಾಲವಾದ ತೋಟವು ಕೇವಲ ಕೃಷಿ ಕೇಂದ್ರಕ್ಕಿಂತ ಹೆಚ್ಚಿನದಾಗಿದೆ, ಇದು ಪ್ರವಾಸಿಗರು ಮತ್ತು ಪ್ರಕೃತಿ ಪ್ರಿಯರನ್ನು ಆಕರ್ಷಿಸುವ ಸುಂದರ ಸ್ಥಳವಾಗುತ್ತಿದೆ.

ಅತ್ಯಾಧುನಿಕ ಆಶ್ರಯ ಸೌಲಭ್ಯ

ಸೂರ್ಯೋದಯ ಮತ್ತು ಸೂರ್ಯಾಸ್ತದ ಸೌಂದರ್ಯವನ್ನು ಸಂಪೂರ್ಣವಾಗಿ ಆನಂದಿಸಬಹುದಾದ ಮಾಯಿಲಂಕೋಟೆ ಪ್ರವಾಸಿಗರಿಗೆ ಅತ್ಯಾಧುನಿಕ ಆಶ್ರಯ ಸೌಲಭ್ಯಗಳನ್ನು ಕೂಡಾ ಸಿದ್ಧಪಡಿಸಿದೆ. ಗುಡ್ಡದ ತುದಿಯಿಂದ ಬರುವ ತಂಪಾದ ಗಾಳಿ ಮತ್ತು ಕೆಳಗೆ ಹಸಿರು ರೇಷ್ಮೆಯಂತೆ ಮಲಗಿರುವ ಗೇರು ತೋಟಗಳು ಪ್ರವಾಸಿಗರಿಗೆ ಉಲ್ಲಾಸಕರ ದೃಶ್ಯವಾಗಿದೆ.

ಛಾಯಾಗ್ರಹಣ ಉತ್ಸಾಹಿಗಳಿಗೆ ಮಾಯಿಲಂಕೋಟೆ ಸ್ವರ್ಗ

ಕೃಷಿ ಸಂಸ್ಕೃತಿ, ಪ್ರವಾಸೋದ್ಯಮವನ್ನು ಸಂಯೋಜಿಸುವ ಈ ಉಪಕ್ರಮವು ಸ್ಥಳೀಯರು ಮತ್ತು ಪ್ರವಾಸಿಗರಿಗೆ ಪ್ರಯೋಜನಕಾರಿಯಾಗಿದೆ. ತೋಟದ ನೈಸರ್ಗಿಕ ಸೌಂದರ್ಯವನ್ನು ಹಾಳು ಮಾಡದೆ ಇಲ್ಲಿ ಸೌಲಭ್ಯಗಳನ್ನು ಸಿದ್ಧಪಡಿಸಲಾಗಿದೆ. ಬೆಳಗ್ಗೆ 9ರಿಂದ ಸಂಜೆ 6ರ ವರೆಗೆ ನಡೆಯುವ ಫಾರ್ಮ್ ಫೆಸ್ಟ್ ದಿನಗಳಲ್ಲಿ ಎಲ್ಲರಿಗೂ ಕೃಷಿ ಮಾರುಕಟ್ಟೆ ಮತ್ತು ಪ್ರದರ್ಶನವನ್ನು ವೀಕ್ಷಿಸಲು ಮತ್ತು ಮಾವಿಲಂಕೋಟದ ನೈಸರ್ಗಿಕ ಸೌಂದರ್ಯವನ್ನು ಆನಂದಿಸಲು ಅವಕಾಶವಿರುತ್ತದೆ. ತಮ್ಮ ಬಿಡುವಿಲ್ಲದ ಜೀವನದ ನಡುವೆ ಪ್ರಕೃತಿಯೊಂದಿಗೆ ಸಂಪರ್ಕದಲ್ಲಿ ಸ್ವಲ್ಪ ಸಮಯ ಕಳೆಯಲು ಬಯಸುವವರಿಗೆ ಅಡೂರು ಗಾಳಿಮುಖಂ ತೋಟ ಈ ಮೂರು ದಿನಗಳ ವರೆಗೆ ಉತ್ತಮ ಹಬ್ಬವಾಗಿರುತ್ತದೆ.

ಅಡೂರು ಫಾರ್ಮ್ ಫೆಸ್ಟ್ ಶನಿವಾರ ಆರಂಭಗೊಂಡಿದ್ದು, ಮಾರ್ಚ್ 2ರ ವರೆಗೆ ನಡೆಯಲಿದೆ. ಇದರ ಭಾಗವಾಗಿ ಈ ವೀಕ್ಷಣಾ ಕೇಂದ್ರ ಮತ್ತು ವಿಶ್ರಾಂತಿ ಕೇಂದ್ರವನ್ನು ಸಾರ್ವಜನಿಕರಿಗೆ ತೆರೆಯಲಾಗುವುದು.

ಮೂಲ್ಕಿ ತಾಲೂಕು ಕನ್ನಡ ಜಾತ್ರೆಗೆ ಸಿಂಗರಿಸಿಕೊಂಡಿದೆ ಕಟೀಲು ಕುದ್ರು!



ಕಟೀಲು: ಇಲ್ಲಿನ ದೇಗುಲದ ನಂದಿನಿ ನದಿಯ ಕುದ್ರು, ಹಚ್ಚಹಸಿರು, ವೈವಿಧ್ಯಮಯ ಅಲಂಕಾರಗಳೊಂದಿಗೆ ಮೂಲ್ಕಿ ತಾಲೂಕು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧವಾಗಿದೆ.

ಬೆಳಿಗ್ಗೆ ಕನ್ನಡ ಭುವನೇಶ್ವರಿಯ ಮೆರವಣಿಗೆ ಜೊತೆ ಆರಂಭವಾಗಿ, ಉದ್ಘಾಟನೆ, ಪುಸ್ತಕಗಳ ಬಿಡುಗಡೆ, ಎರಡು ವೇದಿಕೆಗಳಲ್ಲಿ ಯುವಕರಿಗೆ ಅವಕಾಶ, ಖ್ಯಾತ ಸಾಹಿತಿಗಳ ನೆನಪು ಕಾರ್ಯಕ್ರಮ ನಡೆಯಲಿದೆ. ಪುಸ್ತಕ, ಖಾದಿ ಮಾರಾಟ ಮಳಿಗೆಗಳು ಇರಲಿವೆ.

ಕಟೀಲಿನ ರಿಕ್ಷಾ ಚಾಲಕರು ಕನ್ನಡ ಧ್ವಜ ಹಾಕಿ ಗೌರವ ಸಲ್ಲಿಸಿದ್ದಾರೆ. ನಲವತ್ತಕ್ಕೂ ಹೆಚ್ಚು ಮಂದಿ ಚಿತ್ರಕಲಾವಿದರು ನಂದಿನಿ ನದಿ, ಕಟೀಲು ಕ್ಷೇತ್ರಕ್ಕೆ ಸಂಬಂಧಿಸಿ ಚಿತ್ರಗಳನ್ನು ಬಿಡಿಸಲಿದ್ದಾರೆ. ಸಮ್ಮೇಳನಕ್ಕೆ ಬರುವ ಸಾಹಿತಿಗಳ ಹಸ್ತಾಕ್ಷರ ಪಡೆಯಲು ಆ ಮೂಲಕ ಸಮ್ಮೇಳವನ್ನು ಸ್ಮರಣೀಯ ವಾಗಿಸಲು ಪುಟ್ಟ ಕಾರ್ಡ್ ಒಂದನ್ನು ಆಸಕ್ತರಿಗೆ ನೀಡಲಾಗುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ

ಸಾಧಕ ಸಮ್ಮೇಳನಾಧ್ಯಕ್ಷರು

ಸಮ್ಮೇಳನಾಧ್ಯಕ್ಷ ಕೃಷ್ಣಮೂರ್ತಿ ಕವತ್ತಾರು ಮುಕ್ತಾ, ಪಲ್ಲವಿ ಅನುಪಲ್ಲವಿ, ಮಿಲನ, ಒಂದೇ ಗೂಡಿನ ಹಕಿಗಳು, ಅಶ್ವಿನಿ ನಕ್ಷತ್ರ, ಉಧೋ ಉಧೋ ಎಲ್ಲಮ್ಮ, ಯಡಿಯೂರು ಸಿದ್ದಲಿಂಗೇಶ್ವರ, ಭಾರತಿ, ಅಮೃತಧಾರೆ, ಗೌರೀಪುರದ ಗಯ್ಯಾಳಿಗಳು ಮೊದಲಾದ ಧಾರಾವಾಹಿಗಳಲ್ಲಿ ದೃಶ್ಯ, ರಾಕ್ಷಸಿ, ಪ್ರೇಮಾಸುರ, ರಂಕಲ್ ರಾಟೆ, ದಂಡಕ, ಮಿಸ್ಟರ್ ಮೊಮ್ಮಗ, ಗೌಡ್ರ ಸೈಕಲ್, ರವಿಕೆ ಪ್ರಸಂಗ, ರಿಪ್ಪನ್ ಸ್ವಾಮಿ ಮೊದ ಲಾದ ಸಿನಿಮಾಗಳಲ್ಲಿ ನಟಿಸಿದ್ದಾರೆ.

ಅವರು ಖ್ಯಾತನಾಮರ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಚಂದ್ರಶೇಖರ ಕಂಬಾರ, ಡಿ.ಕೆ. ಚೌಟ, ಎಚ್. ಎಸ್. ವೆಂಕಟೇಶ ಮೂರ್ತಿ, ಗಿರೀಶ್ ಕಾರ್ನಾಡ್, ಎಚ್.ಎಸ್. ಶಿವಪ್ರಕಾಶ್, ರಾಘವೇಂದ್ರ ಪಾಟೀಲ ಮುಂತಾದವರ ಕನ್ನಡ, ತುಳುವಿನ 450ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶನ ಕೂಡಾ ಮಾಡಿದ್ದಾರೆ.


ಇದು ರಂಗಭೂಮಿಗೆ ಕೊಟ್ಟ ಗೌರವವಾಗಿದೆ



ರಂಗಭೂಮಿ ಕ್ಷೇತ್ರದಲ್ಲಿ ಇದ್ದವನನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷನನ್ನಾಗಿ ಮಾಡಿರುವುದು ರಂಗಭೂಮಿಗೆ ಕೊಟ್ಟ ಗೌರವ ಎನ್ನುತ್ತಾರೆ ಕೃಷ್ಣಮೂರ್ತಿ ಕವತ್ತಾರು. ನಟನೆಯಲ್ಲಿ ಒಂದು ಮಾತಿದೆ ಅಭಿನಯಿಸಬೇಡಿ, ಅನುಭವಿಸಿ. ಸಾಹಿತ್ಯದಲ್ಲೂ ಹಾಗೆಯೇ ಅನುಭವಿಸಿ ಬರೆದಾಗ ಓದುಗನಿಗೆ ಸಾಹಿತ್ಯದ ಅನುಭವ ಆಗುತ್ತದೆ. ಯಾವುದೇ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ಕೇವಲ ಬೌದ್ಧಿಕ ಕಸರತ್ತು ಆದರೆ ಯಾರಿಗೂ ಹೃದಯಸ್ಪರ್ಶಿಯಾಗದು. ಎಳೆ ಎಳೆಯಾಗಿ ಸೂಕ್ಷ್ಮ ತೆಗಳೊಂದಿಗೆ ಅವಲೋಕಿಸಿದಾಗ ನಮ್ಮೊಳಗೆ ಸಂಪೂರ್ಣ ಇಳಿಯುತ್ತದೆ. ಇಳಿದದ್ದನ್ನು ಮಥಿಸಿದಾಗ ಬೇಕಾದ ಹಾಗೆ ಅಭಿವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಅಕ್ಷರಗಳಿಂದ ಸಮಾಜದ ಸ್ವಾಸ್ಥ್ಯ ಹಾಳಾಗಬಾರದು. ಒಳಿತನ್ನು ಮಾಡುವುದೇ ಸಾಹಿತ್ಯ. ಬಣ್ಣದ ತಗಡಿನ ತುತ್ತೂರಿಯಲ್ಲಿ ಶ್ರಮಿಕನ ಉಸಿರಿದೆ. ಚಂದಿರನೇತಕೆ ಓಡುವನಮ್ಮ...ದಲ್ಲಿ ಮಗುವಿನ ಮುಗ್ಧತೆ ಇದೆ ಎನ್ನುತ್ತಾರೆ ಅವರು.

ಶಕ್ತಿ ವಿದ್ಯಾ ಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ | ಡ್ರೋನ್ ಹಾರಿಸಿ ಕಾರ್ಯಕ್ರಮ ಉದ್ಘಾಟನೆ | ಇಲ್ಲಿತ್ತು ಒಟ್ಟು 15ಕ್ಕೂ ಹೆಚ್ಚು ಪ್ರೊಜೆಕ್ಟ್‌ಗಳ ಪ್ರದರ್ಶನ
ಎಲ್ಲರ ಮೈನವಿರೇಳಿಸಿತು ಶಾಲಾ ಮೈದಾನದ ಆಗಸದಲ್ಲಿ ಕಂಡ ಏರ್ ಶೋ!







ಮಂಗಳೂರು: ವಿಜ್ಞಾನ ಎನ್ನುವುದು ಕೇವಲ ಪಠ್ಯಪುಸ್ತಕದ ವಿಷಯವಲ್ಲ, ಅದೊಂದು ನಮ್ಮ ದೈನಂದಿನ ಬದುಕಿನ ಭಾಗವಾಗಿದೆ. ಅದೆಷ್ಟೋ ಸಾಧನೆಗಳನ್ನು ಮಾಡಿದ ವಿಜ್ಞಾನಿಗಳ ತಾಳ್ಮೆ ಮತ್ತು ಪರಿಶ್ರಮವನ್ನು ನಾವು ಈ ಸಂದರ್ಭದಲ್ಲಿ ನೆನಪಿಸಲೇ ಬೇಕಾಗಿದೆ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳಿಂದಲೇ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಆಸಕ್ತಿಯನ್ನು ತಮ್ಮದಾಗಿಸಿಕೊಳ್ಳಬೇಕು ಎಂದು ಸುರತ್ಕಲ್ ಎನ್ ಐಟಿಕೆಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಖ್ಯಾತಿ ವರ್ಮಾ ಹೇಳಿದರು.

ಮಂಗಳೂರಿನ ಶಕ್ತಿ ನಗರದಲ್ಲಿರುವ ಶಕ್ತಿ ವಿದ್ಯಾ ಸಂಸ್ಥೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ರೇಷ್ಮಾ ಮೆಮೋರಿಯಲ್ ಆಡಿಟೋರಿಯಂನಲ್ಲಿ ಶನಿವಾರ ನಡೆದ 'ಟೆಕ್ ಮ್ಯಾಜಿಕ್' ಉದ್ಘಾಟಿಸಿ ಅವರು ಮಾತನಾಡಿದರು. ನಂತರ ಡ್ರೋನ್ ಹಾರಿಸುವ ಮೂಲಕ ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಲಾಯಿತು.

ಸೋಲು ಗೆಲುವು ಎನ್ನುವುದು ಸಾಮಾನ್ಯ

ಸಾಧನೆಯ ಹಾದಿಯಲ್ಲಿ ಸೋಲು ಗೆಲುವು ಎನ್ನುವುದು ಸಾಮಾನ್ಯವಾಗಿದೆ, ಸೋಲು ಎನ್ನುವುದು ಕೊನೆಯಲ್ಲ, ಅದು ಗೆಲುವಿನ ಒಂದು ಭಾಗವಾಗಿದೆ. ಹಾಗಾಗಿ ಎದುರಾಗುವ ಸವಾಲುಗಳಿಗೆ ಹೆದರದೆ ಧೈರ್ಯದಿಂದ ಮುನ್ನುಗ್ಗುತ್ತಿರಬೇಕು ಎಂದರು.

ಸೈಂಟ್ ಅಲೋಶಿಯಸ್ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಡೀನ್ ಆಗಿರುವ ಡಾ. ಗ್ಲೆನ್ಸನ್‌ಟೋನಿ ಅವರು ಹೊಸತಾಗಿ ಅನ್ವೇಷಿಸಿದ 'ಬ್ಲೂಮ್ 9' ಎಂಬ ಮೊಬೈಲ್ ಆಪ್ ಬಗ್ಗೆ ಮಕ್ಕಳಿಗೆ ತಿಳಿಸಿದರು. ನಂತರ ಮಕ್ಕಳೊಂದಿಗೆ ಸೆಮಿನಾರ್‌ನಲ್ಲಿ ಭಾಗವಹಿಸಿ ಒಂದು ಹೊಸತಾದ ಉತ್ಪನ್ನವನ್ನು ಯಾವ ರೀತಿ ಅಭಿವೃದ್ಧಿಪಡಿಸಬೇಕು ಎಂಬುದನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಈ ಸಂದರ್ಭದಲ್ಲಿ ಶಕ್ತಿ ವಿದ್ಯಾ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ್ ಕೆ, ಯೂಲೊಎಡ್ಯುಟೆಕ್ ಹಿರಿಯ ಶೈಕ್ಷಣಿಕ ವ್ಯವಸ್ಥಾಪಕ ಶ್ರವಣ್ ಶೆಟ್ಟಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು, ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಶಕ್ತಿ ವಿದ್ಯಾ ಸಂಸ್ಥೆಗೆ ಆಗಮಿಸಿ ತಮ್ಮ ತಮ್ಮ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಶಕ್ತಿ ರೆಸಿಡೆನ್ಶಿಯಯಲ್ ಶಾಲಾ ವಿದ್ಯಾರ್ಥಿಗಳಿಂದ ಎಐ ವಿಷಯಕ್ಕೆ ಸಂಬಂಧಿಸಿದ ಸುಮಾರು 15 ಕ್ಕೂ ಹೆಚ್ಚಿನ ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ ಏರ್ ಶೋ ಕಾರ್ಯಕ್ರಮವು ನೆರೆದಿದ್ದ ಎಲ್ಲರನ್ನೂ ಆಕರ್ಷಿಸಿತು. ಶಕ್ತಿ ವಸತಿ ಶಾಲೆಯ ಪ್ರಾಂಶುಪಾಲರಾದ ಬಬಿತಾ ಸೂರಜ್ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಶಕ್ತಿ ಶಾಲೆಯ ಶಿಕ್ಷಕಿ ಮಧುರಾ ಕಾರ್ಯಕ್ರಮ ನಿರೂಪಿಸಿದರು.

"ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಇದೊಂದು ಉತ್ತಮ ವೇದಿಕೆಯಾಗಿದೆ. ಶಕ್ತಿ ವಿದ್ಯಾ ಸಂಸ್ಥೆಯು ನಿರಂತರವಾಗಿ ಪ್ರೋತ್ಸಾಹವನ್ನು ವಿದ್ಯಾರ್ಥಿಗಳಿಗೆ ನೀಡಲು ಸಿದ್ಧವಿದೆ.

■ ಡಾ. ಕೆ. ಸಿ. ನ್ಯಾಕ್, ಶಕ್ತಿ ವಿದ್ಯಾ ಸಂಸ್ಥೆಯ ಆಡಳಿತ ಅಧಿಕಾರಿ

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಆರೋಪಿ ಧನಂಜಯ ಬಂಧನ

ದೇವನಹಳ್ಳಿ: ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ ಖಾಸಗಿ ಎಸ್‌ಎಲ್‌ಎಸ್ ವಸತಿ ಶಾಲೆ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಮತ್ತೊಬ್ಬ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಯತ್ನ ನಡೆಸಿರುವ ಆರೋಪದಲ್ಲಿ ಶಾಲೆಯ ಮಾಲೀಕ , ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಈತನ ಪತ್ನಿಯನ್ನು ಇಲ್ಲಿನ ಪೊಲೀಸರು ಬಂಧಿಸಿದಾರೆ.

ವಸತಿ ಶಾಲಾ ಮಾಲೀಕ ಡಿ.ಎಸ್.ಧನಂಜಯ ಹಾಗೂ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಆರೋಪದಲ್ಲಿ ಆರೋಪಿ ಪತ್ನಿ ಶಾಲೆಯ ಪ್ರಾಂಶುಪಾಲೆ ಶೈಲಜಾ ಬಂಧಿತರು. ಇವರ ವಿರುದ್ಧ ದೇವನಹಳ್ಳಿ ಠಾಣೆಯಲ್ಲಿ ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ ಕಾಯ್ದೆ, 2012 ಪೋಕ್ಸೋ ಪ್ರಕರಣ ದಾಖಲಾಗಿದೆ. ಇಬ್ಬರನ್ನೂ ಬಂಧಿಸಲಾಗಿದೆ.

ಫೆ.9 ರಂದು ಪ್ರಕರಣ: ಬೆಂಗಳೂರು ಮೂಲದ ಅಕ್ಕ ತಂಗಿಯಾಗಿರುವ ಇಬ್ಬರು ವಿದ್ಯಾರ್ಥಿನಿಯರು ವಸತಿ ಶಾಲೆಯಲ್ಲಿ ಏಳು ಮತ್ತು ಎಂಟನೇ ತರಗತಿಯಲ್ಲಿ ಓದುತ್ತಿದ್ದರು. ಫೆ.9ರಂದು ಆರೋಪಿ ಪುಸಲಾಯಿಸಿ ಅದೇ ಶಾಲೆಯ ಕೊಠಡಿಯೊಂದರಲ್ಲಿ ಅಕ್ಕನ ಮೇಲೆ ಎರಡು ಬಾರಿ ಅತ್ಯಾಚಾರ ಎಸಗಿದ್ದಾನೆ. ನಂತರದಲ್ಲಿ ತಂಗಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆಂದು ದೂರಲಾಗಿದೆ. ಈ ವೇಳೆ ವಿದ್ಯಾರ್ಥಿನಿ ತಪ್ಪಿಸಿಕೊಂಡು ಬಾತ್ ರೂಂನಲ್ಲಿ ಅವಿತುಕೊಂಡಿದ್ದರಿಂದ ಈತನ ಪೈಶಾಚಿಕ ಕೃತ್ಯದಿಂದ ಬಚಾವಾಗಿದ್ದಾಳೆ. ನಂತರ ಮತ್ತೆ ಮೇಲೆ ಅತ್ಯಾಚಾರ ನಡೆಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಬಳಿಕ ಎಸಿಪಿ ಶ್ರೀಹರ್ಷ, ಪಿಐ ಉಮೇಶ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನೇಯ ಇದ್ದರು.

ರಾಮ ಬಾಣ



ಸಂಕೇತ್ ಕುಟುಂಬಕ್ಕೆ ಉದ್ಯೋಗ ನೀಡಿ: ಬಿವೈವಿ

ಶಿವಮೊಗ್ಗ: ಹತ್ಯೆಯಾದ ಎಸ್‌ಎಸ್‌ಎಲ್ ವಿದ್ಯಾರ್ಥಿ ಊರುಗಡೂರಿನ ಸಂಕೇತ್ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ ಚರ್ಚಿಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಶನಿವಾರ ಊರುಗಡೂರಿನ ಸಂಕೇತ್ ಮನೆಗೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೆಚ್ಚಿನ ಪರಿಹಾರ ಹಾಗೂ ಸರ್ಕಾರಿ ನೌಕರಿಗೆ ಕುಟುಂಬ ಬೇಡಿಕೆ ಇಟ್ಟಿದೆ. ಅದನ್ನು ಸಿಎಂ ಗಮನಕ್ಕೆ ತರಲಾಗುತ್ತದೆ ಎಂದರು.

ಮಂಗಳೂರಿನಲ್ಲಿ ಅನ್ಯಕೋಮಿನವರು ಹತ್ಯೆ ಯಾದಾಗ 25ರಿಂದ 50 ಲಕ್ಷ ರೂ.ವರೆಗೆ ಸರ್ಕಾರ ಪರಿಹಾರ ನೀಡಿದೆ. ಆದರೆ ಯಲ್ಲಾಪುರದಲ್ಲಿ ನಡೆದ ಘಟನೆಯಲ್ಲೂ ಹೆಚ್ಚಿನ ಪರಿಹಾರ ನೀಡಿಲ್ಲ. ಇಲ್ಲಿ ಹತ್ಯೆಯಾದ ಸಂಕೇತ್ ಕುಟುಂಬಕ್ಕೆ ಸೂಕ್ತ ಪರಿಹಾರ ಸಿಕ್ಕಿಲ್ಲ ಎಂದರು. ವಿದ್ಯಾರ್ಥಿಗಳ ಮನಸ್ಥಿತಿ ಹತ್ಯೆ ಮಾಡುವ ಹಂತಕ್ಕೆ ತಲುಪಿರುವುದು ಆತಂಕಕಾರಿಯಾಗಿದೆ. ಈ ಬಗ್ಗೆ ಸಮಾಜ, ಪಾಲಕರು, ಶಿಕ್ಷಕರು ಚಿಂತಿಸುವ ಅಗತ್ಯವಿದೆ. ಇಂತಹ ಮನಸ್ಥಿತಿಗೆ ಸೂಕ್ತ ಕಾರಣ ತಿಳಿದು ಪರಿಹಾರ ಕಂಡುಕೊಳ್ಳಬೇಕಿದೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಗೃಹಸಚಿವರಿದ್ದಾರೆ. ಕೊಡಗಿನಲ್ಲಿ ಅನ್ಯ ಕೋಮಿನವರಿಂದ ಹಿಂದೂ ಯುವಕನ ಮೇಲೆ ಹಲ್ಲೆ ನಡೆದಿದೆ. ಬಾಗಲಕೋಟೆ ಯಲ್ಲೂ ಗಲಾಟೆ ಆಗಿದೆ. ಆದರೂ ಗೃಹ ಸಚಿವರು ಗಟ್ಟಿ ನಿರ್ಧಾರ ಕೈಗೊಂಡಿಲ್ಲ ಎಂದರು.



ಹತ್ಯೆಯಾದ ವಿದ್ಯಾರ್ಥಿ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವರು ಇಂದಿಗೂ ಬಂದಿಲ್ಲ. ಸಾಂತ್ವನ ಹೇಳುವ ಮನಸ್ಥಿತಿಯೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಮನುಷ್ಯತ್ವ ಇರುವ ಯಾವುದೇ ಸರ್ಕಾರ ಹೀಗೆ ನಡೆದುಕೊಳ್ಳುವುದಿಲ್ಲ. ಪರಿಹಾರ ನೀಡುವುದು ದೂರದ ಮಾತು. ಕೊನೆ ಪಕ್ಷ ಸಾಂತ್ವನವಾದರೂ ಹೇಳಬೇಕಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತ ಎಂದೊಡನೆ ನೆನಪಾಗುವುದು ಧಾರ್ಮಿಕತೆಯೇ ಹೊರತು ಯುದ್ಧ , ಅರಾಜಕತೆ ಅಲ್ಲ – ಪಿ. ಎಸ್. ಪ್ರಕಾಶ್

– ರಷ್ಯಾ ಎಂದೊಡನೆ ಕಮ್ಯೂನಿಸಂ, ಇಂಡೋನೇಷ್ಯಾ ಎಂದೊಡನೆ ರಾಮಾಯಣ , ಸ್ವಿಜರ್ಲೆಂಡ್ ಎಂದೊಡನೆ ಸ್ವಿಸ್ ಬ್ಯಾಂಕ್ ನೆನೆಪಾಗುತ್ತೆ ಮತ್ತು ಪಾಕಿಸ್ತಾನ ಎಂದೊಡನೆ ನೆನೆಪಾಗುವುದು ಭಯೋತ್ಪಾದನೆಯೇ ಹೊರತು ಶಾಂತಿ ಸೌಹಾರ್ದತೆ ಅಲ್ಲ, ನಿಜ ತಾನೆ?

ದಿನ ಭವಿಷ್ಯ

ಮೇಷ
ಇತರರ ಜತೆ ವ್ಯವಹರಿಸುವಲ್ಲಿ ಸಫಲತೆ ಕಾಣುವಿರಿ. ಕೌಟುಂಬಿಕ ಸಂಬಂಧ ಕೆಡದಂತೆ ನೋಡಿಕೊಳ್ಳಿ. ಲಘು ಅನಾರೋಗ್ಯವಾದೀತು.

ವೃಷಭ
ಸಂಬಂಧದಲ್ಲಿ ನಿಮ್ಮ ತಾಳ್ಮೆ ಪರೀಕ್ಷಿಸುವ ಬೆಳವಣಿಗೆ. ಕ್ಷುಲ್ಲಕ ವಿಷಯವೆಂದು ಕಡೆಗಣನೆ ಬೇಡ. ಸಂಘರ್ಷಕ್ಕೆ ಇಳಿಯಬೇಡಿ.

ಮಿಥುನ
ವೈಯಕ್ತಿಕ ಗುರಿ ಸಾಧಿಸಲು ಹೆಚ್ಚು ಶ್ರಮ ಹಾಕುವಿರಿ. ಸ್ವಲ್ಪ ಮಟ್ಟಿನ ಹತಾಶೆ, ಅಸಹನೆ ಉಂಟಾದೀತು. ಹಣದ ಕೊರತೆ ಕಾಡಬಹುದು.

ಕಟಕ
ಸಾಧನೆಯ ದಿನ. ಕೆಲಸದಲ್ಲಿ ಪರಿಪೂರ್ಣತೆ. ಒತ್ತಡ ನಿವಾರಣೆ. ಯೋಚಿಸಿದ ಕಾರ್ಯದಲ್ಲಿ ಸಫಲತೆ. ಕೌಟುಂಬಿಕ ಇಷ್ಟಾರ್ಥ ಪೂರೈಸಲಿದೆ.

ಸಿಂಹ
ಸಂತೋಷದ ದಿನ. ಖಾಸಗಿ ಬದುಕಿನಲ್ಲಿ ಪ್ರೀತಿ, ಸಾಮರಸ್ಯ. ವೃತ್ತಿ ವ್ಯವಹಾರ ಸುಲಲಿತ. ಕೇಳಿದವರಿಗೆ ಸಾಲ ಕೊಡಲು ಹೋಗಬೇಡಿ.

ಕನ್ಯಾ
ಕ್ಲಿಷ್ಟಕರ ಪರಿಸ್ಥಿತಿ ಉದ್ಭವಿಸಿದರೂ ಬಳಿಕ ಶಮನವಾಗಲಿದೆ. ಕೆಲಸದಲ್ಲಿ ನಿಮ್ಮ ಕೌಶಲ್ಯ ಅನಾವರಣ. ಶ್ಲಾಘನೆ ಪಡೆಯುವಿರಿ. ಪ್ರೀತಿಯಲ್ಲಿ ಯಶಸ್ಸು.

ತುಲಾ
ದಿನವಿಡೀ ಕೆಲಸದ ಒತ್ತಡ. ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ಸಣ್ಣ ಲೋಪ ಗಂಭೀರ ಪರಿಣಾಮ ಬೀರೀತು. ಕೌಟುಂಬಿಕ ಒತ್ತಡ.

ವೃಶ್ಚಿಕ
ಖಾಸಗಿ ಬದುಕಲ್ಲಿ ಒತ್ತಡ ನಿವಾರಣೆ. ಯಾವುದೇ ಸಮಸ್ಯೆ ತಾತ್ಕಾಲಿಕ ಎಂಬುದು ಅರಿವಿರಲಿ. ಮುಖದಲ್ಲಿ ಸದಾ ನಗುವಿರಲಿ.

ಧನು
ಕೆಲಸ ಸುಗಮವಾಗಿ ಸಾಗದು. ಅಡ್ಡಿಗಳು, ಮಾನಸಿಕ ಒತ್ತಡ, ಅಸಹನೆ ಕಾಡುವುದು. ಹಣದ ವಿಷಯದಲ್ಲಿ ಪ್ರಮುಖ ನಿರ್ಧಾರ ತಾಳದಿರಿ.

ಮಕರ
ಕೆಲಸದ ಪ್ರಗತಿ ಬಗ್ಗೆ ಕೆಲವು ಚಿಂತೆ ಕಾಡುವುದು. ಬೆಂಬಲದ ಕೊರತೆ. ಅನ್ಯರ ಮೇಲಿನ ದ್ವೇಷ ಬಿಡಿ, ಸಹಕಾರಕ್ಕೆ ಮನ ಮಾಡಿ. ಕೌಟುಂಬಿಕ ಉದ್ವಿಗ್ನತೆ.

ಕುಂಭ
ನಿರಾಳ ಮನಸ್ಸು. ಹೊಸ ಯೋಜನೆಗೆ ಕೈಹಚ್ಚಲು ಕಾಲ ಸೂಕ್ತ. ಕೆಲಸದಲ್ಲಿ ಬಡ್ತಿ ಸಂಭವ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ.

ಮೀನ
ಗುಣಾತ್ಮಕ ಬೆಳವಣಿಗೆಯ ದಿನ. ಖಾಸಗಿ ಬದುಕಲ್ಲಿ ನೀವು ಇಚ್ಛಿಸಿದ ಕಾರ್ಯ ಸಿದ್ಧಿ. ವೃತ್ತಿಯಲ್ಲೂ ಸಫಲತೆ. ಇಷ್ಟ ವಸ್ತು ಖರೀದಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 0,3,7,2

ಮಂಗಳೂರಿನಿಂದ ನೇರ ಸಂಚಾರ ಬಂದ್ | ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ವಾಪಸ್

ಗಲ್ಫ್ ರಾಷ್ಟ್ರಗಳಿಗೆ ವಿಮಾನ ಹಾರಾಟ ವ್ಯತ್ಯಯ

ಮಂಗಳೂರು: ಇಸ್ರೇಲ್– ಇರಾನ್ ನಡುವಿನ ಯುದ್ಧದ ಬಿಸಿ ವಿಮಾನ ಪ್ರಯಾಣಿಕರಿಗೂ ತಟ್ಟಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳಿಗೆ ತೆರಳುವ ವಿಮಾನಗಳು ತಮ್ಮ ಹಾರಾಟ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ತೀವ್ರ ಬವಣೆಪಟ್ಟರು.

ಮಧ್ಯಪ್ರಾಚ್ಯದ ಕಡೆಗೆ ಹೋಗುವ ವಿಮಾನಗಳಿಗೆ ಮಂಗಳೂರಿನಿಂದ ನೇರ ಮಾರ್ಗವಿಲ್ಲ. ಆದ ಕಾರಣ ಗಲ್ಫ್ ರಾಷ್ಟ್ರಗಳಿಗೆ ತೆರಳಿ ನಂತರ ಸಂಚಾರ ಮುಂದುವರಿಸಬೇಕಿತ್ತು. ಹೀಗಾಗಿ ಮಂಗಳೂರು ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳತ್ತ ಹೊರಟ ಕೆಲವು ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದ್ದರೆ, ಇನ್ನೂ ಕೆಲವು ವಿಮಾನಗಳು ಮಂಗಳೂರಿಗೆ ಮರಳಿವೆ. ಅದೇ ರೀತಿ ಗಲ್ಫ್ ರಾಷ್ಟ್ರಗಳಿಂದ ಮಂಗಳೂರಿಗೆ ಆಗಮಿಸಬೇಕಿದ್ದ ಕೆಲವು ವಿಮಾನಗಳ ಸಂಚಾರವನ್ನೂ ರದ್ದು ಮಾಡಲಾಗಿದೆ.

ಯಾವೆಲ್ಲಾ ವಿಮಾನ ರದ್ದು? ಮಂಗಳೂರಿನಿಂದ ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ಟೇಕಾಫ್ ಆದ ಕೆಲ ಹೊತ್ತಿನಲ್ಲಿ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ. ಮಂಗಳೂರು– ದೋಹಾ ನಡುವಿನ ಐಎಕ್ಸ್ 821 ವಿಮಾನವನ್ನು ಮುಂಬೈ ಏರ್‌ಪೋರ್ಟ್‌ನಲ್ಲಿ ಇಳಿಸಲಾಯಿತು. ರಾತ್ರಿ 8.45ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ದೋಹಾ– ಮಂಗಳೂರು ನಡುವಿನ ಐಎಕ್ಸ್ 822 ಸಂಖ್ಯೆಯ ವಿಮಾನ, ದುಬೈನಿಂದ 10.10ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ಐಎಕ್ಸ್ 832 ಸಂಖ್ಯೆಯ ವಿಮಾನ ಸಂಚಾರ ರದ್ದಾಗಿತ್ತು.

ಮಂಗಳೂರಿನಿಂದ ಹೊರಡದೇ ನಿಂತ ವಿಮಾನಗಳು! ಮಂಗಳೂರು ವಿಮಾನ ನಿಲ್ದಾಣದಿಂದ 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 831 ಮಂಗಳೂರು– ದುಬೈ ವಿಮಾನ, 11.10ಕ್ಕೆ ಹೊರಡಬೇಕಿದ್ದ ಐಎಕ್ಸ್ 847 ಮಂಗಳೂರು– ದಮ್ಮಾಮ್ ವಿಮಾನ, 8.15ಕ್ಕೆ ಹೊರಡಬೇಕಿದ್ದ ಐಎಕ್ಸ್ 813 ಮಂಗಳೂರು– ದುಬೈ ವಿಮಾನ, 2.05ಕ್ಕೆ ಹೊರಡಬೇಕಿದ್ದ ಐಎಕ್ಸ್ 851 ಮಂಗಳೂರು– ಕುವೈಟ್ ವಿಮಾನ, 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 815 ಮಂಗಳೂರು– ಅಬುಧಾಬಿ ವಿಮಾನ, 7.15ಕ್ಕೆ ಹೊರಡಬೇಕಿದ್ದ 6ಇ 1467 ಮಂಗಳೂರು– ದುಬೈ ವಿಮಾನ ಸಂಚಾರವನ್ನು ರದ್ದು ಮಾಡಲಾಗಿದೆ.



ಕೆಂಪೇಗೌಡ ವಿಮಾನ ಸಂಚಾರ ರದ್ದು

ಬೆಂಗಳೂರು: ಅಮೆರಿಕ ಮತ್ತು ಇಸ್ರೇಲ್ ಸೇರಿಕೊಂಡು ಇರಾನ್ ಮೇಲೆ ದಾಳಿ ಮಾಡಲು ಆರಂಭಿಸಿದ್ದು, ಈ ಹಿನ್ನೆಲೆ ಮುಂಜಾಗ್ರತಾ ಕ್ರಮವಾಗಿ ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿದೆ. ಕೆಂಪೇಗೌಡ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ ವಿಮಾನಗಳು ಸೇರಿದಂತೆ ವಿದೇಶದಿಂದ ಬೆಂಗಳೂರಿಗೆ ಬರಬೇಕಿದ್ದ ಕೆಲ ವಿಮಾನಗಳನ್ನು ರದ್ದಾಗಿದೆ. ಅದರಲ್ಲೂ ಪ್ರಮುಖವಾಗಿ ದುಬೈ, ಜೋರ್ಡಾನ್, ದೋಹಾ, ದಮ್ಮಮ್, ಬಹ್ರೈನ್, ಶರ್ಜಾ, ಕುವೈತ್, ರಾಸ್ ಅಲ್-ಖೈಮಾ ದೇಶಗಳಿಗೆ ವಿಮಾನ ಹಾರಾಟ ಸೇವೆ ರದ್ದಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡ ಇಂಡಿಗೋ, ಇರಾನ್ ಮತ್ತು ಮಧ್ಯಪ್ರಾಚ್ಯದಲ್ಲಿನ ವಾಯು ಪ್ರದೇಶ ನಿರ್ಬಂಧ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಮಧ್ಯಪ್ರಾಚ್ಯಕ್ಕೆ ಪ್ರಯಾಣ ನಡೆಸುವ ಎಲ್ಲಾ ವಿಮಾನಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು. ಪ್ರಯಾಣಿಕರು ಮತ್ತು ಸಿಬ್ಬಂದಿಗಳ ಭದ್ರತೆ ಮತ್ತು ಸುರಕ್ಷತೆಯು ಪ್ರಮುಖವಾಗಿದ್ದು, ಈ ಹಿನ್ನೆಲೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ತಮ್ಮ ತಂಡವು ಅಲ್ಲಿನ ಪರಿಸ್ಥಿತಿಗಳ ಸೂಕ್ಷ್ಮ ಅವಲೋಕನ ನಡೆಸಿದೆ. ವಿಮಾನ ಹಾರಾಟದಲ್ಲಿ ಅಡ್ಡಿಯುಂಟಾಗಲಿದೆ ಎಂದಿದೆ. ಈ ಕುರಿತು ಮಾಹಿತಿ ಹಂಚಿಕೊಂಡ ಏರ್ ಇಂಡಿಯಾ, ಮಧ್ಯಪ್ರದೇಶದ ಹಲವು ಭಾಗದಲ್ಲಿ ಉಂಟಾಗುತ್ತಿರುವ ಬೆಳವಣಿಗೆ ಹಿನ್ನೆಲೆ ಮಧ್ಯಪ್ರಾಚ್ಯದ ಎಲ್ಲಾ ಪ್ರದೇಶಗಳ ಎಲ್ಲಾ ಏರ್ ಇಂಡಿಯಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ಪ್ರಯಾಣಿಕರ ಸುರಕ್ಷತೆಗಾಗಿ ಎಲ್ಲಾ ಅಗತ್ಯ ಕ್ರಮ ನಿರ್ವಹಣೆಗೆ ನಾವು ಬದ್ಧರಾಗಿರುವುದಾಗಿ ತಿಳಿಸಿದೆ.

ಮಧ್ಯಪ್ರಾಚ್ಯ ಸಮರಾಂಗಣ

ಪುಟ ೧➡ ಆದರೆ, ಇರಾನ್ ಮಾಧ್ಯಮಗಳು ಇದನ್ನು ನಿರಾಕರಿಸಿವೆ.

ಇರಾನ್ ರಕ್ಷಣಾ ಸಚಿವ ಸಾವು: ಇರಾನ್ ರಕ್ಷಣಾ ಸಚಿವ ಅಮೀರ್ ನಾಸಿರ್ ಜಾದೆಹ್ ದಾಳಿಯಲ್ಲಿ ಮೃತರಾಗಿರುವುದಾಗಿ ವರದಿಯಾಗಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕಮಾಂಡರ್ ಮೊಹಮ್ಮದ್ ಪಕ್ಪೋರ್ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಕ್ಷಿಪಣಿ ಪ್ರತೀಕಾರ– ಇಸ್ರೇಲ್, ಗಲ್ಫ್ ರಾಜಧಾನಿಗಳು ತತ್ತರ: ದಾಳಿಯ ಕೆಲವೇ ಗಂಟೆಗಳಲ್ಲಿ ಇರಾನ್ ಇಸ್ರೇಲ್ ಕಡೆಗೆ 'ಕ್ಷಿಪಣಿಗಳ ಬ್ಯಾರೇಜ್' ಉಡಾಯಿಸಿದೆ. ಜೆರುಸಲೇಮ್ ಹಾಗೂ ಟೆಲ್ ಅವೀವ್‌ನಲ್ಲಿ ಸೈರನ್ ಮೊಳಗಿದವು. ಕೆಲವು ನಾಗರಿಕರು ಸುರಕ್ಷಿತ ತಾಣಗಳಿಗೆ ತೆರಳಿದ್ದಾರೆ. ಬಳಿಕ ಗಲ್ಫ್ ಪ್ರದೇಶದ ಅಮೆರಿಕ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಮತ್ತು ಡ್ರೋನ್ ಮೂಲಕ ಇರಾನ್ ದಾಳಿ ನಡೆಸಿತು. ಅಬುಧಾಬಿಯಲ್ಲಿ ಕ್ಷಿಪಣಿ ಅವಶೇಷ ಬಿದ್ದು ಏಷ್ಯನ್ ನಾಗರಿಕನೊಬ್ಬ ಸಾವನ್ನಪ್ಪಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ತಿಳಿಸಿದೆ.

ಇರಾನ್ ಕಿಡಿ: ಇರಾನ್ ವಿದೇಶಾಂಗ ಸಚಿವ ಸಯೀದ್ ಅಬ್ಬಾಸ್ ಅರಕ್ಚಿ ದಾಳಿಯನ್ನು 'ಕ್ರಿಮಿನಲ್ ಮಿಲಿಟರಿ ಆಕ್ರಮಣ' ಎಂದು ಖಂಡಿಸಿದರು. ಟ್ರಂಪ್ ಅವರು ಅಮೆರಿಕ ಫಸ್ಟ್ ಅನ್ನು ಇಸ್ರೇಲ್ ಫಸ್ಟ್ ಆಗಿ ಪರಿವರ್ತಿಸಿದ್ದಾರೆ. ಅದೇ ಅಮೆರಿಕ ಕೊನೆಯದು ಎಂದರ್ಥ. ಏಕೆಂದರೆ ನಮ್ಮ ಸಶಸ್ತ್ರ ಪಡೆಗಳು ಸಜ್ಜಾಗಿವೆ ಎಂದು ಹೇಳಿದರು. ಇರಾನ್ ಮಾತುಕತೆಗೂ ಸಿದ್ಧವಿದ್ದರೂ ರಕ್ಷಣೆಗೆ ಇನ್ನಷ್ಟು ಸಜ್ಜಾಗಿದೆ ಎಂದು ಸಚಿವಾಲಯ ಹೇಳಿದೆ. ವಿಶ್ವಸಂಸ್ಥೆ ಹಾಗೂ ಅಂತಾರಾಷ್ಟ್ರೀಯ ಸಮುದಾಯ ತುರ್ತು ಕ್ರಮ ಕೈಗೊಳ್ಳಬೇಕೆಂದು ಟೆಹ್ರಾನ್ ಮನವಿ ಮಾಡಿದೆ.

ಟ್ರಂಪ್–ನೆತನ್ಯಾಹು ಹೇಳಿಕೆ: ಇದರ ಮಧ್ಯೆ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 1979ರಿಂದ ದೇಶವನ್ನು ಆಡಳಿತ ನಡೆಸುತ್ತಿರುವ ಇಸ್ಲಾಮಿಕ್ ನಾಯಕತ್ವದ ವಿರುದ್ಧ ಎದ್ದು ನಿಲ್ಲು ವಂತೆ ಇರಾನ್ ಜನತೆಗೆ ಕರೆ ನೀಡಿದ್ದಾರೆ. ಈ ಮೂಲಕ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ ಎಂದಿದ್ದಾರೆ. ನಾವು ಕಾರ್ಯಾಚರಣೆ ಮುಗಿಸಿದ ನಂತರ ನಿಮ್ಮ ಸರ್ಕಾರವನ್ನು ನೀವು ಮಾಡಿಕೊಳ್ಳಿ. ಇದು ಪೀಳಿಗೆಗಳ ಮಟ್ಟಿಗೆ ನಿಮ್ಮ ಏಕೈಕ ಅವಕಾಶವಾಗಿರಬಹುದು. ಅನೇಕ ವರ್ಷಗಳಿಂದ ನೀವು ಅಮೆರಿಕದ ನೆರವಿಗಾಗಿ ಕೇಳಿದ್ದೀರಿ, ಆದರೆ ಅದು ಸಿಗಲಿಲ್ಲ ಎಂದು ಪ್ರಮುಖ ಯುದ್ಧ ಕಾರ್ಯಾಚರಣೆಗಳು ಆರಂಭವಾಗಿವೆ ಎಂದು ಘೋಷಿಸಿದ ವಿಡಿಯೋ ಸಂದೇಶದಲ್ಲಿ ಟ್ರಂಪ್ ಹೇಳಿದರು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಇದೇ ಗುರಿಯನ್ನು ಪ್ರತಿಧ್ವನಿಸಿದರು. ನಮ್ಮ ಜಂಟಿ ಕಾರ್ಯಾಚರಣೆ ಧೈರ್ಯಶಾಲಿ ಇರಾನ್ ಜನತೆಗೆ ತಮ್ಮ ಭವಿಷ್ಯವನ್ನು ತಮ್ಮ ಕೈಗೆತ್ತಿಕೊಳ್ಳಲು ಅಗತ್ಯ ಪರಿಸ್ಥಿತಿಗಳನ್ನು ಸೃಷ್ಟಿಸಲಿದೆ ಎಂದು ಅವರು ಹೇಳಿದರು.

ಬುರ್ಜ್ ಖಲೀಫಾದಿಂದ ಸ್ಥಳಾಂತರ: ಯುಎಇ, ಅಬುಧಾಬಿ, ದುಬೈ, ಕತಾರ್‌ನ ದೋಹಾ ಮತ್ತು ಸೌದಿ ಅರೇಬಿಯಾದ ರಿಯಾದ್ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದರಿಂದ ದುಬೈನ ಬುರ್ಜ್ ಖಲೀಫಾದಿಂದ ಜನರನ್ನು ಸ್ಥಳಾಂತರಿಸಲಾಗಿದೆ. ಸ್ಥಳೀಯರ ಪ್ರಕಾರ, ಅಲ್ಲಲ್ಲಿ ಸ್ಫೋಟಗಳಾಗುತ್ತಿರುವುದು ಗೊತ್ತಾಗುತ್ತಿದೆ.

ರಾಜಕೀಯ ಹಿನ್ನೆಲೆ

- ಟ್ರಂಪ್ ಆಡಳಿತವು ಕಳೆದ 8 ತಿಂಗಳಲ್ಲಿ 2ನೇ ಬಾರಿ ಇರಾನ್ ವಿರುದ್ಧ ಸೇನಾ ಕ್ರಮ
- ಇರಾನ್ ನೌಕಾಪಡೆಯನ್ನು ನಾಶಮಾಡುತ್ತೇವೆ ಎಂಬ ಟ್ರಂಪ್ ಎಚ್ಚರಿಕೆ
- ಶರಣಾದರೆ ರಕ್ಷಣೆ ನೀಡುತ್ತೇವೆ ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ ಸದಸ್ಯರಿಗೆ ಕರೆ

ಎಲ್ಲೆಲ್ಲಿ ದಾಳಿ?

ಬಹ್ರೇನ್: ಮನಾಮಾದಲ್ಲಿರುವ ಯುಎಸ್ ಐದನೇ ಫ್ಲೀಟ್ ಸಂಪರ್ಕಿತ ಸೌಲಭ್ಯ ಗುರಿ.
ಕತಾರ್: ಅಲ್ ಉದೈದ್ ವಾಯುನೆಲೆ ಬಳಿ ಸ್ಫೋಟ; ವಾಯು ರಕ್ಷಣಾ ವ್ಯವಸ್ಥೆ ಸಕ್ರಿಯ.
ಯುಎಇ: ಅಬುಧಾಬಿ, ದುಬೈನಲ್ಲಿ ಭಾರೀ ಸ್ಫೋಟಗಳ ಶಬ್ದ; ಬುರ್ಜ್ ಖಲೀಫಾ ಸ್ಥಳಾಂತರ.
ಸೌದಿ ಅರೇಬಿಯಾ: ರಿಯಾದ್‌ನಲ್ಲಿ ಸ್ಫೋಟಗಳ ವರದಿ; ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ರಕ್ಷಣಾ ವ್ಯವಸ್ಥೆ ಸಕ್ರಿಯ.
ಕುವೈತ್: ವಾಯುಪ್ರದೇಶ ಮುಚ್ಚುವಿಕೆ ಘೋಷಣೆ.
ಇರಾಕ್: ಜುರ್ಫ್ ಅಲ್–ಸಖರ್ ನೆಲೆಯ ಮೇಲೆ ಬಾಂಬ್ ದಾಳಿ; ಕತೇಬ್ ಹಿಜ್ಬುಲ್ಲಾ 47ನೇ ಬ್ರಿಗೇಡ್ ಗುರಿ.
ಜೋರ್ಡಾನ್: ಸೌದಿ ಗುರಿಯಾಗಿದ್ದ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿತು.

ಗಲ್ಫ್ ಪ್ರದೇಶದ ಅಮೆರಿಕ ನೆಲೆ

- ಅಲ್ ಉದೈದ್ (ಕತಾರ್) ಯುಎಸ್ ಸೆಂಟ್ಕಾಮ್ ಪ್ರಧಾನ ಕಚೇರಿ
- ಐದನೇ ಫ್ಲೀಟ್ (ಬಹ್ರೇನ್)
- ಅಲ್ ದಫ್ರಾ (ಯುಎಇ)
- ಪ್ರಿನ್ಸ್ ಸುಲ್ತಾನ್ ವಾಯುನೆಲೆ (ಸೌದಿ)
- ಕ್ಯಾಂಪ್ ಆರಿಫ್ಜಾನ್, ಅಲಿ ಅಲ್ ಸಲೇಮ್ (ಕುವೈತ್)
- ಐನ್ ಅಲ್–ಅಸಾದ್ (ಇರಾಕ್)

ಸ್ವಾಯತ್ತತೆ, ಪ್ರಾದೇಶಿಕ ಅಖಂಡತೆ ಗೌರವಿಸಿ: ಭಾರತ

ಹೊಸದಿಲ್ಲಿ: ಅಮೆರಿಕ– ಇಸ್ರೇಲ್ ಜಂಟಿ ದಾಳಿಯಿಂದ ಇರಾನ್‌ನಲ್ಲಿ ಉದ್ಭವಿಸಿದ ಭಾರೀ ಸೈನಿಕ ಸಂಘರ್ಷದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ತೀವ್ರ ಸಂಘರ್ಷವನ್ನು ತಿಳಿಗೊಳಿಸುವಂತೆ ಭಾರತ ವಿದೇಶಾಂಗ ಇಲಾಖೆ ಕರೆ ನೀಡಿದೆ. ಜತೆಗೆ ಎಲ್ಲ ದೇಶಗಳ ಸ್ವಾಯತ್ತತೆ ಹಾಗೂ ಪ್ರಾದೇಶಿಕ ಅಖಂಡತೆಯನ್ನು ಗೌರವಿಸಬೇಕು ಎಂದು ಸ್ಪಷ್ಟ ಸಂದೇಶ ರವಾನಿಸಿದೆ. ಈ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ(ಎಂಇಎ), ಎಲ್ಲರೂ ತಾಳ್ಮೆ ವಹಿಸಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದೆ. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಮಧ್ಯಪ್ರಾಚ್ಯದ ಹಲವು ಅಮೆರಿಕನ್ ಸೈನಿಕ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದೆ. ಕತಾರ್, ಕುವೈತ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಪ್ರದೇಶಗಳಲ್ಲಿನ ತಾಣಗಳು ಗುರಿಯಾಗಿರುವುದಾಗಿ ವರದಿಯಾಗಿದೆ. ಇದರಿಂದ ಪ್ರದೇಶದಲ್ಲಿ ಯುದ್ಧದ ಆತಂಕ ಮತ್ತಷ್ಟು ಗಾಢವಾಗಿದೆ. ಎಂದು ಎಂಇಎ ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಅಪಘಾತ: ಮೂವರು ಸಾವು

ರಾಯಚೂರು: ನಗರದಲ್ಲಿ ಶನಿವಾರ ಬೆಳಿಗ್ಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೂರು ಯುವಕರು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಮೃತರನ್ನು ನಗರದ ಸುಕಾಣಿ ಕಾಲೋನಿಯ ಮೊಹಮ್ಮದ್ ಅಲಿ ಪಾಷಾ (24), ನೂರ್ ಮಹಮ್ಮದ್ (19) ಹಾಗೂ ಫಯಾಜ್ (26) ಎಂದು ಗುರುತಿಸಲಾಗಿದೆ. ರಾತ್ರಿ 1/15 ನಿಮಿಷದ ಸಮಯದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಲಿಂಗಸುಗೂರು ರಸ್ತೆಯಲ್ಲಿ ಅಸ್ಕಿಹಾಳ ಕಡೆಯಿಂದ ಎಸ್.ಎನ್.ಟಿ ರಸ್ತೆ ಕಡೆಗೆ ಫಯಾಜ್ ಮೋಟಾರ ಸೈಕಲ್ ದಲ್ಲಿ ತನ್ನ ಸ್ನೇಹಿತರಾದ ಮೊಹಮ್ಮದ್ ಅಲೆ ಪಾಷ ಮತ್ತು ನೂರ ಮಹಮ್ಮದ್ ನನ್ನು ಕೂಡಿಸಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ.

ವೃತ್ತದ ಕೋರ್ಟ್ ಮಾರ್ಗವಾಗಿ ಅಶೋಕ ಲೈಲಂಡ್ ಗೂಡ್ಸ್ ಗಾಡಿ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ ಈ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೂಡ್ಸ್ ಗಾಡಿ ಅಹಮದಾಬಾಬ್ ನಿಂದ ಚೆನ್ನೈಗೆ ತೆರಳುತ್ತಿತ್ತು. ಟ್ರಕ್ ಮತ್ತು ಚಾಲಕನನ್ನು ವಶಕ್ಕೆ ಪಡೆದಿದ್ದು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದುಬೈನಲ್ಲಿ ಸಿಲುಕಿದ ಎಂಎಲ್ಸಿ ಭೋಜೆಗೌಡ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಭೋಜೆಗೌಡ ಅವರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲಿಕಿಕೊಂಡಿದ್ದು, ಬೆಂಗಳೂರಿಗೆ ಆಗಮಿಸಲು ವಿಮಾನ ಇಲ್ಲದೇ ಪರದಾಡುವಂತಾಗಿದೆ. ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಪಡೆಗಳು ದಾಳಿ ನಡೆಸುತ್ತಿರುವ ಸಂದರ್ಭದಲ್ಲಿ ದುಬೈಯಿಂದ ಬೆಂಗಳೂರಿಗೆ ಪ್ರಯಾಣಿಸಲು ವಿಮಾನ ಇಲ್ಲದ ಕಾರಣ ದುಬೈನಲ್ಲೇ ಉಳಿದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾಗೆ ತೆರಳಿದ್ದ ಭೋಜೆಗೌಡ ಅವರು ದುಬೈನ ವಿಮಾನ ನಿಲ್ದಾಣದಲ್ಲಿ ಇರುವ ವೀಡಿಯೊ ಹಂಚಿಕೊಂಡಿದ್ದಾರೆ.

ಮಂಡಳಿ ಅಧ್ಯಕ್ಷರ ಅವಧಿ ಮುಂದುವರಿಕೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳ ಅಧೀನದಲ್ಲಿ ಬರುವ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ನಾಮನಿರ್ದೇಶನಗೊಂಡ ಅಧ್ಯಕ್ಷರ ಮುಕ್ತಾಯಗೊಂಡ, ಮುಕ್ತಾಯಗೊಳ್ಳಲಿರುವ ಅವಧಿಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ. ಕೆಲವು ಕಾಡಾ ಅಭಿವೃದ್ಧಿ ಪ್ರಾಧಿಕಾರ ಹಾಗೂ ಯೋಜನಾ ಪ್ರಾಧಿಕಾರದ ಅಧ್ಯಕ್ಷರ ಅವಧಿಯನ್ನು ಮುಂದುವರೆಸಿ ಆದೇಶ ಹೊರಡಿಸುವಂತೆ ಕೋರಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದರು. ಈ ಪತ್ರವನ್ನು ಆಧರಿಸಿ ಮುಖ್ಯಮಂತ್ರಿಗಳ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ ಅಧ್ಯಕ್ಷರ ಅವಧಿಯನ್ನು ವಿಸ್ತರಿಸಲಾಗಿದೆ. ಆಡಳಿತ ಇಲಾಖೆಯ ಸಂಬಂಧಿಸಿದ ಅಧಿನಿಯಮ, ನಿಯಮಗಳ ರೀತ್ಯಾ ತಕ್ಷಣದಿಂದ ಅಧ್ಯಕ್ಷರು ಕಾರ್ಯನಿರ್ವಹಿಸಲು ಸೂಕ್ತ ಅಧಿಸೂಚನೆ ಹೊರಡಿಸುವಂತೆ ಆಡಳಿತ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸೂಚನೆ ನೀಡಿದೆ.

ಪಿಯುಸಿ ಪರೀಕ್ಷೆ: 15,953 ವಿದ್ಯಾರ್ಥಿಗಳು ಗೈರು

ಬೆಂಗಳೂರು: ರಾಜ್ಯದಲ್ಲಿ ದ್ವಿತೀಯ ಪಿಯು ಪರೀಕ್ಷೆ-1 ಶನಿವಾರದಿಂದ ಆರಂಭವಾಗಿದ್ದು, ಪರೀಕ್ಷೆಯ ಮೊದಲ ದಿನದ ಕನ್ನಡ ಮತ್ತು ಅರೇಬಿಕ್ ಭಾಷಾ ಪರೀಕ್ಷೆಗೆ 15,953 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಈ ಪರೀಕ್ಷೆಗೆ ಒಟ್ಟು 5,09,085 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಇವರಲ್ಲಿ 9,93,132 (ಶೇ.96.87) ಪರೀಕ್ಷೆಗೆ ಹಾಜರಾಗಿದ್ದಾರೆ. ವಿಜಯಪುರದಲ್ಲಿ ಗರಿಷ್ಠ 2,370 ವಿದ್ಯಾರ್ಥಿಗಳು ಗೈರಾಗಿದ್ದು, ರಾಯಚೂರು – 1,139, ಬೀದರ್ –1,087, ಕಲಬುರಗಿ – 1,071 ವಿದ್ಯಾರ್ಥಿಗಳು ಗೈರಾಗಿದ್ದಾರೆ.



ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಹೃದಯಘಾತದಿಂದ ಸಾವು: ಚಿಕ್ಕೋಡಿಯ ಸಿಎಸ್‌ಎಸ್‌ಪಿಯು ಕಾಲೇಜಿನ ಕಲಾ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಭೂಮಿಕಾ ಕರೆಪ್ಪ ಮಾಳಿಂಗೆ (17) ಹೃದಯಘಾತದಿಂದ ಮೃತ ಘಟನೆ ಶನಿವಾರ ನಡೆದಿದೆ. ತಾಲೂಕಿನ ಬಂಬಲವಾಡ ಗ್ರಾಮದ ನಿವಾಸಿ ಭೂಮಿಕಾ ಅಭ್ಯಾಸ ಪೂರ್ಣಗೊಳಿಸಿ ಸ್ನಾನ ಮಾಡುವ ಸಂದರ್ಭದಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ತೆರಳುವ ಮುನ್ನ ಸಾವನ್ನಪ್ಪಿದ್ದು, ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ

ಪುಟ ೧➡ ಸಂವಿಧಾನವು ಒಬ್ಬ ವ್ಯಕ್ತಿ ಜವಾಬ್ದಾರಿಯುತವಾಗಿ ವಿಕಾಸವಾಗಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ಮೌಢ್ಯ, ಕಂದಾಚಾರಗಳಿಂದ ಸಮಾಜ ಕೂಡಿದ್ದು, ಇವುಗಳನ್ನು ದೂರ ಮಾಡುವ ಶಿಕ್ಷಣ ಪಡೆಯುವುದು ಅತ್ಯಂತ ಅಗತ್ಯ ಎಂದರು.

ಶಿಕ್ಷಕರು ಸಂವಿಧಾನಬದ್ಧ ಕರ್ತವ್ಯವನ್ನು ನಿರ್ವಹಿಸಬೇಕು. ವಿಷಯಗಳನ್ನು ತರ್ಕ, ಪ್ರಶ್ನೆ ಮಾಡಿ ಒಪ್ಪಿಕೊಳ್ಳಬೇಕು. ಮಕ್ಕಳಿಗೂ ಅದನ್ನೇ ಕಲಿಸಬೇಕು. ಶಿಕ್ಷಕರಿಗೆ ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವ ಶಕ್ತಿ ಇದೆ. ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆಯಬೇಕು. ವೈಚಾರಿಕತೆ ಮತ್ತು ವೈಜ್ಞಾನಿಕ ಶಿಕ್ಷಣ ಶಿಕ್ಷರಿಂದ ಮಾತ್ರ ನೀಡಲು ಸಾಧ್ಯ ಎಂದು ತಿಳಿಸಿದರು. ಶಿಕ್ಷಕ ನಡವಳಿಕೆ ಉತ್ತಮವಾಗಿರಬೇಕು. ಎಲ್ಲ ಮಕ್ಕಳಿಗೂ ವೈಚಾರಿಕತೆ, ವೈಜ್ಞಾನಿಕತೆಯುಳ್ಳ ಶಿಕ್ಷಣ ನೀಡಿದರೆ ಸುಭದ್ರ, ಸುಂದರ ಸಮಾಜ ಕಟ್ಟಬಹುದು. ಭವಿಷ್ಯ ರೂಪಿಸುವಂತಹ ಮಕ್ಕಳನ್ನು ತಯಾರು ಮಾಡಿ ಎಂದು ಶಿಕ್ಷಕರಿಗೆ ಮುಖ್ಯಮಂತ್ರಿಗಳು ಕರೆ ನೀಡಿದರು.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಕ್ಷಣ ರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಂಘಮಿತ್ರ, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರಿಗೆ ಶಿಕ್ಷಕ ಸೈನಿಕ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಗುರುಕುಲ ಬಿರುದನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ, ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ, ಎಐಪಿಟಿಎಫ್ ರಾಷ್ಟ್ರಾಧ್ಯಕ್ಷ ಬಸವರಾಜ ಗುರಿಕಾರ, ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಸೇರಿದಂತೆ ಇತರರಿದ್ದರು.

ಬೇಡಿಕೆಗಳ ಈಡೇರಿಸಲು ಪ್ರಯತ್ನ



ಶಿಕ್ಷಕರ ಹಲವಾರು ಬೇಡಿಕೆಗಳನ್ನು ಹಂತ-ಹಂತವಾಗಿ ಈಡೇರಿಸಲಾಗುವುದು. 6 ಮತ್ತು 7ನೇ ವೇತನ ಆಯೋಗವನ್ನು ಜಾರಿ ಮಾಡಿದ್ದು, ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಒಪಿಎಸ್ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರುತ್ತೇವೆ. ವೇತನ ಬಡ್ತಿ ನೀಡಲು ಪ್ರಯತ್ನ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.



ಈ ನಾಡಿನ ಮಕ್ಕಳ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ಶಿಕ್ಷಕರಿಗೆ ನೀಡಲಾಗಿದೆ. ಅವರನ್ನು ಓಡುವ ಕುದುರೆಗಳಂತೆ ತಯಾರು ಮಾಡಬೇಕು. ಬೆಂಗಳೂರಿನಲ್ಲಿ ಸಿಗುವ ಗುಣಮಟ್ಟದ ಶಿಕ್ಷಣ ಪ್ರತಿಯೊಂದು ಶಾಲೆಯಲ್ಲೂ ದೊರೆಯುವಂತೆ ಶಿಕ್ಷಕರು ಶ್ರಮಿಸಬೇಕು.

■ ಡಿ.ಕೆ. ಶಿವಕುಮಾರ್, ಡಿಸಿಎಂ

ಕರುಳು ಕಲಕುವ ಕೇರಳ ಸ್ಟೋರಿ

ಪುಟ ೧➡ ಹಿಂದು ಪದ್ಧತಿಯಂತೆ ಮದುವೆಯನ್ನೂ ಆಗುತ್ತಾನೆ. ಅದಾದ ನಂತರ ನಿಧಾನವಾಗಿ ತನ್ನ ನಿಜ ಹೆಸರು, ಸ್ವರೂಪ ಪ್ರಕಟಿಸುತ್ತಾನೆ. ನಂತರ ಆತನ ಮನೆಯವರು ಆಕೆಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಾರೆ. ನಂತರ ಆಕೆಯೇ ಹೇಗೋ ತಪ್ಪಿಸಿಕೊಂಡುಬಂದು ಪೊಲೀಸರಿಗೆ ದೂರು ನೀಡುತ್ತಾಳೆ.

ಇದರ ಜತೆಗೇ ಇನ್ನೆರಡು ಹುಡುಗಿಯರ ಕತೆಗಳೂ ಸಾಗುತ್ತವೆ. ಇದರಲ್ಲಿ ಒಬ್ಬಳು ಹುಡುಗಿ ಮನೆಯವರು ತನಗೆ ಬೇಕಾದ ಹಾಗೆ ರೀಲ್ಸ್ ಮಾಡಲು ಬಿಡುತ್ತಿಲ್ಲ ಎಂಬ ಕಾರಣಕ್ಕೆ ಬೇಸರಗೊಂಡಿದ್ದಳು. ಅದನ್ನು ದಾಳವಾಗಿ ಬಳಸಿಕೊಂಡ ಮುಸ್ಲಿಂ ಯುವಕ, ನಾವು ಮದುವೆಯಾದರೆ ನೀನು ಇಷ್ಟ ಬಂದ ಹಾಗೆ ರೀಲ್ಸ್ ಮಾಡಿ ಪ್ರಸಿದ್ಧಿಗಳಿಸಬಹುದು ಎಂದು ಆಕೆಯನ್ನು ಪುಸಲಾಯಿಸಿ ಮದುವೆಯಾಗಿ, ನಂತರ ಅವಳಿಗೆ ಬುರ್ಖಾ ಹಾಕಿಸುತ್ತಾನೆ. ರೀಲ್ಸ್ ಮಾಡುವುದು ನಮ್ಮ ಧರ್ಮದಲ್ಲಿ ಹರಾಮ್ (ಕೆಟ್ಟದ್ದು) ಅನ್ನುತ್ತಾನೆ.

ಇನ್ನೊಂದು ಹುಡುಗಿಯ ಕತೆ ಇನ್ನೂ ಭೀಕರ. ಆಕೆಯನ್ನು ಪ್ರೀತಿಸಿದ ಹುಡುಗ ಸಲೀಂ ಭಾರೀ ಪ್ರಗತಿಪರನಂತೆ ಆಕೆಯ ಬಳಿ ಮಾತನಾಡುತ್ತಾನೆ. ಆಕೆ ಯಾವ ಕಾರಣಕ್ಕೂ ಮತಾಂತರ ಆಗುವುದಿಲ್ಲ ಎಂದು ಹುಡುಗಿ ಸ್ಪಷ್ಟಪಡಿಸಿರುತ್ತಾಳೆ. ಮೊದಲು ಒಪ್ಪಿ ಆಕೆಯೊಂದಿಗೆ ಲಿವ್‌ಇನ್‌ನಲ್ಲಿರುವ ಆತ, ನಿಧಾನವಾಗಿ ಒಂದೊಂದೇ ಕಾರಣಗಳನ್ನು ಮುಂದಿಟ್ಟು ಈಕೆಯನ್ನು ಹಿಂಸಿಸಲಾರಂಬಿಸುತ್ತಾನೆ. ಹೀಗೆ ಲವ್ ಜಿಹಾದ್‌ನ ವಿವಿಧ ಸ್ವರೂಪಗಳನ್ನು ಸಿನಿಮಾ ತೆರೆದಿಡುತ್ತ ಸಾಗುತ್ತದೆ.

ಮುಸ್ಲಿಮರನ್ನು ಮದುವೆಯಾಗುತ್ತಿದ್ದಂತೆ ಮನೆಯವರು ಅವರನ್ನು ದೂರ ಮಾಡುತ್ತಾರೆ. ಅತ್ತ ಮದುವೆಯಾದವನೂ ಮೋಸ ಮಾಡು ತ್ತಾನೆ. ಇದನ್ನು ಮನೆಯವರ ಬಳಿಯೂ ಹೇಳಿಕೊಳ್ಳಲಾಗದೆ, ಅನುಭವಿಸಲೂ ಆಗದೆ ತೊಳಲಾಡುವ ಸ್ಥಿತಿಯನ್ನು ಸಿನಿಮಾ ನೋಡುಗರ ಕರುಳು ಕಿವುಚುವಂತೆ ಮಾಡುತ್ತದೆ. ಆಮೇಲೆ ಈ ಹೆಣ್ಣುಮಕ್ಕಳು ಏನಾದರು? ಸಮಾಜ, ಸರ್ಕಾರ ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ಸಿನಿಮಾ ನೋಡಿಯೆ ತಿಳಿದುಕೊಳ್ಳಿ.

ಲವ್ ಜಿಹಾದ್ ಹೇಗೆ ಹಿಂದು ಹೆಣ್ಣುಮಕ್ಕಳನ್ನು ಆವರಿಸುತ್ತದೆ, ಅದರ ಹಿಂದೆ ಎಂತಹ ಜಾಲವಿದೆ ಎಂಬುದನ್ನು ಸಿನಿಮಾ ತೋರಿಸಿಕೊಡುತ್ತದೆ. ಇಂತಹ ದುರುಳರ ಕೃತ್ಯಗಳನ್ನು ಅರ್ಥಮಾಡಿಕೊಳ್ಳಲು ನೀವು ಕೇರಳ ಸ್ಟೋರಿ 2 ಸಿನಿಮಾನಾ ನೋಡಬೇಕು.

ಇಸ್ಲಾಮಿಕ್ ಆಡಳಿತವನ್ನೇ ಗುರಿಯಾಗಿಸಿ ಅಮೆರಿಕ-ಇಸ್ರೇಲ್ ಜಂಟಿ ದಾಳಿ | ಇಸ್ಲಾಮಿಕ್ ರಾಷ್ಟ್ರಗಳ ಮೇಲೆಯೇ ಇರಾನ್ ದಾಳಿ
ಇಂಡಿಗೋ, ಏರ್ ಇಂಡಿಯಾ ಮಧ್ಯಪ್ರಾಚ್ಯ ಹಾರಾಟ ರದ್ದು | ಭಾರತೀಯರಿಗೆ ಕೇಂದ್ರದ ಸುರಕ್ಷತಾ ಸಲಹೆ | ದಾಳಿ ಖಂಡಿಸಿದ ರಷ್ಯಾ

ಅಮೆರಿಕ ಸೇನಾನೆಲೆಗಳೇ ಟಾರ್ಗೆಟ್

ದೋಹಾ: ಇಸ್ರೇಲ್ ಮತ್ತು ಅಮೆರಿಕ ಶನಿವಾರ ಇರಾನ್ ಮೇಲೆ ಜಂಟಿ ವಾಯು ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ದುಬೈ, ಅಬು ಧಾಬಿ, ಕತಾರ್ ಸೇರಿದಂತೆ ಅಮೆರಿಕದ ಸೇನಾ ನೆಲೆಗಳು, ರಾಯಭಾರ ಕಚೇರಿಗಳು ಮತ್ತು ಇಸ್ರೇಲ್ ಮೇಲೆ ಪ್ರತಿದಾಳಿ ನಡೆಸಿದೆ.

ಇರಾನ್ ಪ್ರತಿದಾಳಿ ನಡೆಸಿದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿರುವ ತನ್ನ ಮಿಲಿಟರಿ ನೆಲೆಗಳನ್ನು ಅಮೆರಿಕ ಕಟ್ಟೆಚ್ಚರದಲ್ಲಿ ಹೆಚ್ಚಿಸಿದೆ. ಟೆಹ್ರಾನ್ ಪ್ರತಿದಾಳಿ ನಡೆಸಿದ್ದು, ಅಮೆರಿಕದ ನಿರ್ದಿಷ್ಟ ಸೇನಾನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ರಕ್ಷಣಾ ಇಲಾಖೆ (ಡಿಒಡಿ) ವ್ಯೂಹಾತ್ಮಕ ಉಪಸ್ಥಿತಿ ಜಾಗತಿಕ ಗಮನ ಸೆಳೆದಿದೆ.

ಶಾಶ್ವತ ನೆಲೆಗಳು ಮತ್ತು ವ್ಯಾಪ್ತಿ: ಜುಲೈ 2024ರ ಕಾಂಗ್ರೆಷನಲ್ ರಿಸರ್ಚ್ ಸರ್ವಿಸ್(ಸಿಆರ್‌ಎಸ್) ವರದಿಯ ಪ್ರಕಾರ, ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಸೆಂಟ್ರಲ್ ಕಮಾಂಡ್(ಸೆಂಟ್‌ಕಾಮ್) ಅನ್ವಯದಲ್ಲಿ ಕನಿಷ್ಠ 8 ಶಾಶ್ವತ ನೆಲೆಗಳು ಮತ್ತು 11 ಹೆಚ್ಚುವರಿ ಮಿಲಿಟರಿ ತಾಣಗಳನ್ನು ನಿರ್ವಹಿಸಲಾಗುತ್ತಿದೆ.

ಪ್ರಮುಖ ಕೇಂದ್ರಗಳು: ಕತಾರ್‌ನಲ್ಲಿರುವ 24 ಹೆಕ್ಟೇರ್ ವಿಸ್ತೀರ್ಣದ ಅಲ್ ಉದೈದ್ ವಾಯು ನೆಲೆಯನ್ನು ಸುಮಾರು 10,000 ಸಿಬ್ಬಂದಿ ಬಳಸುತ್ತಿದ್ದಾರೆ. ಇಲ್ಲಿ ಕಣ್ಗಾವಲು ವಿಮಾನಗಳು, ಕ್ಷಿಪಣಿ ರಕ್ಷಣಾ ವ್ಯವಸ್ಥೆ ಮತ್ತು ಇಂಧನ ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದೆ.

ಕತಾರ್‌ನಲ್ಲಿರುವ ಅಲ್ ಉದೈದ್ ವಾಯುನೆಲೆಯಿಂದ ಎಲ್ಲಾ ಸೇನಾ ಕಾರ್ಯಾಚರಣೆಗಳಿಗೆ ಅಮೆರಿಕ ನಿರ್ದೇಶ ನೀಡುತ್ತದೆ. ಇದು ಮಧ್ಯಪ್ರಾಚ್ಯದಲ್ಲಿ ಅಮೆರಿಕ ಹೊಂದಿರುವ ಅತಿದೊಡ್ಡ ವಾಯುನೆಲೆ ಎನಿಸಿಕೊಂಡಿದೆ.

ಮುಂಚೂಣಿ ನೆಲೆಗಳು

ಇರಾಕ್ ಮೇಲಿನ ಆಕ್ರಮಣ 2011ರಲ್ಲಿ ಅಧಿಕೃತವಾಗಿ ಕೊನೆಗೊಂಡಿದ್ದರೂ, ಬಂಡಾಯ ನಿಗ್ರಹಕ್ಕಾಗಿ ಅಲ್-ಅಸಾದ್ ಮತ್ತು ಎರ್ಬಿಲ್‌ನಂತಹ ನೆಲೆಗಳಲ್ಲಿ ಸುಮಾರು 2,500 ಸೈನಿಕರನ್ನು ನಿಯೋಜಿಸಲಾಗಿದೆ. ಇದಲ್ಲದೆ, ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯಲ್ಲಿ 2,300ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಪ್ಯಾಟ್ರಿಯಟ್ ಮತ್ತು ಥಾಡ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ನಿರ್ವಹಿಸಲಾಗುತ್ತಿದೆ. ಜೋರ್ಡಾನ್, ಸಿರಿಯಾ ಮತ್ತು ಈಜಿಪ್ಟ್‌ನಲ್ಲಿಯೂ ಅಂತರರಾಷ್ಟ್ರೀಯ ಶಾಂತಿ ಪಾಲನೆಗಾಗಿ ಸಣ್ಣ ಮಟ್ಟದ ಪಡೆಗಳನ್ನು ಉಳಿಸಿಕೊಳ್ಳಲಾಗಿದೆ.

ಇಂಡಿಗೋ ವಿಮಾನಗಳು ಸ್ಥಗಿತ

ಇರಾನ್ ಮತ್ತು ಮಧ್ಯಪ್ರಾಚ್ಯದ ವಾಯುಪ್ರದೇಶ ನಿರ್ಬಂಧಗಳನ್ನು ಗಮನಿಸಿ ಇಂಡಿಗೋ ಮಧ್ಯಪ್ರಾಚ್ಯಕ್ಕೆ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ಅನಿರ್ದಿಷ್ಟಾವಧಿಗೆ ರದ್ದುಪಡಿಸಿದೆ. ದುಬೈ, ಜೆಡ್ಡಾ, ದೋಹಾ, ಅಬುಧಾಬಿ, ದಮ್ಮಾಮ್, ಬಹ್ರೈನ್, ಶಾರ್ಜಾ, ಕುವೈತ್ ಮತ್ತು ರಾಸ್ ಅಲ್ ಖೈಮಾ ಮಾರ್ಗಗಳಲ್ಲಿ ಸೇವೆಗಳು ಸ್ಥಗಿತಗೊಂಡಿವೆ.ಹಾಗೆಯೇ, ಏರ್ ಇಂಡಿಯಾ ಪಶ್ಚಿಮ ಏಷ್ಯಾ ಗಮ್ಯಸ್ಥಾನಗಳಿಗೆ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಿದೆ. ದೆಹಲಿ-ತೆಲ್ ಅವೀವ್ ವಿಮಾನವನ್ನು ಮುಂಬೈಗೆ ತಿರುಗಿಸಲಾಗಿದೆ.



ಇಸ್ಲಾಮಿಕ್ ಆಡಳಿತದ ಅಂತ್ಯವೇ ನಮ್ಮ ಗುರಿ!

ಇರಾನ್‌ನಲ್ಲಿ ಆಯತ್ತುಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಮೂಲಭೂತವಾದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದೇ ನಮ್ಮ ಗುರಿಯೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟವಾಗಿ ಹೇಳಿದ್ದಾರೆ.

ಕುವೈತ್ ಮತ್ತು ಯುಎಇ

ಕುವೈತ್ ಯುಎಸ್‌ಗೆ ಈ ಭಾಗದ ಪ್ರಮುಖ ಸರಕು ಸಾಗಣೆಗೆ ಪ್ರವೇಶದ್ವಾರವಾಗಿ ಕಾರ್ಯನಿರ್ವಹಿಸುತ್ತದೆ. ಇಲ್ಲಿನ ಕ್ಯಾಂಪ್ ಅರಿಫ್ಜನ್ ಮತ್ತು ಅಲಿ ಅಲ್-ಸೇಲಮ್ ವಾಯು ನೆಲೆಗಳನ್ನು ಜಂಟಿ ಪಡೆಗಳಿಗೆ ಯುದ್ಧ ಸಾಮಗ್ರಿ ತಲುಪಿಸಲು ಬಳಸಲಾಗುತ್ತಿದೆ. ಯುಎಇನಲ್ಲಿ ಅಲ್ ಧಫ್ರಾ ವಾಯುನೆಲೆಯನ್ನು ಸ್ಥಳೀಯ ವಾಯುಪಡೆಯೊಂದಿಗೆ ಹಂಚಿಕೊಳ್ಳಲಾಗಿದ್ದು, ಇಲ್ಲಿ ಎಂಕ್ಯೂ-9 ರೀಪರ್ ಡ್ರೋನ್‌ಗಳನ್ನು ನಿಯೋಜಿಸಲಾಗಿದೆ.

ಬಹ್ರೇನ್

ಬಹ್ರೇನ್‌ನ ನೇವಲ್ ಸಪೋರ್ಟ್ ಆಕ್ಟಿವಿಟಿ ಎಂಬ ವಾಯು ನೆಲೆಯಲ್ಲಿ ಅಮೆರಿಕ ನೌಕಾಪಡೆಯ ಐದನೇ ಫ್ಲೀಟ್ ಅನ್ನು ಸ್ಥಾಪಿಸಲಾಗಿದೆ. ಪರ್ಷಿಯನ್ ಗಲ್ಫ್, ಕೆಂಪು ಸಮುದ್ರ, ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದ ಕೆಲವು ಭಾಗಗಳನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯ ಮೇಲೆ ಇದು ಕಣ್ಣಿಡುತ್ತದೆ. ಸಿಆರ್‌ಎಸ್ ವರದಿ ಪ್ರಕಾರ, ಈ ಸಂಬಂಧ 1948ರಿಂದಲೇ ಅಸ್ತಿತ್ವದಲ್ಲಿದೆ. ಆಗ ಈ ನೆಲೆ ಬ್ರಿಟಿಷ್ ರಾಯಲ್ ನೌಕಾಪಡೆಯ ನಿಯಂತ್ರಣದಲ್ಲಿತ್ತು. ವಿಮಾನವಾಹಕ ನೌಕೆಗಳು ಮತ್ತು ಉಭಯಚರ ದಾಳಿ ಹಡಗುಗಳನ್ನು ನಿಲ್ಲಿಸುವ ಸಾಮರ್ಥ್ಯವಿರುವ ಈ ಪ್ರದೇಶದ ಕೆಲವೇ ಸ್ಥಳಗಳಲ್ಲಿ ಈ ಬಂದರು ಕೂಡ ಒಂದಾಗಿದೆ.

ಇಸ್ರೇಲ್ ಅಧ್ಯಕ್ಷ ಹೆರ್ಜೋಗ್ ಸ್ವಾಗತ



ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅಮೆರಿಕಾ-ಇಸ್ರೇಲ್ ಜಂಟಿ ಕಾರ್ಯಾಚರಣೆಯನ್ನು ಸ್ವಾಗತಿಸಿದ್ದಾರೆ. ಇದು ಮಧ್ಯಪ್ರಾಚ್ಯ ಹಾಗೂ ವಿಶ್ವಕ್ಕೆ ಉತ್ತಮ ಭವಿಷ್ಯ ತರುತ್ತದೆ ಎಂದು ಹೇಳಿದ್ದಾರೆ.

ಅಮೆರಿಕದ ದಾಳಿ ಖಂಡಿಸಿದ ರಷ್ಯಾ

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ಜಂಟಿ ದಾಳಿಯನ್ನು ಅಪ್ರಚೋದಿತ ದಾಳಿ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯೆಂದು ರಷ್ಯಾ ಖಂಡಿಸಿದ್ದು, ತಕ್ಷಣ ದಾಳಿ ನಿಲ್ಲಿಸಬೇಕೆಂದು ಕರೆ ನೀಡಿದೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವೊಂದರ ಮೇಲೆ ಈ ರೀತಿ ಪೂರ್ವನಿಯೋಜಿತ ದಾಳಿ ನಡೆಸುವುದು ಆಕ್ರಮಣಕಾರಿ ನಡೆಯೆಂದು ರಷ್ಯಾ ಆರೋಪಿಸಿದೆ. ಶಾಂತಿದೂತನು ಮತ್ತೆ ಕಾರ್ಯನಿರ್ವಹಿಸುತ್ತಿದ್ದಾನೆ. ಅಮೆರಿಕಾ ಕೇವಲ 249 ವರ್ಷ ಹಳೆಯದು. ಪರ್ಷಿಯನ್ ಸಾಮ್ರಾಜ್ಯವು 2500 ವರ್ಷಗಳ ಹಿಂದೆ ಸ್ಥಾಪನೆಯಾಯಿತು. ಇನ್ನೂ 100 ವರ್ಷಗಳ ಬಳಿಕ ಏನಾಗುತ್ತದೆ ನೋಡೋಣ ಎಂದು ರಷ್ಯಾ ಫೆಡರೇಶನ್ ಭದ್ರತಾ ಮಂಡಳಿ ಉಪಾಧ್ಯಕ್ಷ ಮೆಡ್ವೆಡೆವ್ ಎಚ್ಚರಿಕೆ ನೀಡಿದ್ದಾರೆ.




ಅಣು ಒಪ್ಪಂದ ತಿರಸ್ಕರಿಸಿದ್ದೇ ದಾಳಿಗೆ ಕಾರಣ?

ಇರಾನ್ ತನ್ನ ಪರಮಾಣು ಯೋಜನೆಯಲ್ಲಿ ಅಮೆರಿಕ ಜತೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದ ಕೆಲವು ದಿನಗಳ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಾಳಿ ಆದೇಶ ನೀಡಿದ್ದಾರೆ. ಇರಾನ್ ಮತ್ತದರ ದೀರ್ಘಕಾಲದ ಶತ್ರುಗಳ ನಡುವೆ ಪುನಃ ಸಂಘರ್ಷ ಉದ್ಭವಿಸಿದ್ದು, ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಟೆಹ್ರಾನ್‌ನ ಅಣು ವಿವಾದಕ್ಕೆ ರಾಜತಾಂತ್ರಿಕ ಪರಿಹಾರ ಸಿಗುವ ಸಾಧ್ಯತೆ ಇನ್ನಷ್ಟು ಕ್ಷೀಣಗೊಳಿಸಿದೆ. ಈ ವಾರ ಅಮೆರಿಕಾ ಮತ್ತು ಇರಾನ್ ನಡುವಿನ ಮೂರನೇ ಸುತ್ತಿನ ಪರೋಕ್ಷ ಮಾತುಕತೆ ಯಾವುದೇ ಮಹತ್ವದ ಮುನ್ನಡೆ ಕಂಡುಬರಲಿಲ್ಲ. ಇದು ಹೊಸ ಯುದ್ಧವನ್ನು ತಪ್ಪಿಸಬಹುದಾದ ಅವಕಾಶವನ್ನು ಕಡಿಮೆಗೊಳಿಸಿದೆ. ಇರಾನ್ ಪಡೆಗಳು ಇಸ್ರೇಲ್ ವಿರುದ್ಧ ಪ್ರತೀಕಾರವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಪ್ರಾರಂಭಿಸಿರುವುದಾಗಿ ತಿಳಿಸಿವೆ. ಪ್ರಾದೇಶಿಕ ಪ್ರದೇಶದಲ್ಲಿರುವ ಎಲ್ಲಾ ಅಮೆರಿಕಾ ನೆಲೆಗಳು ಮತ್ತು ಹಿತಾಸಕ್ತಿಗಳು ಇರಾನ್‌ನ ವ್ಯಾಪ್ತಿಯಲ್ಲಿವೆ ಎಂದು ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಹ್ರೈನ್ ಅಮೆರಿಕದ ಐದನೇ ನೌಕಾಪಡೆಯ ಸೇವಾ ಕೇಂದ್ರದ ಮೇಲೆ ಕ್ಷಿಪಣಿ ದಾಳಿ ನಡೆದಿರುವುದಾಗಿ ತಿಳಿಸಿದೆ. ಸಾಕ್ಷಿದಾರರು ತೆಗೆದ ವಿಡಿಯೋ ದೃಶ್ಯಗಳಲ್ಲಿ, ಸಣ್ಣ ದ್ವೀಪ ರಾಷ್ಟ್ರವಾದ ಬಹ್ರೈನ್ ಕರಾವಳಿಯ ಸಮೀಪದಿಂದ ದಟ್ಟವಾದ ಹೊಗೆ ಏರುತ್ತಿರುವುದು ಮತ್ತು ಸೈರನ್‌ಗಳು ಮೊಳಗಿರುವುದು ಕಂಡುಬಂದಿದೆ. ಪ್ರಮುಖ ತೈಲ ರಾಷ್ಟ್ರ ಹಾಗೂ ಅಮೆರಿಕದ ಮಿತ್ರ ರಾಷ್ಟ್ರ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಾಜಧಾನಿ ಅಬು ಧಾಬಿಯ ವಿವಿಧ ಭಾಗಗಳಲ್ಲಿ ಭಾರೀ ಸ್ಫೋಟಗಳ ಶಬ್ದ ಕೇಳಿಬಂದಿರುವುದು ವರದಿಯಾಗಿದೆ.

ಇರಾನ್ ಖಾರ ಪ್ರತಿಕ್ರಿಯೆ

ಟೆಹ್ರಾನ್ ಮೇಲಿನ ದಾಳಿಗೆ ಖಾರವಾಗಿ ಪ್ರತಿಕ್ರಿಯಿಸಿದ ಇರಾನ್, ಇಸ್ರೇಲ್‌ನ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಸಾರ್ವಜನಿಕರು ಹೊರಬಾರದಂತೆ ಇಸ್ರೇಲ್‌ನ ಸಚಿವಾಲಯವು ಮನವಿ ಮಾಡಿಕೊಂಡಿದೆ. ಪ್ರಬಲ ಪ್ರತಿಕ್ರಿಯೆ ನೀಡುವುದಾಗಿ ಇರಾನ್ ರಾಷ್ಟ್ರೀಯ ಭದ್ರತಾ ಆಯೋಗದ ಮುಖ್ಯಸ್ಥ ಇಬ್ರಾಹಿಂ ಅಜೀಜಿ ಎಚ್ಚರಿಕೆ ನೀಡಿದ್ದರು. ಪ್ರತಿದಾಳಿ ಬಳಿಕ ಅಜೀಜಿ, ನಾವು ಎಚ್ಚರಿಕೆ ನೀಡಿದ್ದೆವು. ನೀವು ಯುದ್ಧ ಆರಂಭಿಸಿದ್ದೀರಿ, ಇದನ್ನು ನಿಲ್ಲಿಸುವುದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿನ ಅಮೆರಿಕ ಸೇನಾ ನೆಲೆಗಳು



ಇರಾನ್‌ನ ದಾಳಿಗೊಳಗಾದ ಅಮೆರಿಕ ವಾಯುನೆಲೆಗಳು

1. ಅಲ್-ಉದೈದ್ ವಾಯುನೆಲೆ, ಕತಾರ್
2. ಅಲ್-ಸಲೇಮ್ ವಾಯುನೆಲೆ, ಕುವೈತ್
3. ಅಲ್-ಧಫ್ರಾ ವಾಯುನೆಲೆ, ಯುಎಇ
4. ಯು.ಎಸ್ ಫಿಫ್ತ್ ಫ್ಲೀಟ್ ಪ್ರಧಾನ ಕಚೇರಿ, ಬಹ್ರೈನ್

ಯುರೋಪ್‌ನ ಸಂದಿಗ್ಧತೆ

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ನಡೆಸಿದ ದಾಳಿಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು? ಮತ್ತು ಮಧ್ಯಪ್ರಾಚ್ಯದಲ್ಲಿರುವ ತಮ್ಮ ನಾಗರಿಕರನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ವಿಚಾರದಲ್ಲಿ ಐರೋಪ್ಯ ದೇಶಗಳು ಸಂದಿಗ್ಧತೆಗೆ ಸಿಲುಕಿದವು. ಜರ್ಮನಿ ಇರಾನ್ ಪರಿಸ್ಥಿತಿಯನ್ನು ಚರ್ಚಿಸಲು ತುರ್ತು ಸಭೆ ಕರೆದು, ಐರೋಪ್ಯ ಒಕ್ಕೂಟ ಪ್ರದೇಶದಿಂದ ಕೆಲವು ಸಿಬ್ಬಂದಿಯನ್ನು ತೆರವುಗೊಳಿಸುತ್ತಿದೆ. ಇನ್ನೊಂದೆಡೆ, ಈ ದಾಳಿ ನಡೆಸುವ ಕುರಿತಂತೆ ಅಮೆರಿಕ, ಮೈತ್ರಿ ದೇಶಗಳಿಗೆ ಮುಂಚಿತವಾಗಿಯೇ ಎಚ್ಚರಿಕೆ ನೀಡಿತ್ತೇ ಎಂಬುದು ಗೊತ್ತಾಗಿಲ್ಲ. ಅಲ್ಲದೆ, ಜರ್ಮನಿಗೆ ಶನಿವಾರ ಬೆಳಗ್ಗೆಯಷ್ಟೇ ಮಾಹಿತಿ ನೀಡಲಾಗಿದೆ. ಫ್ರಾನ್ಸ್ ಮಾತ್ರ, ಇರಾನ್ ವಿರುದ್ಧ ಯುದ್ಧವಾಗುವುದು ಗೊತ್ತಿತ್ತು, ಆದರೆ, ಶನಿವಾರವೇ ಆಗುತ್ತೆ ಎಂಬುದು ಗೊತ್ತಿರಲಿಲ್ಲ ಎಂದು ಹೇಳಿದೆ. ಈ ಮಧ್ಯೆ, ಐರೋಪ್ಯ ಒಕ್ಕೂಟದ ಉನ್ನತ ರಾಜತಾಂತ್ರಿಕರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಇದನ್ನು ಅಪಾಯಕಾರಿ ಎಂದು ಕರೆದದ್ದು ಅಲ್ಲದೆ, ಸಂಘರ್ಷವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಸಂಬಂಧ ಇಸ್ರೇಲ್ ಮತ್ತು ಅರಬ್ ದೇಶಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸುತ್ತಿರುವುದಾಗಿ ಹೇಳಿದ್ದಾರೆ. ಅಲ್ಲದೆ ಇರಾನ್ ನಡೆ ಖಂಡಿಸಿರುವ ಅದು, ಅಲ್ಲಿನ ಆಡಳಿತ ಸಾವಿರಾರು ಜನರನ್ನು ಕೊಂದಿದೆ. ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು ಅಣು ಕಾರ್ಯಕ್ರಮಗಳು, ಭಯೋತ್ಪಾದಕ ಗುಂಪುಗಳಿಗೆ ನೀಡುತ್ತಿರುವ ಬೆಂಬಲ, ಜಾಗತಿಕ ಭದ್ರತೆಗೆ ಗಂಭೀರ ಬೆದರಿಕೆ ಉಂಟುಮಾಡುತ್ತವೆ ಎಂದು ವಿದೇಶಾಂಗ ನೀತಿ ಮುಖ್ಯಸ್ಥ ಕಾಜಾ ಕಾಲ್ಲಾಸ್ ಹೇಳಿದ್ದಾರೆ. ಜರ್ಮನ್ ಸರ್ಕಾರವು ಇರಾನ್, ಇಸ್ರೇಲ್ ಮತ್ತು ಇತರೆ ಪ್ರದೇಶದಲ್ಲಿರುವ ಜರ್ಮನ್ ನಾಗರಿಕರು ರಾಯಭಾರ ಕಚೇರಿಗಳಲ್ಲಿ ನೋಂದಾಯಿಸಿಕೊಂಡು ಸ್ಥಳೀಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸಬೇಕು ಎಂದು ಮನವಿ ಮಾಡಿದೆ.ಫ್ರಾನ್ಸ್, ಮಧ್ಯಪ್ರಾಚ್ಯದಲ್ಲಿ ಸೈನಿಕ ನೆಲೆಗಳನ್ನು ಹೊಂದಿರುವ ಜರ್ಮನಿ, ತನ್ನ ನಾಗರಿಕರಿಗೆ ಅತ್ಯಂತ ಎಚ್ಚರಿಕೆಯಿಂದ ಇರಲು ಕರೆ ನೀಡಿದೆ.

ಕಿರುಸುದ್ದಿ

ಸಂಸ್ಕೃತ ಭಾಷೆ ಅವಹೇಳನ: ಕ್ಷಮೆಯಾಚಿಸಿದ ಹಾರ್ವರ್ಡ್

ವಾಷಿಂಗ್ಟನ್: ಹಾರ್ವರ್ಡ್ ವಿಶ್ವವಿದ್ಯಾಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗ, ತನ್ನ ಸಂಸ್ಕೃತ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಿದ್ದ ಪೋಸ್ಟ್ ಒಂದು ವಿವಾದಕ್ಕೆ ಕಾರಣವಾಗಿದ್ದು, ಇದೀಗ ವಿಶ್ವವಿದ್ಯಾಲಯ ಅಧಿಕೃತವಾಗಿ ಕ್ಷಮೆಯಾಚಿಸಿದೆ. ಈ ಪೋಸ್ಟ್‌ನಲ್ಲಿ ಬಳಸಲಾದ ಚಿತ್ರ, ಹಿಂದೂ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಉತ್ತರ ಅಮೆರಿಕಾದ ಹಿಂದೂ ಒಕ್ಕೂಟ ಸೇರಿದಂತೆ ಹಲವು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದವು. ವಿಶ್ವವಿದ್ಯಾಲಯ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ್ದು, ನಡೆದ ಘಟನೆಗೆ ನಾವು ವಿಷಾದಿಸುತ್ತೇವೆ ಮತ್ತು ಸಂಸ್ಕೃತ ಭಾಷೆಯ ಸಾಂಸ್ಕೃತಿಕ ಪರಂಪರೆಯನ್ನು ಕಲಿಸಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದೆ. ಈ ವಿವಾದಕ್ಕೂ ಲಕ್ಷ್ಮಿ ಮಿತ್ತಲ್ ದಕ್ಷಿಣ ಏಷ್ಯಾ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ. ಇನ್ನು ಮುಂದೆ ಇಂತಹ ತಪ್ಪುಗಳು ನಡೆಯದಂತೆ ಸಾಮಾಜಿಕ ಜಾಲತಾಣದ ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸುವುದಾಗಿ ಹಾರ್ವರ್ಡ್ ಹೇಳಿದೆ. ಸಂಘಟನೆಗಳು ಈ ಅಪರೂಪದ ಕ್ಷಮೆಯಾಚನೆಯನ್ನು ಸ್ವಾಗತಿಸಿವೆ.

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

ಹೊಸದಿಲ್ಲಿ: ಮಾರ್ಚ್‌ನಿಂದ ಮೇ ತಿಂಗಳವರೆಗೆ ದೇಶದ ಹೆಚ್ಚಿನ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ತಾಪಮಾನದ ಅಲೆಗಳು (ಹೀಟ್ ವೇವ್ಸ್) ಇರಲಿವೆಯೆಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ಎಚ್ಚರಿಕೆ ನೀಡಿದೆ. ರಾಜಸ್ಥಾನ, ಗುಜರಾತ್, ಪಂಜಾಬ್ ಮತ್ತು ಮಹಾರಾಷ್ಟ್ರ ಸೇರಿದಂತೆ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ತಾಪಮಾನ ಏರಿಕೆಯಾಗುವ ನಿರೀಕ್ಷೆಯಿದೆ. ಕರ್ನಾಟಕದ ಉತ್ತರ ಭಾಗಗಳಲ್ಲಿಯೂ ಹೆಚ್ಚಿನ ಶಾಖ ಕಂಡುಬರಲಿದೆ ಎಂದು ಅಂದಾಜಿಸಲಾಗಿದೆ. ಈ ಪರಿಸ್ಥಿತಿ, ಸಾರ್ವಜನಿಕರ ಆರೋಗ್ಯದ ಮೇಲೆ ಮಾತ್ರವಲ್ಲದೆ, ಕುಡಿಯುವ ನೀರಿನ ಲಭ್ಯತೆ ಮತ್ತು ವಿದ್ಯುತ್ ಬೇಡಿಕೆಯ ಮೇಲೂ ಕೆಟ್ಟ ಪರಿಣಾಮ ಬೀರಲಿದೆ ಎಂದು ಇಲಾಖೆ ತಿಳಿಸಿದೆ.

ಪಾಕ್ ಆಪರೇಷನ್‌ನಲ್ಲಿ 331 ಅಫ್ಘನ್ನರ ಸಾವು?

ಇಸ್ಲಾಮಾಬಾದ್: ಗಡಿ ಭಾಗದಲ್ಲಿ ಅಫ್ಘಾನ್ ತಾಲಿಬಾನ್ ಮತ್ತು ಇತರ ಉಗ್ರಗಾಮಿ ಗುಂಪುಗಳ ವಿರುದ್ಧ ಪಾಕಿಸ್ತಾನ ನಡೆಸುತ್ತಿರುವ ಆಪರೇಷನ್ ಘಜಬ್ ಲಿಲ್ ಹಕ್ ಸೇನಾ ಕಾರ್ಯಾಚರಣೆಯಲ್ಲಿ ಇದುವರೆಗೆ 331 ತಾಲಿಬಾನ್ ಸೈನಿಕರು ಹತರಾಗಿದ್ದಾರೆ ಎಂದು ಪಾಕಿಸ್ತಾನ ಶನಿವಾರ ಹೇಳಿಕೊಂಡಿದೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

ವೆಟ್ಲಪಲೇಮ್(ಆಂಧ್ರ): ಕಾಕಿನಾಡ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ 21 ಮಂದಿ ಸಾವಿಗೀಡಾಗಿದ್ದು, 8 ಮಂದಿ ಗಂಭೀರ ಗಾಯಗೊಂಡಿದ್ದಾರೆ.

ದುರಂತ ಜಾಗದಲ್ಲಿ ಕಾರ್ಮಿಕರ ಸಹಿತ ಒಟ್ಟು 30 ಮಂದಿ ಇದ್ದರು. ರಾಜ್ಯದಲ್ಲಿ ಬಲು ದೊಡ್ಡ ಸ್ಫೋಟ ಇದಾಗಿದ್ದು, ಸ್ಫೋಟಕ ಮಾದರಿಯ ಪಟಾಕಿಗಳು ಸ್ಫೋಟವಾಗಿವೆ ಎಂದು ಆಂಧ್ರ ಸಚಿವ ಕಂಡುಲ ದುರ್ಗೇಶ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಭಯಾನಕ ಸ್ಫೋಟಕ್ಕೆ 21 ಮಂದಿ ಕಾರ್ಮಿಕರು ಆಹುತಿಯಾದ ದುರಂತ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ತಲಾ 2 ಲಕ್ಷ ರೂ. ತುರ್ತು ಪರಿಹಾರ ಘೋಷಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಂಕಿ ಹಬ್ಬಿದ ಬಗ್ಗೆ ತನಿಖೆ: ಭೀಕರ ಸ್ಫೋಟದಿಂದ ಬೆಂಕಿ ಹಬ್ಬಿಕೊಂಡದ್ದು ಹೇಗೆಂದು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸಂತ್ರಸ್ತ ಕುಟುಂಬಗಳ ಬೆಂಬಲಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಸಚಿವ ದುರ್ಗೇಶ್ ವಿವರಿಸಿದ್ದಾರೆ.

ಗದ್ದೆಗೆ ಹಾರಿದ ಶವಗಳು: ಸ್ಫೋಟದ ತೀವ್ರತೆ ಅದೆಷ್ಟಿತ್ತೆಂದರೆ ಕಾರ್ಮಿಕರ ಶವಗಳು ಸಮೀಪದ ಭತ್ತದ ಗದ್ದೆಗಳಿಗೆ ಎಸೆಯಲ್ಪಟ್ಟಿದ್ದವು. ಛಿದ್ರವಾಗಿದ್ದ ದೇಹಗಳನ್ನು ರಸಗೊಬ್ಬರ ಚೀಲದ ಶೀಟ್‌ಗಳಿಗೆ ಸ್ಥಳಾಂತರಿಸುತ್ತಿದ್ದ ದೃಶ್ಯ ಘೋರ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ರಾಗಾ ಜೈಲಲ್ಲಿ ಕೂರಲು ತಯಾರಾ?

ಸಿಸೋಡಿಯಾ ರೀತಿ ಸೋನಿಯಾ ಶಿಕ್ಷೆ ಅನುಭವಿಸುವರೇ?: ಕೇಜ್ರಿ

ಹೊಸದಿಲ್ಲಿ: ಅರವಿಂದ ಕೇಜ್ರಿವಾಲ್ ಜೈಲಿಗೆ ಹೋದರು, ರಾಬರ್ಟ್ ವಾದ್ರಾ ಜೈಲಿಗೆ ಹೋಗ್ತಾರಾ? ಸಂಜಯ್ ಸಿಂಗ್ ಸೆರೆಮನೆವಾಸ ಅನುಭವಿಸಿದ್ದರು. ರಾಹುಲ್ ಗಾಂಧಿ ಜೈಲೊಳಗೆ ಕೂರಲು ತಯಾರಿದ್ದಾರೆಯೇ? ಮನೀಶ್ ಸಿಸೋಡಿಯಾ ಜೈಲುಶಿಕ್ಷೆ ಅನುಭವಿಸಿದಂತೆ ಸೋನಿಯಾ ಗಾಂಧಿ ಅನುಭವಿಸುವರೇ? ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆ ಎಂಬುದೇ ಇಲ್ಲವೇ? ಎಂದು ದಿಲ್ಲಿ ಅಬಕಾರಿ ನೀತಿ ಪ್ರಕರಣದಲ್ಲಿ ಸಿಬಿಐ ಕೋರ್ಟ್‌ನಲ್ಲಿ ಖುಲಾಸೆಗೊಂಡ ಆಮ್ ಆದ್ಮಿ ನಾಯಕ ಅರವಿಂದ ಕೇಜ್ರಿವಾಲ್, ಒಂದು ಕಾಲದಲ್ಲಿ ಮಿತ್ರಪಕ್ಷವಾಗಿದ್ದ ಕಾಂಗ್ರೆಸ್‌ನ ನಾಯಕರಿಗೆ ಈ ತೆರ ಸವಾಲೆಸೆದಿದ್ದಾರೆ.



ಯೋಜಿತ ಪ್ರಹಸನ: ಸಿಬಿಐ ನ್ಯಾಯಾಲಯದಲ್ಲಿ ಆಪ್ ನಾಯಕರ ಖುಲಾಸೆ ಯೋಜಿತ ಪ್ರಹಸನದ ಭಾಗವಾಗಿದೆ. ಚುನಾವಣೆಗಳು ಸನ್ನಿಹಿತವಿರುವ ಕಾರಣ ಈ ತೆರ ಪ್ರಹಸನ ನಿರೀಕ್ಷಣೀಯ. ಕಾಂಗ್ರೆಸ್ ನಾಯಕರ ವಿರುದ್ಧ ಪ್ರಕರಣಗಳ ಸಂಖ್ಯೆ ದಿಢೀರ್ ಏರುತ್ತೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಟೀಕಿಸಿದ್ದಾರೆ. ತಮಿಳುನಾಡಿನಲ್ಲಿ ಚುನಾವಣೆ ಸಮೀಪಿಸಿರುವ ಹಿನ್ನೆಲೆ ಪಿ.ಚಿದಂಬರಂರನ್ನು ಈಗಾಗಲೆ ಮರಳಿ ಸ್ಪಾಟ್‌ಲೈಟ್‌ಗೆ ಎಳೆಯಲಾಗಿದೆ. ಗುಜರಾತ್, ಪಂಜಾಬ್ ಚುನಾವಣೆ ಹಿನ್ನೆಲೆಯಲ್ಲಿ ಆಪ್ ಮತ್ತಿತರರ ವಿರುದ್ಧದ ಕೇಸ್‌ಗಳು ಮಾಯವಾಗುವುದು ಎಂದು ಖೇರಾ ಎಕ್ಸ್ ಗೆ ಹಾಕಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

ನನಗಿಲ್ಲ ಭಯ: ತೀರ್ಪಿನ ನಂತರ ಕೇಜ್ರಿವಾಲ್ ಕಣ್ಣೀರು ಹಾಕುತ್ತಿರುವ ಕ್ಲಿಪ್ ಅನ್ನು ಕಾಂಗ್ರೆಸ್‌ನ ಹಲವು ನಾಯಕರು ಎಕ್ಸ್‌ಗೆ ಹಾಕಿದ್ದಾರೆ. ನನ್ನ ವಿರುದ್ಧ 32 ಕೇಸುಗಳಿವೆ. ಆದರೂ ತಾನು ಎಂದಿನಂತೆ ಧೈರ್ಯವಾಗಿದ್ದೇನೆ ಎಂಬ ಕಾಂಗ್ರೆಸ್‌ನ ರಾಹುಲ್ ಗಾಂಧಿಯ ಹೇಳಿಕೆಯನ್ನೂ ಕ್ಲಿಪ್‌ಗೆ ಜೋಡಿಸಲಾಗಿದೆ. ಕೇಜ್ರಿವಾಲ್ ವಿರುದ್ಧ ಕಾಂಗ್ರೆಸ್ ನಾಯಕರು ಭ್ರಷ್ಟಾಚಾರ ಆರೋಪ ಹೊರಿಸಿ ಕೇಸು ದಾಖಲಿಸಿದ್ದು. ಅವರೀಗ ಖುಲಾಸೆಗೊಂಡಿದ್ದಾರೆ. ಕೆಳ ನ್ಯಾಯಾಲಯ ಕೊಟ್ಟ ತೀರ್ಪಿದು. ಪ್ರಸ್ತುತ ಪ್ರಕರಣಗಳಿಗೆ ಸಂಬಂಧಿಸಿ ಈ ಹಿಂದೆ ದಿಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಂಭೀರ ಅಭಿಮತಗಳ ವ್ಯಕ್ತಪಡಿಸಿದ್ದವು. ಅಧೀನ ನ್ಯಾಯಾಲಯದ ನಿರ್ಧಾರವನ್ನು ಉಚ್ಚ ನ್ಯಾಯಾಲಯಗಳು ಅದ್ಯಾವ ರೀತಿ ಪರಿಗಣಿಸಲಿವೆ ಎಂಬುದು ಮುಖ್ಯ. ಕಾನೂನು ಪ್ರಕ್ರಿಯೆ ಇನ್ನೂ ಮುಗಿದಿಲ್ಲ ಎಂದು ದಿಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಮುಖ್ಯಸ್ಥ ದೇವೇಂದರ್ ಯಾದವ್ ಕುಟುಕಿದ್ದಾರೆ.

ಬಂಗಾಳದ ಮತದಾರರ ಪಟ್ಟಿ ಪ್ರಕಟ: 63 ಲಕ್ಷ ಹೆಸರು ಕಡಿತ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ನಡೆದ ವಿಶೇಷ ತೀವ್ರ ಪರಿಷ್ಕರಣೆಯ (ಎಸ್ಐಆರ್) ನಂತರ ಸಿದ್ಧಪಡಿಸಲಾದ ಅಂತಿಮ ಮತದಾರರ ಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಶನಿವಾರ ಬಿಡುಗಡೆ ಮಾಡಿದೆ. ಈ ಹೊಸ ಪಟ್ಟಿಯ ಪ್ರಕಾರ ರಾಜ್ಯದ ಒಟ್ಟು ಮತದಾರರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದ್ದು, ಪ್ರಸ್ತುತ 7,04,59,284 ಮತದಾರರು ಇದ್ದಾರೆ.

ಪ್ರಮುಖ ಅಂಕಿ-ಅಂಶಗಳು: ಈ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಬರೋಬ್ಬರಿ 63,66,952 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ, ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಹೇಳಿದ್ದಾರೆ. ಇದೇ ವೇಳೆ 1.88 ಲಕ್ಷಕ್ಕೂ ಹೆಚ್ಚು ಹೊಸ ಮತದಾರರನ್ನು ಸೇರಿಸಲಾಗಿದೆ. ಅಂತಿಮ ಪಟ್ಟಿಯಲ್ಲಿ 3,60,22,642 ಪುರುಷ, 3,44,35,260 ಮಹಿಳಾ ಮತ್ತು 1,382 ತೃತೀಯ ಲಿಂಗಿ ಮತದಾರರು ಇದ್ದಾರೆ. ಸುಮಾರು 60 ಲಕ್ಷ ಮತದಾರರ ಹೆಸರುಗಳು ಇನ್ನೂ ಪರಿಶೀಲನಾ ಹಂತದಲ್ಲಿವೆ ಎಂದು ಆಯೋಗ ತಿಳಿಸಿದೆ. ಪ್ರತಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ಪ್ರತಿಗಳನ್ನು ವಿತರಿಸಲಾಗುತ್ತಿದೆ. ಈ ಪಟ್ಟಿಯನ್ನು ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್ ಮತ್ತು ಇಸಿಐ ನೆಟ್ ಆ್ಯಪ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಮತದಾರರು ತಮ್ಮ ವೋಟರ್ ಐಡಿ (ಎಪಿಕ್) ಸಂಖ್ಯೆ ಬಳಸಿ ಈ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ತಮ್ಮ ಹೆಸರು ಇದೆಯೇ ಎಂದು ಖಚಿತಪಡಿಸಿಕೊಳ್ಳಬಹುದು.

ದೇಶವನ್ನು ಅಪಮಾನಿಸುವ ಅವಕಾಶಕ್ಕೆ ಕೈ ಕಾಯುತ್ತಿದೆ: ಪ್ರಧಾನಿ ಮೋದಿ

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್

ಜೈಪುರ: ವಿಪಕ್ಷ ಕಾಂಗ್ರೆಸ್ ಇಂದು ಮುಸ್ಲಿಂ ಲೀಗ್-ಮಾವೋವಾದಿ ಕಾಂಗ್ರೆಸ್ ಆಗಿ ಮಾರ್ಪಾಡಾಗಿದ್ದು, ದೇಶವನ್ನು ಅಪಮಾನಿಸುವ ಅವಕಾಶಕ್ಕಾಗಿ ಕಾಂಗ್ರೆಸ್ ಚಾತಕಪಕ್ಷಿಯಂತೆ ಕಾಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಛೀಮಾರಿ ಹಾಕಿದ್ದಾರೆ. ಈಚಿನ ಜಾಗತಿಕ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸಿಗರ ಶರ್ಟ್‌ರಹಿತ ಪ್ರತಿಭಟನೆಗೆ ಪ್ರಧಾನಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮುಸ್ಲಿಂ ಲೀಗ್‌ಗೆ ಭಾರತದ ಬಗ್ಗೆ ಇದ್ದ ದ್ವೇಷಾಸೂಯೆಗಳಿಂದಾಗಿ ಅಖಂಡ ಭಾರತ ವಿಭಜನೆಯಾಯಿತು. ಇಂದೀಗ ಕಾಂಗ್ರೆಸ್ ಕೂಡ ಲೀಗ್ ಹಾದಿಯನ್ನೇ ತುಳಿದಿದೆ. ಇಡೀ ಜಗತ್ತು ಭಾರತವನ್ನು ಪ್ರಶಂಸಿಸುವಾಗ ಭಾರತೀಯರಿಗೆ ಸಹಜವಾಗೇ ಹೆಮ್ಮೆಯಾಗುತ್ತೆ. ಆದರೆ ಕಾಂಗ್ರೆಸ್ ಮಾತ್ರ ಜಾಗತಿಕ ವೇದಿಕೆಗಳಲ್ಲಿ ಪ್ರಹಸನ ಸೃಜಿಸಿ ವಿದೇಶಿ ಗಣ್ಯರ ಸಮಕ್ಷಮ ಭಾರತವನ್ನು ಅಪಮಾನಿಸುವುದು ವಿಷಾದನೀಯ ಎಂದು ಪ್ರಧಾನಿ ಮೋದಿ ಹೇಳಿದರು. ರಾಜಸ್ತಾನದ ಅಜ್ಮೀರ್‌ನಲ್ಲಿ ಬರೋಬ್ಬರಿ 16,600 ಕೋಟಿ ರೂ. ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದ ಬಳಿಕ, ಕಯಾದ್ ವಿಶ್ರಾಮ್ ಸ್ಥಳದಲ್ಲಿ ಸಾರ್ವಜನಿಕ ರ‍್ಯಾಲಿಯಲ್ಲಿ ಪ್ರಧಾನಿ ಪಾಲ್ಗೊಂಡರು.

ಅದೊಂದು ಕಾಲದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಥವಾ ಐಎನ್‌ಸಿ ಹೆಸರು ಅರ್ಥಪೂರ್ಣವಾಗಿತ್ತು. ಆದರೆ ಐಎನ್‌ಸಿ ಇಂದು ಆ ಸ್ವರೂಪದಲ್ಲಿ ಉಳಿದಿಲ್ಲ, ಇಂದೀಗ ಅದು ಎಂಎಂಸಿ-ಮುಸ್ಲಿಂಲೀಗ್ ಮಾವೋವಾದಿ ಕಾಂಗ್ರೆಸ್ ಆಗಿ ಪರಿವರ್ತಿತವಾಗಿದೆ ಎಂದು ಹೇಳಿದರು.

ಹಾರ್ಡ್‌ವೇರ್ ರಂಗದಲ್ಲೂ ಪ್ರಗತಿ

ಸಾನಂದ್(ಗುಜರಾತ್): ಸಾಫ್ಟ್‌ವೇರ್ ರಂಗದಲ್ಲಿ ಬಲಿಷ್ಠವಾಗಿರುವ ರಾಷ್ಟ್ರವು, ಹಾರ್ಡ್‌ವೇರ್ ರಂಗದಲ್ಲೂ ತನ್ನ ಅಸ್ಮಿತೆಯನ್ನು ದೃಢವಾಗಿ ರೂಪಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗುಜರಾತಿನ ಸಾನಂದ್‌ನಲ್ಲಿ ಮೈಕ್ರಾನ್ ಟೆಕ್ನಾಲಜಿಯ ಸೆಮಿಕಂಡಕ್ಟರ್ ಸ್ಥಾವರವನ್ನು ಪ್ರಧಾನಿ ಮೋದಿ ಶನಿವಾರ ಲೋಕಾರ್ಪಣೆಗೈದರು. ಉದ್ಘಾಟನೆಗೊಂಡ, ಅಮೆರಿಕ ಮೂಲದ ಕಂಪೆನಿಯ ಎಟಿಎಂಪಿ ಸ್ಥಾವರವು ದೇಶದಲ್ಲೇ ಪ್ರಥಮ ಸೌಲಭ್ಯವಾಗಿದೆ. ಇದು ಭಾರತ ಮತ್ತು ಅಮೆರಿಕ ನಡುವಣ ಗಾಢ ಪಾಲುದಾರಿಕೆಯನ್ನು ಪ್ರತಿಫಲಿಸಿದೆ ಎಂದರು.

ಎಚ್‌ಪಿವಿ ಲಸಿಕೆ ಅಭಿಯಾನಕ್ಕೆ ಚಾಲನೆ

ಜೈಪುರ: 9 ರಿಂದ 14 ವರ್ಷದೊಳಗಿನ ಬಾಲಕಿಯರು ಎದುರಿಸುವ ಗರ್ಭಕಂಠ ಕ್ಯಾನ್ಸರ್ ತಡೆಯುವ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ಲಸಿಕೆ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು. ಅಜ್ಮೀರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಲವು ಬಾಲಕಿಯರಿಗೆ ಲಸಿಕೆ ಹಾಕುವ ಮೂಲಕ ರಾಷ್ಟ್ರವ್ಯಾಪಿ ನಡೆಸಲಾಗುವ ಅಭಿಯಾನವನ್ನು ಔಪಚಾರಿಕವಾಗಿ ಉದ್ಘಾಟಿಸಿದರು.

ಫಾರ್ಮ್ - IV
ಹೊಸದಿಗಂತ ದಿನಪತ್ರಿಕೆ
ಹೊಸದಿಗಂತ ಪತ್ರಿಕೆಯ ಒಡೆತನ ಮತ್ತಿತರ ವಿವರಗಳು
ಪ್ರೆಸ್ ಮತ್ತು ಪುಸ್ತಕ ದಾಖಲಾತಿ ಕಾಯ್ದೆಯ 19ಡಿ
ಉಪನಿಯಮ ಬಿ ಕಾಯ್ದೆ 8 ಪತ್ರಿಕೆಗಳ ದಾಖಲಾತಿ
(ಕೇಂದ್ರ ಕಾಯ್ದೆ) 1956 ರ ಪ್ರಕಾರ

ಪ್ರಕಾಶಿಸಲ್ಪಡುವ ಸ್ಥಳ	:	ಮಂಗಳೂರು
ಪ್ರಕಾಶನದ ಅವಧಿ	:	ದಿನಪತ್ರಿಕೆ
ಪ್ರಕಾಶಕ	:	ಪಿ. ಎಸ್. ಪ್ರಕಾಶ್ ಜ್ಞಾನಭಾರತಿ ಪ್ರಕಾಶನ (ಲಿ.) 5/120/2,ಅರುಣೋದಯ,ನಂ.18, ಬೋಳ್ಬುಗುಡ್ಡೆ, ಕಾವೂರ್, ಮಂಗಳೂರು
ಮುದ್ರಕರು	:	ಪಿ. ಎಸ್. ಪ್ರಕಾಶ್ 5/120/2,ಅರುಣೋದಯ,ನಂ.18, ಬೋಳ್ಬುಗುಡ್ಡೆ, ಕಾವೂರ್, ಮಂಗಳೂರು
ರಾಷ್ಟ್ರೀಯತೆ	:	ಭಾರತೀಯ
ಮುದ್ರಣಾಲಯ	:	ದಿಗಂತ ಮುದ್ರಣ ಲಿ., ಇಂಡಸ್ಟ್ರಿಯಲ್ ಏರಿಯಾ ಸಮೀಪ, ಯೆಯ್ಯಾಡಿ, ಮಂಗಳೂರು - 575008
ಸಂಪಾದಕ	:	ಪಿ. ಎಸ್. ಪ್ರಕಾಶ್ 5/120/2, ಅರುಣೋದಯ, ನಂ.18, ಬೋಳ್ಬುಗುಡ್ಡೆ, ಕಾವೂರ್, ಮಂಗಳೂರು.
ಒಡೆತನ ಮತ್ತು ಮಾಲಿಕತ್ವ	:	ಜ್ಞಾನಭಾರತಿ ಪ್ರಕಾಶನ (ಲಿ.) ಹೊಸದಿಗಂತ, 2ನೇ ಮಹಡಿ, ಮಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ ಮಂಗಳೂರು - 575004
ಆಡಳಿತ ಕಚೇರಿ	:	2ನೇ ಮಹಡಿ, ಮಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ, ಮಂಗಳೂರು - 575004

ನಾನು ಪಿ. ಎಸ್. ಪ್ರಕಾಶ್ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಮೇಲ್ಕಾಣಿಸಿದ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ಅನುಸಾರವಾಗಿ ಸತ್ಯವಾಗಿರುತ್ತವೆ.

01.03.2026
ಮಂಗಳೂರು

ಪಿ.ಎಸ್. ಪ್ರಕಾಶ್
ಪ್ರಕಾಶಕ



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಮಿಂಚಿನಂತೆ ಚಪಲವಾದುದು ಯಾವುದು?

ದುರ್ಜನಸಂಗ ಮತ್ತು ಯುವತಿ

ಈ ಉತ್ತರದಲ್ಲಿ ಹೇಳಿರುವ ದುರ್ಜನಸಂಗ ಮತ್ತು ಯುವತಿ ಎರಡು ವಿಷಯಗಳು ಎಷ್ಟು ಚಪಲ ಎಂಬುದನ್ನು ತಿಳಿಯಬಹುದಾಗಿದೆ. ಮಿಂಚು ಎಲ್ಲರಿಗೂ ತಿಳಿದಂತೆ ಒಂದು ಕ್ಷಣ ಆಕಾಶದಲ್ಲಿ ನಮ್ಮ ಕಣ್ಣಿಗೆ ಗೋಚರಿಸಿ ಮರೆಯಾಗುವ ವಿಷಯವಾಗಿದೆ. ಅಂತೆಯೇ ಈ ದುರ್ಜನಸಂಗ ಮತ್ತು ಯುವತಿಯ ಸಂಗವು ಕೂಡ ನಮ್ಮ ಜೀವನದಲ್ಲಿ ಅಷ್ಟು ಕ್ಷಣಿಕವಾದವುಗಳು. ಮಿಂಚು ಹೇಗೆ ಕಣ್ಣಿಗೆ ಕ್ಷಣಿಕ ಆನಂದವನ್ನು ಕೊಟ್ಟು ಮರೆಯಾಗುತ್ತದೆಯೋ ಅಂತೆಯೇ ಈ ಎರಡು ಸಂಗತಿಗಳೂ ಕೂಡ ಎಂಬ ಮಾರ್ಮಿಕ ವಿಷಯವನ್ನು ಈ ಪ್ರಶ್ನೋತ್ತರ ಸಾರುತ್ತದೆ. ದುರ್ಜನರ ಸಂಗ ಮತ್ತು ಯುವತಿಯರ ಸಂಗ ಇವೆರಡೂ ನಮ್ಮನ್ನು ಸನ್ಮಾರ್ಗದಿಂದ ಚ್ಯುತಿಗೊಳಿಸುವ ವಿಧಾನವಾಗಿವೆ. ಹಾಗಾಗಿ ಇವೆರಡೂ ದೂರವಿಡಲು ಯೋಗ್ಯವಾದ ವಿಷಯಗಳು ಎಂಬುದನ್ನು ಅರಿಯಬೇಕಾಗಿದೆ. ನಮ್ಮ ಜೀವನವು ಹೇಗೆ ಸಾಗಬೇಕಾಗಿದೆ ಎಂಬುದನ್ನು ತಿಳಿದಾಗ, ಆ ಜೀವನಕ್ಕೆ ಎರಡು ಸಂಗತಿಗಳು ಎಷ್ಟು ವಿರೋಧವಾದವುಗಳು ಎಂಬುದನ್ನು ತಿಳಿಯಬಹುದು. ಅಂದರೆ ದುರ್ಜನರ ಸಂಪರ್ಕ ಮತ್ತು ಯುವತಿಯ ಸಾಂಗತ್ಯವು ಅತ್ಯಂತ ಚಂಚಲವಾಗಿದ್ದು, ಅವು ನಮ್ಮ ಜೀವನದಲ್ಲಿ ಮಿಂಚಿನಂತೆ ಬಂದುಹೋಗುತ್ತವೆ. ಶಾಶ್ವತವಾದವುಗಳಲ್ಲ. ಅವುಗಳನ್ನೇ ನೆಚ್ಚಿ ಕೂತರೆ ಬದುಕು ಅಸಾಧ್ಯ. ಹಾಗಾಗಿ ಇವೆರಡು ಕೂಡ ತ್ಯಾಜ್ಯ ಎಂಬುದು ಇದರ ಅರ್ಥ.

ವಯಸ್ಸಿಗೆ ಬಂದ ಯುವಕನಿಗೆ ಯುವತಿಯ ಸೆಳೆತ, ಹಾಗೆ ಯುವತಿಗೆ ಯುವಕನ ಸೆಳೆತ. ಈ ಎರಡು ಸೆಳೆತಗಳು ಆ ವಯಸ್ಸಿನಲ್ಲಿ ಅತ್ಯಂತ ಸಹಜವಾದವುಗಳು. ಅಕಾಲದಲ್ಲಿ ಬರುವ ಈ ಯುವಕ ಯುವತಿಯರ ಸೆಳೆತವು ಜೀವನದ ಉದ್ದೇಶವನ್ನು ಮರೆಸಬಹುದು. ವಿವೇಕಪ್ರಜ್ಞೆಯನ್ನೂ ಸಹ ನಷ್ಟವಾಗಿಸಬಹುದು. ಇದನ್ನೇ ಸಾಮಾನ್ಯವಾಗಿ 'ರತಿ, ಪ್ರೀತಿ, ಕಾಮ' ಇತ್ಯಾದಿಯಾಗಿ ಹೇಳುವುದುಂಟು. ರತಿ ಅಥವಾ ಪ್ರೀತಿಯಲ್ಲಿ ಮುಳುಗಿದ ವ್ಯಕ್ತಿಗೆ ಯಾವ ಪ್ರಪಂಚವು ಕೂಡ ಕಾಣಿಸದು. ಈ ಕಾರಣವಾಗಿ ತನ್ನ ಜೀವಿತದ ಉತ್ಕೃಷ್ಟ ಉದ್ದಿಶ್ಯವನ್ನು ಅವನು ಮರೆಯುವ ಸಂದರ್ಭ ಬರುತ್ತದೆ. ಹಾಗಾಗಿ ಯುವಕ ಯುವತಿಯರ ಆಕರ್ಷಣೆ ಎಂಬುದು ಮಿತಿಯಲ್ಲಿ ಇರಬೇಕು. ಅಂದರೆ ಯಾವ ಕಾಲದಲ್ಲಿ ಬರಬೇಕು ಎಂಬುದಕ್ಕೆ ಒಂದು ನಿಯಮ ಇದೆ. ಅವರ ಪರಸ್ಪರ ಆಕರ್ಷಣೆಯು ಕೇವಲ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವಾಗಿರಬೇಕು. ಹಾಗಿಲ್ಲದ ಆಕರ್ಷಣೆಯು ಅವರ ಮನಸ್ಸಿನ ಏಕಾಗ್ರತೆಯನ್ನು ಭಂಗಗೊಳಿಸಬಹುದು. ಆದ್ದರಿಂದ ಅಕಾಲದ ಆಕರ್ಷಣೆಯು ಅತ್ಯಂತ ಅಪಾಯವಾದುದು. ಅದರಂತೆಯೇ ದುರ್ಜನರ ಸಂಗವೂ ಕೂಡ ಅತ್ಯಂತ ಅಪಾಯಕಾರಿ. ದುರ್ಜನರು ಎಂದರೆ ಧರ್ಮಪ್ರೀತಿ ಇಲ್ಲದ, ಧರ್ಮಕ್ಕೆ ವಿರೋಧವಾದ ನಡೆಯನ್ನು ಉಳ್ಳವರು. ಅವರ ಸಂಗವು ನಮ್ಮನ್ನು ಧರ್ಮದಿಂದ ಚ್ಯುತವಾಗಿಸುತ್ತದೆ. ಮತ್ತು ತತ್ಕಾಲದಲ್ಲಿ ಅದು ಬಹಳ ಅಪ್ಯಾಯಮಾನವಾಗಿ ಕಂಡುಬರುತ್ತದೆ. ಈ ಎರಡು ಸಂಗತಿಗಳು ಕೂಡ ತತ್ಕಾಲದಲ್ಲಿ ಆಕರ್ಷಕವಾಗಿಯೇ ಕಂಡು ಬರುತ್ತವೆ. ಆದರೆ ಪರಿಣಾಮದಲ್ಲಿ ಅವು ವಿಷಮತೆಯನ್ನು ಉಂಟುಮಾಡುತ್ತವೆ. ಆದ್ದರಿಂದ ಇವೆರಡನ್ನು 'ಮಿಂಚಿನಂತೆ ಅತ್ಯಂತ ಚಂಚಲವಾದವುಗಳು' ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಕೃಷ್ಣಾರ್ಜುನ-ಭೀಮರ ಮಾಗಧ ಪ್ರಯಾಣ

ಜರಾಸಂಧ ವಧೆಯನ್ನು ಮಾಡುವಲ್ಲಿ ಕೃಷ್ಣನಿತ್ತ ಸಲಹೆ ಅಮೂಲ್ಯವಾದುದೆಂದೂ, ನೀತಿ-ಬಲ-ಕ್ರಿಯೆಗಳ ಸಂಗಮವೇ ಕಾರ್ಯಸಾಧಕವೆಂದೂ ಯುಧಿಷ್ಠಿರನು ಮನಗಂಡನು. ಅರ್ಜುನನ ದಶನಾಮಗಳಲ್ಲಿ ಕೃಷ್ಣನೆಂಬುದೂ ಒಂದಾದ್ದರಿಂದ, ಯುಧಿಷ್ಠಿರನ ಮಾತು ಹೀಗೆ ಸಾಗಿತು:

"ಈ ಇಬ್ಬರು ಕೃಷ್ಣರಿಗೆ, ಎಂದರೆ ಕೃಷ್ಣಾರ್ಜುನರಿಗೆ, ಅಜೇಯನಾದವನೇ ಇಲ್ಲ ಮತ್ತು ಈ ವೃಕೋದರ ಭೀಮನಾದರೂ ಬಲಶಾಲಿಗಳಲ್ಲೇ ಶ್ರೇಷ್ಠನಾದವನು. ನಿಮ್ಮಿಬ್ಬರೊಂದಿಗೆ ಸೇರಿದ ಈ ಮಹಾಕೀರ್ತಿ ಸಂಪನ್ನನಾದ ವೀರನು ಏನನ್ನು ತಾನೆ ಸಾಧಿಸಲಾರ? ಸೈನ್ಯ-ಸ್ತೋಮವು ಉತ್ತಮ ಕಾರ್ಯವನ್ನು ಸಾಧಿಸುವುದು ಯಾವಾಗ? ನೇತಾರನಿಂದ ಸರಿಯಾಗಿ ಸಂಚಾಲಿತವಾದಾಗ. ಬಲವೆಂಬುದು ತನ್ನಷ್ಟಕ್ಕೆ ಕುರುಡೆಂದೂ, ಜಡವೆಂದೂ ಹೇಳುವರು. ವಿಚಕ್ಷಣರೇ ಅದನ್ನು ಮುನ್ನಡೆಸಬೇಕು.

ಹೀಗೆ, ಕಾರ್ಯವು ಸಿದ್ಧಿಸಬೇಕೆಂದರೆ ಪ್ರಜ್ಞೆ-ರಾಜ-ನೀತಿಗಳೆಂಬ ಬಲಗಳಿಂದ ಕೂಡಿರುವವನೂ, ಕ್ರಿಯೆಯ ಉಪಾಯವನ್ನು ಹೊಂದಿರುವವನೂ ಆದ ಶ್ರೀಕೃಷ್ಣನನ್ನೇ ಮುಂದಿಟ್ಟುಕೊಂಡು ಹೊರಡಬೇಕು. ಯದುಶ್ರೇಷ್ಠನಾದ ಕೃಷ್ಣನೇ, ಕಾರ್ಯಸಿದ್ಧಿ ಪರ್ಯಂತವೂ ಅರ್ಜುನನು ಕೃಷ್ಣನನ್ನು ಅನುಸರಿಸಲಿ ಹಾಗೂ ಭೀಮನು ಅರ್ಜುನನನ್ನು ಅನುಸರಿಸಲಿ. ನಯ-ಜಯ-ಬಲ - ಇವುಗಳು ಸೇರಿ, ವಿಕ್ರಮದಲ್ಲಿ ತಮ್ಮ ಸಿದ್ಧಿಯನ್ನು ಹೊಂದುವುವು ಎಂದು ಆತನು ತನ್ನ ಮಾತನ್ನು ಮುಗಿಸಿದನು. ಯುಧಿಷ್ಠಿರನು ಹೀಗೆಂದು ಹೇಳಲಾಗಿ, ಮಹಾತೇಜಸ್ವಿಗಳೆನಿಸಿದ ಕೃಷ್ಣ-ಅರ್ಜುನ-ಭೀಮಸೇನರು ಜರಾಸಂಧನ ರಾಜಧಾನಿಯತ್ತ ಸಾಗಿದರು. ವರ್ಚಸ್ವಿಗಳಾದ ಸ್ನಾತಕ ಬ್ರಾಹ್ಮಣರ ಪರಿಚ್ಛದವನ್ನು, ಎಂದರೆ ವೇಷ-ಭೂಷಣಗಳನ್ನು ಅವರು ಧರಿಸಿಕೊಂಡರು. ಈ ಮೂಲಕ ತಮ್ಮನ್ನೇ ಮರೆಮಾಚಿಕೊಂಡರು. ಆ ಸಂದರ್ಭದಲ್ಲಿ ಅವರ ಸ್ನೇಹಿತರು ತಮ್ಮ ಮನೋಹರವಾದ ಮಾತುಗಳಿಂದ ಅವರನ್ನು ಅಭಿನಂದಿಸಿದರು.

ಈ ಮೂವರೂ ಜರಾಸಂಧನ ವಿಷಯಕ್ಕೆ ರೋಷದಿಂದ ಕುದಿಯುತ್ತಿದ್ದರು. ಎಂದೇ ಸೂರ್ಯ-ಚಂದ್ರ-ಅಗ್ನಿಗಳಂತೆ ಅವರ ಶರೀರವು ಜ್ವಲಿಸುತ್ತಿತ್ತು. ಯುದ್ಧದಲ್ಲಿ ಎಂದೂ ಸೋಲನ್ನೇ ಕಂಡಿರದ ಹಾಗೂ ಒಂದೇ ಕಾರ್ಯಕ್ಕಾಗಿಯೇ ಸಮುದ್ಯತರಾಗಿದ್ದ ಹಾಗೂ ಭೀಮನನ್ನು ಮುಂದಿಟ್ಟುಕೊಂಡು ಹೊರಟಿದ್ದ, ಆ ಕೃಷ್ಣರಿಬ್ಬರನ್ನು ಹಾಗೆ ಕಂಡ ಯುಧಿಷ್ಠಿರನು, ಜರಾಸಂಧನು ಹತನಾದನೆಂದೇ ಭಾವಿಸಿದನು. ಎಷ್ಟಾದರೂ ಅವರಿಬ್ಬರೂ ಎಂತಹವರು? ಧರ್ಮ-ಕಾಮ-ಅರ್ಥ ಇವುಗಳನ್ನು ಸಾಧಿಸುವ ಲೋಗರನ್ನು ತೊಡಗಿಸುವವರು! ಅವರು ನರ-ನಾರಾಯಣರೇ ಸರಿ.

ಕುರು ಪ್ರದೇಶದಿಂದ ಹೊರಟ ಅವರು, ದಾರಿಯಲ್ಲಿ ನಾನಾ-ಪ್ರದೇಶಗಳನ್ನು ಕಂಡರು. ಕುರು-ಜಾಂಗಲ ಪ್ರದೇಶ, ಅಲ್ಲಿ ರಮಣೀಯವಾದ ಪದ್ಮ-ಸರಸ್ಸು, ಮುಂದಕ್ಕೆ ಕಾಲಕೂಟ-ಪರ್ವತ, ಅದನ್ನೂ ದಾಟಿದ ಮೇಲೆ ಗಂಡಕಿ, ಮಹಾ ಶೋಣ, ಸದಾ ನೀರಾ ನದಿಗಳು, ಬಳಿಕ ಏಕಪರ್ವತಕ-ಪ್ರದೇಶದ ನದಿಗಳು - ಇವೆಲ್ಲವನ್ನೂ ಮೀರಿ ನಡೆದರು. ಆಮೇಲೆ ರಮ್ಯವಾದ ಸರಯೂ ನದಿ, ಪೂರ್ವಕೋಸಲ ದೇಶ, ಬಳಿಕ ಮಿಥಿಲೆ. ಅಲ್ಲಿ ವಿಪುಲವಾದ ನದಿಗಳನ್ನು ಕಾಣುತ್ತಾ ಗಂಗೆ-ಶೋಣಭದ್ರಾ ನದಿಗಳನ್ನು ದಾಟಿದರು. ಮುಂದಕ್ಕೆ ಪೂರ್ವಾಭಿಮುಖವಾಗಿ ಹೊರಟರು. ಕುಶ-ಚೀರವಸ್ತ್ರಗಳನ್ನು ಧರಿಸಿದ್ದ ಅವರು, ಮುಂದೆ ಮಾಗಧ ಸೀಮೆಯನ್ನು ಸೇರಿದರು. ಅಲ್ಲಿ ಗೋಧನದಿಂದ ತುಂಬಿತುಳುಕಿದ್ದುದೂ, ಜಲಸಮೃದ್ಧಿ-ಸಸ್ಯಸಮೃದ್ಧಿಗಳನ್ನುಳ್ಳದ್ದೂ ಆದ ಗೋರಥ-ಗಿರಿಯನ್ನು ತಲುಪಿ, ಅಲ್ಲಿ ಮಾಗಧ ಪುರವನ್ನು ಕಂಡರು. ಆಗ ವಾಸುದೇವನೇ ಮಾಗಧ ದೇಶವನ್ನು ಪ್ರಶಂಸಿಸಿದನು. ಗೋಸಂಪತ್ತು, ನಿತ್ಯ-ಜಲಸಮೃದ್ಧಿಗಳನ್ನುಳ್ಳ ದೇಶ ಇದಲ್ಲವೇ? ಇಲ್ಲಿನ ಜನಗಳಾದರೂ ವ್ಯಾಧಿಗಳಿಲ್ಲದಿರುವರು. ಮನೆಗಳು ಸೊಗಸಾಗಿವೆ. ಹೀಗಾಗಿ, ಈ ಮಾಗಧ-ದೇಶವೇ ಮನೋಹರವಾಗಿದೆ. ವಿಪುಲ, ವರಾಹ, ವೃಷಭ, ಋಷಿಗಿರಿ ಹಾಗೂ ಚೈತ್ಯಕ ಎಂಬ ಹೆಸರಿನ ಐದು ವಿಹಾರ ಯೋಗ್ಯವಾದ ಪರ್ವತಗಳಿಲ್ಲಿವೆ.

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ

ವಕ್ರದೃಷ್ಟಿ

• ಎನ್. ರಾಮನಾಥ್
anakuramanath@gmail.com



ಎಂಟನೆಯ ತರಗತಿಯ ಸಮಾಜ ವಿಜ್ಞಾನ ವಿಷಯದಲ್ಲಿ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಅಧ್ಯಾಯವೊಂದು ಇದ್ದುದನ್ನು ಖಂಡಿಸಿದ ನ್ಯಾಯಾಲಯವು ಆ ಪಠ್ಯಪುಸ್ತಕವನ್ನು ನಿಷೇಧಿಸಿದುದರ ಹಿನ್ನೆಲೆಯಲ್ಲಿ ಇತರ ವಿಷಯಗಳಲ್ಲಿಯೂ ಯಾವ್ಯಾವ ಅಧ್ಯಾಯಗಳನ್ನು ನಿಷೇಧಿಸಬೇಕೆಂದು ಚರ್ಚಿಸಲು ಹಾ.ತ.ಸಂ. (ಹಾದಿಬದಿ ತರಲೆಗಳ ಸಂಘ)ನ ಸ್ಟ್ಯಾಂಡಿಂಗ್ ಕಮಿಟಿಯು (ಹಾದಿಬದಿಯಲ್ಲೇ ಸೇರುತ್ತಿದ್ದುದರಿಂದಲೂ, ಅಲ್ಲಿ ಕುಳಿತುಕೊಳ್ಳಲು ಇದ್ದ ಸೋಮಾರಿಕಟ್ಟೆಯನ್ನು ಪಾನಿಪುರಿ ಮಾರುವವನು ಪೊಲೀಸರಿಂದ ಅನಧಿಕೃತವಾಗಿ ಭೋಗ್ಯಕ್ಕೆ ಪಡೆದಿದ್ದುದರಿಂದಲೂ ಇವರದು ಸಿಟಿಂಗ್ ಕಮಿಟಿ ಆಗಲು ಸಾಧ್ಯವಿಲ್ಲದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯೇ ಆಗಿದ್ದಿತು) ಮೆಜೆಸ್ಟಿಕ್ಕಿನ ಫುಟ್ಪಾತಿನಲ್ಲಿ ಸಭೆ ಸೇರಿತು. "ಚರಿತ್ರೆಯಲ್ಲಿ ಯುದ್ಧಗಳಿವೆ. ಚರಿತ್ರೆಯಲ್ಲಿ ಗಾಂಧೀಜಿಯೂ ಇದ್ದಾರೆ. ಎರಡರಲ್ಲಿ ಒಂದನ್ನು ಇಟ್ಟುಕೊಳ್ಳಬೇಕು" ಎಂದ ಹಾತಸಂ ಅಧ್ಯಕ್ಷನಾದ ತರಲೆ ತಮ್ಮಣ್ಣ.

"ಏಕೆ?"

"ಗಾಂಧೀಜಿ ಅಹಿಂಸಾವಾದಿ. ಯುದ್ಧ ಹಿಂಸಾಕಾಂಡ. ಹರ್ಷನು ಅನೇಕ ಯುದ್ಧಗಳನ್ನು ಗೆದ್ದನು ಎಂದು ಪಾಠ ಮಾಡಿದ ಮರುದಿನವೇ ಗಾಂಧಿಯು ಅಹಿಂಸಾ ತತ್ವವನ್ನು ಸಾರಿದರು ಎಂದರೆ ಹರ್ಷನ ಬಗ್ಗೆ ಹರ್ಷ ಪಡಬೇಕೋ, ಗಾಂಧಿಯನ್ನು ಮೆಚ್ಚಬೇಕೋ ಎಂಬ ಗೊಂದಲ ಉಂಟಾಗುತ್ತದೆ. ಎರಡರಲ್ಲಿ ಒಂದು ಧೋರಣೆಯಿರುವ ಪಾಠವನ್ನಷ್ಟೇ ಬೋಧಿಸುವುದೇ ಗೊಂದಲ ನಿವಾರಣೆಗೆ ಉಪಾಯ" ನುಡಿದ ತ.ತ.

"ಚರಕದ ಬಗ್ಗೆಯೂ ಗೊಂದಲವಿದೆ" ಕೊರಳೆತ್ತಿದ ಹಾತಸಂ ಕಾರ್ಯದರ್ಶಿಯಾದ ಕಿತಾಪತಿ ಕಿಟ್ಟಣ್ಣ.

"ಏನು ಗೊಂದಲ?" ಸಂಶಯವನ್ನು ಮುಂದಿರಿಸಿದ ಡೌಟೇಶ.

"ಚರಕ ಎಂದರೆ ವೈದ್ಯ. ಅವನು ಡಾಕ್ಟರ್ ಶುಶ್ರುತನ ಕಸಿನ್ ಎಂದೂ ನಂಬಲನರ್ಹವಾದ ಮೂಲಗಳು ತಿಳಿಸಿವೆ. ಗಾಂಧೀಜಿಯ ಚರಕ ಒಂದು ಯಂತ್ರ. ಈ ಚರಕ ನೇಯ್ಗೆಗೆ ಬೇಕಾದ ನೂಲನ್ನು ನೀಡಿದರೆ ಆ ಚರಕ ನೂಲನ್ನು ಬಳಸಿ ಶಸ್ತ್ರಚಿಕಿತ್ಸೆಗೆ ಹೊಲಿಗೆ ಹಾಕುತ್ತಿದ್ದನಂತೆ. ವಿದ್ಯಾರ್ಥಿಗಳಿಗೆ ಚರಕ ಎಂದ ಕೂಡಲೆ ವ್ಯಕ್ತಿಯೋ, ಶಕ್ತಿಯೋ ಎಂಬ ಅನುಮಾನ ಮೂಡುವುದರಿಂದ ಎರಡೂ ಚರಕಗಳನ್ನು ಪುಸ್ತಕದಿಂದ ಹೊರಗಿಡುವುದು ಕ್ಷೇಮ" ಎಂದ ಕಿ.ಕಿ.

"ವಿಜ್ಞಾನವು ಮುಂದುವರಿದು ಆಮ್ಲಜನಕವನ್ನು ಇಲ್ಲವಾಗಿಸಿದರೆ ರಾಜಕೀಯ ವಿಜ್ಞಾನದವರು ನೆಮ್ಮದಿಯಿಂದ ಉಸಿರಾಡಬಹುದು" ಎಂದ ಇಂಪರ್ಟಿನೆಂಟ್ ಇಳಂಗೋವನ್.

"ಆಮ್ಲಜನಕವೇ ಇಲ್ಲವಾದರೆ ಉಸಿರಾಡುವುದು ಹೇಗೆ?" ಡೌಟೇಶ ಉವಾಚ.

"ಇಲ್ಲವಾದರೆ ಎಂದರೆ ವ್ಯಾನಿಶ್ ಆಗಬೇಕೆಂದು ಅರ್ಥವಲ್ಲ. ಉದಾಹರಣೆಗೆ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವಿಲ್ಲ ಎಂದು ನ್ಯಾಯಾಲಯವು ಹೇಳಿದಾಕ್ಷಣ ಸಿಗ್ನಲ್ ಲೈಟಿನ ಕಂಬದ ಹಿಂದೆ ಕಳ್ಳನಂತೆ ಅಡಗಿ ನಿಂತ ಪೊಲೀಸನು ಸಿಗ್ನಲ್ ಜಂಪಿನತ್ತ ಕುರುಡುನೋಟ ಬೀರಲು ಕೈಬಿಸಿ ಮಾಡಿಕೊಳ್ಳುವುದಿಲ್ಲ ಎಂದೇನಿಲ್ಲ. ಆಮ್ಲಜನಕ ಇರಕೂಡದು ಎಂದರೆ ಪುಸ್ತಕದಲ್ಲಿ ಇರಕೂಡದು ಎಂದಷ್ಟೇ ಅರ್ಥ" ದನಿಯೇರಿಸಿದ ಇಂ.ಇ.

"ವಿಜ್ಞಾನದ ಆಮ್ಲಜನಕವು ರಾಜಕೀಯ ವಿದ್ಯಾರ್ಥಿಗೆ ಹೇಗೆ ಗೊಂದಲ ಉಂಟಾಗಿಸುತ್ತದೆ?" ಕೇಳಿದ ಅನುಮಾನಂ ಅಯ್ಯಂಗಾರ್.

"ರಸಾಯನಶಾಸ್ತ್ರದಲ್ಲಿ ಆಮ್ಲಜನಕವನ್ನು ಓಟೂ ಎನ್ನುತ್ತಾರೆ. ರಾಜಕೀಯದಲ್ಲಿ ಓಟು ಎಂದರೆ ಬೇರೆಯದೇ ಅರ್ಥ. ಆಮ್ಲಜನಕವನ್ನು ಬೇರೆ ಅಕ್ಷರದಿಂದ ಗುರುತಿಸಿದರೆ ಮತದ ಛಾಯೆ ಕಳೆದು ಗೊಂದಲ ತಪ್ಪುತ್ತದೆ."

"ಆಕ್ಸಿಜನ್ ಓ ಎಂದಲೇ ಆರಂಭವಾಗುವುದರಿಂದ ಬೇರೆ ಅಕ್ಷರದಿಂದ ಗುರುತಿಸುವುದು ಸೂಕ್ತವಲ್ಲ" ಎಂದ ಅ.ಅ.

"ಪೊಟಾಶಿಯಮ್‌ಗೆ ಪಿ ಎನ್ನುವುದಿಲ್ಲ, ಕೆ ಎನ್ನುತ್ತೇವೆ. ಗೋಲ್ಡ್‌ಗೆ ಜಿ ಎನ್ನುವುದಿಲ್ಲ, ಎಯು ಎನ್ನುತ್ತೇವೆ. ಹಾಗೆಯೇ ಆಮ್ಲಜನಕಕ್ಕೆ ಮರುನಾಮಕರಣ ಮಾಡುವುದು ಆತ್ಯವಶ್ಯ" ಘಂಟಾಘೋಷಿಸಿದ ಇಂ.ಇ.

"ಬೀಜಗಣಿತ ಎಂದು ಆಲ್‌ಜೀಬ್ರಾವನ್ನು ಕರೆಯುವುದು ನನಗೆ ಇನಿತೂ ಸರಿಬರುವುದಿಲ್ಲ" ಎಂದ ಸಿನಿಕ್ ಸಿದ್ದಯ್ಯ.

"ಏಕೆ?"

"ಸರ್ಕಾರವು ರೈತರಿಗೆ ಬಿತ್ತನೆಗೆಂದು ಕೊಡುವ ಬೀಜಗಳ ಲೆಕ್ಕವನ್ನು ಬೀಜಗಣಿತ ಎನ್ನಬೇಕು. ಕೃಷಿಗೆ ಸಂಬಂಧಿಸಿದ ಈ ಲೆಕ್ಕವನ್ನು ಎ+ಬಿ ವಿಧದಲ್ಲಿ ಬೋಧಿಸುವುದು ಸರಿಯಲ್ಲ. ಹಾಗೆ ನೋಡಿದರೆ ಆಲ್ಜೀಬ್ರಾ ಸಹ ಸರಿಯಾದ ಹೆಸರಲ್ಲ. ಎಲ್ಲಾ ಪ್ರಾಣಿಗಳೂ ಜೀಬ್ರಾಗಳಾಗಲು ಹೇಗೆ ಸಾಧ್ಯ?" ಕೊಶ್ಚನಿಸಿದ ಸಿ.ಸಿ.

"ನನ್ನದು ಬೀಜಗಣಿತ ಎಂಬ ಪದದ ಬಗ್ಗೆ ತಕರಾರಿಲ್ಲ. ಆದರೆ ಎಕ್ಸ್ ಅಕ್ಷರವನ್ನು ಬೀಜಗಣಿತದಿಂದ ಹೊರಗಿಡುವುದು ಸೂಕ್ತ" ಎಂದ ಶಕುನಿ ಶಾಮಣ್ಣ.

"ಏಕೆ?" ಎಂದ ಸಿ.ಸಿ.

"ಎಕ್ಸ್ ಎನ್ನುವುದು ಮಾಜಿ ಟ್ವಿಟರ್‌ನ ಹಾಲಿ ಹೆಸರು. ನಾವು ಆಲ್ಜೀಬ್ರಾದಲ್ಲಿ ಎಕ್ಸ್+ಎ, ಎಕ್ಸ್ ಸ್ಕ್ವೇರ್ ಎಂದೆಲ್ಲ ಹೇಳುವಾಗ ಝುಕರ್‌ಬರ್ಗನು 'ನಮ್ಮ ಫೇಸ್‌ಬುಕ್ಕಿನ ಸಿಂಬಲ್ಲಾದ ಎಫ್‌ಗೂ ಪ್ರಾಮುಖ್ಯತೆ ಕೊಡಿ. ಎಫ್+ಎ, ಎಫ್+ಬಿ ಎಂದೆಲ್ಲ ಲೆಕ್ಕ ಹೇಳಿಕೊಡಿ' ಎಂದೂ, 'ಟಂಬ್ಲರ್ ಅನ್ನು ಕಡೆಗಣಿಸುವುದು ತರವಲ್ಲ. ಮುಂದಿನ ದಿನಗಳಲ್ಲಿ ಕೆಲವೆಡೆ ಎಫ್ ಬಳಸಿ, ಕೆಲವೆಡೆ ನನ್ನ ಸೂಚಕವಾದ ಟಿ ಅನ್ನು ಬಳಸಿ' ಎಂದು ಟಂಬ್ಲರೂ ಕೂಗೆಬ್ಬಿಸಬಹುದು. 'ದೊಡ್ಡ ಟಿ ಅಕ್ಷರವು ನನ್ನ ಮೊದಲ ಅಕ್ಷರವನ್ನೂ, ಎಕ್ಸ್ ಅಕ್ಷರವು ನನ್ನ ಕೊನೆಯ ಅಕ್ಷರವನ್ನೂ ಸೂಚಿಸುವುದರಿಂದ ಎರಡೂ ಇರಲಿ" ಎಂದು ಟೆಲಿಗ್ರಾಮ್ ಎಕ್ಸ್ ಆಪ್ ಸಹ ದನಿಯೇರಿಸಬಹುದು. ಒಂದು ಆಪ್‌ಗೆ ಬೆಣ್ಣೆ ಮತ್ತೊಂದು ಆಪ್‌ಗೆ ಸುಣ್ಣ ಬಳಿಯಬಾರದೆಂದಿದ್ದರೆ ಬೀಜಗಣಿತದಲ್ಲಿ ಎಕ್ಸ್ ಅಕ್ಷರದ ಬಳಕೆಯನ್ನು ಈ ದಿನದಿಂದಲೇ ನಿಷೇಧಿಸಬೇಕು" ಎಂದ ಶ.ಶಾ.

"ಬೀಜಗಣಿತದಲ್ಲಿ ಬರುವ ಸೈನ್ ತೀಟಾ, ಕಾಟ್ ತೀಟಾಗಳ ಹೆಸರನ್ನು ಬದಲಿಸಬೇಕು ಅಥವಾ ಬೀಜಗಣಿತವನ್ನೇ ಸಿಲಬಸ್‌ನಿಂದ ಹೊರಗಿಡಬೇಕು" ಎಂದ ಕಾಮ್ರೇಡ್ ಕಾಮಣ್ಣ.

"ಏಕೆ?"

"ಸೈನ್ ತೀಟಾ ಎಂದು ಬಾಯಲ್ಲಿ ಹೇಳಿದರೂ ಅದನ್ನು ಬರೆಯುವುದು ಸಿನ್ (sin) ಎಂದೇ. ಪಾಪವನ್ನು ಸೂಚಿಸುವ ಈ ಪದವು ಗಣಿತಕ್ಕೆ ಹೊಂದುವಂತಹದ್ದಲ್ಲ. ಅದೇನಿದ್ದರೂ ಧರ್ಮದ ಬಾಬತ್ತು. ಧರ್ಮಬೋಧನೆಯು ಟಿಆರ್‌ಪಿಗೆಂದು ವಾಹಿನಿಗಳು ಬಳಸುವ ವಿಷಯವೇ ಹೊರತು ಶಾಲೆಯ ಪಠ್ಯ ವಿಷಯವಲ್ಲ. ಕಾಟ್ ತೀಟಾದ ಪೂರ್ಣ ಹೆಸರು ಕೊಟ್ಯಾನ್-ಜೆಂಟ್ ಎಂದಿದ್ದು, ಕೊಟ್ಯಾನ್-ಲೇಡಿ ಇಲ್ಲದ ಕಾರಣ ಅದು ಪುರುಷಪ್ರಧಾನ ಸಮಾಜವನ್ನು ಬಿಂಬಿಸುತ್ತದೆ, ತತ್ಕಾರಣ ಸ್ತ್ರೀಯರಿಗೆ ಅನ್ಯಾಯವಾದಂತೆ. ಮಕ್ಕಳಲ್ಲಿ ಈ ರೀತಿಯ ಭೇದಭಾವಗಳನ್ನು ಬಿತ್ತುವುದು ಅಕ್ಷಮ್ಯ ಅಪರಾಧ. ಕೊಟ್ಯಾಂಜೆಂಟನ್ನು ಕಾಟ್ ಎಂದು ಬಳಸುವುದೂ ಸಹ ಮಂಚವನ್ನು ನೆನಪಿಸುವುದರಿಂದಲೂ, ಅನೇಕ ಜಗದ್ಗುರುಗಳು, ದೊಡ್ಡ ಕುಳಗಳು ಕಾಟ್‌ನಲ್ಲೇ ಕಾಟ್ (caught) ಆಗುವುದು ಹನಿ ಟ್ರ್ಯಾಪ್ ಆದುದರಿಂದಲೂ ಅದು ಕ್ರೈಮ್ ಲೈಫನ್ನು ಬಿಂಬಿಸುತ್ತದೆ. ಕ್ರೈಮ್ ತರಗತಿಗಳ ಪಠ್ಯವಾದರೆ ವಿದ್ಯಾರ್ಥಿಗಳ ಜೀವನದ ಗತಿಯೇ ಬದಲಾಗುತ್ತದೆ. ಇದನ್ನು ಹಾತಸಂ ಉಗ್ರವಾಗಿ ಖಂಡಿಸಲೇಬೇಕು" ಎಂದು ಗುಡುಗಿದ ಕಾ.ಕಾ.

"ಬಯಾಲಜಿಯಲ್ಲಿ ಹೃದಯದ ಬಗ್ಗೆ ತಿಳಿಸಿಕೊಡುವುದು ಸಮಂಜಸವೇ ಆದರೂ ಹೃದಯದ ಚಿತ್ರವನ್ನು ಬ್ಯಾನ್ ಮಾಡಲೇಬೇಕು" ಎಂದ ಸನಾತನಿ ಸರವಣ.

"ಏಕೆ?"

"ಹೃದಯದ ಚಿತ್ರವನ್ನು ಲವ್ ಸಿಂಬಲ್ ಆಗಿ ಬಳಸುತ್ತಾರೆ. ಆ ಸಿಂಬಲ್ಲು ಫೆಬ್ರವರಿ 14ಕ್ಕೆ ಸಂಬಂಧಿಸಿದ್ದೆಂದು ಇಂದಿನ ಪಡ್ಡೆಗಳ ಅಭಿಪ್ರಾಯ. ವ್ಯಾಲೆಂಟೈನ್ ವಿದೇಶಿ ಪದ್ಧತಿ. ನಮ್ಮದು ಪ್ರೇಮಕಾಮಗಳಿಗೆ ಫುಲ್‌ಸ್ಟಾಪ್ ಇಡುವ ಪದ್ಧತಿ. ವಿದೇಶೀಯರದು ಕಾಮಪ್ರೇಮಗಳಿಗೆ ಕಾಮಾ ಹಾಕುವ ಇರಾದೆ. ಪ್ರೇಮಕಾಮಗಳು ಬದುಕಿನಲ್ಲಿ ತಪ್ಪಲ್ಲವಾದರೂ ಹೈಸ್ಕೂಲಿನಲ್ಲಿಯೇ ಅದರ ವಾಸನೆಯನ್ನು ಹರಡುವುದು ತಪ್ಪು. ಆದ್ದರಿಂದ ಹೃದಯದ ಚಿತ್ರವಿಲ್ಲದೆಯೇ ಹೃದಯದ ಬಗ್ಗೆ ಪಾಠವನ್ನು ಮಾಡಲೆಂದು ಹಾತಸಂ ಆಗ್ರಹಿಸಲಿ" ಎಂದ ಸ.ಸ.

"ನಿಮ್ಮದು ಶುದ್ಧ ಹುಚ್ಚುಮಾತು ಸರವಣ. ಚಿತ್ರವೇ ಇಲ್ಲದೆ ಹೃತ್ಕರ್ಣ, ಹೃತ್ಕುಕ್ಷಿಗಳನ್ನು ಸೂಚಿಸುವುದು ಹೇಗೆ?" ಎಂದ ಕಾ.ಕಾ.

"ಆ ಹೆಸರುಗಳೂ ಸರಿಯಿಲ್ಲ. ಕುಕ್ಷಿ ಎನ್ನುವುದು ನಿರಕ್ಷರಕುಕ್ಷಿ ಎನ್ನುವುದನ್ನೇ ನೆನಪಿಗೆ ತರುತ್ತದೆ. ಅದು ಅನಕ್ಷರಸ್ಥರ ಬಗ್ಗೆ ಸಮಾಜವು ತೋರುವ ಕೀಳುಭಾವವನ್ನು ಬಿಂಬಿಸುತ್ತದೆ. ಹೃತ್ಕರ್ಣದಲ್ಲಿರುವ ಕರ್ಣವೂ ಮಹಾಭಾರತದ ಕರ್ಣನನ್ನು ಬಿಂಬಿಸುವುದೆಂದು ನನ್ನ ಅಭಿಮತ. ಮದುವೆಗೆ ಮುಂಚೆಯೇ ಹುಟ್ಟಿದ ಮಗುವಿನ ಹೆಸರನ್ನು ಹೈಸ್ಕೂಲಿನ ಹುಡುಗರ ಕಿವಿಯ ಮೇಲೆ ಹಾಕುವುದು ನನಗಂತೂ ಸರಿಕಾಣದು. ಹೃದಯದ ಈ ಭಾಗಗಳಿಗೂ ಬೇರೆ ಹೆಸರಿಡದಿದ್ದರೆ ಈ ಅಧ್ಯಾಯವನ್ನೂ ನಿಷೇಧಿಸುವುದೇ ಉತ್ತಮ." ಅಭಿಪ್ರಾಯಿಸಿದ ಸ.ಸ.

"ಕರ್ಣನ ಹೆಸರೆತ್ತಿದರೆ ನನಗೆ ರಸಾಯನದ್ದೇ ನೆನಪು. ಪಂಪನು ಭಾರತವನ್ನು 'ಕರ್ಣರಸಾಯನಮಲ್ತೆ' ಎಂದಿರುವುದೇ ಇದರ ಹಿನ್ನೆಲೆ. ಅಲ್ಲದೆ ಕೆಮಿಸ್ಟ್ರಿಯ ಬಗ್ಗೆ ಮಾತನಾಡಿದವರೂ ಅದನ್ನು ರಸಾಯನಶಾಸ್ತ್ರ ಎಂದರು. ರಸಾಯನ ಎಂದರೆ ಪಂಚಾಮೃತ. ಫಲಾಮೃತಗಳು ನೆನಪಾಗುತ್ತವೆ. ಅವೆರಡು ನೆನಪಾದಾಗ ಮಠಗಳ ನೆನಪಾಗುತ್ತದೆ. ಹೀಗೆ ಒಂದು ಧರ್ಮಕ್ಕೆ ಸೇರಿದ ಪೂಜಾಗೃಹವನ್ನು ನೆನಪಿಸುವ ರಸಾಯನ ಎಂಬ ಪದವು ಜಾತ್ಯತೀತತೆಯನ್ನು ಬಿಂಬಿಸುವುದಕ್ಕೆ ಅಡಚಣೆ ಉಂಟು ಮಾಡೀತೆಂದು ನನ್ನ ಮನ ಅಂಜುತ್ತಿದೆ. ತತ್ಕಾರಣ ಕೆಮಿಸ್ಟ್ರಿಗೆ ಕನ್ನಡದಲ್ಲಿ ಹೊಸ ಹೆಸರಿಡಬೇಕು, ಅದುವರೆಗೆ ಆ ವಿಷಯವನ್ನೇ ಬ್ಯಾನ್ ಮಾಡಬೇಕು" ಎಂದ ಪ್ರಾಚೀನಂ ಪಾಪಯ್ಯ.

"ಹಾಗೆ ನೋಡಿದರೆ ಸಮಾಜ ವಿಜ್ಞಾನ ಎನ್ನುವ ವಿಷಯವೇ ನಮಗೆ ಅನ್ವಯವಾಗದು. ಜಾತ್ಯಾಧಾರಿತವಾಗಿ ಓಟ್ ಮಾಡುವ, ಸಂಘ ಕಟ್ಟುವ, ಮೀಸಲು ಬೇಡುವ ನಾವು ವಿಜ್ಞಾನದಿಂದ ಬಹಳ ದೂರ ಇದ್ದೇವೆ. ಆದ್ದರಿಂದ ಸಮಾಜವೇ ಬೇರೆ, ವಿಜ್ಞಾನವೇ ಬೇರೆ" ಎಂದು ಆರಂಭಿಸಿದ ಕಾ.ಕಾ.

ಅಷ್ಟರಲ್ಲಿ ಸಮೀಪದ ಸಿನೆಮಾ ಮಂದಿರವು ಬಿಟ್ಟ ಕಾರಣ ಜನಸಮೂಹವು ಫುಟ್ಪಾತಿನಲ್ಲಿ ನುಗ್ಗಿಬಂದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯು ಸ್ಥಾನಪಲ್ಲಟವಾಗಿ ಸಭೆ ಬರ್ಖಾಸ್ತಾಯಿತು.

ಮತಾಂತರ: ಛತ್ತೀಸ್‌ಗಢ ಹೈಕೋರ್ಟಿನ ಮಹತ್ವದ ತೀರ್ಪು

ಅರವಿಂದ ಶೆಣೈ

ಮತಾಂತರಕ್ಕೆ ಸಂಬಂಧಿಸಿ ಛತ್ತೀಸ್‌ಗಢ ಹೈಕೋರ್ಟ್ ನೀಡಿದ ಮಹತ್ವದ ತೀರ್ಪೊಂದಕ್ಕೆ ತಡೆಯಾಜ್ಞೆ ನೀಡಲು ಕೆಲದಿನಗಳ ಹಿಂದೆ ಸುಪ್ರೀಂಕೋರ್ಟ್ ನಿರಾಕರಿಸಿದ್ದು ಒಂದು ಮಹತ್ವದ ಬೆಳವಣಿಗೆ. ಇದು ಛತ್ತೀಸ್‌ಗಢದ ಕೆಲವು ಗ್ರಾಮ ಪಂಚಾಯತ್‌ಗಳು ಗ್ರಾಮದ ಪ್ರವೇಶದ್ವಾರಗಳಲ್ಲಿ ಭಿತ್ತಿಪತ್ರಗಳನ್ನು ಹಾಕಿದ್ದರ ವಿರುದ್ಧವಾಗಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪಾಗಿತ್ತು. ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳಲ್ಲಿರುವ ಹಲವು ಗ್ರಾಮ ಪಂಚಾಯತ್‌ಗಳು "ಕ್ರೈಸ್ತ ಮಿಷನರಿಗಳಿಗೆ ಮತ್ತು ಧರ್ಮಗುರುಗಳಿಗೆ ಪ್ರವೇಶವಿಲ್ಲ" ಎಂಬ ಭಿತ್ತಿಪತ್ರಗಳನ್ನು ಗ್ರಾಮದ ಪ್ರವೇಶ ದ್ವಾರದಲ್ಲಿ ಹಾಕಿದ್ದವು. ಕ್ರೈಸ್ತ ಮಿಷನರಿಗಳು ಆದಿವಾಸಿ ಜನಾಂಗದವರನ್ನು ಮತಾಂತರ ಮಾಡುತ್ತಾರೆ ಎಂಬ ಭೀತಿಯಿಂದ ಅದನ್ನು ತಡೆಯುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಈ ರೀತಿಯ ಭಿತ್ತಿಪತ್ರ ಹಾಕಿದ್ದವು. ಇದೀಗ ಈ ವಿಷಯವು ಧಾರ್ಮಿಕ ಮತಾಂತರದ ವಿಷಯದ ಕುರಿತಾದ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ದಿಗ್ಬಾಲ್ ತಂಡಿ ಎಂಬಾತ ಇಂತಹ ಭಿತ್ತಿಪತ್ರಗಳನ್ನು ತೆಗೆಸಬೇಕೆಂದು ಕೋರಿ ಛತ್ತೀಸ್‌ಗಢ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಆದರೆ ಹೈಕೋರ್ಟ್ ಅದನ್ನು ನಿರಾಕರಿಸಿ ತೀರ್ಪು ನೀಡಿತ್ತು. ಆ ಬಳಿಕ ಆತ ಸುಪ್ರೀಂಕೋರ್ಟ್‌ನ ಮೊರೆ ಹೋಗಿದ್ದ. ಸುಪ್ರೀಂಕೋರ್ಟ್ ಕೂಡಾ ಈಗ ಆತನ ಮನವಿಯನ್ನು ತಿರಸ್ಕರಿಸಿದೆ. ತಂಡಿಯ ಮೂಲ ಅರ್ಜಿಯನ್ನು 2025ರ ಅಕ್ಟೋಬರ್‌ನಲ್ಲಿ ತಿರಸ್ಕರಿಸಿ ತೀರ್ಪು ನೀಡಿದ್ದ ಹೈಕೋರ್ಟ್, ಮತಾಂತರದ ಕುರಿತಂತೆ ಕೆಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಿದೆ. ಇಬ್ಬರು ಸದಸ್ಯನ್ನೊಳಗೊಂಡ ನ್ಯಾಯಪೀಠವು ತನ್ನ ಆದೇಶದಲ್ಲಿ "ಆದಿವಾಸಿ ಜನಾಂಗದವರನ್ನು ಬಲವಂತದಿಂದ ಅಥವಾ ಆಮಿಷದಿಂದ ಮತಾಂತರ ಮಾಡದಂತೆ ತಡೆಯುವ ಉದ್ದೇಶದಿಂದ ಗ್ರಾಮಪಂಚಾಯತ್‌ಗಳು ಹಾಕಿರುವಂತಹ ಭಿತ್ತಿಪತ್ರಗಳನ್ನು ಅಸಾಂವಿಧಾನಿಕ ಎಂದು ಹೇಳುವಂತಿಲ್ಲ. ದೇಶೀ ಆದಿವಾಸಿ ಪಂಗಡಗಳ ಹಿತಾಸಕ್ತಿಯನ್ನು ಮತ್ತು ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಇಂತಹ ಭಿತ್ತಿಪತ್ರಗಳನ್ನು ಹಾಕಿರುವಂತೆ ತೋರುತ್ತದೆ" ಎಂದು ಹೇಳಿತು.

ಮತಾಂತರದ ಕುರಿತಂತೆಯೂ ಹೈಕೋರ್ಟ್ ಹಲವು ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. "ಧಾರ್ಮಿಕ ಮತಾಂತರಗಳು ಬಹುಕಾಲದಿಂದಲೇ ಭಾರತದ ಸಾಮಾಜಿಕ-ರಾಜಕೀಯ ಪರಿಸರದಲ್ಲಿ ಅತ್ಯಂತ ಸೂಕ್ಷ್ಮ ಸಂವೇದಿ ವಿಷಯಗಳಾಗಿವೆ. ಕ್ರೈಸ್ತ ಮಿಷನರಿಗಳು ಬಡ ಮತ್ತು ಅನಕ್ಷರಸ್ಥ ಆದಿವಾಸಿಗಳನ್ನು ಮತ್ತು ಗ್ರಾಮೀಣ ಪ್ರದೇಶದ ಜನರನ್ನು ಮತಾಂತರ ಮಾಡುವ ವಿಷಯಗಳು ಬಹಳಷ್ಟು ವಿವಾದಗಳನ್ನು ಸೃಷ್ಟಿಸಿದೆ. ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಧರ್ಮವನ್ನು ಆಚರಿಸುವ ಮತ್ತು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನೀಡಿದೆಯಾದರೂ ಈ ಸ್ವಾತಂತ್ರ್ಯವನ್ನು ಬಲಪ್ರಯೋಗ, ಆಮಿಷ ಮತ್ತು ವಂಚನೆಯಿಂದ ದುರುಪಯೋಗ ಮಾಡುತ್ತಿರುವ ಬಹಳಷ್ಟು ಪ್ರಸಂಗಗಳು ಸಂಭವಿಸಿವೆ. ಇದು ಅತ್ಯಂತ ಕಳವಳಕಾರಿ ವಿಷಯವಾಗಿದೆ.ಸಾಮೂಹಿಕ ಮತಾಂತರ ಅಥವಾ ಉದ್ದೇಶಪೂರಿತ ಮತಾಂತರ ಕಾರ್ಯಗಳು ಸಾಮಾಜಿಕ ಸೌಹಾರ್ದತೆಯನ್ನು ಹಾಳುಗೆಡಹುವುದಷ್ಟೇ ಅಲ್ಲದೇ ದೇಶೀ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಗೆ ದೊಡ್ಡ ಸವಾಲೂ ಆಗಿದೆ" ಎಂದು ಹೈಕೋರ್ಟ್ ಅಭಿಪ್ರಾಯಿಸಿದೆ.

> ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಎಂದರೆ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವೆಂದು ಅರ್ಥವಲ್ಲ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

"ಭಾರತದಲ್ಲಿ ವಸಹಾತುಶಾಹಿ ಕಾಲದಿಂದಲೇ ಮಿಷನರಿ ಚಟುವಟಿಕೆಗಳು ನಡೆಯುತ್ತಿವೆ. ಕ್ರೈಸ್ತ ಸಂಘಟನೆಗಳು ಶಾಲೆ, ಆಸ್ಪತ್ರೆ ಸ್ಥಾಪಿಸಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವನ್ನು ಆರಂಭದಲ್ಲಿ ಸಾಮಾಜಿಕ ಏಳಿಗೆ, ಸಾಕ್ಷರತೆ ಉದ್ದೇಶಕ್ಕಾಗಿ ಬಳಸಿಕೊಂಡರೂ ನಂತರ ಕಾಲಕ್ರಮೇಣ ಇದೇ ವೇದಿಕೆಯನ್ನು ಮತಾಂತರ ಉದ್ದೇಶಗಳಿಗಾಗಿ ಬಳಸಿಕೊಂಡಿವೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳು, ಅದರಲ್ಲಿಯೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಉತ್ತಮ ಜೀವನ ನಿರ್ವಹಣೆ ಮತ್ತು ಸಮಾನತೆಯ ಆಮಿಷಕ್ಕೊಳಗಾಗಿ ದೊಡ್ಡ ಪ್ರಮಾಣದಲ್ಲಿ ಮತಾಂತರಗೊಂಡಿದ್ದಾರೆ. ಒಂದು ಕಾಲದಲ್ಲಿ ಸೇವೆಯೆಂದು ಕಂಡು ಬಂದ ಮಿಷನರಿಗಳ ಕಾರ್ಯಗಳು ಬಳಿಕ ಧಾರ್ಮಿಕ ಮತಾಂತರ ಮತ್ತು ಧಾರ್ಮಿಕ ವಿಸ್ತರಣೆಗೆ ಸಾಧನವಾಗಿ ಬಳಸಲ್ಪಟ್ಟಿವೆ" ಎಂದು ನ್ಯಾಯಾಲಯ ಹೇಳಿತ್ತು.

"ಮತಾಂತರವೆಂಬುದು ಒಬ್ಬನ ವೈಯಕ್ತಿಕ ನಂಬಿಕೆಯಿಂದ ನಡೆಯುವ ಬದಲಾಗಿ, ಆಮಿಷ, ಶೋಷಣೆ ಮತ್ತು ಆತನ ದೌರ್ಬಲ್ಯದ ದುರುಪಯೋಗದಿಂದ ನಡೆಯುವಾಗ ಅದು ಪಿಡುಗಾಗಿ ಬದಲಾಗುತ್ತದೆ. ಕೆಲವು ಆದಿವಾಸಿ ಪ್ರದೇಶಗಳಲ್ಲಿ ಮಿಷನರಿಗಳು ಅನಕ್ಷರಸ್ಥ ಮತ್ತು ಬಡ ಕುಟುಂಬಗಳನ್ನೇ ಗುರಿಯಾಗಿಸಿಕೊಂಡು ಅವರಿಗೆ ಹಣದ ಮತ್ತು ಉಚಿತ ಶಿಕ್ಷಣದ ಆಮಿಷವೊಡ್ಡಿ ಅವರನ್ನು ಮತಾಂತರಗೊಳಿಸಿದ್ದಾರೆ. ಮತಾಂತರವಾದರೆ ಮಾತ್ರ ಇಂತಹ ಸೌಲಭ್ಯ ನೀಡುವುದಾಗಿ ಅವರು ಹೇಳುತ್ತಿದ್ದಾರೆ. ಇಂತಹ ಕ್ರಮಗಳು ಇಚ್ಛಿತ ಧಾರ್ಮಿಕ ನಂಬಿಕೆಯನ್ನು ಅನುಸರಿಸುವ ಸ್ಫೂರ್ತಿಗೆ ವಿರುದ್ಧವಾಗಿವೆ ಹಾಗೂ ಇದು ಸಾಂಸ್ಕೃತಿಕ ಬಲಪ್ರಯೋಗವೆಂದೇ ಭಾವಿಸಬೇಕಾಗುತ್ತದೆ. ಈ ಪ್ರಕ್ರಿಯೆಗಳು ಆದಿವಾಸಿ ಪಂಗಡಗಳೊಳಗೇ ಸಾಮಾಜಿಕ ವಿಭಜನೆಗಳಿಗೆ ಕಾರಣವಾಗಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಆದಿವಾಸಿಗಳು ನೂತನ ಸಾಂಸ್ಕೃತಿಕ ಆಚರಣೆಗಳಲ್ಲಿ ತೊಡಗಿಕೊಂಡಿರುವ ಹಾಗೂ ತಮ್ಮ ಮೂಲ ಪಾರಂಪರಿಕ ಆಚರಣೆಗಳಿಂದ ಮತ್ತು ಉತ್ಸವಗಳಿಂದ ದೂರ ಸರಿದಿರುವ ನಿದರ್ಶಗಳು ಕಂಡುಬಂದಿವೆ. ಈ ಕಾರಣದಿಂದಾಗಿ ಗ್ರಾಮಗಳು ಎರಡು ವರ್ಗಗಳಾಗಿ ಧ್ರುವೀಕರಣಗೊಂಡಿವೆ. ಇಂತಹ ಗ್ರಾಮಗಳಲ್ಲಿ ಉದ್ವಿಗ್ನತೆ ಹೆಚ್ಚಿದೆ. ಸಾಮಾಜಿಕ ಬಹಿಷ್ಕಾರ, ಸಂಘರ್ಷಗಳೂ ನಡೆದಿವೆ" ಎಂದು ನ್ಯಾಯಾಲಯವು ನುಡಿದಿದೆ.

25ನೇ ವಿಧಿ ಮತ್ತು ಮತಾಂತರ

ಮತಾಂತರ ವಿರೋಧಿ ಕಾನೂನುಗಳನ್ನು ಟೀಕಿಸುವ ಜನರು ಇದು ಸಂವಿಧಾನದ 25ನೇ ವಿಧಿಯ ಉಲ್ಲಂಘನೆ ಎಂದು ವಾದಿಸುತ್ತಾರೆ. ಸಂವಿಧಾನದ ಪ್ರಕಾರ ಪ್ರತಿಯೊಬ್ಬರಿಗೂ ತಮ್ಮದೇ ಆದ ಧಾರ್ಮಿಕ ವಿಧಿಗಳನ್ನು ಅನುಸರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವಿದೆಯೆಂದು ಅವರು ಪ್ರತಿಪಾದಿಸುತ್ತಾರೆ. ಆದರೆ ಈ ವಿಷಯವನ್ನು 5 ದಶಕಗಳ ಹಿಂದೆಯೇ ಸುಪ್ರೀಂಕೋರ್ಟ್ ಇತ್ಯರ್ಥಪಡಿಸಿದೆ. ಛತ್ತೀಸ್‌ಗಢ ಹೈಕೋರ್ಟ್ ಕೂಡಾ ಈ ವಿಷಯದಲ್ಲಿ ಕೆಲವು ಉಲ್ಲೇಖಗಳನ್ನು ಮಾಡಿದ್ದು, ರೆವೆರೆಂಡ್ ಸ್ಟಾನಿಸ್ ಲಾಸ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಅಂಶಗಳನ್ನು ಉಲ್ಲೇಖಿಸಿದೆ. ಈ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಧಾರ್ಮಿಕ ಮತಾಂತರದ ಹಕ್ಕು ಒಂದು ಮೂಲಭೂತ ಹಕ್ಕು ಹೌದೇ ಎಂಬುದನ್ನು ವಿವೇಚಿಸಿತ್ತು.

ಸು.ಕೋರ್ಟ್ ರೆ. ಸ್ಟಾನಿಸ್‌ಲಾಸ್ ಮತ್ತು ಮಧ್ಯಪ್ರದೇಶ ಸರಕಾರದ ನಡುವಿನ ಪ್ರಕರಣದಲ್ಲಿ ಈ ತೀರ್ಪು ನೀಡಿತ್ತು. 1977ರಲ್ಲಿ ರೆ. ಸ್ಟಾನಿಸ್ ಲಾಸ್ ಅವರು ಮಧ್ಯಪ್ರದೇಶ ಮತ್ತು ಒಡಿಸ್ಸಾದ 'ಮತಾಂತರ ನಿಷೇಧ ಕಾನೂನ'ನ್ನು ಪ್ರಶ್ನಿಸಿ ಕೋರ್ಟಿಗೆ ಹೋಗಿದ್ದರು. ಈ ಕಾನೂನು ಸಂವಿಧಾನದ 25ನೇ ವಿಧಿಯಲ್ಲಿ ಕೊಡಮಾಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸುತ್ತದೆ ಎಂಬುದು ಅವರ ವಾದವಾಗಿತ್ತು. ಇದಕ್ಕುತ್ತರವಾಗಿ ಸುಪ್ರೀಂಕೋರ್ಟ್ "ಧಾರ್ಮಿಕತೆಯನ್ನು ಪ್ರಚುರಪಡಿಸುವ ಹಕ್ಕು ಎಂದರೆ ಒಬ್ಬನನ್ನು ತನ್ನ ಧರ್ಮಕ್ಕೆ ಮತಾಂತರ ಮಾಡಲು ಇರುವ ಹಕ್ಕು ಎಂಬುದಾಗಿ ಅರ್ಜಿದಾರರು ವಾದಿಸುತ್ತಿದ್ದಾರೆ. ಆ ಮೂಲಕ ಅವರು ಮತಾಂತರ ಮಾಡುವುದು ಸಂವಿಧಾನದ 25ನೇ ವಿಧಿ ನೀಡಿರುವ ಸ್ವಾತಂತ್ರ್ಯ ಎಂಬುದಾಗಿಯೂ ವಾದಿಸುತ್ತಿದ್ದಾರೆ. ಈ ವಿಷಯದಲ್ಲಿ ನಾವು ಸ್ಪಷ್ಟಪಡಿಸುವುದೇನೆಂದರೆ ಸಂವಿಧಾನದ 25ನೇ ವಿಧಿಯಲ್ಲಿ ನೀಡಲಾಗಿರುವ 'ಧಾರ್ಮಿಕತೆ ಪ್ರಚುರಪಡಿಸುವ ಹಕ್ಕು' ಎಂದರೆ ಅದು ಇನ್ನೊಬ್ಬರನ್ನು ಮತಾಂತರ ಮಾಡಲು ನೀಡಲಾಗಿರುವ ಸ್ವಾತಂತ್ರ್ಯ ಎಂದಲ್ಲ. ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬರಿಗೂ ಅವರ 'ಅಸ್ಮಿತೆಯ ಸ್ವಾತಂತ್ರ್ಯ'ವನ್ನು ನೀಡಿದೆಯೇ ಹೊರತು, ಕೇವಲ ಒಂದು ಧರ್ಮವನ್ನು ಅನುಸರಿಸುವುದಷ್ಟೇ ಒಬ್ಬಾತನ ಹಕ್ಕಲ್ಲ. ಆದ್ದರಿಂದ ಒಬ್ಬ ವ್ಯಕ್ತಿ ತಾನಾಗಿ ಬೇರೆ ಧರ್ಮಕ್ಕೆ ಮತಾಂತರ ಮಾಡುವುದನ್ನು ಸಮರ್ಥಿಸಬಹುದಾದರೂ, ಇನ್ನೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ತನ್ನ ಧರ್ಮಕ್ಕೆ ಮತಾಂತರವಾಗುವಂತೆ ಪ್ರೇರೇಪಿಸುವಂತಿಲ್ಲ. ಹಾಗಾಗಿ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವನ್ನು ಸಂವಿಧಾನವು ನೀಡಿಲ್ಲ. ಹಾಗೆ ಮಾಡುವುದು ಒಬ್ಬಾತನ ಅಸ್ಮಿತೆಯ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಂತೆ " ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿತ್ತು.

ಈ ಹಿನ್ನೆಲೆಯಲ್ಲಿ ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳ ಗ್ರಾಮಗಳು ತಮ್ಮ ಧಾರ್ಮಿಕ ಮತ್ತು ಪಾರಂಪರಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಕ್ರೈಸ್ತ ಮಿಷನರಿಗಳು ತಮ್ಮ ಗ್ರಾಮಗಳಿಗೆ ಪ್ರವೇಶಿಸದಂತೆ ನಿರ್ಬಂಧ ಹೇರುವ ಭಿತ್ತಿಪತ್ರಗಳನ್ನು ಹಾಕಿರುವುದು ಸರಿಯಾಗಿಯೇ ಇದೆ. ಆಮಿಷ ಮತ್ತು ಬಲಾತ್ಕಾರದಿಂದ ಮತಾಂತರ ಮಾಡುವುದು ತಪ್ಪೆಂಬುದನ್ನು ಈಗ ನ್ಯಾಯಾಲಯವೂ ಎತ್ತಿ ಹಿಡಿದಂತಾಗಿದೆ.

ನೌಕರಿ ಕ್ರಾಂತಿಗೆ ಸಿಕ್ಕ ದೊಡ್ಡ ಜಯ

ಪೃಥ್ವಿ ರಾಜ್ ಕುಲಕರ್ಣಿ

ಧಾರವಾಡದಲ್ಲಿ ನಿಬ್ಬೆರಗಾಗಿಸುವ ಪ್ರತಿಭಟನೆಯೊಂದು ನಡೆದಿದೆ. ದೇಶದ ವ್ಯವಸ್ಥೆಯನ್ನೇ ಗಾಬರಿಗೊಳಿಸಿದೆ. ಇದು ಒಂದು ಧರ್ಮಕ್ಕೆ, ಜಾತಿಗೆ ಅಥವಾ ಪ್ರಾಂತ್ಯಕ್ಕೆ ಸೀಮಿತವಾಗಿರದ ಹೋರಾಟವಾಗಿದ್ದು ರಾಜಕಾರಣಕ್ಕೆ ದೊಡ್ಡ ಪ್ರಶ್ನೆಯಾಗಿದೆ. ಇಷ್ಟು ದಿನ ತಮ್ಮ ಮೀಸಲಾತಿಗಾಗಿಯೋ, ತಮ್ಮ ಧರ್ಮದ ಹೋರಾಟದಲ್ಲೋ ಇದೇ ಯುವಕರು ಕಾಣಿಸಿಕೊಳ್ಳುತ್ತಿರುವಾಗ ಅವರ ಬಾಯಿ ಮುಚ್ಚಿಸಲು ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳುತ್ತಿತ್ತು. ಆಶ್ವಾಸನೆ, ಭರವಸೆಗಳನ್ನು ನೀಡುತ್ತಿತ್ತು. ಈಗ ಅವರ ಹೋರಾಟದ ಬಳಿಕ, ಸರ್ಕಾರ ಎಚ್ಚೆತ್ತು ಇತ್ತೀಚೆಗಷ್ಟೇ ನಡೆದ ಸಚಿವ ಸಂಪುಟ ಸಭೆಯಲ್ಲಿ 52 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಿರ್ಧಾರ ತೆಗೆದುಕೊಂಡು ಘೋಷಣೆಯನ್ನೂ ಮಾಡಿದೆ. ಹೀಗಾಗಿ, ಯುವಕರ ಹೋರಾಟಕ್ಕೆ ಒಂದು ಬಲ ಬಂದಂತಾಗಿದೆ.

ನಮ್ಮ ಶಾಲೆಗಳಲ್ಲಿ ಸರ್ಕಾರಿ ಹುದ್ದೆಗಳ ಬಗ್ಗೆ ಅಚ್ಚುಕಟ್ಟಾಗಿ ಅರಿವು ಮೂಡಿಸಲಾಗಿದೆ. ಸರ್ಕಾರಿ ನೌಕರರಿಗೆ ದೇಶದಲ್ಲಿ ಸಿಗುವ ಗೌರವ, ಘನತೆ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಆ ಹುದ್ದೆಗೆ ಸರಿಸಾಟಿಯೇ ಇಲ್ಲ. ಯಾವ ದುಡ್ಡಿನಿಂದಲೂ ತುಲನೆ ಮಾಡಲಾಗದ ಶಕ್ತಿ ಸರ್ಕಾರಿ ಅಧಿಕಾರಿಗಳಿಗಿದೆ. ನೌಕರಿ ಪಡೆದುಕೊಂಡರೆ ಅದೇ ಜೀವನದಲ್ಲಿ ಮಾಡಬಹುದಾದ ದೊಡ್ಡ ಸಾಧನೆ ಎಂದು ಹೇಳಲಾಗಿತ್ತು. ಆದರೆ ಸರ್ಕಾರ ಅಂತಹ ಹುದ್ದೆಗಳನ್ನು ಮುಚ್ಚಿಟ್ಟುಕೊಂಡಿರುವ ವಿಚಾರ ಬಹಿರಂಗವಾಗಿ ಹೊರಬೀಳುತ್ತಿದೆ. ಇದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ.

ಸರ್ಕಾರಿ ಪರೀಕ್ಷೆ ಮತ್ತು ಭರ್ತಿ ಮಾಡಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ದೊಡ್ಡ ಕತೆಗಳಿವೆ. ಆ ಕತೆಗಳಿಗೆ ಪಿಎಸ್‌ಐ ಹಗರಣದಂತಹ ದೊಡ್ಡ ತಿರುವುಗಳಿವೆ. ಕರಾರುವಕ್ಕಾಗಿ ನಮಗೆ ಸರ್ಕಾರಿ ಹುದ್ದೆಗಳೇ ಬೇಕು, ಬೇರೆ ಪ್ರಯತ್ನಗಳನ್ನೇ ನಾವು ಮಾಡಲ್ಲ ಎಂಬುವವರು ಕರ್ನಾಟಕದಲ್ಲಿ ತುಂಬಿದ್ದಾರೆ. ಆದರಲ್ಲೂ ಉತ್ತರ ಕರ್ನಾಟಕಕ್ಕೆ ಹೋದರೆ ಅಂಥವರು ಮನೆಗೊಬ್ಬರು ಸಿಗುತ್ತಾರೆ. ಧಾರವಾಡದಂತಹ ನಗರಗಳಲ್ಲಿ ಸ್ಪರ್ಧಾತ್ಮಕ ಸಂಸ್ಥೆಗಳ ಭರಾಟೆಯೇ ಇದೆ.

ಆದರೆ ಮತ್ತೊಂದು ದಿಕ್ಕಿನಲ್ಲಿ ನೋಡಿದರೆ ವರ್ಷಾನುಗಟ್ಟಲೆ ಅಧಿಸೂಚನೆಗಳೇ ಬರುತ್ತಿಲ್ಲ. ಭರ್ತಿಯಾಗುತ್ತಿಲ್ಲ ಎಂಬ ಆರೋಪಗಳಿದ್ದವು. ಹೀಗಾಗಿ ನಮ್ಮಲ್ಲಿ ನೌಕರಿ ಕ್ರಾಂತಿಯಾಗುವುದು ಅನಿವಾರ್ಯವಾಗಿತ್ತು. ಸರ್ಕಾರಿ ನೌಕರಿಯನ್ನು ಹುಡುಕಿಕೊಂಡು ಹೋಗುವವರ ಸಂಖ್ಯೆ ನಮ್ಮಲ್ಲಿ ಜಾಸ್ತಿ. ಉತ್ತರ ಕರ್ನಾಟಕದಲ್ಲಿ ತೀರಾ ಹೆಚ್ಚು. ನಮ್ಮೂರಿನವ ಸಾಹೇಬನಾದನಂತೆ ಎಂಬುದೇ ಅವರಿಗೆ ದೊಡ್ಡ ಸಂಭ್ರಮ. ಅಂತಹ ದೊಡ್ಡ ಕನಸು ಮುರಿದು ಬಿದ್ದಾಗ ಅಲ್ಲಿ ಹತಾಶೆ ಸೃಷ್ಟಿಯಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ಸಾಹ, ರೂಢಿ ಮತ್ತು ಕ್ರಿಯಾಶೀಲತೆ ಅಂಥವರನ್ನು ಬೇರೊಂದು ಉದ್ಯೋಗ ಮಾಡಲು ಮನಸ್ಸಿಲ್ಲದಂತೆ ಮಾಡುತ್ತದೆ. ಹೀಗಾದಾಗ ಸಹಜವಾಗಿ ಅಲ್ಲಿ ನಿರುದ್ಯೋಗ ಹುಟ್ಟುತ್ತದೆ. ಇದೇ ನಿರುದ್ಯೋಗವೇ ಆ ಆಕಾಂಕ್ಷಿಗಳ ಮೂಲಕ ಧರ್ಮದ ಹೆಸರಲ್ಲೋ, ಜಾತಿಯ ಹೆಸರಲ್ಲೋ ಅಥವಾ ಇನ್ನ್ಯಾವುದೋ ವಿಚಾರಗಳಲ್ಲಿ ಗದ್ದಲಗಳನ್ನು ಮಾಡುವವರನ್ನು ಹುಟ್ಟಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಡಿಗ್ರಿ ಮುಗಿಸಿಕೊಂಡು ಕೂತ ವಿದ್ಯಾರ್ಥಿಗಳ ಮುಂದೆ ಎರಡು ಆಯ್ಕೆಗಳಿರುತ್ತವೆ. ಸರ್ಕಾರಿ ನೌಕರಿಗಾಗಿ ಓದಿಕೊಳ್ಳುವುದು, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವುದು. ಡಿಗ್ರಿ ಮುಗಿಸಿ, ಕೆಎಎಸ್, ಐಎಎಸ್ ಮುಂತಾದ ಕುರಿತ ಕೋಚಿಂಗ್ ಮುಗಿಸಿಕೊಂಡು ತಮ್ಮ ಮನೆಯಲ್ಲಿ ಓದಿಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ವರ್ಷಾನುಗಟ್ಟಲೇ ಭರ್ತಿಗಾಗೇ ಕಾಯುವುದು ದೊಡ್ಡ ಸವಾಲು. ನೋಟಿಫಿಕೇಶನ್‌ಗಳು ಬಂದಾಗ, ವಿದ್ಯಾರ್ಥಿಗಳಿಗೆ ಮೀಸಲಾತಿ ಅಡ್ಡಗೋಡೆಯಾಗಿ ತಡೆಯೊಡ್ಡುತ್ತದೆ. ಅಂತಹದ್ದೇ ಕೆಲವು ವಿದ್ಯಾರ್ಥಿಗಳು ತಮ್ಮ ಕುಟುಂಬಕ್ಕೆ ಸಂಬಂಧಿಸಿದ ವ್ಯಾಪಾರಕ್ಕೆ ಬೀಳುತ್ತಾರೆ. ಕೆಲಸ-ಮನೆ ಮಾಡುವಷ್ಟರಲ್ಲಿ ರಾಜಕೀಯ ಲಾಭಗಳು ಅವರನ್ನು ಸೆಳೆಯುತ್ತವೆ. ಇದು ನಿರುದ್ಯೋಗ ಹೆಚ್ಚಿಸುತ್ತದೆ, ದಾಂದಲೆಗಳನ್ನು ಹೆಚ್ಚಿಸುತ್ತದೆ. ಅಂಥವರನ್ನು ನಮ್ಮ ರಾಜಕಾರಣಿಗಳು ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಾರೆ.

ಇನ್ನು ಖಾಸಗಿ ನೌಕರಿಯ ವಿಚಾರಕ್ಕೆ ಬಂದರೆ, ಮಧ್ಯಮ ವರ್ಗದ ಯುವಕರು ತಮ್ಮ ಡಿಗ್ರಿ ಮುಗಿಸಿಕೊಂಡ ತಕ್ಷಣಕ್ಕೆ ಬೆಂಗಳೂರಿಗೆ ಹೊರಟುತ್ತಾರೆ. ನ ಖಾಸಗಿ ಉದ್ಯೋಗ ಮಾಡುವುದಕ್ಕಾಗಿ ತನ್ನೊಂದಿಗೆ ಡಿಗ್ರಿ ಸರ್ಟಿಫಿಕೇಟ್ ತರುವ ಆ ಯುವಕರಿಗೆ ಬೆಂಗಳೂರಿನ ತುಂಬಾ ಆವರಿಸಿಕೊಂಡಿರುವ ಉತ್ತರ ಭಾರತೀಯರು ತೀರಾ ತಲೆ ಕೆಡಿಸುತ್ತಾರೆ. ನಮ್ಮ ಯುವಕರ ನೌಕರಿ ನುಂಗಿ ಹಾಕಿದ್ದಾರೆ. ಅದಕ್ಕೊಂದು ಮಿತಿಯೇ ಇಲ್ಲ. ಅದರ ಬಗ್ಗೆ ದನಿ ಎತ್ತುವವರೂ ಇಲ್ಲ. ಇದೆ ಕಾರಣದಿಂದ ಯಾವುದೋ ಒಂದು ಕಂಪನಿಯ (ಸಾಹೇಬ್) ಆಗಬೇಕೆಂಬ ಯುವಕರ ಕನಸು ಬೆಂಗಳೂರಿನಲ್ಲಿ ತಲೆಗೂದಲಿನ ಜತೆಗೆ ಉದುರಿ ಹೋಗುತ್ತದೆ. ಸ್ವಂತ ರಾಜ್ಯದ ಕಂಪನಿಯನ್ನು ಆಳುವ ಕನ್ನಡಿಗರಿಗಿಂತ ಹಿಂದಿ ಮಾತನಾಡುವ ನಾರ್ತಿಗಳ ಕೆಳಗೆ ದುಡಿಯುವವರೇ ಹೆಚ್ಚಾಗಿದ್ದಾರೆ. ದೊಡ್ಡ ಕಂಪನಿಗಳಲ್ಲಿ ಕೆಲಸ ಬೇಕಾದರೆ ರೆಫರನ್ಸ್ ಬೇಕೇಬೇಕು. ರೆಫರನ್ಸ್ ನಮ್ಮವರಿಗೆ ಬೇರೆ ರಾಜ್ಯದವರಿಗೆ ಯಾಕೆ ಕೊಟ್ಟಾರು? ಹಾಗೆಯೇ ಕ್ಯಾಂಪಸ್‌ನಲ್ಲಿ ಅವಕಾಶ ಸಿಗುವುದು ತೀರಾ ಕಷ್ಟ. ವಾಕಿನ್ ಮೂಲಕ ನೌಕರಿ ಪಡೆಯಲಿಕ್ಕೆ ಬೆಂಗಳೂರಿಗೆ ಬಂದವರಿದ್ದಾರೆ. ಆದರೆ ಅಲ್ಲಿ ಸಂದರ್ಶನ ತೆಗೆದುಕೊಳ್ಳುವವರು ನಾರ್ತಿಗಳು!. ಕರವೇ ಅಂತಹ ಕನ್ನಡ ಪರ ಸಂಘಟನೆಗಳು ಕನ್ನಡ ಮಾತನಾಡದಿರುವುದಕ್ಕೆ ಅವರನ್ನು ಥಳಿಸಿರುತ್ತಾರೆ. ಇದೆ ಸಿಟ್ಟು ಇಟ್ಟುಕೊಂಡ ಅವರು ಕನ್ನಡ ಮಾತನಾಡುವ ಅಭ್ಯರ್ಥಿಗಳು ಕಾಣಿಸಿಕೊಂಡರೆ ಸಾಕು ತಳ್ಳಿ ಹಾಕುತ್ತಾರೆ. ಥಳಿಸಲು ಬರುವ ಕನ್ನಡಪರ ಸಂಘಟನೆಗಳು ನೌಕರಿ ಕ್ರಾಂತಿಗೆ ಬಂದರಾ? ಊಹುಂ ಇಲ್ಲ!.

ಬೆಂಗಳೂರಿನಲ್ಲಿರುವ ಐಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು ಎನ್ನುವ ವಿಚಾರ ಹೊಸದೇನಲ್ಲ. ಹಿಂದೆ ನಮ್ಮ ಸರ್ಕಾರ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗಾಗಿ ಮೀಸಲಾತಿ ನೀಡುತ್ತೇವೆ ಎಂಬ ಘೋಷಣೆ ಮಾಡಿದ್ದರು. ಆದರೆ ಹಠಾತ್ ನಿಲುವು ಬದಲಿಸಿ ಕೆಲವು ದಿನಗಳಲ್ಲಿ ಚರ್ಚಿಸಿ ಮಾತನಾಡುತ್ತೇವೆ ಎಂದು ಸಮಯ ಕೇಳಿತ್ತು. ದುರಾದೃಷ್ಟವಶಾತ್ 2 ವರ್ಷವಾದರೂ ಆ ಸಮಯ ಮುಗಿದೆ ಇಲ್ಲ! ನೌಕರಿ ಕ್ರಾಂತಿಯಾಗಬೇಕಿರುವುದಕ್ಕೆ ಹತ್ತಾರು ಕಾರಣಗಳಿವೆ. ಧಾರವಾಡದ ಪ್ರತಿಟನೆ ಸರ್ಕಾರಿ ಹುದ್ದೆಗಳಿಗಷ್ಟೇ ಸೀಮಿತವಾಗದೆ ಖಾಸಗಿ ವಿಚಾರದಲ್ಲೂ ದನಿಯಾಗಬೇಕು. ಒಟ್ಟಿನಲ್ಲಿ ನಮ್ಮ ಯುವಕರಿಗೆ ನೌಕರಿ ಸಿಗಬೇಕು. ಇಲ್ಲವಾದರೆ ಅನಾಹುತವಾದೀತು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ನೇತೃತ್ವದಲ್ಲಿ ಶಂಕುಸ್ಥಾಪನೆ | ಮಾಜಿ ಸಚಿವ ಸೊರಕೆ ವಿರೋಧ | ಜಿಲ್ಲಾಡಳಿತದಿಂದ ನಿಷೇಧಾಜ್ಞೆ !

ರಾಜಕೀಯ ಮೇಲಾಟಕ್ಕೆ ಸಿಲುಕಿದ 'ಉಡುಪಿ ಕಂಬಳ'

ಹಿರಿಯಡ್ಕ: ಪ್ರ.25 ರಂದು ಕಾಪು ವಿಧಾನಸಭಾ ಕ್ಷೇತ್ರದ 80 ಬಡಗುಬೆಟ್ಟಿನಲ್ಲಿ ರಾಜ್ಯ ಕಂಬಳ ಸಮಿತಿ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿಯವರ ನೇತೃತ್ವದಲ್ಲಿ ನಿರ್ಧಾರವಾದ ಕಂಬಳಕ್ಕೆ ಕಾಂಗ್ರೆಸಿನ ಮಾಜಿ ಶಾಸಕ ವಿನಯ್ ಕುಮಾರ್ ಸೊರಕೆಯವರ ತೀವ್ರ ವಿರೋಧ ಹಾಗೂ ಜಿಲ್ಲಾಡಳಿತದ ನಿಷೇಧಾಜ್ಞೆಯ ನಡುವೆಯೂ ಶನಿವಾರ, ಪೂರ್ವ ನಿಗದಿಯಂತೆ ಶಂಕುಸ್ಥಾಪನೆ ನೆರವೇರಿತು.

'ಉಡುಪಿ ಕಂಬಳ' ಎಂಬ ಹೆಸರಿನೊಂದಿಗೆ 6.30 ಎಕರೆ ಸರಕಾರಿ ಭೂಮಿಯಲ್ಲಿ ನಿಗದಿಯಾಗಿರುವ ಕಂಬಳಕ್ಕೆ ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷರಾಗಿದ್ದಾರೆ. ಹೀಗಾಗಿ ಶನಿವಾರ (ಫೆ.28) ನಿಗದಿಪಡಿಸಿದ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಮಾಜಿ ಶಾಸಕ ವಿನಯ್ ಕುಮಾರ್ ಸೊರಕೆ ಆಕ್ಷೇಪ ವ್ಯಕ್ತಪಡಿಸಿ, ಮಾ.4 ರಂದು ಶಂಕುಸ್ಥಾಪನೆ ಎಂದು ಪೋಸ್ಟರ್ ಬಿಡುಗಡೆಗೊಳಿಸಿದ್ದರು. ಈ ಗೊಂದಲದಿಂದಾಗಿ ಜಿಲ್ಲಾಡಳಿತ ಶನಿವಾರ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿತ್ತು.

ಶಂಕುಸ್ಥಾಪನೆ

ನಿಗದಿಯಂತೆ ಕೋಟಿ ಚೆನ್ನಯ್ಯ ಜೋಡುಕೆರೆ ಕಂಬಳ ಸಮಿತಿಯ ಅಧ್ಯಕ್ಷ ಗುರ್ಮೆ ಸುರೇಶ್ ಶೆಟ್ಟಿ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು. ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಪೋಸ್ಟರ್ ಅನಾವರಣಗೊಳಿಸಿದರು.

ಕ್ಷೇತ್ರಕ್ಕೆ ಸೊರಕೆ ನಿರಂತರ ಕಿರುಕುಳ

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ನಾವು ಪಕ್ಷಾತೀತವಾಗಿ ಕಂಬಳದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿದ್ದೆವು. ಆದರೆ ಮಾ.4 ರಂದು ಶಂಕುಸ್ಥಾಪನೆಗೆ ದಿನಾಂಕ ನಿಗದಿಯಾಗಿರುವುದಾಗಿ ಜಿಲ್ಲಾಡಳಿತದಿಂದ ಸಂದೇಶ ಬಂದಿತು. ಮುಹೂರ್ತ ಯಾರನ್ನೂ ಕಾಯುವುದಿಲ್ಲ, ಸಂಘರ್ಷ ಬೇಡ. ಇದರಲ್ಲಿ ನಾವು ರಾಜಕೀಯ ಮಾಡಲ್ಲ. ಆದರೆ ರಾಜಕೀಯ ಆಗುತ್ತಿದೆ ಎಂದರು.

ನಾವು ರಾಜಕೀಯ ಹೊರತುಪಡಿಸಿ ಕಾಂಗ್ರೆಸಿನ ನಾಯಕರನ್ನು ಒಳಗೊಂಡಂತೆ ಅದ್ದೂರಿಯಾಗಿ ಕಂಬಳ ನಡೆಸಲು ತೀರ್ಮಾನಿಸಿದ್ದೆವು. ಈಗಾಗಲೇ ನಾನು ಹಾಗೂ ನನ್ನ ಸ್ನೇಹಿತರು ಸುಮಾರು ರೂ. 60 ಲಕ್ಷ ಖರ್ಚು ಮಾಡಿದ್ದೇವೆ. ಸುಮಾರು ರೂ. 2.50 ಕೋಟಿ ಖರ್ಚು ಅಂದಾಜಿಸಲಾಗಿದೆ. ಇದು ಕ್ಷೇತ್ರದ ಜನತೆಗೋಸ್ಕರ ಮಾಡುತ್ತಿರುವ ಹಬ್ಬ. ಆದರೆ ಇದಕ್ಕೆ ವಿನಯ್ ಕುಮಾರ್ ಸೊರಕೆಯವರು ವಿಘ್ನ ತರುತ್ತಿದ್ದಾರೆ ಎಂದರು.

ಕಾಪು ಕ್ಷೇತ್ರದಲ್ಲಿ 3 ಅಂಗನವಾಡಿ ಉದ್ಘಾಟನೆಗೆ ನನ್ನನ್ನು ಆಹ್ವಾನಿಸಿದ್ದಾರೆ. ನಂತರ ಉದ್ಘಾಟನೆಗೆ ಅಧಿಕಾರಿಗಳು ಬರುತ್ತಾರೆ ಎಂದರು. ಸೊರಕೆಯವರ ಬ್ಯಾನರ್ ಊರು ತುಂಬಾ ಇತ್ತು. ಇದೇ ರೀತಿ ಅಂಜಾರಿನಲ್ಲಿ ರೂ. 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಕಾರ್ಮಿಕ ಭವನ ಉದ್ಘಾಟನೆಗೆ ಸಚಿವ ಸಂತೋಷ್ ಲಾಡ್ ಅವರನ್ನು ಆಹ್ವಾನಿಸಿದ್ದೆ. ಆದರೆ ಲಕ್ಷ್ಮೀ ಹೆಬ್ಬಾಳ್ಕರ್ ಕರೆಮಾಡಿ, ಮುಂದೂಡಲು ತಿಳಿಸಿದರು. ಇದುವರೆಗೆ ಉದ್ಘಾಟನೆ ಆಗಿಲ್ಲ. ಇದಕ್ಕೆ ಯಾರು ಕಾರಣ. ಜನಸೇವೆ ಮಾಡಲು ನಾನು ಶಾಸಕನಾದೆ, ಆದರೆ ನಮ್ಮ ಸರಕಾರ ಇಲ್ಲದೇ ಇದ್ದಲ್ಲಿ, ಇಷ್ಟೊಂದು ಕಿರುಕುಳ ಅನುಭವಿಸಬೇಕು ಎಂದು ತಿಳಿದಿರಲಿಲ್ಲ ಎಂದು ನೋವಿನಿಂದ ಹೇಳಿದರು.

ಮೊದಲು ಮಾಡುವುದೇ ಅಧಿಕೃತ

ಶಾಸಕ ಸುನೀಲ್ ಕುಮಾರ್ ಮಾತನಾಡಿ, 80 ಬಡಗುಬೆಟ್ಟಿನಲ್ಲಿ ಜನರ ಒತ್ತಾಯದ ಮೇರೆಗೆ ಕಂಬಳ ಮಾಡಲು ಹೊರಟಿದ್ದಾರೆ. 2–3 ದಿನದಿಂದ ಬೇರೆ ಬೇರೆಯವರ ರಂಗಪ್ರವೇಶ ಮಾಡಿದ್ದಾರೆ. ಮಾ.4 ರಂದು ಮತ್ತೊಂದು ಗುದ್ದಲಿ ಪೂಜೆಗೆ ದಿನ ನಿಗದಿ ಮಾಡಿದ್ದಾರೆ. ಮೊದಲು ಮಾಡುವುದೇ ಅಧಿಕೃತ. ಶಂಕುಸ್ಥಾಪನೆಗೆ ಅಡ್ಡಿಪಡಿಸುವವರು ಮೂರು ವರ್ಷದಲ್ಲಿ ತಮ್ಮ ಸರಕಾರ ಎಷ್ಟು ಅನುದಾನ ನೀಡಿದೆ ಎಂದು ಹೇಳಲಿ. ಜಿಲ್ಲಾಡಳಿತ ಗುದ್ದಲಿ ಮಾಡುವ ಮೊದಲು ಎಷ್ಟು ಅನುದಾನ ಕೊಡುತ್ತದೆ ಎಂದರು.

ನೋವಿನ ಸಂಗತಿ

ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಮಾತನಾಡಿ, ಕಂಬಳದ ಗುದ್ದಲಿ ಪೂಜೆಗೆ ನಿಷೇಧಾಜ್ಞೆ ಹೇರಿದ್ದು ಇದೇ ಮೊದಲು. ಇದು ನೋವಿನ ಸಂಗತಿ. ಒಳ್ಳೆಯ ಕೆಲಸಕ್ಕೆ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವೆ ಗೊಂದಲ ಮೂಡಿಸಬಾರದು. ಅಡ್ಡಿಪಡಿಸಬಾರದು ಎಂದರು.

ರಾಜಕೀಯ ಮಾಡುವುದು ಶೋಭೆಯಲ್ಲ

ಕಾಂಗ್ರೆಸ್ ಮುಖಂಡ, ರಾಜ್ಯ ಕಂಬಳ ಅಸೋಸಿಯೇಶನ್ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಮಾತನಾಡಿ, ಇಂದು ಕಂಬಳ ಜನಪ್ರಿಯತೆ ಹೆಚ್ಚುತ್ತಿದೆ. ಕಂಬಳದಲ್ಲಿ ರಾಜಕೀಯ ಮಾಡುವುದು ಶೋಭೆಯಲ್ಲ. ಕ್ಷೇತ್ರದ ಶಾಸಕರು ಕಂಬಳದ ಅಧ್ಯಕ್ಷರಾಗಿರುತ್ತಾರೆ. ಶಿಷ್ಟಾಚಾರದಂತೆ ಕಂಬಳ ನಡೆಯಲಿ, ಅದಕ್ಕೆ ಚ್ಯುತಿ ಬರಬಾರದು ಎಂದರು.

ವೇದಿಕೆಯಲ್ಲಿ ಶಾಸಕರಾದ ಯಶ್‌ಪಾಲ್ ಸುವರ್ಣ, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ರಾಜೇಶ್ ನಾಯಕ್, ಹರೀಶ್ ಪೂಂಜ, ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ್ ಸರ್ಜಿ, ಕೋಟಿ ಚೆನ್ನಯ್ಯ ಜೋಡುಕೆರೆ ಕಂಬಳ ಸಮಿತಿಯ ಸದಸ್ಯ ನಂದಳಿಕೆ ಶ್ರೀಕಾಂತ್ ಭಟ್, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಟ್ಟಾರು ರತ್ನಾಕರ್ ಹೆಗ್ಡೆ, ಮುಖಂಡರಾದ ಹರಿಕೃಷ್ಣ ಬಂಟ್ವಾಳ, ರಾಜ್ಯ ಕಂಬಳ ಅಸೋಸಿಯೇಶನ್ ಕಾರ್ಯದರ್ಶಿ ವಿಜಯ್ ಕುಮಾರ್ ಕಂಗಿನಮನೆ, ಕೋಶಾಧಿಕಾರಿ ಲೋಕೇಶ್ ಶೆಟ್ಟಿ ಮುಚ್ಚೂರು ಉಪಸ್ಥಿತರಿದ್ದರು.



ಶಾಸಕರಿಗೆ ಸಾಥ್

ಕಾಪು ತಾಲೂಕಿನ 80 ಬಡಗುಬೆಟ್ಟುನಲ್ಲಿ ಈ ಬಾರಿ ಪ್ರಪ್ರಥಮ ಬಾರಿಗೆ ಕೋಟಿಚೆನ್ನಯ ಜೋಡುಕರೆ ಕಂಬಳ ಎಂಬ ಹೆಸರಿನಲ್ಲಿ ಉಡುಪಿ ಕಂಬಳವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಉಡುಪಿ ಮತ್ತು ದಕ ಜಿಲ್ಲೆಯ 8 ಮಂದಿ ಶಾಸಕರು ಮತ್ತು ಒಬ್ಬ ಸಂಸದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಗುರ್ಮೆ ಸುರೇಶ್ ಶೆಟ್ಟಿಯವರಿಗೆ ಸಾಥ್ ನೀಡಿದರು.

> ಕಂಬಳ ಎಂದರೆ ಲಕ್ಷಾಂತರ ಮಂದಿ ಭಾಗವಹಿಸುವ ಪ್ರತಿಷ್ಠೆಯ ಸ್ಪರ್ಧೆಯಾಗುತ್ತಿದ್ದು, ರಾಜ್ಯದಲ್ಲಿ 5ಲ.ರೂ. ಅನುದಾನ ಸರಕಾರದಿಂದ ಲಭಿಸುತ್ತಿದೆ. ಕಂಬಳದ ಕ್ರೆಡಿಟ್ ಬಿಜೆಪಿ ಶಾಸಕರ ಪಾಲಾಗುವುದನ್ನು ತಡೆಯುವುದಕ್ಕಾಗಿ ಕಾಂಗ್ರೆಸ್‌ನ ಮಾಜಿ ಶಾಸಕ ವಿನಯಕುಮಾರ್ ಸೊರಕೆ ಅವರು ಜಿಲ್ಲಾಧಿಕಾರಿ ಮೇಲೆ ಒತ್ತಡ ಹೇರಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ. ಈ ಮೂಲಕ ಬಿಜೆಪಿ ಶಾಸಕರು ಆಯೋಜಿಸಿದ ಭೂಮಿಪೂಜೆ ನಡೆಯದಂತೆ ಮಾಡಿ, ಮಾ.4ರಂದು ಸಚಿವೆ ಲಕ್ಷ್ಮೀ ಹೆಬ್ಬಾಳ್‌ಕರ್ ಅವರ ಮೂಲಕ ಭೂಮಿ ಪೂಜೆ ಮಾಡಿಸಿ, ಈ ಕಂಬಳದ ಸಂಪೂರ್ಣ ಕ್ರೆಡಿಟನ್ನು ಪಡೆದುಕೊಳ್ಳುವ ಹುನ್ನಾರ ಮಾಡಿದ್ದಾರೆ.
>
> ■ ಗುರ್ಮೆ ಸುರೇಶ್ ಶೆಟ್ಟಿ, ಕಾಪು ಶಾಸಕ.

ನಿಷೇಧಾಜ್ಞೆ ಉಲ್ಲಂಘನೆ ಆರೋಪ: ಸಂಸದರು, ಶಾಸಕರ ಸಹಿತ 37 ಮಂದಿ ವಿರುದ್ಧ ಎಫ್‌ಐಆರ್!

ಉಡುಪಿ: ನಗರದ 80 ಬಡಗಬೆಟ್ಟು ಗ್ರಾಮದ ಸರ್ಕಾರಿ ಜಮೀನಿನಲ್ಲಿ ಜಿಲ್ಲಾಡಳಿತದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಕಂಬಳ ಕರೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಹಿನ್ನೆಲೆಯಲ್ಲಿ, ಸಂಸದ ಶ್ರೀನಿವಾಸ ಪೂಜಾರಿ ಹಾಗೂ ಜಿಲ್ಲೆಯ ಶಾಸಕರು ಸೇರಿದಂತೆ ಒಟ್ಟು 37 ಮಂದಿ ವಿರುದ್ಧ ಮಣಿಪಾಲ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ವಿವಾದದ ಹಿನ್ನೆಲೆ

ಬಡಗಬೆಟ್ಟು ಗ್ರಾಮದ ಸರ್ವೇ ನಂಬರ್ 11/1ರಲ್ಲಿರುವ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸೇರಿದ 6.30 ಎಕರೆ ಜಾಗದಲ್ಲಿ ಫೆ. 28ರಂದು ಬಿಜೆಪಿ ಮುಖಂಡ ಶುಭಕರ ಶೆಟ್ಟಿ ನೇತೃತ್ವದಲ್ಲಿ ಕಂಬಳ ಕರೆಗೆ ಶಂಕುಸ್ಥಾಪನೆ ಹಮ್ಮಿಕೊಳ್ಳಲಾಗಿತ್ತು. ಆದರೆ, ಜಿಲ್ಲಾಡಳಿತವು ಇದೇ ಕಾರ್ಯಕ್ರಮವನ್ನು ಮಾರ್ಚ್ 4ರಂದು ಆಯೋಜಿಸಲು ನಿರ್ಧರಿಸಿದ್ದರಿಂದ ಗೊಂದಲ ಉಂಟಾಗಿತ್ತು. ಅಹಿತಕರ ಘಟನೆ ತಡೆಯಲು ಜಿಲ್ಲಾಧಿಕಾರಿಗಳು ಶನಿವಾರ ಬೆಳಿಗ್ಗೆಯಿಂದ ರಾತ್ರಿಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಿದ್ದರು.

ಕಾನೂನು ಉಲ್ಲಂಘನೆ ಮತ್ತು ಪ್ರಕರಣ

ಜಿಲ್ಲಾಧಿಕಾರಿಗಳ ಆದೇಶವಿದ್ದರೂ ಸಹ, ಜನಪ್ರತಿನಿಧಿಗಳು ಹಾಗೂ ನಾಯಕರ ತಂಡವು ನಿಷೇಧಿತ ಪ್ರದೇಶಕ್ಕೆ ಪ್ರವೇಶಿಸಿ ಗುದ್ದಲಿ ಪೂಜೆ ನೆರವೇರಿಸಿದೆ. ಈ ಕುರಿತು ಉಡುಪಿ ತಹಶೀಲ್ದಾರ್ ಗುರುರಾಜ್ ಅವರು ನೀಡಿದ ದೂರಿನಂತೆ, ಮಣಿಪಾಲ ಪೊಲೀಸರು ಅಪರಾಧ ಸಂಖ್ಯೆ 30/2026 ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಫ್.ಐ.ಆರ್‌ನಲ್ಲಿರುವ ಪ್ರಮುಖರು

ಈ ಪ್ರಕರಣದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರುಗಳಾದ ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಸುವರ್ಣ, ಸುನಿಲ್ ಕುಮಾರ್, ಕಿರಣ್ ಕುಮಾರ್ ಕೊಡ್ಗಿ, ಗುರುರಾಜ್ ಗಂಟಿಹೊಳೆ, ಹರೀಶ್ ಪೂಂಜ, ರಾಜೇಶ್ ನ್ಯಾಕ್, ಎಂ.ಎಲ್.ಸಿ ಧನಂಜಯ್ ಸರ್ಜಿ, ಮಾಜಿ ಶಾಸಕ ಲಾಲಾಜಿ ಮೆಂಡನ್, ಮುಖಂಡರಾದ ಮಟ್ಟಾರು ರತ್ನಾಕರ ಹೆಗ್ಡೆ, ಶಿಲ್ಪಾ ಸುವರ್ಣ, ಗೀತಾಂಜಲಿ ಸುವರ್ಣ, ಶುಭಕರ ಶೆಟ್ಟಿ ಸೇರಿದಂತೆ ಒಟ್ಟು 37 ಮಂದಿ ಹಾಗೂ ಇತರರ ಮೇಲೆ ಪ್ರಕರಣ ದಾಖಲಾಗಿದೆ.

ಮೂಡುಬಿದಿರೆಯಲ್ಲಿ ಸಂತ ಸಮ್ಮೇಳನ ಆಯೋಜನೆ

ಮಠ, ಮಂದಿರಗಳಲ್ಲಿ ಗುರುಕುಲ ಮಾದರಿಯ ಶಿಕ್ಷಣಕ್ಕೆ ಸಂತರ ಒಲವು

ಮೂಡುಬಿದಿರೆ: ಮಠ ಮತ್ತು ಮಂದಿರಗಳಲ್ಲಿ ಗುರುಕುಲ ಮಾದರಿಯ ಶಿಕ್ಷಣ ಕೇಂದ್ರಗಳನ್ನು ಆರಂಭಿಸಿ ಮಕ್ಕಳಿಗೆ ಸಂಸ್ಕಾರಯುತ, ಧರ್ಮಾಧಾರಿತ ಶಿಕ್ಷಣ ನೀಡಬೇಕೆಂಬ ಮಹತ್ವದ ನಿರ್ಧಾರವನ್ನು ಮೂಡುಬಿದಿರೆಯಲ್ಲಿ ನಡೆದ ಸಂತ ಸಮ್ಮೇಳನದಲ್ಲಿ ಕೈಗೊಳ್ಳಲಾಗಿದೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಬಲವಾಗಲು ಪರಂಪರೆಯ ಗುರುಕುಲ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ ಎಂದು ಸಂತರ ಅಭಿಪ್ರಾಯ ವ್ಯಕ್ತವಾಯಿತು.

ತಾಲೂಕು ವ್ಯಾಪ್ತಿಯ ಮಠಗಳು ಮತ್ತು ದೇವಸ್ಥಾನಗಳು ಪರಸ್ಪರ ಸಹಕಾರದಿಂದ ಧಾರ್ಮಿಕ ಶಿಕ್ಷಣ ತರಗತಿಗಳನ್ನು ಆರಂಭಿಸಬೇಕು. ಸನಾತನ ಮೌಲ್ಯಗಳ ಆಧಾರದ ಮೇಲೆ ಮಕ್ಕಳಲ್ಲಿ ಶಿಸ್ತಿನ ಜೊತೆಗೆ ಸಂಸ್ಕಾರ ಬೆಳೆಸುವ ಶಿಕ್ಷಣ ವ್ಯವಸ್ಥೆ ರೂಪಿಸುವುದು ಕಾಲದ ಅಗತ್ಯ ಎಂದು ಸಮಾವೇಶದಲ್ಲಿ ಅಭಿಪ್ರಾಯಗಳು ಕೇಳಿಬಂತು.

ದೇಶದಾದ್ಯಂತ ಸಂಸ್ಕಾರಯುತ ಮತ್ತು ಏಕರೂಪದ ಧರ್ಮ ಶಿಕ್ಷಣ ವ್ಯವಸ್ಥೆ ರೂಪಿಸಬೇಕೆಂಬ ಅಭಿಪ್ರಾಯಕ್ಕೆ ಸಂತರ ಸಮಾವೇಶದಲ್ಲಿ ಸ್ಪಷ್ಟ ಒಲವು ವ್ಯಕ್ತವಾಯಿತು. ಮಕ್ಕಳ ಭವಿಷ್ಯವನ್ನು ಸನಾತನ ಮೌಲ್ಯಗಳ ಆಧಾರದಲ್ಲಿ ರೂಪಿಸಲು ಕ್ರಿಯಾಯೋಜನೆ ಸಿದ್ಧಪಡಿಸುವುದು ಕಾಲದ ಅವಶ್ಯಕತೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಸನಾತನ ಧರ್ಮದ ಸಂಸ್ಕೃತಿ, ಧಾರ್ಮಿಕತೆ ಹಾಗೂ ಸಮಾಜದ ಏಕತೆಯನ್ನು ಬಲಪಡಿಸುವ ಉದ್ದೇಶದಿಂದ ಧವಳತ್ರಯ ಟ್ರಸ್ಟ್ ಮತ್ತು ಭಾರತೀಯ ಸಂತ ಮಹಾಪರಿಷತ್‌ಗಳ ಸಂಯುಕ್ತ ಆಶ್ರಯದಲ್ಲಿ ಮೂಡುಬಿದಿರೆ ಜೈನ ಮಠದಲ್ಲಿ ನಡೆದ ವಿರಾಟ್ ಸಂತ ಸಮ್ಮೇಳನದಲ್ಲಿ ಈ ವಿಚಾರ ಪ್ರಸ್ತಾಪಗೊಂಡಿತು.


ಸಮ್ಮೇಳನವನ್ನು ಹರಿಹರ ಮಠದ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಉದ್ಘಾಟಿಸಿದರು.

ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ರಾಮಸೇವೆ ದೇಶಸೇವೆಗೆ ಸಮಾನ. ಸಂತರ ಏಕತೆ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಪ್ರೇರಕವಾಗಬೇಕು ಎಂದರು.

ಉಡುಪಿ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಅದಮಾರು ಮಠದ ಈಶ ಪ್ರಿಯ ಸ್ವಾಮೀಜಿ, ಎಡನೀರು ಮಠದ ಸಚ್ಚಿದಾನಂದ ಭಾರತಿ ಸ್ವಾಮೀಜಿ, ಆನೆಗುಂದಿ ಸರಸ್ವತೀ ಸಂಸ್ಥಾನದ ಕಾಳಹಸ್ತೇಂದ್ರ ಸ್ವಾಮೀಜಿ, ಒಡಿಯೂರು ಶ್ರೀ ಗುರುದೇವದತ್ತ ಮಠದ ಶ್ರೀ ಗುರುದೇವಾನಂದ ಸ್ವಾಮೀಜಿ, ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ, ಕೇಮಾರು ಸಾಂದೀಪನಿ ಸಾಧನಾಶ್ರಮದ ಈಶ ವಿಠಲದಾಸ ಸ್ವಾಮೀಜಿ, ಮಂಗಳೂರು ಓಂ ಶ್ರೀ ಮಠದ ನಿತ್ಯಾನಂದ ಸ್ವಾಮೀಜಿ, ಕೈಲಾಶ್ರಮದ ಜಯೇಂದ್ರಪುರಿ ಸ್ವಾಮೀಜಿ, ಬಲ್ಯೊಟ್ಟು ವಿಖ್ಯಾತಾನಂದ ಸ್ವಾಮೀಜಿ, ಕನ್ಯಾನಾಶ್ರಮದ ವಿದ್ಯಾನಂದ ಸ್ವಾಮೀಜಿ ಹಾಗೂ ಬಾಳೆಕುದ್ರು ಮಠದ ವಾಸುದೇವ ಸ್ವಾಮೀಜಿ ಸೇರಿದಂತೆ ಕರಾವಳಿ ಹಾಗೂ ಉತ್ತರ ಕನ್ನಡ ಸಹಿತ ಆರು ಜಿಲ್ಲೆಗಳ ವಿವಿಧ ಮಠದ ಸ್ವಾಮೀಜಿಗಳು ಭಾಗವಹಿಸಿದ್ದರು.

ಶಾಸಕ ಉಮಾನಾಥ ಕೋಟ್ಯಾನ್, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್ ರಾಜೇಂದ್ರ ಕುಮಾರ್ ಭೇಟಿ ನೀಡಿದರು.

ಕಾರ್ಯಕ್ರಮಕ್ಕೆ ಮೊದಲು ಬಡಗಬಸದಿಯಿಂದ ಜೈನಮಠಕ್ಕೆ ಸ್ವಾಮೀಜಿಗಳ ಮೆರವಣಿಗೆ ನಡೆಯಿತು. ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಸುದರ್ಶನ್ ಎಂ., ಉದ್ಯಮಿ ಕೆ. ಶ್ರೀಪತಿ ಭಟ್, ಸಮಿತಿ ಸಂಚಾಲಕ ಬಾಹುಬಲಿ ಪ್ರಸಾದ್, ಪ್ರಮುಖರಾದ ದಯಾನಂದ ಪೈ, ಶಾಂತರಾಮ ಕುಡ್ವ, ರಾಘವೇಂದ್ರ ಭಂಡಾರ್ಕರ್, ಸುರೇಂದ್ರ ಪೈ, ಬ್ಯಾಂಕ್ ನಿವೃತ್ತ ಅಧಿಕಾರಿ ಸುಧೀರ್ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.



---

6 ನೇ ತರಗತಿಯ ಪ್ರವೇಶ ಪರೀಕ್ಷೆ : ನಿಷೇಧಾಜ್ಞೆ ಜಾರಿ

ಮಂಗಳೂರು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯು ನಡೆಸಲಿರುವ 6ನೇ ತರಗತಿಯ ಪ್ರವೇಶ ಪರೀಕ್ಷೆಯು ಮಾ.1ರಂದು ಬಲ್ಮಠ ಸರಕಾರಿ ಮಹಿಳಾ ಪಿ.ಯು. ಕಾಲೇಜಿನಲ್ಲಿ ನಡೆಯಲಿದ್ದು, ಪರೀಕ್ಷೆಯ ಸಮಯ ಪರೀಕ್ಷಾ ಕೇಂದ್ರಗಳಲ್ಲಿ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಶಾಂತಿಯುತವಾಗಿ, ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ನಡೆಸಲು ಪರೀಕ್ಷಾಕೇಂದ್ರದ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಉಪಪೋಲಿಸ್ ಆಯುಕ್ತ ಮಿಥುನ್ ಹೆಚ್.ಎನ್. ಆದೇಶಿಸಿದ್ದಾರೆ.

ಬಾಡಿಗೆ ಕ್ವಾರ್ಟರ್ಸ್‌ನಲ್ಲಿ ಬಚ್ಚಿಟ್ಟಿದ್ದ 4 ಕಿಲೋ ಗಾಂಜಾ ವಶ: ಓರ್ವ ಸೆರೆ

ಕಾಸರಗೋಡು: ವಿಧಾನಸಭೆಗೆ ನಡೆಯಲಿರುವ ಚುನಾವಣೆಯ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಖಾತರಿಪಡಿಸುವ ಸಲುವಾಗಿ ಪೊಲೀಸರು ಜಿಲ್ಲೆಯಾದ್ಯಂತ ಆರಂಭಿಸಿದ ಕಾರ್ಯಾಚರಣೆಯಲ್ಲಿ ಚೌಕಿಯ ಕ್ವಾರ್ಟರ್ಸ್‌ವೊಂದರಿಂದ 4 ಕಿಲೋ ಗ್ರಾಂ ಗಾಂಜಾ ಪತ್ತೆಹಚ್ಚಿ ವಶಪಡಿಸಲಾಗಿದೆ.

ಮೂಲತಃ ಉತ್ತರಪ್ರದೇಶ ಬಲಿಯಾಪಿಪ್‌ರೋಲಿ ನಿವಾಸಿ ಹಾಗೂ ಈಗ ಕೂಡ್ಲು ಚೌಕಿ ಕಾವುಗೋಳಿ ರೈಲ್ವೇ ಲೈನ್ ಬಳಿಯ ಬಾಡಿಗೆ ಕ್ವಾರ್ಟರ್ಸ್‌ನಲ್ಲಿ ವಾಸಿಸುತ್ತಿರುವ ಸುನಿಲ್ ಪ್ರಸಾದ್ (41) ಎಂಬಾತನನ್ನು ಬಂಧಿಸಲಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ನಿರ್ದೇಶ ಪ್ರಕಾರ ಕಾಸರಗೋಡು ಎಎಸ್‌ಐ ಅಚ್ಯುತ್ ಅಶೋಕ್ ಅವರ ನೇತೃತ್ವದ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿತು.

ಪುತ್ತೂರು ಮಾರುಕಟ್ಟೆ ಧಾರಣೆ

28-02-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 480	ಹಳೆ ಕರಿಗೋಟು	240 - 270
ಚೋಲ್ ಅಡಿಕೆ	505 - 535	ಹಸಿ ಕೊಕ್ಕೋ	80 - 110
ಡಬಲ್ ಚೋಲ್	505 - 535	ಒಣ ಕೊಕ್ಕೋ	350 - 380
ಹೊಸ ಪಟೋರ	365 - 415	**ಕಾಳುಮೆಣಸು ಧಾರಣೆ**	
ಹಳೆ ಪಟೋರ	400 - 430	ಕಾಳುಮೆಣಸು	465 - 665
ಹೊಸ ಉಳ್ಳಿ	115 - 300	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 305	ಆರ್‌ಎಸ್‌ಎಸ್ 1	214.50
ಹೊಸ ಕೋಕಾ	330 - 350	ಆರ್‌ಎಸ್‌ಎಸ್ 2	197.00
ಹಳೆ ಕೋಕಾ	355 - 375	ಸ್ಕ್ರಾಪ್ 1	136.50
ಹೊಸ ಕರಿಗೋಟು	240 - 270	ಸ್ಕ್ರಾಪ್ 2	130.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-744) ಡ್ರಾ ಫೆಬ್ರವರಿ 28ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KC 333913 (PATTAMBI)

Consolation Prize Rs.5,000/-
KA 333913 KB 333913 KD 333913 KE 333913
KF 333913 KG 333913 KH 333913 KJ 333913
KK 333913 KL 333913 KM 333913

2nd Prize Rs.25,00,000/- [25 Lakhs]
KL 868765 (KAYAMKULAM)

3rd Prize Rs.10,00,000/- [10 Lakhs]
KK 846428 (ALAPPUZHA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0246 1859 2440 3188 3896 3918 4120 4667 4985 5130
5233 5455 6064 6077 6135 8644 8656 9121

5th Prize Rs.2,000/-
2045 2867 3836 6121 7871 8746

6th Prize Rs.1,000/-
0085 0290 0519 0688 1150 2644 2855 2939 4181 4796
5001 5047 5114 5217 5524 5759 6280 6648 6889 7826
8705 9016 9460 9784 9988

7th Prize Rs.500/-
0105 0163 0588 0665 0879 0972 1115 1201 1304 1373
1377 1502 1860 2113 2191 2205 2206 2359 2381 2457
2497 2741 2802 3043 3140 3286 3332 3375 3418 3622
3789 3832 3999 4002 4026 4080 4177 4189 4234 4339
4462 4503 4538 4566 4697 4761 5000 5145 5530 5561
6084 6237 6381 6424 6643 7123 7296 7509 7562 8048
8058 8339 8621 8753 8784 8793 8829 8863 8866 8979
9012 9036 9104 9712 9738 9750

8th Prize Rs.200/-
0021 0243 0249 0270 0294 0946 1103 1171 1279 1291
1327 1344 1423 1497 1580 1744 1755 1851 1857 2005
2296 2298 2304 2329 2566 2730 2817 2898 3204 3336
3430 3492 3497 3713 3810 3829 4086 4265 4306 4337
4426 4570 4658 4668 4700 4830 4837 5273 5795 5833
6335 6342 6433 6689 6820 6824 6853 6854 6907 7128
7144 7199 7273 7412 7510 7763 7841 7889 8195 8200
8434 8445 8574 8637 8680 8758 8837 8909 9165 9298
9338 9351 9379 9414 9487 9514 9515 9698 9807 9844
9897 9953

9th Prize Rs.100/-
0025 0203 0226 0364 0540 0559 0577 0659 0684 0691
0702 0845 1206 1236 1239 1379 1389 1488 1591 1618
1625 1657 1687 1717 1924 1992 2125 2367 2397 2409
2591 2675 2743 2784 2789 2928 2948 3003 3015 3307
3350 3358 3436 3445 3513 3655 3760 3773 3815 3877
3947 4077 4116 4160 4210 4388 4405 4429 4448 4583
4873 4929 4965 5100 5110 5172 5260 5261 5539 5583
5712 5941 6010 6146 6168 6283 6359 6475 6745 6829
6835 6843 6871 6885 6901 7016 7056 7097 7119 7125
7210 7301 7322 7384 7395 7482 7486 7488 7513 7523
7537 7628 7732 7797 7866 7880 7891 7918 7978 7990
7996 8015 8033 8202 8257 8312 8387 8465 8516 8540
8548 8573 8593 8615 8666 8672 8675 8756 8813 8827
8903 8907 8922 9112 9207 9212 9360 9449 9558 9628
9652 9802 9852 9987

ಬೈಕ್ ಡಿಕ್ಕಿಯಾಗಿ ಸೈಕಲ್ ಸವಾರನಿಗೆ ಗಾಯ

ಕುಂದಾಪುರ : ವಿಜಯ ಎಸ್. ಪುತ್ರನ್ ಎಂಬವರು ಸೈಕಲಿನಲ್ಲಿ ಕುಂದಾಪುರ ಪೇಟೆಯ ಮುಖ್ಯ ರಸ್ತೆಯಲ್ಲಿ ಹಳೆ ಬಸ್ ನಿಲ್ದಾಣದ ಕಡೆಯಿಂದ ಶಾಸ್ತ್ರಿ ಪಾರ್ಕ್ ಕಡೆಗೆ ಹೋಗುತ್ತಿದ್ದಾಗ ಕುಂದಾಪುರ ಪೇಟೆಯ ಡಿಪ್ಲೋಮ್ಯಾಟ್ ಬಾರ್ ಮತ್ತು ರೆಸ್ಟೋರೆಂಟ್ ಹತ್ತಿರ ಅದೇ ರಸ್ತೆಯಲ್ಲಿ ಹಿಂದಿನಿಂದ ಬರುತ್ತಿದ್ದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಅವರು ಗಾಯಗೊಂಡಿದ್ದಾರೆ. ಗಾಯಾಳುವನ್ನು ಚಿಕಿತ್ಸೆಗೆ ಕುಂದಾಪುರ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನ ತರುವಂತೆ ಒತ್ತಾಯಿಸಿ ಗಂಡ, ಅತ್ತೆಯಿಂದ ಹಲ್ಲೆ: ಪೊಲೀಸರಿಗೆ ಗೃಹಿಣಿ ದೂರು

ಬಂಟ್ವಾಳ: ಗೃಹಿಣಿಯೋರ್ವರಿಗೆ ತನ್ನ ಪತಿ ಹಾಗೂ ಅತ್ತೆ ಸೇರಿ ಚಿನ್ನ ತರುವಂತೆ ಪೀಡಿಸಿ, ದೈಹಿಕ ಹಲ್ಲೆ ನಡೆಸಿದ್ದಲ್ಲದೆ ಕೊಲೆಬೆದರಿಯೊಡ್ಡಿದ ಘಟನೆ ಬಂಟ್ವಾಳ ತಾಲೂಕಿನ ಕೊಡಂಬೆಟ್ಟು ಗ್ರಾಮದ ಹೊಸಮನೆ ಎಂಬಲ್ಲಿ ನಡೆದಿದೆ.

ಸಂದೇಶ ಪೂಜಾರಿ ಹಾಗೂ ಆತನ ತಾಯಿ ಬೇಬಿ ಅವರು ಚಿನ್ನಕ್ಕಾಗಿ ಒತ್ತಾಯಿಸಿ ತನ್ನ ಮೇಲೆ ದೈಹಿಕ ಹಲ್ಲೆ ನಡೆಸಿದ್ದಾಗಿ ಸಂದೇಶ ಪೂಜಾರಿಯ ಪತ್ನಿ ಪ್ರತಿಮಾ ಅವರ ದೂರಿನಂತೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಬಗ್ಗೆ ಬಂಟ್ವಾಳ ಎಸ್.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯದ ಆದೇಶದಂತೆ ಪುಂಜಾಲಕಟ್ಟೆ ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಪ್ರತಿಮಾ ಅವರ ಗಂಡ ಬೆಂಗಳೂರಿನಲ್ಲಿ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದು, ತಿಂಗಳಿಗೊಮ್ಮೆ ಮನೆಗೆ ಬಂದು ಹೋಗುತ್ತಿರುವುದಾಗಿದೆ, ಗಂಡ ಮನೆಗೆ ಬಂದಾಗ ಮಕ್ಕಳ ಹಾಗೂ ಚಿನ್ನದ ವಿಚಾರದಲ್ಲಿ ಪತ್ನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೈಯಿಂದ ಹಲ್ಲೆ ಮಾಡುತ್ತಿದ್ದು, ಗಂಡನ ತಾಯಿ ಬೇಬಿ ಕೂಡ ಆತನಿಗೆ ಬೆಂಬಲ ನೀಡುತ್ತಿದ್ದರು. ಫೆ.22ರಂದು ಬೆಳಗ್ಗೆ ಸುಮಾರು 8 ಗಂಟೆಗೆ ಪ್ರತಿಮಾ ಅವರು ಮನೆಯಲ್ಲಿ ಕೆಲಸ ಮಾಡುತ್ತಿರುವಾಗ ಬೈದು ಹಲ್ಲೆಗೈದಿದ್ದರೆನ್ನಲಾಗಿದೆ. ಈ ವಿಚಾರವನ್ನು ತಿಳಿದ ಪ್ರತಿಮಾ ಅವರ ತಮ್ಮ ಪ್ರದೀಪ್ ಸಹೋದರಿಯನ್ನು ಕಾರ್ಕಳದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿದ್ದಾರೆ. ಈ ಸಂದರ್ಭ ಪ್ರತಿಮಾ ತನ್ನ ಹಾಗೂ ಮಕ್ಕಳ ಚಿನ್ನವನ್ನು ಗಂಡನ ಅನುಮತಿ ಪಡೆದು ತವರು ಮನೆಗೆ ತೆಗೆದುಕೊಂಡು ಹೋಗಿದ್ದರು. ಬಳಿಕ ಸಂದೇಶ ಪೂಜಾರಿ ಪತ್ನಿಯನ್ನು ವಾಪಸು ಮನೆಗೆ ಕರಕೊಂಡು ಹೋಗಿದ್ದು, ಚಿನ್ನದ ವಿಚಾರವು ಆತನಿಗೆ ತಿಳಿದಿದ್ದರೂ ಕೂಡಾ ಚಿನ್ನವನ್ನು ವಾಪಸು ತೆಗೆದುಕೊಂಡು ಬರುವಂತೆ ಹಲ್ಲೆಗೈದಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮುಂದುವರೆದಿದೆ...

ಎದೆ ನೋವು: ಕಾರ್ಮಿಕ ಸಾವು

ಕುಂದಾಪುರ: ಕುಂದಾಪುರ ಪರಿಸರದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ ಜಾರ್ಖಂಡ್‌ನ ರಾಂಚಿ ಜಿಲ್ಲೆಯ ಸಂಜಯ್ ಕುಜುರ್ (36) ಕೂಲಿ ಕೆಲಸ ಮಾಡುತ್ತಿದ್ದಾಗ ಎದೆ ನೋವು ಕಾಣಿಸಿಕೊಂಡು ಮೃತಪಟ್ಟಿದ್ದಾರೆ. ಕೊರ್ಗಿಯಲ್ಲಿ ಪೋಲ್ ಮ್ಯಾಥ್ಯೂ ಎಂಬವರ ಅನಾನಸ್ ತೋಟದ ಕೆಲಸ ಮಾಡುತ್ತಿದ್ದ ಸಂಜಯ್‌ಗೆ ಊಟ ಮಾಡುತ್ತಿರುವಾಗ ಎದೆ ನೋವು ಕಾಣಿಸಿಕೊಂಡಿದ್ದು, ಉಸಿರಾಟ ಸಮಸ್ಯೆಯಿಂದ ಒದ್ದಾಡುತ್ತಿದ್ದರು. ಕೂಡಲೇ ಆ್ಯಂಬುಲೆನ್ಸ್ ವಾಹನಕ್ಕೆ ಕರೆ ಮಾಡಿದ್ದು ಅಂಬ್ಯುಲೆನ್ಸ್ ಬರುವಷ್ಟರೊಳಗೆ ಮೃತಪಟ್ಟಿದ್ದಾರೆ.

ನಿರ್ದೇಶಕರ ಸ್ಥಾನಕ್ಕೆ ಚುನಾವಣೆ

ಮಂಗಳೂರು: ಕಲ್ಲಡ್ಕದ ಶ್ರೀರಾಮ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಸಂಘದ ವಠಾರದಲ್ಲಿ ಮಾ. 15ರಂದು ಪೂರ್ವಾಹ್ನ ಗಂಟೆ 9ರಿಂದ ಅಪರಾಹ್ನ ಗಂಟೆ 4ರವರೆಗೆ ಹಮ್ಮಿಕೊಳ್ಳಲಾಗಿದೆ. ಸಾಮಾನ್ಯ ಸ್ಥಾನ, ಹಿಂದುಳಿದ ಪ್ರವರ್ಗ-ಎ, ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ಮೀಸಲು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಮಾ. 3ರಿಂದ ಆರಂಭವಾಗಿ ಮಾ. 7ರಂದು ಕೊನೆಗೊಳ್ಳುತ್ತದೆ. ಹೆಚ್ಚಿನ ವಿವರವನ್ನು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಯಕ್ಷಗಾನ ಬಯಲಾಟ ಸಮಿತಿ ಹತ್ತು ಸಮಸ್ತರು, ಶ್ರೀ ವಿನಾಯಕ ದೇವಸ್ಥಾನದ ಬಳಿ, ಅಮ್ಮುಂಜೆ.
2. ಹಿಂದೂ ಯುವ ಸೇನೆ, ಓಂ ಶಕ್ತಿ ಶಾಖೆ, ಮೈಂದಾಳ ನಾವೂರು, ಬಂಟ್ವಾಳ (ತಾ).
3. ಬೆಟ್ಟಂಪಾಡಿ ಹತ್ತು ಸಮಸ್ತರು, ಬಿಲ್ವಗಿರಿ, ಪುತ್ತೂರು (ತಾ).
4. ವನರಾಜ್ ಶೆಟ್ಟಿ, 'ಇಶಾನಿ' ಗುಡ್ರಿ, ಕರ್ಕುಂಜೆ, ನೇರಳೆಕಟ್ಟೆ, ಕುಂದಾಪುರ (ತಾ).
5. ಪಳ್ಳಿಪಾಡಿ ಹತ್ತು ಸಮಸ್ತರು, ಬಾಕಿಮಾರು ಗದ್ದೆಯಲ್ಲಿ, ಪಳ್ಳಿಪ್ಪಾಡಿ ವಯಾ ಪೊಳಲಿ.
6. ಕೆ. ಸುರೇಶ್ ಹೊಳ್ಳ, 'ಜನನಿ', ಕಲ್ಲಿಮಾರು ಹೌಸ್, ಜೋಡುಮಾರ್ಗ, ಬಂಟ್ವಾಳ (ತಾ).
7. ಶ್ರೀ ದೇವಿ ಸೇವಾ ಸಮಿತಿ, ದೇವಿ ನಗರ, ಕೈರಂಗಳ ವಯಾ ಮುಡಿಪು.

ಶ್ರೀ ಧರ್ಮಸ್ಥಳ ಮೇಳ
ಉಪ್ಪೂರಿನಲ್ಲಿ
ದಿ. ಸಂಜೀವ ಪೂಜಾರಿ ಸ್ಮರಣಾರ್ಥ ಮತ್ತು ಮಕ್ಕಳು

ಶ್ರೀ ಸಾಲಿಗ್ರಾಮ ಮೇಳ
ಮೂಲಿ-ಶಿಮಂತೂರುನಲ್ಲಿ
ಸ್ವಪ್ನಮಂಟಪ

ಶ್ರೀ ಪೆರ್ಡೂರು ಮೇಳ
ಶಿರ್ಲಾಲುನಲ್ಲಿ
ಚದುರಂಗ

ಶ್ರೀ ಹನುಮಗಿರಿ ಮೇಳ
ಪೆರ್ಲ, ನಲ್ಕದಲ್ಲಿ

ಶ್ರೀ ಪಾವಂಜೆ ಮೇಳ
ಕಮಿಲ ಶಾಲಾ ವಠಾರ ಗುತ್ತಿಗಾರು
ಶ್ರೀ ದೇವೀ ಮಹಾತ್ಮೆ

ಖಾಯಮಾತಿ, ಸಮಾನ ವೇತನ ಮೊದಲಾದ ಬೇಡಿಕೆ ಈಡೇರಿಸಲು ಸರಕಾರಕ್ಕೆ ಒತ್ತಾಯ

ಭೂಮಾಪಕರ ಸಂಘದಿಂದ ಮುಷ್ಕರ ಬೆದರಿಕೆ

ಪುತ್ತೂರು: ಖಾಯಮಾತಿ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಭೂಮಾಪಕರ ಸಂಘದ ಪುತ್ತೂರು ಘಟಕದಿಂದ ಶುಕ್ರವಾರ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಮನವಿ ಸಲ್ಲಿಸಿದರು. ಸರಕಾರ ತಮ್ಮ ಬೇಡಿಕೆಗಳನ್ನು ಈಡೇರಿಸುವ ತನಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಮನವಿಯಲ್ಲಿ ಎಚ್ಚರಿಸಿದ್ದಾರೆ.



ಕಳೆದ ಸುಮಾರು 25 ವರ್ಷಗಳಿಂದ ದ.ಕ. ಜಿಲ್ಲೆಯ ಎಲ್ಲಾ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಭೂ ಮಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದು, ಇದುವರೆಗೂ ನಾವು ಇಲಾಖೆಯಲ್ಲಿ ಮಾಡಿರುವ ಕೆಲಸಗಳಿಗೆ ನಿಗದಿತ ಸಂಭಾವನೆ ಸಿಗುತ್ತಿಲ್ಲ. ನಮಗೆ ಸೇವಾ ಭದ್ರತೆ ಯಾವುದೇ ಇಲ್ಲ. ಸರಿಯಾದ ಸಮಯಕ್ಕೆ ಹಣ ಪಾವತಿ ಮಾಡುತ್ತಿಲ್ಲ. ಹೀಗಿದ್ದರೂ ನಾವು ಇಲಾಖೆಯಿಂದ ಸೂಚನೆ ನೀಡುವ ಪೋಡಿ ಮುಕ್ತ ಅಭಿಯಾನ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ದೇವಸ್ಥಾನ, ಕೆರೆ ಅಳತೆ, ದಖಾಸ್ತು ನೋಡಿ ಆಫ್‌ಲೈನ್ ಮತ್ತು ಆನ್‌ಲೈನ್, ಪೋಡಿ ಮುಕ್ತ ಅಭಿಯಾನ, ಸ್ವಾಮಿತ್ವ ಯೋಜನೆ, ಆಕಾರ್ ಬಂದ್ ಡಿಜಿಟೈಜೇಷನ್ ಮತ್ತು ಇನ್ನೂ ಇತರೆ ಕೆಲಸಗಳನ್ನು ಮಾಡಲು ಪರವಾನಗಿ ಪಡೆದ ಭೂ ಮಾಪಕರನ್ನು ಬಳಸಿಕೊಂಡು ಈ ಎಲ್ಲಾ ಕೆಲಸಗಳನ್ನು ಮಾಡಿದ್ದರು. ಈ ಎಲ್ಲಾ ಕೆಲಸಗಳಿಗೆ ನಮಗೆ ಸರಿಯಾಗಿ ಸಂಭಾವನೆ ನೀಡಿರುವುದಿಲ್ಲ. ಹೀಗಾಗಿ ನಮಗೆ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, ಈ ಬಗ್ಗೆ, ಈ ಹಿಂದೆ ಅನೇಕ ಬಾರಿ ಸರಕಾರಕ್ಕೂ ಹಾಗೂ ಇಲಾಖೆಗೂ ಮನವಿ ನೀಡಿದ್ದರೂ ಸರಕಾರ ಸ್ಪಂದಿಸದೆ ಇರುವುದರಿಂದ ಪರವಾನಿಗಿ ಭೂ ಮಾಪಕರಿಗೆ ಜೀವನ ಮಾಡಲು ಹಾಗೂ ಕೆಲಸಗಳ ಒತ್ತಡದಿಂದ ಅನಾರೋಗ್ಯಕ್ಕೆ ತುತ್ತಾಗುವ ಪ್ರಸಂಗ ಬಂದಿದೆ.

ಹೀಗಾಗಿ ನಮ್ಮ ನಿರ್ದಿಷ್ಟ ಬೇಡಿಕೆಗಳಾದ ಖಾಯಂಮಾತಿ ಮತ್ತು ಸಮಾನ ಕೆಲಸಕ್ಕೆ ಸಮಾನವೇತನ ಹಾಗೂ ಒಂದು ಬಾರಿ ವಿಶೇಷ ನೇಮಕಾತಿ ಅಡಿಯಲ್ಲಿ ಪರವಾನಗಿ ಭೂಮಾಪಕರನ್ನು ಸರಕಾರಿ ಸೇವೆಯಲ್ಲಿ ಸಕ್ರಮಗೊಳಿಸುವವರೆಗೂ ಯಾವುದೇ ರೀತಿಯ ಅಳತೆ ಕೆಲಸಗಳನ್ನು ಮಾಡುವುದಿಲ್ಲ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಮ್ಮ ಲಾಗಿನಲ್ಲಿ ಇರುವ ಮೋಜಿನಿ ತಂತ್ರಾಂಶದ ಹೊರತುಪಡಿಸಿ ಇತರೆ ಕೆಲಸಗಳನ್ನು ಪರವಾನಿಗೆ ಭೂ ಮಾಪಕರಿಗೆ ನೀಡಿರುವ ಕಡತಗಳನ್ನು ಹಿಂಪಡೆಯಬೇಕು. ಪರವಾನಗಿ ಭೂ ಮಾಪಕರ ರಾಜ್ಯ ಸಂಘ ಮುಷ್ಕರಕ್ಕೆ ಕರೆ ನೀಡಿದ್ದು, ದ.ಕ. ಜಿಲ್ಲೆಯ ಎಲ್ಲಾ ತಾಲೂಕಿನ ಪರವಾನಿಗಿ ಭೂಮಾಪಕರು ರಾಜ್ಯ ಸಂಘದಿಂದ ಹಮ್ಮಿಕೊಂಡಿರುವ ಮುಷ್ಕರಕ್ಕೆ ಪುತ್ತೂರು ಸಂಘ ಬೆಂಬಲ ನೀಡಬೇಕಾಗಿರುವುದರಿಂದ ನಾವು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದೇವೆ. ರೈತರಿಗೆ ನಮ್ಮಿಂದ ತೊಂದರೆ ಆಗದಂತೆ ಇತರೆ ಕೆಲಸಗಳಿಗೆ ನಿಯೋಜಿಸಿರುವ ಕಡತಗಳನ್ನು ಕೂಡಲೇ ಹಿಂಪಡೆದುಕೊಳ್ಳುವಂತೆ ಮನವಿಯಲ್ಲಿ ಆಗ್ರಹಿಸಿದ್ದಾರೆ.

ಡಿಸಿ, ಡಿಡಿಎಲ್‌ಆರ್‌ಗೂ ಮನವಿ

ನಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಭೂ ದಾಖಲೆಗಳ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೂ ಸಲ್ಲಿಸಲಾಗುವುದು ಎಂದು ತಾಲೂಕು ಸಂಘದ ಅಧ್ಯಕ್ಷ ಪೂರ್ಣೇಶ್ ಬಿ.ಎಂ. ತಿಳಿಸಿದ್ದಾರೆ.

ಪುತ್ತೂರು ತಾಲೂಕು ಸಂಘದ ಕಾರ್ಯದರ್ಶಿ ಮಧು ಬಿ.ಎಂ., ಜಿಲ್ಲಾ ಗೌರವ ಸಲಹೆಗಾರ ಮೋಹನ ಕೆ., ಸದಸ್ಯರಾದ ಪ್ರಜ್ವಲ್ ಎಸ್.ವಿ., ಮಾದೇ ಗೌಡ ಸಿಆರ್., ಸುಶ್ಮಿತಾ, ಸುವರ್ಣ, ಸುಜಿತ್, ಕಿರಣ್ ಕುಮಾರ್, ರಾಜೇಶ್, ರಂಜಿತ್ ಹಾಗೂ ಪ್ರಜ್ವಲ್ ರೈ ಉಪಸ್ಥಿತರಿದ್ದರು.

ಸಂಭಾವನೆ ಬಂದಿಲ್ಲ...

2025ರ ಮಾರ್ಚ್‌ನಲ್ಲಿ ಪರವಾನಗಿ ಭೂ ಮಾಪಕರಿಗೆ ವಿಶೇಷವಾಗಿ ದರ್ಖಾಸು ಪೋಡಿ ಆಂದೋಲದ ಕಾರ್ಯವನ್ನು ನೀಡಿದ್ದು, ಒಂದು ವರ್ಷದಿಂದ ದರ್ಖಾಸ್ತು ಪೋಡಿ ಆಂದೋಲ ಕಾರ್ಯವನ್ನು ನಿರ್ವಹಿಸಿದ್ದೇವೆ. ಜಿಲ್ಲೆಯಲ್ಲಿ 10 ಸಾವಿರ ಆರ್‌ಟಿಸಿ ಮಾಡಿಕೊಡುವಂತೆ ಕಂದಾಯ ಸಚಿವರ ಸೂಚನೆಯಂತೆ ಕೇವಲ 3 ತಿಂಗಳಲ್ಲಿ ಪೂರೈಸಿದ್ದು ಇದಕ್ಕೆ ರಾಜ್ಯದಲ್ಲಿ ಶ್ಲಾಘನೆ ವ್ಯಕ್ತವಾಗಿದೆ. ಆದರೂ ಕಳೆದು ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದರೂ ನಮಗೆ ಯಾವುದೇ ಸಂಭಾವನೆ ಬಂದಿಲ್ಲ. ಅಲ್ಲದೆ ಕಚೇರಿಯಲ್ಲಿ ಇತರ ಕೆಲಸಗಳಿಗೆ ನಿಯೋಜಿಸಿದ್ದರೂ ನಮಗೆ ಯಾವುದೇ ಸಂಬಳವಿಲ್ಲ. ಹೀಗಾಗಿ ನಮಗೆ ಜೀವನ ನಡೆಸುವುದು ಕಷ್ಟಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಮುಷ್ಕರ ನಡೆಸಲು ಮುಂದಾಗಿದ್ದು ರಾಜ್ಯ ಸಂಘ, ಜಿಲ್ಲಾ ಸಂಘದ ಸೂಚನೆಯಂತೆ ತಾಲೂಕು ಸಂಘವು ಮುಷ್ಕರಕ್ಕೆ ಬೆಂಬಲ ನೀಡಲಿದ್ದೇವೆ. ರೈತರಿಗೆ ತೊಂದರೆ ಆಗದಂತೆ ನಮ್ಮಲ್ಲಿರುವ ಕಡತಗಳನ್ನು ಕಚೇರಿಗೆ ಹಿಂತಿರುಗಿಸಲಿದ್ದೇವೆ.

■ ಪೂರ್ಣೇಶ್ ಬಿ.ಎಂ., ಅಧ್ಯಕ್ಷರು,
ಪರವಾನಗಿ ಪಡೆದು ಭೂ ಮಾಪಕರ ಸಂಘ ಪುತ್ತೂರು

ಕೋಳಿ ಅಂಕ ಅಧಿಕೃತಗೊಳಿಸಲು ಇಂದು ಆಲಂಕಾರಿನಲ್ಲಿ ಹಕ್ಕೊತ್ತಾಯ ಸಭೆ

ಕಡಬ: ತುಳುನಾಡಿನ ಪಾರಂಪರಿಕ ಕ್ರೀಡೆ ಜೂಜುರಹಿತ ಕೋಳಿ ಅಂಕವನ್ನು ಅಧಿಕೃತ ಮಾಡುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಸರಕಾರದ ಮಟ್ಟದಲ್ಲಿ ಕಾನೂನು ರೂಪಿಸಬೇಕು ಎಂದು ಆಗ್ರಹಿಸುವ ಸಲುವಾಗಿ ಮಾ.1ರಂದು ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ದೀನ ದಯಾಳು ರೈತ ಸಭಾ ಭವನದಲ್ಲಿ ಹಕ್ಕೊತ್ತಾಯ ಸಭೆ ಕರೆಯಲಾಗಿದೆ ಎಂದು ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆಯ ಜಿಲ್ಲಾ ಪ್ರಮುಖ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಿವಣ್ಣ ಗೌಡ ಇಡ್ಯಾಡಿ ಹೇಳಿದರು.

ಅವರು ಶುಕ್ರವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದ.ಕ., ಉಡುಪಿ ಜಿಲ್ಲೆಗಳಲ್ಲಿ ದೈವಾರಾಧನೆ ಎನ್ನುವುದು ಅತ್ಯಂತ ಶ್ರೇಷ್ಠವಾಗಿದೆ. ಕೆಲವೆಡೆ ದೈವದ ನೇಮ ನಡೆಯುವ ಮೊದಲು ಸಾಂಪ್ರದಾಯಿಕ ಕೋಳಿ ಅಂಕ ನಡೆದರೆ, ಇನ್ನು ಕೆಲವು ಕಡೆ ನೇಮೋತ್ಸವದ ಬಳಿಕ ನಡೆಯುತ್ತಿದೆ. ಕರಾವಳಿಯಿಂದ ಘಟ್ಟದ ಅಂಚಿನ ವರಗೆ ವ್ಯಾಪಿಸಿರುವ ಕೋಳಿ ಅಂಕಕ್ಕೆ 850 ವರ್ಷದ ಇತಿಹಾಸ ಇದೆ. ನೇಮೋತ್ಸವದ ವೇಳೆ ದೈವಕ್ಕೆ ಪ್ರಾಣಿ ಬಲಿ ಕೊಡಲಾಗುತ್ತದೆ. ಆದರೆ, ಅಂತಹ ಸ್ಥಳದಲ್ಲಿರುವ ಅಗೋಚರ ನೀಚ ಶಕ್ತಿಗಳಿಗೆ ಕೋಳಿ ಅಂಕದ ಮುಖಾಂತರ ಬಿಂದಾರ್ಪಣೆ ನಡೆದರೆ ಆ ಭಾಗದಲ್ಲಿ ಗಲಾಟೆ ದೊಂಬಿ ನಡೆಯುವುದಿಲ್ಲ ಎನ್ನುವ ನಂಬಿಕೆಯೊಂದಿಗೆ ಹಿಂದಿನ ರಾಜರ ಕಾಲದಿಂದಲೇ ಈ ಪದ್ಧತಿ ನಡೆಯುತ್ತಾ ಬಂದಿದೆ. ಆದರೆ, ಈಗ ಅದಕ್ಕೆ ಸರಕಾರ ಮತ್ತು ಇಲಾಖೆ ಕಡಿವಾಣ ಹಾಕಲು ಹೊರಟಿದೆ ಎಂದು ತಿಳಿಸಿದರು.

ಕುದುರೆ ರೇಸ್, ಜಲ್ಲಿಕಟ್ಟು, ಹೋರಿ ಓಟ ಮುಂತಾದ ಜೂಜು ಕಟ್ಟುವ ಕ್ರೀಡೆಗಳಿಗೆ ಅನುಮತಿ ನೀಡುತ್ತಿರುವಾಗ ಬಡವರ, ರೈತಾಪಿ ವರ್ಗದವರ ಕ್ರೀಡೆಯಾದ ಕೋಳಿ ಅಂಕಕ್ಕೆ ಕಾನೂನು ಚೌಕಟ್ಟು ತರಲಾಗುತ್ತಿದೆ. ಶ್ರೀಮಂತರ ಕ್ರೀಡೆಗಳಿಗೆ ಯಾವುದೇ ಕಡಿವಾಣ ಇಲ್ಲ. ಜೂಜು ರಹಿತ ಕೋಳಿ ಅಂಕಕ್ಕೆ ಅನುಮತಿ ನೀಡಬೇಕು ಎಂದು ಮನವಿ ಮಾಡಿದ ಶಿವಣ್ಣ ಗೌಡ, ಈಗಾಗಲೇ ಪುತ್ತೂರು ಶಾಸಕರು ನಮ್ಮ ಹೋರಾಟಕ್ಕೆ ಬೆಂಬಲ ನೀಡಿದ್ದಾರೆ. ಕರಾವಳಿಯ ಎಲ್ಲಾ ಜನಪ್ರತಿನಿಧಿಗಳು ಬೆಂಬಲಿಸಬೇಕು. ಆಲಂಕಾರಿನಲ್ಲಿ ನಡೆಯುವ ಹಕ್ಕೊತ್ತಾಯ ಸಭೆಯಲ್ಲಿ ಸುಳ್ಯ ಶಾಸಕರು ಹಾಗೂ ಜಿಲ್ಲೆಯ ದೈವಸ್ಥಾನ, ದೇವಸ್ಥಾನದ ಪ್ರಮುಖರು ಭಾಗವಹಿಸಲಿದ್ದಾರೆ ಎಂದರು.

ಹಿತರಕ್ಷಣಾ ವೇದಿಕೆಯ ಜಿಲ್ಲಾ ಸಂಚಾಲಕ ಬೆಳಿಯಪ್ಪ ಗೌಡ ತಿಮರೆಗುಡ್ಡೆ ಮಾತನಾಡಿ, ನಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಂಘಟನೆ ರೂಪುಗೊಳ್ಳಲು ಮುಖ್ಯವಾಗಿ ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ ಅವರೇ ಕಾರಣರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ದೈವಸ್ಥಾನ, ದೇವಸ್ಥಾನದ ಪ್ರಮುಖರನ್ನು ಒಗ್ಗೂಡಿಸಿಕೊಂಡು ಸಾಂಪ್ರದಾಯಿಕ ಕೋಳಿ ಅಂಕವನ್ನು ಕಾನೂನು ಬದ್ಧವಾಗಿ ಮಾಡಲು ಹೋರಾಟವನ್ನು ರೂಪಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಿತರಕ್ಷಣಾ ವೇದಿಕೆಯ ಕಡಬ ತಾಲೂಕು ಪ್ರಮುಖರಾದ ಆನಂದ ಪೂಜಾರಿ ಕಡಬ, ರಮೇಶ್ ಆಲಂಕಾರು, ಹರೀಶ್ ಕಲ್ಕಾಡಿ, ಗೋಪಿನಾಥ್ ಬಂಟ್ರ ಉಪಸ್ಥಿತರಿದ್ದರು.

ನಾವು ಸಾಂಪ್ರದಾಯಿಕ ಕೋಳಿ ಅಂಕವನ್ನು ಉಳಿಸಬೇಕು ಎನ್ನುವ ಉದ್ದೇಶದಿಂದ ಹೋರಾಟಕ್ಕೆ ಇಳಿದಿದ್ದೇವೆ. ಈ ಹೋರಾಟವನ್ನು ವಿಧಾನ ಸೌಧದ ತನಕ ತಲುಪಿಸುವುದು ಹಾಗೂ ಸರಕಾರದಿಂದ ಸ್ಪಂದನೆ ಸಿಗದಿದ್ದರೆ ಕಾನೂನು ಹೋರಾಟಕ್ಕೆ ಸಿದ್ಧತೆ ನಡೆಸುವ ಚಿಂತನೆಯೊಂದಿಗೆ ಹಕ್ಕೊತ್ತಾಯ ಸಭೆ ಹಮ್ಮಿಕೊಳ್ಳಲಾಗಿದೆ

■ ಶಿವಣ್ಣ ಗೌಡ ಇಡ್ಯಾಡಿ,
ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ

ಅನಿಲ್ ವಿ. ಚೆರಿಯನ್‌ಗೆ ಡಾಕ್ಟರೇಟ್

ಕಡಬ: ಮೂಲ್ಕಿ ತಾಲೂಕಿನ ಹಳೆಯಂಗಡಿ ನಾರಾಯಣ ಸನಿಲ್ ಸರಕಾರಿ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಅನಿಲ್ ವಿ. ಚೆರಿಯನ್ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿದೆ.



'ಗ್ರಾಮೀಣ-ಗ್ರಾಮೀಣ ವಲಸೆ: ಕೇರಳೀಯರ ದಕ್ಷಿಣ ಕನ್ನಡ ವಲಸೆಯ ಸಮಾಜೋ-ಆರ್ಥಿಕ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಈ ಗೌರವ ದೊರೆತಿದೆ. ಮಂಗಳೂರಿನ ರಥ ಬೀದಿ ದಯಾನಂದ ಪೈ ಸರಕಾರಿ ಪದವಿ ಕಾಲೇಜಿನ ವಾಣಿಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ವಾಲ್ಟರ್ ಡಿ'ಸೋಜ ಅವರ ಮಾರ್ಗದರ್ಶನದಲ್ಲಿ ಅನಿಲ್ ಈ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿದ್ದರು.

ಕಡಬ ತಾಲೂಕಿನ ಕೆಮ್ಮಾರ್ಯಿ ನಿವಾಸಿ ಎ.ಪಿ. ಚೆರಿಯನ್ ಹಾಗೂ ಆ್ಯನಿ ಮಾಥ್ಯು ದಂಪತಿಯ ಪುತ್ರ ಅನಿಲ್ ವಿ. ಚೆರಿಯನ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕೆಮ್ಮಾರ್ಯಿ ಸರಕಾರಿ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ಮರ್ದಾಳ ಸ್ಯೆಂಟ್ ಮೇರಿಸ್ ಪ್ರೌಢ ಶಾಲೆಯಲ್ಲಿ ಪೂರ್ಣಗೊಳಿಸಿದರು. ಸ್ನಾತಕೋತ್ತರ ಪದವಿಯನ್ನು ಚೆನ್ನೈನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದಾರೆ. ಕೃಷಿ ವಲಸೆ, ಗ್ರಾಮೀಣ ಅಭಿವೃದ್ಧಿ, ವನ್ಯಜೀವಿ-ಮಾನವ ಸಂಘರ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಾಲಘಟ್ಟಗಳ ಕೃಷಿ ಮತ್ತು ಕೃಷಿಯೇತರ ವಲಸೆ ಕುರಿತಾಗಿ ಅನಿಲ್ ವಿ. ಚೆರಿಯನ್ ಅವರು ಹಲವು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.

ಕಿರುಸುದ್ದಿ

ಅಕ್ರಮ ಜಾನುವಾರು ಸಾಗಾಟ ಪತ್ತೆ

ವಿಟ್ಲ: ಕೊಳ್ನಾಡು ಗ್ರಾಮದ ಕರೈ ಎಂಬಲ್ಲಿ ಜಾನುವಾರು ಸಾಗಾಟ ಮಾಡುತ್ತಿದ್ದ ವಾಹನ ನಿಂತಿರುವುದನ್ನು ತಪಾಸಣೆ ನಡೆಸಿದಾಗ ಹಿಂಸಾತ್ಮಕವಾಗಿ ಸಾಗಾಟ ಮಾಡುವುದು ಕಂಡು ಬಂದಿದ್ದು, ಈ ಬಗ್ಗೆ ವಿಟ್ಲ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಶೋಕ್ ಲೈಲ್ಯಾಂಡ್ ದೋಸ್ತ್ ವಾಹನದಲ್ಲಿ ಎರಡು ದನಗಳನ್ನು ಹಿಂಸಾತ್ಮಕವಾಗಿ ತುಂಬಿಸಿ ಎಲ್ಲಿಂದಲೋ ಸಾಗಾಟ ಮಾಡಿಕೊಂಡು ಬಂದಿರುವುದು ಕಂಡುಬಂದಿದೆ. ವಾಹನದಲ್ಲಿದ್ದ ಮಂಡ್ಯ ನಿವಾಸಿಗಳಾದ ಚಾಲಕ ನವೀನ ಹಾಗೂ ಮತ್ತೊರ್ವ ಚೇತನ್ ಎಂಬವರಲ್ಲಿ ವಿಚಾರಿಸಿದಾಗ ಚನ್ನರಾಯಪಟ್ಟಣದಿಂದ ಶಂಕರ ಎಂಬವರು ಸಾಲೆತ್ತೂರಿನ ಶಾಫಿ ಎಂಬವರಿಗೆ ಜಾನುವಾರುಗಳನ್ನು ವಧೆ ಮಾಡಿ ಮಾಂಸ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ನೀಡಿದ್ದಾರೆ. ಜಾನುವಾರುಗಳನ್ನು ಸಾಗಿಸಲು ಬೇರೆಯವರ ಹೆಸರಿನಲ್ಲಿ ದಾಖಲಾತಿಯನ್ನು ಪಡೆದು ಸಾಗಿಸಲಾಗಿದೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಮುಂದಿನ ಕಾನೂನು ಕ್ರಮಕ್ಕಾಗಿ ವಾಹನವನ್ನು ಹಾಗೂ ಜಾನುವಾರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಸ್ಕೂಟರ್‌ಗೆ ಜೀಪು ಡಿಕ್ಕಿ: ಸವಾರ ಸಾವು

ಮಂಗಳೂರು: ಜೀಪೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸಾವನ್ನಪ್ಪಿದ ಘಟನೆ ಶನಿವಾರ ನಗರದ ಪದವಿನಂಗಡಿ ಬಳಿ ಸಂಭವಿಸಿದೆ. ಕುಪ್ಪೆ ಪದವು ನಿವಾಸಿ ಇಮ್ತಿಯಾಜ್ ಹಸೇನ್ (45) ಮೃತಪಟ್ಟವರು. ಬೊಂದೇಲ್ ಕಡೆಗೆ ಸಾಗುತ್ತಿದ್ದ ಜೀಪು ರಸ್ತೆಬದಿಯಲ್ಲಿ ವಿರುದ್ಧ ದಿಕ್ಕಿನಲ್ಲಿ ಬಂದ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಗಂಭೀರ ಗಾಯಗೊಂಡು ಬಳಿಕ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಸ್ಕೂಟರ್ ಸಂಪೂರ್ಣ ಜಖಂಗೊಂಡಿದ್ದು, ಜತೆಗೆ ಅಲ್ಲಿ ನಿಲ್ಲಿಸಲಾಗಿದ್ದ ಬೈಕ್‌ಗಳಿಗೂ ಹಾನಿಯಾಗಿದೆ. ವಿದ್ಯುತ್ ಕಂಬ ಕೂಡಾ ಮುರಿದಿದ್ದು, ಪಕ್ಕದ ಅಂಗಡಿಯ ಹೊರಭಾಗದಲ್ಲಿ ಇರಿಸಿದ್ದ ವಸ್ತುಗಳಿಗೂ. ಹಾನಿಯಾಗಿದೆ. ಘಟನೆಯ ದೃಶ್ಯ ಪಕ್ಕದ ಅಂಗಡಿಯೊಂದರ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಪಾರ್ಟ್ ಟೈಮ್ ಜಾಬ್ ಹೆಸರಲ್ಲಿ ವಂಚನೆ: ದೂರು ದಾಖಲು

ಮಂಗಳೂರು: ಸಂಸ್ಥೆಯೊಂದು ಪಾರ್ಟ್ ಟೈಮ್ ಉದ್ಯೋಗದ ಹೆಸರಿನಲ್ಲಿ ವಂಚಿಸಿದ ಕುರಿತಂತೆ ಕದ್ರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ವಂಚನೆಯ ಜೊತೆಗೆ ಮಾನಸಿಕ ಹಿಂಸೆ ನೀಡಿರುವುದಾಗಿ ವಂಚನೆಗೊಳಗಾದ ವಿದ್ಯಾರ್ಥಿ ಕುದ್ರೋಳಿಯಲ್ಲಿ ಕಾರ್ಯಾಚರಿಸುತ್ತಿರುವ ವೆಕ್ಸಾನ್ ಕಂಪೆನಿ ವಿರುದ್ಧ ದೂರು ನೀಡಿದ್ದಾರೆ. ವಿದ್ಯಾರ್ಥಿನಿಯೊಬ್ಬಳು ನೀಡಿದ ದೂರಿನಂತೆ ವೆಕ್ಸಾನ್ ಕಂಪೆನಿಯ ಸಂಸ್ಥಾಪಕ ದಿಗ್ವಿಜಯ್ ದೇಸಾಯಿ, ಸಹ ಸಂಸ್ಥಾಪಕರಾದ ರಾಮಚಂದ್ರ ಶೆವಾಲೆ, ಸುನಿಲ್ ಸಾವಂತ್, ಅನನ್ ಅಹೈರ್, ಮಂಗಳೂರಿನ ಶಾಖೆಯ ನೌಕರರಾದ ಪಲ್ಲವಿ, ಅಂಜಲಿ, ನವ್ಯ, ನಿವಿಶ್. ಜಯಶ್ರೀ, ಜುನೈದ್ ಎಂಬವರ ವಿರುದ್ಧ ಪ್ರಕರಣ ದಾಖಲಾಗಿದೆ. ವಿದ್ಯಾರ್ಥಿಗಳು ಹಾಗೂ ಇತರ ಉದ್ಯೋಗಾಂಕ್ಷಿಗಳಿಗೆ ಸುಳ್ಳು ಮಾಹಿತಿ ನೀಡಿ ನಂಬಿಕೆ ದ್ರೋಹವನ್ನೆಸಗಿ ಮೋಸ ಮಾಡಿರುವ ಪ್ರಕರಣದಲ್ಲಿ ಉಲ್ಲೇಖಿಸಲಾಗಿದೆ.

ಜಾತಿ ನಿಂದನೆ ಪ್ರಕರಣ: ಯಕ್ಷಗಾನ ಕಲಾವಿದರು ಖುಲಾಸೆ

ಮಂಗಳೂರು: ಅಪರೂಪದ ಪ್ರಕರಣದಲ್ಲಿ ಯಕ್ಷಗಾನ ಕಲಾವಿದರಿಬ್ಬರು ಜಾತಿನಿಂದನೆ ಆರೋಪದ ಪ್ರಕರಣದಲ್ಲಿ ಖುಲಾಸೆಗೊಂಡಿದ್ದಾರೆ. ಮಂಗಳೂರಿನ ಎರಡನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆರೋಪಿಗಳನ್ನು ಖುಲಾಸೆಗೊಳಿಸಿದೆ.

ಪ್ರಕರಣದ ಹಿನ್ನೆಲೆ: ಕರ್ನಾಟಕ ಮೇಳದ ಪ್ರಸಿದ್ಧ ಪ್ರಸಂಗ ಬ್ರಹ್ಮ ಬಲಾಂಡಿ ಎನ್ನುವ ಪ್ರಸಂಗವನ್ನು ಯಕ್ಷ ಕಲಾವಿದ ಸಂಘಟಕ ಪೂರ್ಣೇಶ್ ಎಂಬವರು ಪುರಭವನದಲ್ಲಿ ಸಂಯೋಜಿಸಿದ್ದರು. ಆ ಪ್ರಸಂಗದಲ್ಲಿ ಅದರ ರಚನೆಕಾರ ಅನಂತರಾಮ ಬಂಗಾಡಿಯವರು ಸೃಷ್ಟಿಸಿದ ಪಾತ್ರಗಳ ಹೆಸರನ್ನು ಯಥಾವತ್ತಾಗಿ ಕರಪತ್ರಗಳಲ್ಲಿ ಮುದ್ರಿಸಿ ಹಂಚಲಾಗಿತ್ತು. ಆ ಪಾತ್ರಗಳ ಹೆಸರಿನ ಉಲ್ಲೇಖ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಯಿದೆಯ ಅಡಿಯಲ್ಲಿ ಜಾತಿ ನಿಂದನೆ ಎಂದು ದಲಿತ ಸಂಘಟನೆ ಮುಖಂಡರು ಪೋಲೀಸರಿಗೆ ದೂರು ನೀಡಿದ್ದರು.

ಅದರಂತೆ ಪೋಲೀಸರು ಪೂರ್ಣೇಶ್ ಮತ್ತು ಮಿಜಾರು ತಿಮ್ಮಪ್ಪ ಎಂಬವರ ಮೇಲೆ ಜಾತಿನಿಂದನೆ ಕೇಸು ದಾಖಲಿಸಿ ಎರಡನೆ ಹೆಚ್ಚುವರಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಈ ಬಗ್ಗೆ ಹಲವಾರು ಸಾಕ್ಷಿಗಳನ್ನು ದೂರುದಾರರು ಹಾಜರುಪಡಿಸಿದ್ದರು. ಆ ನಂತರ ಸಂಘಟಕರು ಸದ್ರಿ ಯಕ್ಷಗಾನವನ್ನು ರದ್ದುಪಡಿಸಿ ಬೇರೆ ಪ್ರಸಂಗವನ್ನು ಆಯೋಜಿಸಿದ್ದರು.

ಪ್ರಕರಣದ ಸಮಗ್ರ ತನಿಖೆ ನಡೆದು ವಾದ ಪ್ರತಿವಾದವನ್ನು ಆಲಿಸಿದ ನ್ಯಾಯಾಲಯ ಆರೋಪಿಗಳನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ. ಆರೋಪಿಗಳ ಪರವಾಗಿ ವಕೀಲ ಶಶಿರಾಜ್ ರಾವ್ ಕಾವೂರು ವಾದಿಸಿದ್ದರು.



ಪಡುಬಿದ್ರಿಯ ಎರ್ಮಾಳು ಶ್ರೀ ಜನಾರ್ದನ ಕಂಬಳ ಸಮಿತಿ ವತಿಯಿಂದ ಶನಿವಾರ ನಡೆದ 'ನಮ್ಮ ಕಂಬಳ-ಎರ್ಮಾಳು ಕಂಬಳ' ಎರ್ಮಾಳು ತೆಂಕ-ಬಡಾ ಜೋಡುಕರೆ ಕಂಬಳದಲ್ಲಿ ಅನೇಕ ಕಂಬಳ ಕೋಣಗಳು ಭಾಗವಹಿಸಿದವು.

ಪ್ರಾಂಶುಪಾಲರ ಅಮಾನತು ಘಟನೆ ಶಾಸಕರ 'ಒಣ ಪ್ರತಿಷ್ಠೆ'ಗೆ ಸಾಕ್ಷಿ: ಕಿಶೋರ್

ಪುತ್ತೂರು: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು ಮೂಲಭೂತ ಸೌಕರ್ಯಗಳ ಕೊರತೆ ಮತ್ತು ವಿಪರೀತ ಧೂಳಿನ ಸಮಸ್ಯೆಯಿಂದ ಬೇಸತ್ತು ನ್ಯಾಯಯುತವಾಗಿ ಪ್ರತಿಭಟನೆ ನಡೆಸಿದ್ದಕ್ಕೆ, ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ವೇದಶ್ರೀ ನಿಡ್ಯಾ ಅವರನ್ನು ಅಮಾನತು ಮಾಡಿಸಿರುವ ಪುತ್ತೂರು ಶಾಸಕ ಅಶೋಕ್ ರೈ ಅವರ ದ್ವೇಷದ ರಾಜಕಾರಣವನ್ನು ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಶಾಸಕ ಕಿಶೋರ್ ಕುಮಾರ್ ಪುತ್ತೂರು ಅವರು ಉಗ್ರವಾಗಿ ಖಂಡಿಸಿದ್ದಾರೆ.



ವಿದ್ಯಾರ್ಥಿನಿಯರ ಹಿತಾಸಕ್ತಿಗೆ ಸ್ಪಂದಿಸಿದ ಪ್ರಾಮಾಣಿಕ ಅಧಿಕಾರಿಯನ್ನು ಬಲಿಪಶು ಮಾಡುವ ಬದಲು, ನಿಯಮ ಉಲ್ಲಂಘಿಸಿದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವ ತಾಕತ್ತು ಶಾಸಕರಿಗಿಲ್ಲವೇ ಎಂದು ಅವರು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಹಳೆ ಜೈಲು ಕಟ್ಟಡದಲ್ಲಿ ನಡೆಯುತ್ತಿರುವ ಈ ಕಾಲೇಜಿನ ಸಮಸ್ಯೆ ಕೇವಲ ಧೂಳಿನದ್ದಲ್ಲ. ಐನೂರಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಕನಿಷ್ಠ ಸೌಕರ್ಯಗಳಿಲ್ಲದೆ ನರಕಯಾತನೆ ಅನುಭವಿಸುತ್ತಿದ್ದಾರೆ. ತರಗತಿ ಕೋಣೆಗಳ ಕೊರತೆಯಿದ್ದು, ಡಿಜಿಟಲ್ ಕ್ಲಾಸ್, ಪ್ರೊಜೆಕ್ಟರ್ ಇದ್ದರೂ ಬಳಸಲು ಜಾಗವಿಲ್ಲದ ಸ್ಥಿತಿ ಇದೆ. ಜೈಲಿನ ಹಳೆ ಕಟ್ಟಡವಾಗಿರುವುದರಿಂದ ಕೋಣೆಗಳಲ್ಲಿ ಕತ್ತಲಿದ್ದು, ಫ್ಯಾನ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಜೊತೆಗೆ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳಿಲ್ಲ ಮತ್ತು ಕಲಾ, ವಾಣಿಜ್ಯ, ಹಿಂದಿ, ಇಂಗ್ಲಿಷ್ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರ ತೀವ್ರ ಕೊರತೆ ಇದೆ. ಇಂತಹ ವಾಸ್ತವಿಕ ಸಮಸ್ಯೆಗಳನ್ನು ಮರೆಮಾಚಿ, ಸಮೀಪದಲ್ಲಿ ಕಾಮಗಾರಿ ನಡೆಸುವಾಗ ಧೂಳು ನಿಯಂತ್ರಣ ಮಾಡದ ಗುತ್ತಿಗೆದಾರರಿಗೆ ಕನಿಷ್ಠ ಎಚ್ಚರಿಕೆಯನ್ನೂ ನೀಡದೆ ಶಾಸಕರು ಮೃದು ಧೋರಣೆ ತಳೆದಿರುವುದು ಸಂಶಯಕ್ಕೆ ಎಡೆ ಮಾಡಿ ಕೊಟ್ಟಿದೆ. ಸರ್ಕಾರದ ಮುಂದೆ ತಪ್ಪು ಮಾಹಿತಿ ನೀಡಿ ಪ್ರಾಂಶುಪಾಲರನ್ನು ಅಮಾನತು ಮಾಡಿಸಿರುವುದು ಶಾಸಕರ ಆಡಳಿತ ವೈಫಲ್ಯ ಹಾಗೂ 'ಒಣ ಪ್ರತಿಷ್ಠೆ'ಯನ್ನು ಎತ್ತಿ ತೋರಿಸುತ್ತದೆ. ಪ್ರಾಂಶುಪಾಲರ ಅಮಾನತನ್ನು ಕೂಡಲೇ ಹಿಂಪಡೆಯಬೇಕು ಇಲ್ಲವಾದಲ್ಲಿ ತೀವ್ರ ಹೋರಾಟ ನಡೆಸಬೇಕಾದೀತೆಂದು ಅವರು ಹೇಳಿದ್ದಾರೆ.

ಮಾ.4ರಿಂದ 8ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ | ಎರಡು ಲಕ್ಷ ಮಂದಿ ಭಕ್ತರ ನಿರೀಕ್ಷೆ

ಬ್ರಹ್ಮಕಲಶ ಸಂಭ್ರಮದಲ್ಲಿ ಸಸಿಹಿತ್ಲು ಕ್ಷೇತ್ರ

ಮಂಗಳೂರು: ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾ.4ರಿಂದ 8ರವರೆಗೆ ಸಪರಿವಾರ ಶ್ರೀ ಭಗವತೀ ಅಮ್ಮನವರಿಗೆ 'ಬ್ರಹ್ಮಕಲಶೋತ್ಸವ' ಅದ್ದೂರಿಯಾಗಿ ನಡೆಯಲಿದ್ದು, ಎರಡು ಲಕ್ಷ ಮಂದಿ ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ತಿಳಿಸಿದರು.

ಮಾ.4ರಂದು ಬೆಳಗ್ಗೆ8.30ರಿಂದಮಹಾಪ್ರಾರ್ಥನೆ, ವೈದಿಕ ಕಾರ್ಯಕ್ರಮ, ಉಗ್ರಾಣ ಮುಹೂರ್ತ, ಬೆಳಗ್ಗೆ 9ಕ್ಕೆಪಾವಂಜೆಶ್ರೀಜ್ಞಾನಶಕ್ತಿಸುಬ್ರಹ್ಮಣ್ಯ ದೇವಸ್ಥಾನದಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ಮುಕ್ಕ ಮಾರ್ಗವಾಗಿ ಸಸಿಹಿತ್ಲುವಿಗೆ ಹಸಿರು ಹೊರೆಕಾಣಿಕೆ ಶೋಭಾಯಾತ್ರೆ ನಡೆಯಲಿದೆ. ಸಂಜೆ 4.30ರಿಂದ ಕದಿಕೆ ಭಂಡಾರ ಮನೆಯಿಂದ ಭಂಡಾರ ಆಗಮನ, ಸಂಜೆ 4ರಿಂದ ಸಾಂಸ್ಕೃತಿಕ ಕಾರ್ಯಕ್ರಮ, 5ಕ್ಕೆ ಧಾರ್ಮಿಕ ಸಭೆ ನಡೆಯಲಿದೆ ಎಂದು ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಮಾ.5ರಂದು ಬೆಳಗ್ಗೆ 8ರಿಂದ ಹಾಗೂ ಸಂಜೆ 4.30ರಿಂದ ವೈದಿಕ ಕಾರ್ಯಕ್ರಮ, ಸಂಜೆ 4ರಿಂದ ಸಾಂಸ್ಕೃತಿಕ ಕಾರ್ಯಕ್ರಮ, 5ಕ್ಕೆ ಧಾರ್ಮಿಕ ಸಭೆ, ಮಾ.6ರಂದು ಬೆಳಗ್ಗೆ 7ರಿಂದ ಆಯುತ ಕದಳೀಯಾಗ ನಡೆಯಲಿದೆ. ಸಂಜೆ 4ರಿಂದ ಮಹಿಳಾ ವೃಂದದವರಿಂದ ಸಾಮೂಹಿಕ ಕುಂಕುಮಾರ್ಚನೆ ಸೇವೆ ನೆರವೇರಲಿದ್ದು, ನಾಲ್ಕು ಸಾವಿರ ಮಂದಿ ಭಾಗವಹಿಸಲಿದ್ದಾರೆ. ಸಂಜೆ 4.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಮಾ.7ರಂದು ಬೆಳಗ್ಗೆ 7ರಿಂದ ಹಾಗೂ ಸಂಜೆ 4.30ರಿಂದ ವೈದಿಕ ಕಾರ್ಯಕ್ರಮ, ಮಧ್ಯಾಹ್ನ 3ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ಕ್ಕೆ ಧಾರ್ಮಿಕ ಸಭೆ ನೆರವೇರಲಿದೆ ಎಂದರು.

ಸಸಿಹಿತ್ಲು ಭಗವತೀ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಳ್ಚಡ ಗಂಪಮನೆ ಕಟೀಲು, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ವಾಮನ ಇಡ್ಯಾ, ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ ಕರಿತೋಟ ಉಪಸ್ಥಿತರಿದ್ದರು.

ಐ.11ರಿಂದ 16ರವರೆಗೆ ಭರಣಿ ಮಹೋತ್ಸವ

ಸಸಿಹಿತ್ಲು ಭಗವತೀ ದೇವಸ್ಥಾನದಲ್ಲಿ ಏ.10ರಂದು ನಡಾವಳಿ ಮಹೋತ್ಸವ, ಏ.11ರಿಂದ 16ರವರೆಗೆ ಭರಣಿ ಮಹೋತ್ಸವ ನಡೆಯಲಿದೆ ಎಂದು ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ತಿಳಿಸಿದರು.



ಮಾ.8ರಂದು ಬ್ರಹ್ಮಕಲಶ, ಗಂಗಾರತಿ

ಮಾ.8ರಂದು ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮ, ಚಂಡಿಕಾಯಾಗ, ಬೆಳಗ್ಗೆ 11.15ರ ವೃಷಭ ಲಗ್ನ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ, ಮಹಾಪೂಜೆ, ಪಲ್ಲಪೂಜೆ, ಮಧ್ಯಾಹ್ನ 12.30ರಿಂದ ಮಹಾ ಅನ್ನಸಂತರ್ಪಣೆ, 2.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4ರಿಂದ ಧಾರ್ಮಿಕ ಸಭೆ, ಸಂಜೆ 6ರಿಂದ ದೀಪಾರಾಧನೆ, ಭಂಡಾರ ನಿರ್ಗಮನ ನಡೆಯಲಿದೆ. ಸಮುದ್ರ ತೀರದಲ್ಲಿ ಸಂಜೆ 6.30ರಿಂದ ಚಕ್ರವರ್ತಿ ಸೂಲಿಬೆಲೆ ಅವರಿಂದ ಗಂಗೆಗೆ ನುಡಿ ನಮನ, ರಾತ್ರಿ 7.30ರಿಂದ ವೈಭವದ ಗಂಗಾರತಿ, 8.15ರಿಂದ ಗಂಗಾ ಗಾಯನ ನಡೆಯಲಿದೆ ಎಂದು ನಳಿನ್ ಕುಮಾರ್ ಕಟೀಲು ತಿಳಿಸಿದರು.

> **18 ಭಗವತೀ ಕ್ಷೇತ್ರಗಳ ಪೈಕಿ ಸಸಿಹಿತ್ಲು ಕ್ಷೇತ್ರದ ಆರಾಧನಾ ಪದ್ಧತಿ, ಆಡಳಿತ ವಿಭಿನ್ನವಾಗಿದೆ. ಸಮಾಜದ ಎಲ್ಲ ವರ್ಗದ ಜನರು ಸಹಿಹಿತ್ಲು ಕ್ಷೇತ್ರದಲ್ಲಿ ಭಗವತಿಯ ಆರಾಧನೆ ನಡೆಸುತ್ತಾರೆ. ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನವನ್ನು ತೀರ್ಥಕ್ಷೇತ್ರ ಹಾಗೂ ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಮುಂದಕ್ಕೆ ಗೆಸ್ಟ್ ಹೌಸ್ ಹಾಗೂ ಅನ್ನಛತ್ರ ನಿರ್ಮಾಣ ಮಾಡಲಾಗುವುದು. ಮುಂದಿನ ನಾಲ್ಕು ವರ್ಷದೊಳಗೆ ಎಲ್ಲ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.**
>
> ■ **ನಳಿನ್‌ಕುಮಾರ್ ಕಟೀಲು,**
> **ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರು**

12 ವರ್ಷಗಳ ನಂತರ ಒಳಗಿನ ಮರಳು ಬದಲಾವಣೆ

ದೇವಸ್ಥಾನದ ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವ ಅಂಗವಾಗಿ ಒಟ್ಟು 18 ಕೋಟಿ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 5 ಕೋಟಿ ರೂ. ವೆಚ್ಚದ ಕಾಮಗಾರಿ ಪೂರ್ಣಗೊಂಡಿದೆ. ದೇವಸ್ಥಾನದ ಸುತ್ತಲೂ 50 ಲಕ್ಷ ರೂ. ವೆಚ್ಚದಲ್ಲಿ ಇಂಟರ್‌ಲಾಕ್ ಅಳವಡಿಸಲಾಗಿದೆ. ವಿಧಾನಪರಿಷತ್ ಸದಸ್ಯರ ನಿಧಿ ಮೂಲಕ ದೇವಸ್ಥಾನದ ಎದುರು ಭಾಗದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಾಣ, ಶಾಸಕ ಉಮಾನಾಥ ಕೋಟ್ಯಾನ್ ಅವರ ವತಿಯಿಂದ ಹಳೆಯಂಗಡಿ ರಸ್ತೆಯಿಂದ ಸಸಿಹಿತ್ಲು ರಸ್ತೆವರೆಗೆ 10 ಲಕ್ಷ ರೂ. ಅನುದಾನದಡಿಯಲ್ಲಿ ಡಾಮರೀಕರಣ. ಹಳೆಯಂಗಡಿ ಗ್ರಾಮ ಪಂಚಾಯತ್ ವತಿಯಿಂದ 4 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನದ ಮುಂಭಾಗದ ಚರಂಡಿ ದುರಸ್ತಿ ಹಾಗೂ 1.5 ಲಕ್ಷ ರೂ. ವೆಚ್ಚದಲ್ಲಿ ಹೈಮಾಸ್ಟ್ ಬೀದಿ ದೀಪ ಅಳವಡಿಕೆ, ದಾನಿಗಳ ನೆರವಿನಿಂದ ಸುಮಾರು 75 ಲಕ್ಷ ರೂ.ವೆಚ್ಚದಲ್ಲಿ ದೇವಳದ ಎರಡು ಪ್ರಧಾನ ಗೋಪುರಗಳ ಪುನರ್‌ನವೀಕರಣ, 30 ಲಕ್ಷ ರೂ. ವೆಚ್ಚದಲ್ಲಿ ದಾನಿಗಳ ನೆರವಿನಿಂದ ದೇವಸ್ಥಾನದ ಗರ್ಭಗುಡಿ, ಧ್ವಜಸ್ತಂಭ ಹಾಗೂ ಹೂ ಹಾಕುವ ಕಲ್ಲುಗಳಿಗೆ ತಾಮ್ರದ ಹೊದಿಕೆ, ಗರ್ಭಗುಡಿಯ ಬಾಗಿಲಿನ ಚೌಕಟ್ಟುಗಳಿಗೆ 40 ಲಕ್ಷ ವೆಚ್ಚದಲ್ಲಿ ಬೆಳ್ಳಿಯ ಹೊದಿಕೆ, 50 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನದ ಹೊರಾಂಗಣ ಒಳಾಂಗಣ ಸುತ್ತು ಪೌಳಿಗಳಿಗೆ ಶಿಲ್ಪಿ ಸುಧಾಕರ್ ಶಿವಮೊಗ್ಗ ಅವರ ನೇತೃತ್ವದಲ್ಲಿ ನೂತನ ವಿನ್ಯಾಸದ ಕಾರ್ನಿಷ್ ಕೆಲಸ ಜೊತೆಗೆ 20 ವಿವಿಧ ದೇವರುಗಳ ಮೂರ್ತಿ ರಚನೆ, ದೇವಸ್ಥಾನದ ಒಳಾಂಗಣದ ಗೋಡೆಗಳಿಗೆ ಸುಮಾರು 15 ಲಕ್ಷ ವೆಚ್ಚದಲ್ಲಿ ಗ್ರಾನೈಟ್ ಅಳವಡಿಸಲಾಗಿದೆ. ದೇವಸ್ಥಾನದ ಸುತ್ತಲೂ ಆವರಣ ಗೋಡೆ ನಿರ್ಮಾಣ 25 ಲಕ್ಷ ರೂ. ವೆಚ್ಚದಲ್ಲಿ, 25 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ಮತ್ತು ಅನ್ನಛತ್ರಕ್ಕೆ ಹಾಗೂ ಸುತ್ತಲಿನ ಕಂಪೌಂಡ್‌ಗಳಿಗೆ ಬಣ್ಣದ ಕೆಲಸ, 12 ವರ್ಷಗಳ ನಂತರ ದೇವಸ್ಥಾನದ ಒಳಗಿನ ಮರಳು ಬದಲಾವಣೆ ಮಹಾ ಕರ ಸೇವೆಯ ಮೂಲಕ ನೆರವೇರಿಸಲಾಗಿದೆ.

ಪಿಯುಸಿ ಪರೀಕ್ಷೆ: ದಕ್ಷಿಣ ಕನ್ನಡದಲ್ಲಿ ಮೊದಲ ದಿನ 165 ಮಂದಿ ಗೈರು

ಮಂಗಳೂರು: ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ಮೊದಲ ದಿನದ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ.

ಜಿಲ್ಲೆಯಲ್ಲಿ ಈ ಬಾರಿ ಒಟ್ಟು 37,337 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. 59 ಪರೀಕ್ಷಾ ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ನಡೆದ ಮೊದಲ ದಿನದ ಪರೀಕ್ಷೆಯಲ್ಲಿ ಒಟ್ಟು 165 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಮಾತೃ ಭಾಷೆ ಕನ್ನಡ ಪರೀಕ್ಷೆಗೆ ಒಟ್ಟು 21,498 ವಿದ್ಯಾರ್ಥಿಗಳು ಹಾಜರಾಗಬೇಕಿದ್ದು, 163 ಮಂದಿ ಗೈರಾಗಿದ್ದರು. ಅರಾಬಿಕ್ ಭಾಷಾ ಪರೀಕ್ಷೆಗೆ 313 ಮಂದಿ ಹಾಜರಾಗಬೇಕಿದ್ದು, ಈ ಪೈಕಿ ಇಬ್ಬರು ಗೈರಾಗಿದ್ದರು ಎಂದು ದಕ್ಷಿಣ ಕನ್ನಡ ಜಿಲ್ಲಾ ಶಾಲಾ ಶಿಕ್ಷಣ ಇಲಾಖಾ ಉಪನಿರ್ದೇಶಕರು ತಿಳಿಸಿದ್ದಾರೆ.

ಈ ಬಾರಿ ಪರೀಕ್ಷೆ ಬರೆಯುವವರ ಪೈಕಿ ಒಟ್ಟು 18,745 ಬಾಲಕರು ಮತ್ತು 18592 ಬಾಲಕಿಯರಾಗಿದ್ದಾರೆ. 15 ಸರಕಾರಿ, 22 ಖಾಸಗಿ ಮತ್ತು 22 ಅನುದಾನರಹಿತ ಖಾಸಗಿ ಕಾಲೇಜುಗಳು ಸೇರಿದಂತೆ 59 ಪರೀಕ್ಷಾ ಕೇಂದ್ರಗಳ ವ್ಯವಸ್ಥೆ ಮಾಡಲಾಗಿದೆ.



» ಈ ಬಾರಿ 18,745 ಬಾಲಕರು, 18592 ಬಾಲಕಿಯರು

ಜಿಲ್ಲಾ ವ್ಯಾಪ್ತಿಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳ ಸಾಗಾಣಿಕೆಗಾಗಿ ಒಟ್ಟು 16 ಮಾರ್ಗಗಳನ್ನು ಕಲ್ಪಿಸಲಾಗಿದೆ. ತ್ರಿಸದಸ್ಯ ಸಮಿತಿ ಸದಸ್ಯರನ್ನೊಳಗೊಂಡ 16 ತಂಡಗಳನ್ನು ನಿಯೋಜಿಸಲಾಗಿದೆ. ಅಲ್ಲದೆ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಪರೀಕ್ಷಾ ಕೇಂದ್ರಗಳ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ದೃಢೀಕರಣವನ್ನು ಪಡೆಯಲಾಗಿದೆ. ಪರೀಕ್ಷಾ ಕಾರ್ಯಕ್ಕೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಲ್ಲದೆ ಪರೀಕ್ಷೆ ನಡೆಯುವ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಕಾಪು ಹೊಸಮಾರಿಗುಡಿ ಕ್ಷೇತ್ರ: ಪುನರ್‌ಪ್ರತಿಷ್ಠೆ ಪ್ರಥಮ ವರ್ಧಂತ್ಯುತ್ಸವಕ್ಕೆ ಸಂಭ್ರಮದ ಚಾಲನೆ

ಶಿರ್ವ/ಕಾಪು: ಇತಿಹಾಸ ಪ್ರಸಿದ್ಧ ಕಾಪು ಶ್ರೀ ಹೊಸಮಾರಿಗುಡಿ ದೇವಳದಲ್ಲಿ ಉಚ್ಚಂಗಿ ಸಹಿತ ಶ್ರೀ ಮಾರಿಯಮ್ಮ ದೇವಿಯ ಪುನ: ಪ್ರತಿಷ್ಠಾ ಪ್ರಥಮ ವರ್ಧಂತ್ಯುತ್ಸವದ ಅಂಗವಾಗಿ ಮೂರುದಿನಗಳ ಪರ್ಯಂತಜರುಗುವ'ಮಾತೃವೈಭವ' ಭಕ್ತಿಭಾವಗಳ ಕಲರವ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಶ್ರೀಕ್ಷೇತ್ರದ ತಂತ್ರಿಗಳಾದ ಕೊರಂಗ್ರ ಪಾಡಿ ವಿದ್ವಾನ್ ಪಿ.ಕುಮಾರಗುರು ತಂತ್ರಿಗಳ ನೇತೃತ್ವದಲ್ಲಿ ಪ್ರಧಾನ ಅರ್ಚಕ ರಾದ ವೇದಮೂರ್ತಿ ಶ್ರೀನಿವಾಸ ತಂತ್ರಿ ಕಲ್ಯಾ ಅವರ ಸಹಭಾಗಿತ್ವದಲ್ಲಿ ವಿವಿಧ ಧಾರ್ಮಿಕ ಅನುಷ್ಠಾನಗಳು ಜರುಗಿದವು.

ಕ್ಷೇತ್ರದ ಅಭಿವೃದ್ಧಿ ಸಮಿತಿ ಮತ್ತು 'ಮಾತೃವೈಭವ'' ಸೇವಾ ಸಮಿತಿ ಅಧ್ಯಕ್ಷ ಕೆ.ವಾಸುದೇವ ಶೆಟ್ಟಿ, ವ್ಯವಸ್ಥಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಉಡುಪಿ ಜಿಲ್ಲಾ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಸಹಾಯಕ ಆಯುಕ್ತೆ ಮಂಜುಳಾ ಟಿ.ಎನ್, ಶ್ರುತಿ ಹರಿರಾಮ್ ಶಂಕರ್, ರಂಜನಿ ಸುಧಾಕರ ಹೆಗ್ಡೆ, ಅನುರಾಧಾ ಮನೋಹರ್ ಶೆಟ್ಟಿ, ಮಮತಾ ಯೋಗೀಶ್ ಶೆಟ್ಟಿ, ವಿದ್ಯಾ ರವಿಕಿರಣ್, ಲಕ್ಷ್ಮೀ ಶ್ರೀನಿವಾಸ ತಂತ್ರಿ ಸುಗುಣಾ ರತ್ನಾಕರ ಶೆಟ್ಟಿ ನಡಿಕೆರೆ ಸೇರಿದಂತೆ 81 ಮಹಿಳೆಯರು ಮಾತೃತವೈಭವದ ದೀಪ ಪ್ರಜ್ವಲನ ಮಾಡಿದರು. ನಂತರ ಅರಣಿ ಮಥನ ಗಣಯಾಗ, ನವಗ್ರಹ ಹೋಮ, ಮೃತ್ಯುಪಂಚಕ ಪೂಜೆ, ಶ್ರೀಚಂಡೀಪುರಶ್ಚರನಮ್ ಮತ್ತು ಸಂಜೆ ವಾಸ್ತುಹೋಮ, ವಾಸ್ತುಪೂಜೆ, ಸುದರ್ಶನ ರಕ್ಷಾ ಧಾರ್ಮಿಕ ಕ್ರಮಗಳು ಜರುಗಿದವು.



ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ, ಶಾಸಕ ಸುರೇಶ್ ಬಾಬು ಚಿಕ್ಕನಾಯ್ಕನಹಳ್ಳಿ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವ ವಿನಯಕುಮಾರ್ ಸೊರಕೆ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕ್ಷೇತ್ರದ ಕಾರ್ಯನಿರ್ವಹಣಾಧಿಕಾರಿ ರವಿಕಿರಣ್, ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕಾಪು ದಿವಾಕರ ಶೆಟ್ಟಿ, ಮಾಧವ ಆರ್. ಪಾಲನ್, ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ಮನೋಹರ ಎಸ್. ಶೆಟ್ಟಿ, ಗಂಗಾಧರ ಸುವರ್ಣ, ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ, ಮುಂಬಯಿ ಸಮಿತಿ ಗೌರವ ಅಧ್ಯಕ್ಷ ಸುಧಾಕರ ಹೆಗ್ಡೆ ಆರ್ಥಿಕ ಸಮಿತಿ ಪ್ರಧಾನ ಸಂಚಾಲಕ ಉದಯ ಸುಂದರ ಶೆಟ್ಟಿ, ಸೇವಾ ಸಮಿತಿ ಪ್ರಧಾನ ಕಾರ್ಯದರ್ಶಿ ಯೋಗೀಶ ಶೆಟ್ಟಿ ಬಾಲಾಜಿ, ಕಾರ್ಯಾಧ್ಯಕ್ಷ ಭಗವಾನ್ ದಾಸ್ ಶೆಟ್ಟಿಗಾರ್, ಪ್ರಭಾಕರ ಎಸ್.ಪೂಜಾರಿ, ಹರಿಯಪ್ಪ ಕೋಟ್ಯಾನ್, ಲಕ್ಷ್ಮೀಶ ತಂತ್ರಿ, ಜಯರಾಮ ಆಚಾರ್ಯ, ಶೇಖರ ಸಾಲಿಯಾನ್, ಮನೋಹರ ರಾವ್, ರವೀಂದ್ರ ಮಲ್ಲಾರು, ಜಯಲಕ್ಷ್ಮೀ ಎಸ್, ಚರಿತಾ ದೇವಾಡಿಗ, ಸಂದೀಪ್ ಶೆಟ್ಟಿ ಮುಂಬಯಿ, ರಮೇಶ್ ಶೆಟ್ಟಿ ಪಾಂಡು ಶೆಟ್ಟಿ, ಪ್ರೇಮ್ ನಾಥ್ ಶೆಟ್ಟಿ ಸಹಿತ ವಿವಿಧ ಸಮಿತಿಗಳ ಪದಾಧಿಕಾರಿಗಳು ಕ್ಷೇತ್ರದ ಭಗವದ್ಭಕ್ತರು ಪಾಲ್ಗೊಂಡಿದ್ದರು.

ಅದಾನಿ ಸಮೂಹದ ಅಧ್ಯಕ್ಷ, ಕಾರ್ಯನಿರ್ವಾಹಕ ನಿರ್ದೇಶಕ ಕಿಶೋರ್‌ಆಳ್ವ ಅಧ್ಯಕ್ಷತೆಯಲ್ಲಿ ಪಡುಬಿದ್ರಿಯ ಬಂಟರ ಭವನ ಸಭಾಂಗಣದಲ್ಲಿ ಸಮಾರಂಭ

ಅದಾನಿಯಿಂದ 790 ವಿದ್ಯಾರ್ಥಿಗಳಿಗೆ ರೂ. 25 ಲಕ್ಷ ವಿದ್ಯಾರ್ಥಿ ವೇತನ ವಿತರಣೆ

ಪಡುಬಿದ್ರಿ: ಅದಾನಿ ಫೌಂಡೇಶನ್ ಹಾಗೂ ಅದಾನಿ ಪವರ್ ಲಿಮಿಟೆಡ್ ಸಂಯುಕ್ತವಾಗಿ, ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಎಲ್ಲೂರು ಗ್ರಾಮದ ವಿದ್ಯುತ್ ಸ್ಥಾವರದ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ 12 ಗ್ರಾಮಪಂಚಾಯತ್‌ಗಳ ವ್ಯಾಪ್ತಿಯ 790 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಒಟ್ಟು ರೂ. 25 ಲಕ್ಷ ಮೊತ್ತದ ವಿದ್ಯಾರ್ಥಿವೇತನವನ್ನು ವಿತರಿಸಿತು.

ಪಡುಬಿದ್ರಿಯ ಬಂಟರ ಭವನ ಸಭಾಂಗಣದಲ್ಲಿ ನಡೆದ ಸಮಾರಂಭವನ್ನು ಶಿಕ್ಷಣ ತಜ್ಞರಾದ ನಿವೃತ್ತ , ಫಾದರ್ ಫ್ರಾನ್ಸಿಸ್ ಜೇವಿಯರ್ ಗೋಮ್ಸ್ ಅವರು ದೀಪಬೆಳಗಿಸುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನು ಅದಾನಿ ಸಮೂಹದ ಅಧ್ಯಕ್ಷ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾದ ಕಿಶೋರ್‌ಆಳ್ವ ಅವರು ವಹಿಸಿದ್ದರು. ತೆಂಕಗ್ರಾಮಪಂಚಾಯತ್‌ನ ಸುರೇಖಾ, ಮಜೂರು ಗ್ರಾಮ ಪಂಚಾಯತ್‌ನ ಜನಾರ್ದನ ಆಚಾರ್ಯ, ಹೆಜಮಾಡಿ ಗ್ರಾಮಪಂಚಾಯತ್‌ನ ರೇಷ್ಮಾ ಮೆಂಡನ್, ಇನ್ನಾ ಗ್ರಾಮಪಂಚಾಯತ್‌ನ ಸರಿತಾ ಶೆಟ್ಟಿ, ಬಳ್ಕುಂಜೆ ಗ್ರಾಮಪಂಚಾಯತ್‌ನ ಮಮತಾ ಪೂಂಜಾ ಹಾಗೂ ಎಲ್ಲೂರು ಗ್ರಾಮಪಂಚಾಯತ್‌ನ ಉಷಾ ಅವರು ಉಪಸ್ಥಿತರಿದ್ದರು.



ಅದಾನಿ ಪವರ್ ಲಿಮಿಟೆಡ್ ಮತ್ತು ಅದಾನಿ ಫೌಂಡೇಶನನ ಸಹಯೋಗದಲ್ಲಿ ಪ್ರತಿವರ್ಷ ಶಿಕ್ಷಣ, ಆರೋಗ್ಯ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ನಾನಾ ಕಾರ್ಪೊರೇಟ್ ಸಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಸ್ಥಾವರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರಗತಿಶೀಲ ಹಾಗೂ ಎಲ್ಲರನ್ನು ಒಳಗೊಂಡ ಸಮಾಜವನ್ನು ನಿರ್ಮಿಸುವಲ್ಲಿ ಶಿಕ್ಷಣದ ಪ್ರಮುಖ ಪಾತ್ರವನ್ನು ಒತ್ತಿ ಹೇಳಿದ ಕಿಶೋರ್‌ಆಳ್ವ, ಶಿಕ್ಷಣವು ವೈಯಕ್ತಿಕ ಬೆಳವಣಿಗೆಗೆ ಹಾಗೂ ಸಮುದಾಯದ ಒಟ್ಟಾರೆ ಅಭಿವೃದ್ಧಿಗೆ ಅತ್ಯಂತ ಬಲವಾದ ಅಡಿಪಾಯಗಳಲ್ಲಿ ಒಂದಾಗಿದೆ ಎಂದರು.

ಇಂದಿನ ವೇಗವಾಗಿ ಬದಲಾಗುತ್ತಿರುವ ಡಿಜಿಟಲ್ ಜಗತ್ತಿನಲ್ಲಿ ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ವಿವಿಧ ಕ್ಷೇತ್ರಗಳಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದ್ದು, ಭವಿಷ್ಯಕ್ಕೆ ಸಿದ್ಧರಾಗಲು ಡಿಜಿಟಲ್ ಹಾಗೂ ತಂತ್ರಜ್ಞಾನ ಆಧಾರಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಅದಾನಿ ಪವರ್ ಲಿಮಿಟೆಡ್ ಉಡುಪಿ ವಿದ್ಯುತ್ ಯೋಜನೆಯಿಂದ ಪ್ರತಿವರ್ಷ ಸರಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 8,000 ವಿದ್ಯಾರ್ಥಿಗಳಿಗೆ ಶಿಕ್ಷಣ ಕಿಟ್ ಗಳನ್ನು ವಿತರಿಸಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯ ಒದಗಿಸಲಾಗುತ್ತಿದೆ ಎಂದು ಆಳ್ವವಿವರಿಸಿದರು.

ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ 12 ಗ್ರಾಮಪಂಚಾಯತ್‌ಗಳ ಸಹಕಾರದಿಂದ, 2024–25 ಶೈಕ್ಷಣಿಕ ವರ್ಷದಲ್ಲಿ ಉತ್ತಮ ಸಾಧನೆ ಮಾಡಿದ 790 ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಒಟ್ಟು ರೂ. 25 ಲಕ್ಷ ಮೊತ್ತದ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಮುಖ್ಯಅತಿಥಿ ಫಾದರ್ ಫ್ರಾನ್ಸಿಸ್ ಜೇವಿಯರ್ ಗೋಮ್ಸ್ ಅವರು, ಕಾಪು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಶಿಕ್ಷಣ ಅಭಿವೃದ್ಧಿಗೆ ನಿರಂತರ ಹಾಗೂ ವ್ಯವಸ್ಥಿತವಾಗಿ ಕೊಡುಗೆ ನೀಡುತ್ತಿರುವ ಅದಾನಿ ಪವರ್ ಲಿಮಿಟೆಡ್ ಮತ್ತು ಅದಾನಿ ಫೌಂಡೇಶನ್ ಸಂಸ್ಥೆಗಳನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಪಂಚಾಯತ್‌ಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳು, ಶಿಕ್ಷಣತಜ್ಞರು, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂಸ್ಥೆಯ ಎಜಿಎಂ ರವಿ ಆರ್. ಜೇರೆ ಸ್ವಾಗತಿಸಿದರು. ಕಾರ್ಯಕ್ರಮವನ್ನು ದೇವಿಪ್ರಸಾದ್ ಬೆಳ್ಳಿಬೆಟ್ಟು ಅವರು ನಿರ್ವಹಿಸಿ ವಂದನಾರ್ಪಣೆ ಸಲ್ಲಿಸಿದರು. ಅದಾನಿ ಫೌಂಡೇಶನ್‌ನ ಉದ್ಯೋಗಿಗಳಾದ ಅನುದೀಪ್ ಮತ್ತು ಶುಭಾಮಂಗಳ ಅವರು ಉಪಸ್ಥಿತರಿದ್ದರು.

ಕರ್ನಾಟಕಕ್ಕೆ ಅವಕಾಶ ನಿರಾಕರಿಸಿದ ಪ್ರವಾಸಿ ತಂಡ | ರಣಜಿ ಟ್ರೋಫಿ ಮೇಲೆ ಒಡೆತನ ಸಾಧಿಸಿದ ಕಾಶ್ಮೀರ

ಕಾಶ್ಮೀರ ಕ್ಲಾಸ್ ಆಟಕ್ಕೆ ರಣಜಿ ಕಿರೀಟ

ಚಿತ್ರಗಳು: ಮಂಜುನಾಥ ಜರತಾರಘರ



- ಪಂದ್ಯ ಡ್ರಾ ಜಮ್ಮು ಕಾಶ್ಮೀರ ಮೊದಲ ಇನ್ನಿಂಗ್ಸ್ ಆಧಾರದ ಮೇಲೆ ಜಯ
- ಕರ್ನಾಟಕಕ್ಕೆ ತವರಿನಲ್ಲೇ ಆಘಾತ: ಮೊದಲ ಬಾರಿಗೆ ಪ್ರಶಸ್ತಿ ಗೆದ್ದ ಕಾಶ್ಮೀರ

▶ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ನಿರೀಕ್ಷೆಯಂತೆ ರಣಜಿ ಟ್ರೋಫಿ ಫೈನಲ್ ಪಂದ್ಯದ 5ನೇ ದಿನ ಔಪಚಾರಿಕತೆಗೆ ಸಾಕ್ಷಿಯಾಯಿತು. 8 ಬಾರಿಯ ಚಾಂಪಿಯನ್, ಆತಿಥೇಯ ಕರ್ನಾಟಕ ಪುಟಿದೇಳಲು ಅವಕಾಶವನ್ನೇ ನೀಡದ ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡ ಇದೇ ಮೊದಲ ಬಾರಿಗೆ ಪ್ರಶಸ್ತಿ ಮೇಲೆ ಒಡೆತನ ಸಾಧಿಸಿತು. ದೇಶವೇ ತಿರುಗಿ ನೋಡುವಂತಹ ಇತಿಹಾಸ ನಿರ್ಮಿಸಿತು.

ನಾಲ್ಕನೇ ದಿನದಾಟದ ಅತ್ಯಂಕ್ಕೆ 57 ಓವರ್‌ಗಳಿಗೆ 4ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿ, 477 ರನ್‌ಗಳ ಬೃಹತ್ ಮುನ್ನಡೆ ಕಾಯ್ದುಕೊಂಡಿದ್ದ ಕಾಶ್ಮೀರ, ಕೊನೆಯ ದಿನವೂ ಕರ್ನಾಟಕ ಬೌಲರ್‌ಗಳ ಮೇಲೆ ಸವಾರಿ ನಡೆಸಿತು.

ಕಾಶ್ಮೀರ ಆಡಿದ್ದೇ ಆಟ: ಮೊದಲ ದಿನ 94 ರನ್‌ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದ ಕಾಶ್ಮೀರ ಪರ 24 ವರ್ಷ ವಯಸ್ಸಿನ ಯುವ ಆಟಗಾರ ಕಮ್ರಾನ್ ಇಕ್ಬಾಲ್ (ಅಜೇಯ 160, 311 ಎಸೆತ, 16 ಬೌಂಡರಿ, 3 ಸಿಕ್ಸರ್), ಪ್ರಥಮ ದರ್ಜೆ ಪಂದ್ಯಗಳಲ್ಲಿ 2ನೇ ಶತಕ ಸಿಡಿಸಿದರು. ಶುಕ್ರವಾರ 32 ರನ್ ಗಳಿಸಿದ್ದ ಸಾಹಿಲ್ ಲೋಥ್ರಾ (ಅಜೇಯ 101, 226 ಎಸೆತ, 8 ಬೌಂಡರಿ, 3 ಸಿಕ್ಸರ್) ಸಹ ಶತಕ ಪೂರೈಸಿ ಕೊನೆಯ ದಿನದಾಟದಲ್ಲಿ ಮತ್ತೆ ಕರ್ನಾಟಕದ ಬೌಲರ್‌ಗಳ ಬೆವರಿಳಿಸಿದರು. ಈ ಜೋಡಿಯ 5ನೇ ವಿಕೆಟ್‌ನ ಮುರಿಯದ 197 ರನ್ (415 ಎಸೆತ) ಜೊತೆಯಾಟವು ರಾಜ್ಯದ ಪ್ರಮುಖ ಬ್ಯಾಟರ್‌ಗಳಾದ ಕರುಣ್ ನಾಯರ್, ಮಯಾಂಕ್ ಅಗರ್‌ವಾಲ್ ಹಾಗೂ ಕೆ.ಎಲ್. ರಾಹುಲ್ ಅವರು ಸೇರಿ 8 ಜನ ಬೌಲ್ ಮಾಡಿದರೂ ಜಗ್ಗದೇ ಮುಂದುವರಿಯಿತು. ಈ ಹಿನ್ನೆಲೆಯಲ್ಲಿ ಆತಿಥೇಯ ತಂಡದ ಹಿನ್ನಡೆಯಿಂದ ಮೈದಾನದಲ್ಲಿದ್ದ ಪ್ರೇಕ್ಷಕರು ಮೌನಕ್ಕೆ ಶರಣಾದರು. 113 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡ 342 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತಾದರೂ, ನಂತರದ ಆಟದಿಂದ ಪ್ರಯೋಜನವಿಲ್ಲ ಎಂಬುದನ್ನು ಅರಿತ ಕರ್ನಾಟಕ ಡ್ರಾಗೆ ಒಪ್ಪಿ ಮತ್ತೆ ಬ್ಯಾಟಿಂಗ್ ಮಾಡಲಿಲ್ಲ.

ಸಂಭ್ರಮದಲ್ಲಿ ಮಿಂದೆದ್ದ ಕಾಶ್ಮೀರ: ಈ ನಿರ್ಧಾರ ಹೊರ ಬೀಳುತ್ತಿದ್ದಂತೆಯೇ ಪ್ರವಾಸಿ ತಂಡದ ಆಟಗಾರರು ಮತ್ತು ಬೆಂಬಲಿಗರ ಕೇಕೆ ಮುಗಿಲುಮುಟ್ಟಿತು. ಭಯೋತ್ಪಾದನೆಯಿಂದ ಸದ್ದು ಮಾಡುತ್ತಿದ್ದ ಕಣವೆ ರಾಜ್ಯದ ಕ್ರಿಕೆಟ್‌ನ ಹೊಸ ಯುಗ ಈ ಮೂಲಕ ಆರಂಭವಾದಂತಾಯಿತು. ಪಂದ್ಯ ಡ್ರಾ ಆಗುತ್ತಲೇ ಮೈದಾನಕ್ಕೆ ಇಳಿದ ಜಮ್ಮು ಕಾಶ್ಮೀರದ ಆಟಗಾರರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಎಲ್ಲ ಆಟಗಾರರೂ ನರ್ತಿಸಿ ಸಂಭ್ರಮಿಸಿದರು. ಮೊದಲ ಬಾರಿ ಟ್ರೋಫಿ ಹಿಡಿದ ಆಟಗಾರರು ಕುಣಿದು ಕುಪ್ಪಳಿಸಿದರು.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 1 ನೇ ಇನ್ನಿಂಗ್ಸ್:
584/10(173.1)
ಕರ್ನಾಟಕ 1ನೇ ಇನ್ನಿಂಗ್ಸ್:
293/10(93.3)
ಜಮ್ಮು ಕಾಶ್ಮೀರ 2 ನೇ ಇನ್ನಿಂಗ್ಸ್;
342/4(113)
ಕಮರಾನ್ ಇಕ್ಬಾಲ್ ಬ್ಯಾಟಿಂಗ್; 160 ರನ್, 311 ಎ,16 ಬೌ, 3 ಸಿ, ಸಾಹಿಲ್ ಬ್ಯಾಟಿಂಗ್; 101 ರನ್, 226 ಎ, 8ಬೌ.3 ಸಿ. ಬೌಲಿಂಗ್; ಪ್ರಸಿದ್ಧ ಕೃಷ್ಣ; 2 ವಿ, 12 ಓ, 42 ರನ್,ವೈಶಾಕ್; 1 ವಿ, 10 ಓ, 30 ರನ್,

ಪಂದ್ಯ ಶ್ರೇಷ್ಠ ;
ಶುಂಭಸಿಂಗ್ ಪುಂಡಿರ್

ಸರಣಿ ಶ್ರೇಷ್ಠ ;
ಅಕೀಬ್ ನಬಿ ದಾರ
60 ವಿಕೆಟ್

ಜಮ್ಮು ಕಾಶ್ಮೀರ ನಡೆದು ಬಂದ ಹಾದಿ

1859-60ರಲ್ಲಿ ಜಮ್ಮು ಕಾಶ್ಮೀರ ತಂಡ ಮೊದಲ ರಣಜಿ ಪಂದ್ಯ ಆಡಿತ್ತು. ಇದಾದ 23 ವರ್ಷದ ಬಳಿಕ 1982-83ನೇ ಋತುವಿನಲ್ಲಿ ಸರ್ವಿಸ್‌ನ ವಿರುದ್ಧ ಮೊದಲ ಜಯಗಳಿಸಿತ್ತು. 2013-14ರಲ್ಲಿ ರಣಜಿ ಟ್ರೋಫಿಯ ಕ್ವಾರ್ಟರ್ ಫೈನಲ್‌ನ ವರೆಗೂ ತಲುಪಿತ್ತು. ಜಮ್ಮು ಕಾಶ್ಮೀರದ ಪರ್ವೇಜ್ ರಸೂಲ್ ಹಾಗೂ ಉಮ್ರಾನ್ ಮಲಿಕ್ ಮಾತ್ರ ಈವರೆಗೆ ರಾಷ್ಟ್ರಿಯ ತಂಡದಲ್ಲಿ ಆಡಿದ್ದು, ಆಲ್‌ರೌಂಡರ್ ಅಬ್ದುಲ್ ಸಮದ್ ಅವರೊಂದಿಗೆ ರಸಿಕ್ ಸಲಾಂ ದಾರ್ ಮತ್ತು ಯುಧ್‌ವೀರ್ ಸಿಂಗ್ ಚರಕ್ ಐಪಿಎಲ್‌ನಲ್ಲಿ ಆಡಿದ್ದಾರೆ.

ಜಮ್ಮು-ಕಾಶ್ಮೀರ ಸರ್ಕಾರದಿಂದ ಬಹುಮಾನ

ರಣಜಿ ಟ್ರೋಫಿ ಗೆದ್ದ ಜಮ್ಮು ಮತ್ತು ಕಾಶ್ಮೀರ ತಂಡಕ್ಕೆ 2 ಕೋಟಿ ರೂ. ಬಹುಮಾನ ನೀಡುವುದಾಗಿ ಅಲ್ಲಿನ ಸರ್ಕಾರ ಘೋಷಣೆ ಮಾಡಿದೆ. ಗೆಲುವು ಖಾತ್ರಿಯಾದಂತೆ ಸ್ವಹಿತಾಸಕ್ತಿಯಿಂದ ಹುಬ್ಬಳ್ಳಿಗೆ ಬಂದು ಕೊನೆಯ ದಿನದ ಆಟವನ್ನು ವೀಕ್ಷಿಸಿದ ಜಮ್ಮು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ತಮ್ಮ ತಂಡದ ಆಟಗಾರ ನಡುವೆ ಕುಳಿತು ಪಂದ್ಯ ವೀಕ್ಷಿಸುವುದರ ಜೊತೆಗೆ ಆಟಗಾರರಿಗೆ ಪ್ರೋತ್ಸಾಹಿಸಿದರು. ಪಂದ್ಯ ಮುಗಿದ ಬಳಿ ಸ್ವತಃ ಮೈದಾನಕ್ಕೆ ಆಗಮಿಸಿ ವಿಜೇತ ತಂಡಕ್ಕೆ ಅಭಿನಂದನೆ ಸಲ್ಲಿಸಿ, ಫೋಟೋ ತೆಗೆಸಿಕೊಂಡರು. ಇದಲ್ಲದೆ ಪಂದ್ಯಾವಳಿ ಮುಕ್ತಾಯದ ನಂತರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ನಿಮ್ಮ ಬಗ್ಗೆ ನಮಗೆ ಹೆಮ್ಮೆಯಿದೆ. ಸರ್ಕಾರದಿಂದ ನಾವು 2 ಕೋಟಿ ರೂ. ಬಹುಮಾನ ಘೋಷಿಸುತ್ತೇವೆ ಎಂದು ಬರೆದುಕೊಂಡಿದ್ದಾರೆ. ಅವರಷ್ಟೇ ಅಲ್ಲದೆ, ಶನಿವಾರದಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಶಾಸಕ ಮಹೇಶ ಟೆಂಗಿನಕಾಯಿ ಸಹ ಪಂದ್ಯ ವೀಕ್ಷಿಸಿ ಆಟಗಾರಿಗೆ ಅಭಿನಂದಿಸಿದರು.

ಪ್ರಧಾನಿ ಮೋದಿ ಸೇರಿದಂತೆ ಗಣ್ಯರಿಂದ ಅಭಿನಂದನೆ

ಪಂದ್ಯ ಮುಕ್ತಾಯಗೊಳ್ಳುತ್ತಿದ್ದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಕಾಶ್ಮೀರ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಗೃಹ ಮಂತ್ರಿ ಅಮಿತ್ ಶಾ, ಸಚಿನ್ ತೆಂಡೂಲ್ಕರ್ ಸೇರಿದಂತೆ ಮಾಜಿ ಕ್ರಿಕೆಟಿಗರು, ರಾಜಕಾರಣಿಗಳು ಹಾಗೂ ಬೇರೆ ಬೇರೆ ಕ್ಷೇತ್ರದ ಗಣ್ಯರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ತಂಡಕ್ಕೆ ಅಭಿನಂದಿಸಿದರು.

ನಾವು ಪ್ರಶಸ್ತಿ ಪಡೆದಿರುವುದು ಇಡೀ ರಾಜ್ಯಕ್ಕೆ ಹೆಮ್ಮೆಯ ವಿಷಯ. ಕಳೆದ ವರ್ಷ ನಮ್ಮ ತಂಡ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾಗಲೇ ಮುಂದೊಂದು ದಿನ ನಮ್ಮಲ್ಲಿ ಪ್ರಶಸ್ತಿ ಗೆಲ್ಲುವ ಸಾಮರ್ಥ್ಯವಿದೆ ಎಂಬ ವಿಶ್ವಾಸ ಮೂಡಿತ್ತು. ಅದು ಇಂದು ಈಡೇರಿದೆ. ಈಗ ರಾಜ್ಯದ ಅಲ್ಲಿಯ ಯುವ ಆಟಗಾರರಿಗೆ ಪ್ರೇರಣೆ ಆಗಲಿದೆ. ಈ ಪಂದ್ಯದಲ್ಲಿ ನಾವು ಸಂಪೂರ್ಣ



ತೊಡಗಿಕೊಂಡಿದ್ದೇವು. ಈ ವಿಜಯದಲ್ಲಿ ಪ್ರತಿಯೊಬ್ಬರೂ ಕೊಡುಗೆ ನೀಡಿದ್ದಾರೆ. ಬಲಿಷ್ಠ ಕರ್ನಾಟಕ ತಂಡದ ವಿರುದ್ಧ ಚಾಂಪಿಯನ್ ಆಗಿದ್ದು ತಂಡದ ವಿಶ್ವಾಸವನ್ನು ವೃದ್ಧಿಸಿದೆ.

■ ಪಾರಸ್ ಡೋಗ್ರಾ,
ನಾಯಕ, ಜಮ್ಮು-ಕಾಶ್ಮೀರ.

ಕಿರುಸುದ್ದಿ

ಚೆಸ್: ಗುಕೇಶ್‌ಗೆ ಸೋಲು

ಹೊಸದಿಲ್ಲಿ: ಎರಡು ಪಂದ್ಯಗಳಲ್ಲಿ ಸತತ ಡ್ರಾ ಸಾಧಿಸಿದ್ದ ವಿಶ್ವಚಾಂಪಿಯನ್, ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಪ್ರಾಗ್ ಚೆಸ್ ಪಂದ್ಯಾವಳಿಯ ಮೂರನೇ ಪಂದ್ಯದಲ್ಲಿ ಅಚ್ಚರಿಯ ಸೋಲು ಕಂಡಿದ್ದಾರೆ. ಭಾರತದ ಮತ್ತೋರ್ವ ಗ್ರ್ಯಾಂಡ್‌ಮಾಸ್ಟರ್, ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಡ್ರಾ ಸಾಧಿಸಿದರು. ಭಾರತ ಮೂಲದ ಇಬ್ಬರು ಮಾತ್ರ ಭಾಗವಹಿಸಿರುವ ಈ ಕೂಟದಲ್ಲಿ ಸತತ ಡ್ರಾ ಫಲಿತಾಂಶ ಪಡೆದ ಗುಕೇಶ್‌ಗೆ ಹಿನ್ನಡೆಯಾಗಿದೆ. ಹಾಲೆಂಡ್‌ನ ಜಾರ್ಡನ್ ವ್ಯಾನ್ ಫಾರೆಸ್ಟ್ ಅವರನ್ನು ಎದುರಿಸಿದ್ದ ಗುಕೇಶ್ ನಿರಾಶಾದಾಯಕ ಸೋಲು ಕಂಡರು. ಅರ್ವಿಂದ್ ಇರಾನಿನ ಪರ್ಹಮ್ ಅವರೊಂದಿಗೆ ಡ್ರಾ ಮಾಡಿಕೊಂಡಿದ್ದಾರೆ. ಕರಿ ಕಾಯಿಗಳೊಂದಿಗೆ ಆಡಿದ ಗುಕೇಶ್ ಆರಂಭಿಕ ಹಿನ್ನಡೆ ಅನುಭವಿಸಿದರು. ರುಯ್ ಲೊಪೇಝ್ ಮೂಲಕ ಆರಂಭದಲ್ಲೇ ಗುಕೇಶ್‌ನ ಬಿಶಾಪ್ ಪಡೆದುಕೊಂಡರು. ಚೇತರಿಸಿಕೊಳ್ಳುವುದಕ್ಕೆ ಗುಕೇಶ್‌ಗೆ ಸಮಯ ಬೇಕಾಯಿತು. ಹತ್ತಾರು ಪ್ರಯತ್ನಗಳನ್ನು ಮಾಡಿ ಮರಳುವಷ್ಟರಲ್ಲಿ ಗುಕೇಶ್‌ಗೆ ಸಮಯದ ಹಿನ್ನಡೆ ಕೂಡ ಆಯಿತು. ಕೊನೆಯಲ್ಲಿ ಜಾರ್ಡನ್ ಗೆಲುವು ಸಾಧಿಸಿದರು. ಅರ್ವಿಂದ್ ಕೂಡ ಆರಂಭಿಕ ಹಿನ್ನಡೆ ಅನುಭವಿಸಿದ್ದರು. ಆದರೆ ಮರಳಿದ ಅವರು ಡ್ರಾ ಸಾಧಿಸಿದರು. ಚಾಲೆಂಜರ್ಸ್ ವಿಭಾಗದಲ್ಲಿ ದಿವ್ಯಾ ದೇಶಮುಖ್ ಜಿನ್ನರ್ ಅವರೊಂದಿಗೆ, ಸೂರ್ಯಶೇಖರ ಗಂಗೂಲಿ ನೆಮೆಕ್ ಅವರೊಂದಿಗೆ ಸೋತರು.

ಐಟಿಎಫ್ ಕಲಬುರಗಿ ಲೋಗೋ ಬಿಡುಗಡೆ

ಕಲಬುರಗಿ: ಮೊಟ್ಟ ಮೊದಲ ಬಾರಿಗೆ ಕಲಬುರಗಿಯೂ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಪಂದ್ಯಾವಳಿಗಳಿಗೆ ಸಾಕ್ಷಿಯಾಗಲಿದ್ದು, ಭಾನುವಾರ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಡಬ್ಲ್ಯೂ 35 ಮಟ್ಟದ ಮಹಿಳಾ ಟೆನಿಸ್ ಟೂರ್ನಿ ಪ್ರಾರಂಭವಾಗಲಿದೆ. ಈ ಹಿನ್ನೆಲೆ ಶನಿವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಲೋಗೋ ಬಿಡುಗಡೆ ಮಾಡಲಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾ



ಮಟ್ಟದ ಅಧಿಕಾರಿಗಳು ಲೋಗೋ ಬಿಡುಗಡೆಗೊಳಿಸಿ, ಯುಎಸ್ಡಿ 30 ಬಹುಮಾನ ಮೊತ್ತದ ಈ ಟೂರ್ನಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ನಿಯಾಗಿದ್ದು, ಮಾರ್ಚ್ 1 ರಿಂದ 8ರವರೆಗೆ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿದ್ದು,ಮುಖ್ಯ ಡ್ರಾ ಪಂದ್ಯಗಳು ಮಾರ್ಚ್ 3 ರಿಂದ ಆರಂಭವಾಗಲಿವೆ ಎಂದರು. ಐಟಿಎಫ್ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ 32 ಆಟಗಾರರ ಸಿಂಗಲ್ಸ್ ಮುಖ್ಯ ಡ್ರಾ ಇರಲಿದ್ದು, ಭಾನುವಾರದಿಂದ 32 ಆಟಗಾರ್ತಿಯರ ಅರ್ಹತಾ ಸುತ್ತು (ಕ್ವಾಲಿಫೈಯರ್ ಡ್ರಾ) ನಡೆಯಲಿದೆ. ಜೊತೆಗೆ 16 ಜೋಡಿಗಳ ಡಬಲ್ಸ್ ಡ್ರಾ ಕೂಡ ಆಯೋಜಿಸಲಾಗಿದೆ. ಮಾರ್ಚ್ 3ರಿಂದ ಆರಂಭವಾಗುವ ಮುಖ್ಯ ಡ್ರಾ ಪಂದ್ಯ ಗಳಲ್ಲಿ,11ಕ್ಕೂ ಅಧಿಕ ದೇಶದ ಟೆನಿಸ್ ಆಟಗಾರ್ತಿಯರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಶೂಟಿಂಗ್: ಫೈನಲ್‌ಗೆ ಟ್ರಿಗರ್, ಬೆಂಗಳೂರು

ಬೆಂಗಳೂರು: ಟ್ರಿಗರ್ ಟ್ಯಾಕ್ಟಿಶನ್ಸ್, ಬೆಂಗಳೂರು, ಹುಬ್ಬಳ್ಳಿ ಮತ್ತು ಕ್ಯಾಲಿಬರ್ ಕ್ಯಾಪಿಟಲ್ಸ್ ತಂಡಗಳು ಕರ್ನಾಟಕ ಶೂಟಿಂಗ್ ಲೀಗ್ ಕೂಟದ ಫೈನಲ್‌ಗೇರಿದವು. ಇದೇ ಮೊದಲ ಬಾರಿಗೆ ಆಯೀಜಿಸಲಾದ ಫ್ರಾಂಚೈಸಿ ಮಾದರಿಯ ಶೂಟಿಂಗ್ ಕೂಡವು ಶನಿವಾರದಂದು ಆರಂಭಗೊಂಡಿದ್ದು, ಅರ್ಹತಾ ಸುತ್ತಿನ ಪಂದ್ಯಗಳು ನಡೆದವು. ಮೊದಲ ಗುಂಪಿನಲ್ಲಿ ಮೊದಲ ಸ್ಥಾನ ಪಡೆದ ಟ್ರಿಗರ್ ಟ್ಯಾಕ್ಟಿಶನ್ಸ್, ಎರಡನೇ ಸ್ಥಾನದ ಬೆಂಗಳೂರು ಬ್ರಿಗೇಡ್ ತಂಡಗಳು ಸ್ಟೈಪರ್ ಸ್ಕ್ವಾಡ್ ಮತ್ತು ರೆಡ್ರಮ್ ತಂಡಗಳಿಗಿಂತ ಹೆಚ್ಚಿನ ಸ್ಕೋರ್‌ಗಳೊಂದಿಗೆ ಫೈನಲ್‌ಗೇರಿದವು. 18 ಇವೆಂಟ್‌ಗಳಲ್ಲಿ ಟ್ರಿಗರ್ 11 ಗೆಲುವುಗಳೊಂದಿಗೆ 22 ಅಂಕ ಗಳಿಸಿತು. ಬೆಂಗಳೂರು 9 ಗೆಲುವು ಮತ್ತು 2 ಡ್ರಾಗಳೊಂದಿಗೆ 20 ಅಂಕ ಗಳಿಸಿತು. ಎರಡನೇ ಗುಂಪಿನಲ್ಲಿ 10 ಇವೆಂಟ್‌ಗಳಲ್ಲಿ ಮಿಂಚಿದ ಕ್ಯಾಲಿಬರ್ 21 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದರೆ, ಹುಬ್ಬಳ್ಳಿ ಶೂಟಿಂಗ್ ಸ್ಟಾರ್ಸ್ 9 ಗೆಲುವು 2 ಡ್ರಾಗಳೊಂದಿಗೆ 20 ಅಂಕ ಗಳಿಸಿ ಎರಡನೇ ಸ್ಥಾನ ಗಳಿಸಿತು. ಫೈನಲ್ ಪಂದ್ಯಗಳು ಭಾನುವಾರದಂದು ನಡೆಯಲಿವೆ.


ಸೆಮಿಗೇರಲು ಮುಖಾಮುಖಿ | ಸೋತವರಿಗೆ ವಿಶ್ವಕಪ್‌ನಿಂದ ಗೇಟ್‌ಪಾಸ್

ಇಂದು ವಿಂಡೀಸ್-ಭಾರತ ಕ್ವಾರ್ಟರ್

ಕೋಲ್ಕತ್ತಾ: ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಭಾರತ ಹಾಗೂ ವಿಂಡೀಸ್ ತಂಡಗಳು ಭಾನುವಾರದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ವಿಶ್ವಕಪ್ ಕ್ವಾರ್ಟರ್‌ಫೈನಲ್ ಮಾದರಿ ಹೊಂದಿಲ್ಲ. ಲೀಗ್ ಹಂತದಲ್ಲಿ ಗೆದ್ದು ಬಂದ ತಂಡಗಳು ಸೂಪರ್-8ರ ಪಂದ್ಯಗಳಲ್ಲಿ ಮುಖಾಮುಖಿಯಾಗುತ್ತವೆ. ಅಲ್ಲಿಯ ಬಲಶಾಲಿ ತಂಡಗಳು ಸೆಮಿಫೈನಲ್‌ಗೇರುತ್ತವೆ. ಆದರೆ ವಿಂಡೀಸ್ ಮತ್ತು ಭಾರತ ತಲಾ ಒಂದು ಪಂದ್ಯಗಳನ್ನು ಸೋತಿವೆ. ಹೀಗಾಗಿ ಸೆಮೀಸ್ ಟಿಕೆಟಿಗಾಗಿ ನಿರ್ಣಾಯಕ ಪಂದ್ಯವೊಂದು ನಡೆಯಲಿದೆ. ಈ ನಿಟ್ಟಿನಲ್ಲಿ ಮಾದರಿಯ ಭಾಗವಾಗದಿದ್ದರೂ ಇದು ಕ್ವಾರ್ಟರ್ ಫೈನಲ್‌ನಂತೆ ಭಾಸವಾಗುತ್ತಿದೆ. ಟಿ20 ವಿಶ್ವಕಪ್ ಪಂದ್ಯಾವಳಿ ನಿಣಾಯಕ ಹಂತಕ್ಕೆ ತಲುಪಿದೆ. ಎರಡನೇ ಗುಂಪಿನ ಎರಡು ತಂಡಗಳು ಸೆಮಿಫೈನಲ್‌ಗೇರಿವೆ. ಇನ್ನೊಂದು ಗುಂಪಿನ ಒಂದು ತಂಡ ಈಗಾಗಲೇ ಸೆಮಿಗೇರಿದೆ. ಇನ್ನೊಂದು ತಂಡ ಸೆಮೀಸ್ ಟಿಕೆಟ್ ಪಡೆಯಬೇಕಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಮಾಡು ಇಲ್ಲವೇ ಮಡಿ: ದ.ಆಫ್ರಿಕಾ ಭಾರತಕ್ಕೆ ಮೊದಲ ಪಂದ್ಯದಲ್ಲಿ ಸೋಲಿಸಿ ವಿಲನ್ ಆಗಿತ್ತು. ಹಾಗೇ ಎರಡನೇ ಪಂದ್ಯದಲ್ಲಿ ವಿಂಡೀಸ್ ತಂಡವನ್ನು ಸೋಲಿಸಿ ಭಾರತಕ್ಕೆ ಅನುಕೂಲ ಮಾಡಿಕೊಟ್ಟಿತ್ತು. ಮೊದಲ ಪಂದ್ಯದಲ್ಲಿ ಜಿಂಬಾಬ್ವೆ ತಂಡವನ್ನು ವಿಂಡೀಸ್ ಭಾರೀ ಅಂತರದಲ್ಲಿ ಸೋಲಿಸಿ ರನ್ ರೇಟ್ ಬಲಪಡಿಸಿ ಕೊಂಡಿತ್ತು. ಹೀಗಿರುವಾಗಲೇ ಭಾರತ ಸೆಮಿಫೈನಲ್ ಪ್ರವೇಶಿಸಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡವನ್ನು ಸೋಲಿಸಲೇಬೇಕಿತ್ತು. ಇಲ್ಲವಾದರೆ ಭಾರತ ಸೆಮಿ ನಿರ್ಧಾರ ರನ್‌ರೇಟ್ ಮಾಡಬೇಕಾಗಿತ್ತು. ಆದರೆ ಸೋತ ವಿಂಡೀಸ್ ಕೂಡ ಭಾರತ ಮೇಲೆ ಗೆದ್ದರಷ್ಟೇ ಸೆಮಿ ಟಿಕೆಟ್ ಪಡೆಯಲಿದೆ. ಹೀಗಾಗಿ ಭಾನುವಾರದ ಪಂದ್ಯ ಕ್ವಾರ್ಟರ್‌ಫೈನಲ್ ಪಂದ್ಯವಾಗಲಿದೆ. ಇಲ್ಲಿ ರನ್‌ರೇಟ್ ಯಾವುದೇ ಕಾರಣಕ್ಕೂ ಕೆಲಸಕ್ಕೆ ಬಾರದು. ಒಂದು ರನ್ ನಿಂದಲೂ ಗೆಲ್ಲುವ ತಂಡವೇ ಹೆಚ್ಚಿನ ಅಂಕಗಳೊಂದಿಗೆ ಸೆಮಿಗೇರಲಿವೆ.



ಪಿಚ್ ರಿಪೋರ್ಟ್

ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಇಬ್ಬನಿ ನಿರ್ಣಾಯಕ ಪಾತ್ರ ವಹಿಸಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಉಭಯ ವಿಭಾಗದಿಂದ ಉತ್ತಮ ಪ್ರದರ್ಶನವೇ ಮೂಡಿಬಂದಿದೆ. ಬ್ಯಾಟಿಂಗ್‌ಗೆ ಅಲ್ಪ ಸಹಕಾರಿಯಾಗಿದೆ. ಉದ್ದದ ಬೌಂಡರಿಗಳು ಬೌಲರ್‌ಗಳಿಗೆ ಅಲ್ಪ ಬಲ ನೀಡಬಹುದು.

ಭಾರತ ಬ್ಯಾಟಿಂಗ್ ಬಲವರ್ಧನೆ: ಹಿಂದಿನ ಪಂದ್ಯಗಳಿಗಿಂತಲೂ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಭಾರತೀಯ ಬ್ಯಾಟಿಗರು ಮಿಂಚಿದ್ದಾರೆ. ವಿಶ್ವಾಸ ಕಾಯ್ದುಕೊಂಡಿದ್ದಾರೆ. ತಮ್ಮ ಅಸಲು ಆಟ ಪ್ರದರ್ಶಿಸಿದ್ದಾರೆ. ತಂಡದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇಶಾನ್ ಕಿಶನ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದು, ಮಧ್ಯಮ ಕ್ರಮಾಂಕದ ಬ್ಯಾಟರ್ ರಿಂಕು ಸಿಂಗ್ ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡಿ ಫಲಿತಾಂಶ ಕಂಡಿದೆ ಭಾರತ. ಇನ್ನೂ ಮಧ್ಯಮ ಕ್ರಮಾಂಕದಲ್ಲಿ ಸೂರ್ಯ, ತಿಲಕ್ ಕೂಡ ಲಯಕ್ಕೆ ಮರಳಿದಂತಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಶಿವಂ ದುಬೆ ವಿಶ್ವಕಪ್‌ನಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ್ದು, ಅಕ್ಷರ್ ಕೂಡ ಬ್ಯಾಟಿಂಗ್ ಮಾಡುವ ಗಟ್ಸ್ ಹೊಂದಿದ್ದಾರೆ.

ದುಬಾರಿಯಾದ ಬೌಲರ್ಸ್, ಭಾರತಕ್ಕೆ ಚಿಂತೆ: ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರು ಕೂಡ ಭಾರತ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ ಎನ್ನಬಹುದು. ಬೂಮ್ರಾ, ಅಕ್ಷರ್ ಮತ್ತು ವರುಣ್ ಬಿಟ್ಟರೆ ಇನ್ನುಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ. ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಕೂಡ ಅಲ್ಪ ಹಿನ್ನಡೆ ಅನುಭವಿಸಿದ್ದಾರೆ. ಮುಖ್ಯವಾಗಿ ಬೇಕಾದಾಗ ವಿಕೆಟ್ ಕಿತ್ತಿ ನಿರಾಳ ನೀಡುತ್ತಿದ್ದ ಶಿವಂ ದುಬೆ ಭಾರೀ ದುಬಾರಿಯಾಗಿದ್ದಾರೆ.

ದ.ಆಫ್ರಿಕಾ-ಜಿಂಬಾಬ್ವೆ ಔಪಚಾರಿಕ ಪಂದ್ಯ

ಇನ್ನು ಭಾನುವಾರ ಸೂಪರ್-8ರ ಪಂದ್ಯಗಳ ಕೊನೆಯ ದಿನವಾಗಿದೆ. ಭಾರತ ಪಂದ್ಯಕ್ಕೂ ಮುನ್ನ ಮೊದಲಿಗೆ ದ.ಆಫ್ರಿಕಾ ಹಾಗೂ ಜಿಂಬಾಬ್ವೆ ಔಪಚಾರಿಕ ಪಂದ್ಯದಲ್ಲಿ ಎದುರಾಗಲಿವೆ. ಆಫ್ರಿಕಾ ಸೆಮಿಗೇರಿದೆ, ಜಿಂಬಾಬ್ವೆ ಈಗಾಗಲೇ ಹೊರಬಿದ್ದಿದೆ. ಈ ನಿಟ್ಟಿನಲ್ಲಿ ಈ ಪಂದ್ಯ ಅಂಕಪಟ್ಟಿ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಆದಾಗ್ಯೂ ಪಂದ್ಯಾವಳಿಯನ್ನು ಗೆಲುವಿನೊಂದಿಗೆ ಮುಗಿಸಲು ಜಿಂಬಾಬ್ವೆ, ಗೆಲುವಿನೊಂದಿಗೆ ಸೆಮಿಗೇರಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದಕ್ಕಾಗಿ ದ.ಆಫ್ರಿಕಾ ಫೈಟ್ ನಡೆಸಲಿದೆ.

ಪಾಕಿಸ್ತಾನ ಹೊರಕ್ಕೆ, ನ್ಯೂಜಿಲೆಂಡ್ ಸೆಮಿಗೆ

ಪಲ್ಲೆಕೆಲೆ: ದಾಖಲೆಯ ಜೊತೆಯಾಟ ನಿರ್ಮಿಸಿದ ಫರ್ಹಾನ್ ಮತ್ತು ಫಕರ್ ಜಮಾನ್ ಪಾಕಿಸ್ತಾನ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದು ಪಂದ್ಯ ಗೆಲ್ಲಿಸಿದರೂ ರನ್‌ರೇಟ್ ವೃದ್ಧಿಯಾಗದ ಕಾರಣದಿಂದ ಪಾಕ್ ತಂಡ ವಿಶ್ವಕಪ್‌ನಿಂದ ಹೊರಬಿದ್ದಿದೆ. ಇದರೊಂದಿಗೆ ಇಂಗ್ಲೆಂಡ್ ವಿರುದ್ಧ ಸೋತಿರುವ ನ್ಯೂಜಿಲೆಂಡ್ ಸೆಮಿಗೇರಿದೆ. ಪಂದ್ಯವನ್ನು ಪಾಕಿಸ್ತಾನ ದೊಡ್ಡ ಅಂತರದಲ್ಲಿ ಗೆಲ್ಲಬೇಕಾದ ಅನಿವಾರ್ಯದಲ್ಲಿತ್ತು. ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 212 ರನ್ ಚಚ್ಚಿತು. ಫರ್ಹಾನ್ ಶತಕ ಹಾಗೂ ಜಮಾನ್ ಅವರ ಆಟದೊಂದಿಗೆ ದೊಡ್ಡ ಸ್ಕೋರ್ ನಿರ್ಮಿಸಿದ್ದ ಪಾಕಿಸ್ತಾನ ರನ್‌ರೇಟ್ ಹೆಚ್ಚಿಸಿಕೊಳ್ಳುವುದಕ್ಕೆ ಲಂಕಾ ತಂಡವನ್ನು 147ರ ಒಳಗಾಗಿ ತಡೆಯಬೇಕಿತ್ತು. ಆದರೆ ಶಣಕ (76) ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಗುರಿ ಬೆನ್ನತ್ತುವಾಗ ಶ್ರೀಲಂಕಾ 6 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿ 5 ರನ್ ನಿಂದ ಸೋಲೊಪ್ಪಿಕೊಂಡಿತು.



ಜಮಾನ್-ಫರ್ಹಾನ್ ಮಿಂಚಿನಾಟ: ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ ಹಿಂದೆಂದೂ ಸಿಗದ ಭರ್ಜರಿ ಆರಂಭ ಸಿಕ್ಕಿತು. ಫರ್ಹಾನ್ ವಿಶ್ವಕಪ್‌ನಲ್ಲಿ ಎರಡನೇ ಶತಕ ಬಾರಿಸಿದ್ದು ವಿಶ್ವದಾಖಲೆಯೊಂದನ್ನು ಮಾಡಿದರು. ಸ್ಯಾಮ್ ಆಯೂಬ್ ಹಾಗೂ ಬಾಬರ್ ಆಜಂ ಅವರನ್ನು ಹೊರಕೂಡಿಸಿದ ನಂತರ ಆರಂಭಿಕರಾಗಿ ಕಣಕ್ಕಿಳಿದ ಫಕರ್ ಜಮಾನ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರಂಭದಿಂದಲೂ ಪರಾಕ್ರಮ ಮೆರೆದ ಈ ಜೋಡಿ ದಾಖಲೆಯ 176 ರನ್‌ಗಳಿಸಿತು. ಜಮಾನ್ 84 ಕ್ಕೆ ವಿಕೆಟ್ ಒಪ್ಪಿಸಿದರು. ಫರ್ಹಾನ್ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ವಿರಾಟ್ ಕೊಹ್ಲಿ ದಾಖಲೆ ಅಳಿಸಿದರು. ಇದಲ್ಲದೆ, 59 ಬಾಲ್‌ಗಳಲ್ಲಿ ಶತಕ ಪೂರೈಸಿ ಪಂದ್ಯಾವಳಿಯಲ್ಲಿ ಎರಡು ಶತಕ ಬಾರಿಸಿದ 2ನೇ ಆಟಗಾರ ಎನಿಸಿದರು. 179 ರನ್‌ಗಳಿಗೆ ಎರಡನೇ ವಿಕೆಟ್ ಕಳೆದುಕೊಂಡ ಪಾಕಿಸ್ತಾನ ಭಾರೀ ಕುಸಿತ ಅನುಭವಿಸಿತು. ಮುಂದಿನ ಬ್ಯಾಟರ್‌ಗಳು ಬರುತ್ತಲೇ ಪೆವಿಲಿಯನ್ ಹೊರಟತೊಡಗಿದರು. ಕೊನೆಯ ಮೂರೂವರೆ ಓವರುಗಳಲ್ಲಿ ಪಾಕಿಸ್ತಾನ 6 ವಿಕೆಟ್‌ಗಳನ್ನು ಕಳೆದುಕೊಂಡಿತು.


» ಶಣಕ ಪರಾಕ್ರಮಕ್ಕೆ ಒಲಿಯದ ಜಯ
» ಗೆದ್ದರೂ ಹೊರಬಿದ್ದ ಪಾಕ್

ಮೇನಲ್ಲಿ ಬೆಂಗಳೂರಲ್ಲಿ ಎರಡು ಎಟಿಪಿ ಕೂಟ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಮೇ ತಿಂಗಳಲ್ಲಿ ಎಸ್. ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮೇ 11ರಿಂದ 17ರವರೆಗೆ ಮತ್ತು ಮೇ 18ರಿಂದ 24ರವರೆಗೆ ನಿರಂತರವಾಗಿ ಎರಡು ಎಟಿಪಿ ಚಾಲೆಂಜರ್ ಟೂರ್ನಿಗಳನ್ನು ಆಯೋಜಿಸಲು ಸಜ್ಜಾಗಿದೆ.

ಈ ಎರಡು ವಾರಗಳ ಸ್ಪರ್ಧೆಗಳು ಪುರುಷರ ವೃತ್ತಿಪರ ಟೆನಿಸ್‌ನಲ್ಲಿ ಬೆಂಗಳೂರನ್ನು ದೇಶದ ಕೇಂದ್ರಬಿಂದುವಾಗಿಸಲಿದೆ. ಆಟಗಾರರಿಗೆ ಸ್ವದೇಶದಲ್ಲೇ ನಿರಂತರವಾಗಿ ಅಂಕಗಳನ್ನು ಗಳಿಸುವ ಅವಕಾಶ ದೊರೆಯಲಿದೆ. ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ ಸ್ಪರ್ಧೆಗಳ ಮತ್ತು ಎಟಿಪಿ ಟೂರ್ ನಡುವಿನ ಸೇತುವೆಯಾಗಿ ಇರುವ ಚಾಲೆಂಜರ್ ಸ್ಪರ್ಧೆಗಳು ಉದಯೋನ್ಮುಖ ಆಟಗಾರರ ಬೆಳವಣಿಗೆಗೆ ಮಹತ್ವದ ಪಾತ್ರವಹಿಸುತ್ತವೆ.

ಇತ್ತೀಚೆಗೆ ನಡೆದ ಬೆಂಗಳೂರು ಓಪನ್ 125ರ ಯಶಸ್ವಿ 10ನೇ ಆವೃತ್ತಿ ಹಾಗೂ ಈ ತಿಂಗಳ ಆರಂಭದಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ ಭಾರತ ಸಾಧಿಸಿದ 3-2 ಡೇವಿಸ್ ಕಪ್ ಜಯದ ಬಳಿಕ ಈ




ಘೋಷಣೆ ಬಂದಿದೆ. ಇದು ಕೆಎಸ್‌ಎಲ್‌ಟಿಎಯ ದೀರ್ಘಕಾಲೀನ ಯೋಜನೆಯ ಭಾಗವಾಗಿದೆ. ನಿರಂತರವಾಗಿ ಎರಡು ಚಾಲೆಂಜರ್ 50 ಟೂರ್ನಿಗಳನ್ನು ಪಡೆಯುವುದು ಬೆಂಗಳೂರನ್ನು ಉನ್ನತ ಮಟ್ಟದ ಟೆನಿಸ್ ಕೇಂದ್ರವಾಗಿ ರೂಪಿಸುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ.

ದೇಶದಲ್ಲೇ ಬಲಿಷ್ಠ ಅಂತಾರಾಷ್ಟ್ರೀಯ ಕ್ಯಾಲೆಂಡರ್ ನಿರ್ಮಾಣವಾದರೆ ಆಟಗಾರರು, ತರಬೇತುದಾರರು, ಅಧಿಕಾರಿಗಳು ಹಾಗೂ ಕ್ರೀಡಾಂಗಣದಲ್ಲಿ ಕುಳಿತು ನೋಡುವ ಯುವ ಪ್ರತಿಭೆಗಳಿಗೂ ಲಾಭವಾಗುತ್ತದೆ. ಈ ಸಾಧನೆ ಸಾಧ್ಯವಾಗಲು ಸಹಕರಿಸಿದ ಕ್ರೀಡಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಹಾಗೂ ನಮ್ಮ ಪ್ರಾಯೋಜಕರಿಗೆ ಕೃತಜ್ಞತೆಗಳು, ಎಂದು ಮಹೇಶ್ವರ ರಾವ್ (ಐಎಎಸ್), ಮಹಾನಗರ ಆಯುಕ್ತರು ಹಾಗೂ ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಹೇಳಿದರು.

ಇದಕ್ಕೂ ಮುನ್ನ ಬೆಂಗಳೂರು ನಗರದಲ್ಲಿ ಡೇವಿಸ್ ಕಪ್, ಬೆಂಗಳೂರು ಓಪನ್ (ಚಾಲೆಂಜರ್ 125) ಸೇರಿದಂತೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳು ಯಶಸ್ವಿಯಾಗಿ ನಡೆದಿವೆ. ಸುಮಿತ್ ನಾಗಲ್, ಪ್ರಜ್ನೇಶ್ ಗುನ್ನೇಶ್ವರನ್ ಅವರ ವೃತ್ತಿಜೀವನಕ್ಕೆ ಇಲ್ಲಿ ನಡೆದ ಸ್ಪರ್ಧೆಗಳು ಮಹತ್ವದ ವೇದಿಕೆ ಒದಗಿಸಿವೆ. ಇತ್ತೀಚೆಗೆ ವೈಷ್ಣವಿ ಅಡ್ಕರ್ ಸಾಧಿಸಿದ ಮಹತ್ವದ ಪ್ರಶಸ್ತಿ ಜಯವೂ ಬೆಂಗಳೂರಿನ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5910

ಎಡದಿಂದ ಬಲಕ್ಕೆ
1.ಕರ್ನಾಟಕವನ್ನಾಳಿದ ಪ್ರಾಚೀನ ರಾಜವಂಶ (3)
3.ವಿಶ್ವವನ್ನಾಳುವವನು-ಲೋಕನಾಯಕ (4)
5.ಕರುಣಾಸ್ವರೂಪಿ (4)
6.ಅಪಾರಪ್ರಮಾಣವನ್ನು ಸೂಚಿಸುವ ಪದ (4)
8.ಸಮಾಜದ ಒಟ್ಟು ಕಲ್ಯಾಣವನ್ನು ಹೀಗೆನ್ನುತ್ತೇವೆ (4)
11.ಅಡುಗೆ ಎಂಬ ಹೆಸರಿನ ರಾಕ್ಷಸನ ಶತ್ರು-ಇಂದ್ರ (4)
14.ಸೊಗಸು ಹೆಚ್ಚಾಗು-ಬಣ್ಣವೇರು (4)
15.ಕರ್ನಾಟಕದ ಭಾಷೆ ಮಾತನಾಡುವ ವ್ಯಕ್ತಿ (4)
16.ಬಂಧಮುಕ್ತಗೊಳಿಸು (4)
17.ತೂಕ ಅಳೆಯುವ ಸಾಧನವಿಲ್ಲಿ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಕೊಡದಲ್ಲಿ ಹುಟ್ಟಿದವನು-ಅಗಸ್ತ್ಯ (4)
2.ಪರಿವರ್ತಿಸು-ತಿರುವು ಮಾಡು (4)
3.ಈಕೆ ಗೆಲುವಿನ ಅಧಿದೇವತೆ (4)
4.ರಾಮಭಕ್ತೆ ಈ ಕುಲದ ಮಹಿಳೆ (3)
7.ಸಸ್ಯಗಳಿಂದ ದೊರಕುವ ಆಹಾರ ಪದಾರ್ಥ (4)
9.ಇತ್ತೀಚೆಗೆ ಬೆಳೆದ ಹೊಸ ಪೈರು (4)
10.ಆಶ್ಚರ್ಯಪಡು ಎಂಬರ್ಥದ ನುಡಿಗಟ್ಟು (4)
12.ಕಡಿಯ ನಡುವೆ ಕರಬೂಜ ಜಾತಿಯ ಹಣ್ಣು ಇದೆ (4)
13.ಸಾಧನೆಗಾಗಿ ಮಾನ್ಯತೆ ಪಡೆದವನು (4)
14.ಲಾಕ್ಷಣಿಕವಾಗಿ ಸಂಪತ್ತು-ಧನ (3)

5909 ಉತ್ತರ

ಎಡದಿಂದ ಬಲಕ್ಕೆ:
1.ಭುವನಮನೋಹರಿ
3.ಶಿವ 4.ಕಜ್ಜಿ 5.ಬೀಜಾಣು
7.ಮಜಕೂರು 9.ಪಾಕೃತ
11.ಮಂದಲಿಗೆ
13.ಮಣಭಾರ
15.ಕೆಲಬಲ 16.ತಿಲಗಾತ್ರ

ಮೇಲಿನಿಂದ ಕೆಳಕ್ಕೆ :
1.ಭುವನಜ 2.ಕೃಪಾಕರಿ
5.ಬೀರು 6.ಅಣು
8.ಕೂಡಲಿ 10.ಪಾಷಾಣ
11.ಮಂದಾನಿಲ
12.ಗೆಜ್ಜೆಟೀಕೆ
13.ಮಧುಮತಿ
14.ರಸತತ್ವ

ಹಿಂದೂ ಸಂಗಮ ಪ್ರಚಾರ ವೇಳೆ ಕಾರ್ಯಕರ್ತನ ಮೇಲೆ ಮಾರಣಾಂತಿಕ ಹಲ್ಲೆ

ಭಿನ್ನಕೋಮಿನ ನಾಲ್ವರ ಬಂಧನ

ಮಡಿಕೇರಿ: ಹಿಂದೂ ಸಂಗಮ ಕಾರ್ಯಕ್ರಮದ ಪ್ರಚಾರದಲ್ಲಿ ತೊಡಗಿದ್ದ ಕಾರ್ಯಕರ್ತರ ಮೇಲೆ ಮತಾಂಧರ ಗುಂಪೊಂದು ಮಾರಣಾಂತಿಕ ಹಲ್ಲೆ ನಡೆಸಿ ಗಂಭೀರ ಗಾಯಗೊಳಿಸಿರುವ ಘಟನೆ ಶುಕ್ರವಾರ ಸಂಜೆ ನಾಪೋಕ್ಲುವಿನಲ್ಲಿ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಬಲ್ಲಮಾವಟಿಯಲ್ಲಿ ಶನಿವಾರ ನಡೆಯಲಿದ್ದ ಬೃಹತ್ ಹಿಂದೂ ಸಮಾವೇಶ ಕಾರ್ಯಕ್ರಮದ ಅಂಗವಾಗಿ ಪಿಕ್ ಅಪ್ ವಾಹನದಲ್ಲಿ ಪ್ರಚಾರಕ್ಕೆ ತೆರಳುತ್ತಿದ್ದಾಗ, ಶುಕ್ರವಾರ ಸಂಜೆ ನಾಪೋಕ್ಲು ಪಟ್ಟಣದ ಪೊನ್ನಾಡ್ ಸೂಪರ್ ಮಾರ್ಕೆಟ್ ಮುಂಭಾಗದಲ್ಲಿ ಸಿದ್ದಿಕ್ ಹಾಗೂ ಇತರರ ಗುಂಪೊಂದು, ಮೈಕ್‌ನಲ್ಲಿ ಪ್ರಚಾರ ಮಾಡದಂತೆ ಬಲ್ಲಮಾವಟಿ ನಿವಾಸಿ ಗೌತಮ್ ಎಂಬವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿರುವುದಾಗಿ ಹೇಳಲಾಗಿದೆ.

ಈ ಸಂದರ್ಭ ಗಂಭೀರವಾಗಿ ಗಾಯಗೊಂಡ ಗೌತಮ್‌ನನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಿಂದೂ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿರುವ ಸುದ್ದಿ ತಿಳಿಯುತ್ತಿದ್ದಂತೆ ವಿವಿಧ ಹಿಂದೂ ಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಸೂಪರ್ ಮಾರ್ಕೆಟ್ ಎದುರು ಜಮಾಯಿಸಿ ಹಲ್ಲೆ ಆರೋಪಿಗಳನ್ನು ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿದರು. ಅಲ್ಲದೆ ಬ್ಲಾಕ್ ಕಾಂಗ್ರೆಸ್‌ನ ಬ್ಲಾಕ್ ಅಧ್ಯಕ್ಷರ ಮಕ್ಕಳಿಂದ ಹಿಂದೂ ಯುವಕರ ಮೇಲೆ ಹಲ್ಲೆ ನಡೆದಿದ್ದು, ಆರೋಪಿಗಳ ರಕ್ಷಣೆ ಮಾಡಲಾಗುತ್ತದೆ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ರಸ್ತೆ ತಡೆ ನಡೆಸುವ ಮೂಲಕ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದರಲ್ಲದೆ, ಶನಿವಾರ ಮಧ್ಯಾಹ್ನದೊಳಗೆ ಆರೋಪಿಗಳನ್ನು ಬಂಧಿಸುವಂತೆ ಗಡುವು ನೀಡಿದ್ದರು.

ನಾಲ್ವರ ಬಂಧನ

ಪ್ರಕರಣದ ಗಂಭೀರತೆಯನ್ನರಿತ ಪೊಲೀಸರು ಘಟನೆಗೆ ಸಂಬಂಧಿಸಿದಂತೆ ರಾತ್ರೋರಾತ್ರಿ ಆರೋಪಿಗಳಾದ ಸಿದ್ದಿಕ್, ಸುಹೇಲ್, ನಾಫಿ ಹಾಗೂ ರಶೀದ್ ಎಂಬವರುಗಳನ್ನು ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ಸ್ಪಷ್ಟಪಡಿಸಿದ್ದಾರೆ.

ನಾಪೋಕ್ಲುವಿನಲ್ಲಿ ಹಿಂದೂ ಕಾರ್ಯಕರ್ತನ ಮೇಲೆ ನಡೆದಿರುವ ಹಲ್ಲೆಗೆ ಸಂಬಂಧಿಸಿದಂತೆ ಜಿಲ್ಲೆಯ ವಿವಿಧ ಹಿಂದೂಪರ ಸಂಘಟನೆಗಳು, ರಾಜಕೀಯ ಪ್ರಮುಖರಿಂದ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ನಾಪೋಕ್ಲು ಕೊಡವ ಸಮಾಜ ಖಂಡನೆ

ನಾಪೋಕ್ಲುವಿನಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತ ಅಪ್ಪಚ್ಚಿರ ಗೌತಮ್ ಅವರ ಮೇಲೆ ಕಿಡಿಗೇಡಿಗಳು ನಡೆಸಿರುವ ಮಾರಣಾಂತಿಕ ಹಲ್ಲೆಯನ್ನು ತೀವ್ರವಾಗಿ ಖಂಡಿಸುವುದಾಗಿ ನಾಪೋಕ್ಲು ಕೊಡವ ಸಮಾಜ ತಿಳಿಸಿದೆ. ಪತ್ರಿಕಾ ಪ್ರಕಟಣೆ ನೀಡಿರುವ ಕೊಡವ ಸಮಾಜದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಇದು ಶಾಂತಿ ಕದಡುವ ಯತ್ನವಾಗಿದೆ ಎಂದು ಆರೋಪಿಸಿದ್ದಾರೆ. ಸಮಾಜದ ಕಾನೂನು ಸುವ್ಯವಸ್ಥೆಗೆ ದಕ್ಕೆ ತರುವ ಕಿಡಿಗೇಡಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ನಾಪೋಕ್ಲುವಿನಲ್ಲಿ ನಡೆದ ಘಟನೆಯನ್ನು ಪೊಲೀಸ್ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು ಮತ್ತು ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ನಾಪೋಕ್ಲು ವ್ಯಾಪ್ತಿಯಲ್ಲಿ ಶಾಂತಿ ಕದಡುವ ಯತ್ನಗಳು ಪುನರಾವರ್ತನೆಯಾಗುತ್ತಿದ್ದು, ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕು ಮತ್ತು ನಾಪೋಕ್ಲು ಪೊಲೀಸ್ ಠಾಣೆಯ ಬಲ ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.







ಹಿಂಸಾತ್ಮಕ ಕೃತ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ

ನಾಪೋಕ್ಲು: ಹಿಂದೂ ಕಾರ್ಯಕರ್ತನ ಮೇಲೆ ಶುಕ್ರವಾರ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಶನಿವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಖುದ್ದು ನಾಪೋಕ್ಲುವಿಗೆ ಭೇಟಿ ನೀಡಿದ್ದು ಬಲ್ಲಮಾವಟಿಯಲ್ಲಿ ಹಮ್ಮಿಕೊಳ್ಳಲಾಗಿರುವ ಹಿಂದೂ ಸಂಗಮ ಸಮಾವೇಶದ ಸಂಪೂರ್ಣ ಮಾಹಿತಿ ಪಡೆದು ಬಿಗಿ ಬಂದೋಬಸ್ತನ್ನು ಏರ್ಪಡಿಸಿದ್ದರು. ಈ ಬಗ್ಗೆ ಇಲ್ಲಿಯ ಪೊಲೀಸ್ ಠಾಣೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಬಿಂದುಮಣಿ, ಎಲ್ಲಾ ಆರೋಪಿಗಳನ್ನು ಬಂಧಿಸಿದ್ದು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಈ ರೀತಿಯ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲಾಗಿದೆ ಎಂದು ಹೇಳಿದರು. ಹಾಗೂ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವಂತೆ ಕರೆ ನೀಡಿದ್ದಾರೆ. ಹಿಂಸಾತ್ಮಕ ಕೃತ್ಯಗಳನ್ನು ನಡೆಸುವವರ ವಿರುದ್ಧ ಜಿಲ್ಲಾ ಪೊಲೀಸ್ ಕಠಿಣ ಕ್ರಮ ಕೈಗೊಳ್ಳುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು.

ಹಲ್ಲೆ ಆರೋಪಿಗಳ ಗಡಿಪಾರಿಗೆ ಆಗ್ರಹ

ನಾಪೋಕ್ಲುವಿನಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳನ್ನು ಗಡಿಪಾರು ಮಾಡಬೇಕೆಂದು ವಿರಾಜಪೇಟೆ ಬಿಜೆಪಿ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಆಗ್ರಹಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಹಿಂದೂ ಧರ್ಮದ ಜಾಗೃತಿಗಾಗಿ ಶಾಂತಿಯುತವಾಗಿ ಜಿಲ್ಲಾವ್ಯಾಪಿ ಹಿಂದೂ ಸಂಗಮ ಕಾರ್ಯಕ್ರಮಗಳನ್ನು ನಡೆಸುತ್ತಾ ಬರಲಾಗುತ್ತಿದೆ. ಈ ನಡುವೆ ಬಲ್ಲಮಾವಟಿಯಲ್ಲಿ ಕಾರ್ಯಕ್ರಮ ನಡೆಸಬೇಕಾದ ಹೊತ್ತಿನಲ್ಲೇ ಅಶಾಂತಿ ಹಾಗೂ ಕೋಮುಗಲಭೆ ಸೃಷ್ಟಿಸುವ ಹುನ್ನಾರವನ್ನು ಕೆಲವರು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಹಲ್ಲೆ ಪ್ರಕರಣದ ಓರ್ವ ಆರೋಪಿ ಇತ್ತೀಚೆಗೆ ಭದ್ರತಾ ಕಾಯ್ದೆ 107 ಅಡಿ ತಾಲ್ಲೂಕು ದಂಡಾಧಿಕಾರಿಗಳ ಸಮಕ್ಷಮದಲ್ಲಿ ಬಾಂಡ್‌ಗೆ ಸಹಿ ಮಾಡಿದ್ದಾನೆ ಎಂಬ ಮಾಹಿತಿ ಲಭ್ಯವಿದೆ. ಇದೀಗ ಬಾಂಡ್ ನಿಯಮ ಉಲ್ಲಂಘನೆ ಮಾಡಿರುವ ಘಟನೆ ನಡೆದಿದ್ದು, ಆರೋಪಿಯನ್ನು ತಕ್ಷಣ ಕೊಡಗು ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದ್ದಾರೆ.

ಕಡಲಪಾಲಾಗಿದೆ ಸಂತ್ರಸ್ತರ ಗೋಳು

ತೀರ ರಕ್ಷಣೆಗೆ ವೈಜ್ಞಾನಿಕ ಯೋಜನೆ ಜಾರಿ ಎಂದು?



ಕಾಸರಗೋಡು: ಕಾಸರಗೋಡು ಜಿಲ್ಲೆಯು ಸುಮಾರು 90 ಕಿಲೋಮೀಟರ್‌ಗಳಷ್ಟು ಸಮುದ್ರ ತೀರವನ್ನು ಹೊಂದಿದ್ದು, ಮಳೆಗಾಲ ಬಂತೆಂದರೆ ತೀರ ಪ್ರದೇಶ ನಿವಾಸಿಗಳು ಭೀತರಾಗುತ್ತಿದ್ದಾರೆ.

ಜಿಲ್ಲೆಯಲ್ಲಿ ಪ್ರತೀ ವರ್ಷವೂ ವಿವಿಧ ಕಡೆಗಳಲ್ಲಿ ಕಡಲ್ಕೊರೆತ ಸಂಭವಿಸುತ್ತಿದ್ದು, ಅನೇಕ ಮಂದಿ ಮನೆ, ಜಾಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕಡಲ ತೀರದಲ್ಲಿರುವ ಅನೇಕ ರಸ್ತೆಗಳೂ ಕಡಲಬ್ಬರಕ್ಕೆ ತುತ್ತಾಗುತ್ತಿವೆ. ಕಡಲ್ಕೊರೆತದಿಂದ ಉಂಟಾಗುವ ದುರಂತ ಅನುಭವಿಸುವವರಲ್ಲಿ ಮೀನು ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅದರಲ್ಲಿ ಪ್ರಾಣ ಹಾನಿ, ಮನೆ ಹಾನಿ, ನೌಕರಿ ಉಪಕರಣಗಳನ್ನು ಕಳಕೊಂಡವರು, ಜಾಗ ಕಳಕೊಂಡವರು ಅಲ್ಲದೆ ಇತರ ಪುಸ್ತಕಗಳು ಹಾಗೂ ಕಲಿಕೋಪಕರಣಗಳನ್ನು ಕಳಕೊಂಡ ವಿದ್ಯಾರ್ಥಿಗಳೂ ಇದ್ದಾರೆ.

ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ಹಲವು ವರ್ಷಗಳಿಂದ ಕರಾವಳಿ ಪ್ರದೇಶದ ಜನತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸುತ್ತಲೇ ಇದ್ದಾರೆ. ಹಲವು ಬಾರಿ ಮನವಿಗಳನ್ನೂ ನೀಡುತ್ತಲೇ ಇದ್ದಾರೆ. ಅಲ್ಲದೆ ಶಾಸಕರನ್ನು ಭೇಟಿಯಾಗಿ ಒತ್ತಾಯಿಸುತ್ತಿದ್ದಾರೆ. ಆದರೂ ವೈಜ್ಞಾನಿಕವಾದ ಯೋಜನೆಗಳಾವುದೂ ಕಡಲ ತೀರದ ಸಂರಕ್ಷಣೆಗೆ ತಲುಪುತ್ತಿಲ್ಲ. ಜಿಲ್ಲಾಡಳಿತವು, ಕಂದಾಯ ಅಧಿಕಾರಿಗಳು, ಜನಪ್ರತಿನಿಧಿಗಳು ಕಡಲ್ಕೊರೆತ ಸಂಭವಿಸಿದಾಗ ಸ್ಥಳ ಸಂದರ್ಶಿಸಿ ತೆರಳುತ್ತಾರೆ ವಿನಾ ಬೇರೇನೂ ಬೆಳವಣಿಗೆ ಉಂಟಾಗುತ್ತಿಲ್ಲ ಎಂದು ಕಡಲ ತೀರ ಪ್ರದೇಶವಾಸಿಗಳು ಹೇಳುತ್ತಿದ್ದಾರೆ.

ಕಡಲ ತೀರ ಸಂರಕ್ಷಣೆಗೆ ವೈಜ್ಞಾನಿಕವಾದ ಸಮಗ್ರ ಯೋಜನೆಗಳನ್ನು ಘೋಷಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗುತ್ತಿಲ್ಲ ಎಂದು ತೀರ ಪ್ರದೇಶ ನಿವಾಸಿಗಳು ತಮ್ಮ ಅಳಲು ವ್ಯಕ್ತಪಡಿಸಿದ್ದಾರೆ.

ಇವು ಕಡಲ್ಕೊರೆತ ಬಾಧಿಸುವ ಪ್ರದೇಶಗಳು

ಮಂಜೇಶ್ವರ ಕಣ್ವತೀರ್ಥ, ಉಪ್ಪಳ ಮೂಸೋಡಿ, ಕುಂಬಳೆ ಕೊಯಿಪಾಡಿ, ಮೊಗ್ರಾಲ್ ನಾಂಗಿ, ಕಾವುಗೋಳಿ, ಚೇರಂಗೈ, ಕೀಯೂರು, ಚೆಂಬರಿಕ್ಕ, ಉದುಮ, ತೃಕ್ಕನ್ನಾಡು, ಕೋಟಿಕುಳಂ, ಅಜಾನೂರು, ವಲಿಯಪರಂಬ ಮತ್ತಿತರ ಪ್ರದೇಶಗಳಲ್ಲಿ ಕಡಲ್ಕೊರೆತದಿಂದಾಗಿ ಹಲವಾರು ಮನೆಗಳು, ದೋಣಿಗಳು, ಬಲೆಗಳು, ತೆಂಗಿನ ಮರಗಳು, ಭೂಮಿ, ಕರಾವಳಿ ರಸ್ತೆಗಳು ನೀರು ಪಾಲಾಗಿವೆ. ಕೇರಳದ ವಿವಿಧ ಕಡೆಗಳಲ್ಲಿ ಪರೀಕ್ಷಿಸಿ ಯಶಸ್ವಿಗೊಂಡ ಯೋಜನೆಯಾದ ಟೆಟ್ರಾಪಾಡ್‌ನಿಂದ ವೈಜ್ಞಾನಿಕವಾದ ತಡೆಗೋಡೆಗಳನ್ನು ನಿರ್ಮಿಸಬೇಕೆಂದು ಕರಾವಳಿ ಪ್ರದೇಶದ ನಿವಾಸಿಗಳು ಒತ್ತಾಯಿಸುತ್ತಿದ್ದಾರೆ. ಆದರೆ ಈ ಯೋಜನೆ ಜಾರಿಗೊಳಿಸಲು ಅಧಿಕಾರಿಗಳು ಮುಂದಾಗುತ್ತಿಲ್ಲ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 22° | ಉಡುಪಿ 30° 23°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 01, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ಚಂದಕಷ್ಟೇ ಸೀಮಿತವೇ ಬಿ.ಸಿ.ರೋಡ್‌ನ ಕೆಎಸ್ಆರ್‌ಟಿಸಿ ನಿಲ್ದಾಣ?
ಪುಟ 3


ಬಡ ಮಹಿಳೆಯ ಕುಟುಂಬಕೆ ಸಿಕಿತು ಸೂರಿನ ಭಾಗ್ಯ
ಪುಟ 6

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ಇಂದು ಕೋಳಿ ಅಂಕ ಅಧಿಕೃತಕ್ಕೆ ಆಗ್ರಹಿಸಿ ಆಲಂಕಾರಿನಲ್ಲಿ ಸಭೆ

ಕಡಬ: ತುಳುನಾಡಿನ ಪಾರಂಪರಿಕ ಕ್ರೀಡೆ ಜೂಜುರಹಿತ ಕೋಳಿ ಅಂಕವನ್ನು ಅಧಿಕೃತ ಮಾಡುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಸರಕಾರದ ಮಟ್ಟದಲ್ಲಿ ಕಾನೂನು ರೂಪಿಸಬೇಕು ಎಂದು ಆಗ್ರಹಿಸುವ ಸಲುವಾಗಿ ಮಾ.1ರಂದು ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ದೀನ ದಯಾಳು ರೈತ ಸಭಾ ಭವನದಲ್ಲಿ ಹಕ್ಕೊತ್ತಾಯ ಸಭೆ ಕರೆಯಲಾಗಿದೆ ಎಂದು ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆಯ ಜಿಲ್ಲಾ ಪ್ರಮುಖ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಿವಣ್ಣ ಗೌಡ ಇಡ್ಯಾಡಿ ಹೇಳಿದರು. ಅವರು ಶುಕ್ರವಾರ ಕಡಬದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದ.ಕ. ಉಡುಪಿ ಜಿಲ್ಲೆಗಳಲ್ಲಿ ದೈವಾರಾಧನೆ ಎನ್ನುವುದು ಅತ್ಯಂತ ಶ್ರೇಷ್ಠವಾಗಿದೆ. ಕೆಲವೆಡೆ ದೈವದ ನೇಮ ನಡೆಯುವ ಮೊದಲು ಸಾಂಪ್ರದಾಯಿಕ ಕೋಳಿ ಅಂಕ ನಡೆದರೆ, ಇನ್ನು ಕೆಲವು ಕಡೆ ನೇಮೋತ್ಸವದ ಬಳಿಕ ನಡೆಯುತ್ತಿದೆ. ಕರಾವಳಿಯಿಂದ ಘಟ್ಟದ ಅಂಚಿನ ವರಗೆ ವ್ಯಾಪಿಸಿರುವ ಕೋಳಿ ಅಂಕಕ್ಕೆ 850 ವರ್ಷದ ಇತಿಹಾಸ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹಿತರಕ್ಷಣಾ ವೇದಿಕೆಯ ಕಡಬ ತಾಲೂಕು ಪ್ರಮುಖರಾದ ಹಿತರಕ್ಷಣಾ ವೇದಿಕೆಯ ಜಿಲ್ಲಾ ಸಂಚಾಲಕ ಬೆಳಿಯಪ್ಪ ಗೌಡ ತಿಮರೆಗುಡ್ಡೆ, ಆನಂದ ಪೂಜಾರಿ ಕಡಬ, ರಮೇಶ್ ಆಲಂಕಾರು, ಹರೀಶ್ ಕಲ್ಕಾಡಿ, ಗೋಪಿನಾಥ್ ಬಂಟ್ರ ಮೊದಲಾದವರು ಉಪಸ್ಥಿತರಿದ್ದರು.

ಹನುಮಗಿರಿ ಶ್ರೀಕ್ಷೇತ್ರದಲ್ಲಿ ನಾಳೆ ಜಪದೀಕ್ಷೆ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವದ ಸಂದರ್ಭ ಲೋಕಕಲ್ಯಾಣಕ್ಕಾಗಿ ನಡೆಯಲಿರುವ ಕೋಟಿ ಶ್ರೀ ರಾಮ ತಾರಕ ಮಹಾಯಜ್ಞದ ಜಪದೀಕ್ಷಾ ಸಮಾರಂಭ ಹಾಗೂ ಲಕ್ಷೋತ್ತರ ನಾರಿಕೇಳ ಸಮರ್ಪಣಾ ಸಮಾರಂಭ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ಅವರ ಮಾರ್ಗದರ್ಶನದಲ್ಲಿ ಮಾ.2ರಂದು ಶ್ರೀ ಕ್ಷೇತ್ರದಲ್ಲಿ ನಡೆಯಲಿದೆ. ಅಂದು ಶ್ರೀ ಕೋದಂಡರಾಮ ಸನ್ನಿಧಿಯಲ್ಲಿಬೆಳಗ್ಗೆ 8.30ರಿಂದ ಶ್ರೀ ರಾಮ ತಾರಕ ಯಜ್ಞ ಆರಂಭಗೊಂಡು ಬೆಳಗ್ಗೆ 10.30ಕ್ಕೆ ರಾಮ ತಾರಕ ಯಜ್ಞ ಪೂರ್ಣಾಹುತಿ ನಡೆಯಲಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂಸೇವಕ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರಿಂದ ಶ್ರೀ ರಾಮ ತಾರಕ ಜಪದೀಕ್ಷಾ ಪ್ರಧಾನ ನಡೆಯಲಿದೆ. ಲಕ್ಷೋತ್ತರ ನಾರಿಕೇಳ ಸಮರ್ಪಣಾ ಸಮಾರಂಭ, ಅನುಜ್ಞಾ ಕಳಶ, ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ. ಜಪದೀಕ್ಷೆ ಸ್ವೀಕರಿಸುವ ಎಲ್ಲಾ ಭಕ್ತಾಭಿಮಾನಿಗಳು ಈ ಸಂದರ್ಭದಲ್ಲಿ ಭಾಗವಹಿಸಿ ದೇವರ ಅನುಗ್ರಹಕ್ಕೆ ಪಾತ್ರರಾಗುವಂತೆ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ, ಬ್ರಹ್ಮಕಲಶೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಡಾ. ರವೀಶ್ ಪಡುಮಲೆ ತಿಳಿಸಿದ್ದಾರೆ.

ಮಾನಾಡಿಗೋಳಿ ದೈವಸ್ಥಾನದಲ್ಲಿ ಪ್ರತಿಷ್ಠಾ ಕಾರ್ಯ


ಮುಲ್ಕಿ: ಮಾನಂಪಾಡಿ ದೈವರಾಜ ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ವಿಜೃಂಭಣೆಯಿಂದ



ನಡೆಯಿತು. ಕಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ವೇ.ಮೂ. ರಾಘವೇಂದ್ರ ಭಟ್ ಮಾನಪಾಡಿ ನೇತೃತ್ವದಲ್ಲಿ ಪ್ರಾತಃ ಕಾಲ ವಿಶೇಷ ಪ್ರಾರ್ಥನೆ, ಶ್ರೀ ಆದ್ಯಗಣಯಾಗ, ಪ್ರಾಯಶ್ಚಿತ್ತಾದಿ ಹೋಮ, ಪ್ರತಿಷ್ಠಾ ಹೋಮ, ತುಳಶಿ ತುಳಸೀ ಪ್ರತಿಷ್ಠೆ ನಡೆದು ಮೀನ ಲಗ್ನ ಸುಮೂಹೂರ್ತದಲ್ಲಿ ದೈವಗಳ ಪುನರ್ ಪ್ರತಿಷ್ಠೆ ಕಲಶಾ ಅಭಿಷೇಕ ವಿಜೃಂಭಣೆಯಿಂದ ನಡೆಯಿತು. ಪ್ರಸಾದ ವಿತರಣೆ,ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಭೋಜ ಶೆಟ್ಟಿ, ಅಧ್ಯಕ್ಷ ದಿನೇಶ್ ಹೆಗ್ಡೆ, ಪ್ರಧಾನ ಕಾರ್ಯದರ್ಶಿ ಕೆ. ಸಚ್ಚಿದಾನಂದ, ಕಾರ್ಯಾಧ್ಯಕ್ಷ ಚಂದ್ರಶೇಖರ, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ನವೀನ್ ಶೆಟ್ಟಿ ಪೆರ್ಮಾರ್ ಗುತ್ತು, ಮುಲ್ಕಿ ನಗರ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಅಂಚನ್, ರಾಮಚಂದ್ರ ಟಿ. ಕೋಟ್ಯಾನ್, ರವೀಂದ್ರ ಆರ್. ಬಂಗೇರ, ಉಮೇಶ್ ಮಾನಂಪಾಡಿ, ಸುಭಾಷ್ ಶೆಟ್ಟಿ ವಿಜಯ ಎಲ್. ಕೋಟ್ಯಾನ್, ರಾಜೇಶ್ ಕೆರೆಕಾಡು ಹಾಗೂ ಗ್ರಾಮಸ್ಥರು ಮತ್ತಿತರರು ಉಪಸ್ಥಿತರಿದ್ದರು .

ಬುಡೆಂಗಿ: ದೈವಸ್ಥಾನದ ಆಡಳಿತ ಮಂಡಳಿ ಪದಾಧಿಕಾರಿಗಳ ಆಯ್ಕೆ

ಸುಬ್ರಹ್ಮಣ್ಯ: ಬಳ್ಪದ ಬುಡೆಂಗಿ ಶ್ರೀ ಮಹಾವಿಷ್ಣುಮೂರ್ತಿ ದೈವಸ್ಥಾನದಲ್ಲಿ ನಡೆದ ಬುಡೆಂಗಿ ಆಡಳಿತ ಮಂಡಳಿಯ ಪದಾಧಿಕಾರಿಗಳ



ಸಭೆಯಲ್ಲಿ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ಡಾ. ದೇವಿಪ್ರಸಾದ್ ಕಾನತ್ತೂರು ಆಯ್ಕೆಯಾದರು. ಉಪಾಧ್ಯಕ್ಷರಾಗಿ ಉಮೇಶ್ ಬುಡೆಂಗಿ ಬಲ್ಪ, ನವೀನ್ ಪುಲ್ಲಡ್ಕ, ಕಾರ್ಯದರ್ಶಿ ಮೋಹನ ಗುತ್ತಿಗಾರ್, ಕೋಶಾಧಿಕಾರಿ ಸಂತೋಷ್ ಕುಮಾರ್ ರೈ ಪಳ್ಳತ್ತಡ್ಕ, ಆಡಳಿತ ಮೊಕ್ತೇಸರರಾಗಿ ಕುಮಾರ ಬೆಳ್ಚಪ್ಪಾಡ ಕಡಬ, ಸುಂದರ ಬೆಳ್ಚಪ್ಪಾಡ ಬುಡೆಂಗಿ, ಮೋಹನ ಬೆಳ್ಚಪ್ಪಾಡ ಬುಡೆಂಗಿ ನೇಮಕಗೊಂಡರು. ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ದೈವಸ್ಥಾನದಲ್ಲಿ ಒತ್ತೆ ಕೋಲ ಮಹೋತ್ಸವವನ್ನು ಏ.11, 12ರಂದು ನಡೆಸಲು ತೀರ್ಮಾನಿಸಲಾಯಿತು ಮಾ.7ರಂದು ಕೊಳ್ಳಿ ಮುಹೂರ್ತ ನಡೆಸುವುದೆಂದು ನಿರ್ಣಯಿಸಲಾಯಿತು.

ಮಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಪ.ಜಾ., ಪ.ಪಂ.ದ ಮಾಸಿಕ ಸಭೆಯಲ್ಲಿ ದಲಿತರ ಅಳಲು

ಈಡೇರದ ಡಾ. ಅಂಬೇಡ್ಕರ್ ವೃತ್ತ ನಿರ್ಮಾಣದ ಬೇಡಿಕೆ

ಮಂಗಳೂರು: ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ದಿನ ಬೆಳಗಾದರೆ ವೃತ್ತಗಳು ನಿರ್ಮಾಣವಾಗಿ ಉದ್ಘಾಟನೆಯಾಗುತ್ತವೆ. ಆದರೆ ಕಳೆದ ಮೂರ್ನಾಲ್ಕು ದಶಕಗಳಿಂದ ನಗರದ ಹೃದಯ ಭಾಗದಲ್ಲಿ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಪ್ರತಿಮೆಯೊಂದಿಗೆ ವೃತ್ತ ನಿರ್ಮಾಣದ ದಲಿತರ ಬೇಡಿಕೆ ಮಾತ್ರ ಈಡೇರುತ್ತಿಲ್ಲ, ಟ್ರಾಫಿಕ್‌ಗೆ ಸಮಸ್ಯೆ ಆಗದಂತೆ ಅಂಬೇಡ್ಕರ್ ಅವರ ಪುತ್ಥಳಿಯೊಂದಿಗೆ ವೃತ್ತ ನಿರ್ಮಾಣ ನಮ್ಮ ಬೇಡಿಕೆ ಈಡೇರದಿದ್ದರೆ ಏ.14ರಂದು ಪ್ರತಿಭಟನೆ ಅನಿವಾರ್ಯ ಎಂದು ದಲಿತ ಮುಖಂಡರು ಎಚ್ಚರಿಸಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆ ಉಪ ಪೊಲೀಸ್ ಆಯುಕ್ತ ಮಿಥುನ್ ಅಧ್ಯಕ್ಷತೆಯಲ್ಲಿ ಮಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಶನಿವಾರ ನಡೆದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಮಾಸಿಕ ಸಭೆಯಲ್ಲಿ ದಲಿತ ಮುಖಂಡರು ಈ ಎಚ್ಚರಿಕೆ ನೀಡಿದರು.

ವೃತ್ತ ನಿರ್ಮಾಣಕ್ಕೆ ಶಿಲಾನ್ಯಾಸ ನಡೆದಿದ್ದರೂ ವೃತ್ತ ನಿರ್ಮಾಣ ಆಗದಿರಲು ಕಾರಣವೇನು ಎಂದು ತಿಳಿಯುತ್ತಿಲ್ಲ, ನಮ್ಮ ತಾಳ್ಮೆಯ ಕಟ್ಟೆ ಒಡೆದಿದೆ ಎಂದು



ದಲಿತ ಮುಖಂಡ ಅನಿಲ್ ಕುಮಾರ್ ಹೇಳಿದರು.

ಶಿಲಾನ್ಯಾಸ ಮಾತ್ರ, ಕಾಮಗಾರಿ ಇಲ್ಲ!

ಎಸ್.ಪಿ. ಆನಂದ್ ಮಾತನಾಡಿ, ಅಂಬೇಡ್ಕರ್ ವೃತ್ತ ನಿರ್ಮಾಣದ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವ ಬಗ್ಗೆ ತೀವ್ರ ಅಸಮಾಧಾನವಿದೆ. ಈಗಾಗಲೇ ಯೂನಿಯನ್ ಬ್ಯಾಂಕ್ 60 ಲಕ್ಷ ರೂ. ಹಾಗೂ ಪಾಲಿಕೆಯ 40 ಲಕ್ಷ ರೂ. ನಿಧಿ ಸೇರಿ 1 ಕೋಟಿ ರೂ. ವೆಚ್ಚದಲ್ಲಿ ವೃತ್ತ ನಿರ್ಮಿಸಲು ಶಿಲಾನ್ಯಾಸ ನಡೆದಿದ್ದರೂ ಕಾಮಗಾರಿ ಆಗಿಲ್ಲ, ಟ್ರಾಫಿಕ್ ಸಮಸ್ಯೆ ಎನ್ನಲಾಗುತ್ತಿದೆ. ನಾಲ್ಕು ಕಡೆಗಳಿಂದ ವಾಹನಗಳು ಸಂಚರಿಸುವ ಪಂಪ್‌ವೆಲ್‌ನಲ್ಲಿ ಕಳಸದೊಂದಿಗೆ ಸರ್ಕಲ್ ಮಾಡಲು ಸಾಧ್ಯವಾಗುವುದಾದರೆ ಅಂಬೇಡ್ಕರ್ ವೃತ್ತದಲ್ಲಿ ಯಾಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು.

ಬಾಳೆಪುಣಿ ಗ್ರಾಮದಲ್ಲಿ ಬಾಬು ಕೊರಗ ಎಂಬವರು ಕೃಷಿಗಾಗಿ ಒಂದು ಎಕರೆ ಜಮೀನು ನೀಡಲು ಅರ್ಜಿ ನೀಡಿದಾಗ ಅದು ಗೋಮಾಳವೆಂದು ಹೇಳಿ ತಿರಸ್ಕರಿಸಲಾಗಿದೆ. ಆದರೆ ಅಲ್ಲಿ ಇತರರಿಗೆ ಕೃಷಿ ಭೂಮಿ ಮಂಜೂರು ಆಗಿದೆ. ಕೊರಗ ಸಮುದಾಯದ ವ್ಯಕ್ತಿಗೆ ಗೋಮಾಳವಾಗುವ ಜಾಗ ಇತರರಿಗೆ ಹೇಗೆ ಮಂಜೂರು ಆಗಿರುವುದು ಎಂಬ ಬಗ್ಗೆ ತನಿಖೆ ಆಗಬೇಕು ಎಂದು ದಲಿತ ಮುಖಂಡ ಎಸ್.ಪಿ. ಆನಂದ ಆಗ್ರಹಿಸಿದರು.

ಸಹಕಾರಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚನೆ

ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಆರೋಗ್ಯ ಅಧಿಕಾರಿಯ ನಕಲಿ ಸಹಿ, ನಕಲಿ ವೇತನ ಚೀಟಿ, ನಕಲಿ ಮೊಹರು, ನಕಲಿ ಕಾಗದ ಪತ್ರಗಳ ಮೂಲಕ ಪೌರ ಕಾರ್ಮಿಕರ ಹೆಸರಿನಲ್ಲಿ ಸಹಕಾರಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚಿಸಲಾಗಿದೆ ಎಂದು ದಲಿತ ಮುಖಂಡರು ಆರೋಪಿಸಿದರು.

ಕೊಣಾಜೆಯ ಖಾಸಗಿ ಐಟಿಐಯ ಪ್ರಾಂಶುಪಾಲರೊಬ್ಬರು ತಮ್ಮ ಸಂಸ್ಥೆಯ ಉಪನ್ಯಾಸಕಿಯ ವೇತನ ಪ್ರಮಾಣ ಪತ್ರದ ಆಧಾರದಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದು ಕಿರುಕುಳ ನೀಡಿದ್ದಾರೆ ಎಂದು ದಲಿತ ಮುಖಂಡರೊಬ್ಬರು ದೂರಿದರು. ಈ ಬಗ್ಗೆ ಸಂಸ್ಥೆಯ ಇನ್ನೋರ್ವ ಉಪನ್ಯಾಸಕಿಯಿಂದ ದೂರು ಬಂದಿದೆ. ಪ್ರಾಂಶುಪಾಲರ ಮೇಲಿನ ವಿಶ್ವಾಸದಿಂದ ತಮ್ಮ ಹೆಸರಿನಲ್ಲಿ 2 ಲಕ್ಷ ರೂ. ಸಾಲ ಪಡೆದು ನೀಡಿದ್ದು

ಆರ್‌ಟಿಐಯಡಿ ಮಾಹಿತಿ

ಕೆಲ ನೈಜ ಪೌರ ಕಾರ್ಮಿಕರು ಬ್ಯಾಂಕ್ ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಹಲವು ಮಂದಿ ಈಗಾಗಲೇ ಸಾಲ ಪಡೆದಿರುವ ಬಗ್ಗೆ ಮಾಹಿತಿ ದೊರೆತಾಗ ಈ ಬಗ್ಗೆ ದಲಿತ ಮುಖಂಡ ವಿಶು ಕುಮಾರ್ ಅವರು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ)ಯಡಿ ದಾಖಲೆಗಳನ್ನು ಕಲೆ ಹಾಕಿದಾಗ ಈ ವಿಷಯ ತಿಳಿಯಿತು. ಈ ಬಗ್ಗೆ ಸೂಕ್ತ ಕ್ರಮ ಆಗಬೇಕು ಎಂದು, ವಿಶು ಕುಮಾರ್, ಅನಿಲ್ ಕುಮಾರ್ ತಿಳಿಸಿದರು.

ಇದೀಗ ಚೆಕ್ ಬೌನ್ಸ್ ಆಗಿ ವಾರೆಂಟ್ ಆಗಿರುವ ಬಗ್ಗೆ ದೂರು ದಾಖಲಾಗಿದೆ ಎಂದು ಸಭೆಯಲ್ಲಿದ್ದ ಎಸಿಪಿ ತಿಳಿಸಿದರು. ಈ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಡಿಸಿಪಿ ಮಿಥುನ್ ಸೂಚನೆ ನೀಡಿದರು. ಡಿಸಿಪಿ ರವಿಶಂಕರ್ ಉಪಸ್ಥಿತರಿದ್ದರು. ಇನ್‌ಸ್ಪೆಕ್ಟರ್ ನಾಗರಾಜ್ ಸ್ವಾಗತಿಸಿ, ಹಿಂದಿನ ಸಭೆಯ ನಡಾವಳಿಯ ವಿವರ ನೀಡಿದರು. ಇನ್‌ಸ್ಪೆಕ್ಟರ್ ಮುಹಮ್ಮದ್ ಸಲೀಂ ವಂದಿಸಿದರು.

ಫಲ ನೀಡಿದ ಪೋಸ್ಟ್ ಕಾರ್ಡ್ ಚಳವಳಿ: ರಸ್ತೆ ಅಭಿವೃದ್ಧಿಗೆ ಚಾಲನೆ



ಕಡಬ: ಕೊನೆಗೂ ಕಡಬ ತಾಲೂಕಿನ ಐತ್ತೂರು ಗ್ರಾಮದ ಸುಂಕದಕಟ್ಟೆ-ಮುಜೂರುಕಟ್ಟ ರಸ್ತೆ ಅಭಿವೃದ್ಧಿಗೆ ಹಲವು ವರ್ಷಗಳ ಹೋರಾಟದ ಫಲವೆಂಬಂತೆ ಸರಕಾರದಿಂದ ರೂ.1 ಕೋಟಿ ಅನುದಾನ ಮಂಜೂರುಗೊಂಡಿದೆ.

ಪೋಸ್ಟ್ ಕಾರ್ಡ್ ಚಳವಳಿ

ಸಂಪೂರ್ಣ ನಾದುರಸ್ತಿ ಸ್ಥಿತಿಯಲ್ಲಿದ್ದ ರಸ್ತೆ ಯನ್ನು ಅಭಿವೃದ್ಧಿಪಡಿಸುವ ಬೇಡಿಕೆಯನ್ನು ಮುಂದಿಟ್ಟುಕೊಂಡು ಕಳೆದ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದ ಸ್ಥಳೀಯ ಸಾಮಾಜಿಕ ಕಾರ್ಯಕರ್ತ ಬಾಲಕೃಷ್ಣ ಭಟ್ ಮುಜೂರುಕಟ್ಟ ಅವರು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಬೇಸತ್ತು 2024 ಫೆ.8ರಂದು ಬೆಂಗಳೂರಿನಲ್ಲಿ ನಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನಸ್ಪಂದನ ಕಾರ್ಯಕ್ರಮದಲ್ಲಿ ಮನವಿ ಸಲ್ಲಿಸಿದ್ದರು. ಆದರೆ, ಅದು ಕೂಡ 1 ವರ್ಷ ಕಳೆದರೂ ಫಲ ನೀಡದ ಹಿನ್ನೆಲೆಯಲ್ಲಿ 2025ರ ಆರಂಭದಲ್ಲಿ ಮುಖ್ಯಮಂತ್ರಿ ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿಗೆ ಒಟ್ಟು 45 ದಿನ ದಿನಕ್ಕೊಂದು ಪೋಸ್ಟ್ ಕಾರ್ಡ್ ಬರೆದು ಗಮನ ಸೆಳೆದಿದ್ದರು. ಆದರ ಫಲವಾಗಿ ಸರಕಾರವು ರೂ.1 ಕೋಟಿ ಅನುದಾನ ಮಂಜೂರು ಮಾಡಿತ್ತು. ಆ ಪೈಕಿ ಫೆ.16ರಂದು ಪ್ರಥಮ ಹಂತದಲ್ಲಿ ರೂ.20 ಲಕ್ಷ ಅನುದಾನ ಬಿಡುಗಡೆಯಾಗಿ ರಸ್ತೆಯನ್ನು ಕಾಂಕ್ರೀಟ್ ಹಾಕಿ ಅಭಿವೃದ್ಧಿಗೊಳಿಸುವ ಕಾಮಗಾರಿ ಆರಂಭಗೊಂಡಿದೆ.

ಕಾಮಗಾರಿಗೆ ಚಾಲನೆ

ಮಂಜೂರುಗೊಂಡ ರೂ.1 ಕೋಟಿ ಅನುದಾನದ ಪೈಕಿ ರೂ.20 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು, ಶನಿವಾರ ಭೂಮಿ ಪೂಜೆ ನಡೆದು ಕಾಮಗಾರಿಗೆ ಚಾಲನೆ ನೀಡಲಾಗಿದೆ. ಹಂತ ಹಂತವಾಗಿ ಉಳಿದ ಅನುದಾನ ಬಿಡುಗಡೆಯಾಗಲಿದೆ ಎಂದು ಇಲಾಖಾಧಿಕಾರಿಗಳು ತಿಳಿಸಿದ್ದಾರೆ.

ಪುರೋಹಿತ ಗೋಪಾಲಕೃಷ್ಣ ಭಟ್ ನೆಟ್ಟಣ ಭೂಮಿಪೂಜೆ ನೆರವೇರಿಸಿದರು. ಸಾಮಾಜಿಕ ಕಾರ್ಯಕರ್ತ ಬಾಲಕೃಷ್ಣ ಭಟ್ ಮುಜೂರುಕಟ್ಟ, ಜಿ.ಪಂ. ಮಾಜಿ ಸದಸ್ಯ ಪಿ.ಪಿ. ವರ್ಗೀಸ್, ಗುತ್ತಿಗೆದಾರ ಅಬ್ದುಲ್ ಖಾದರ್ ಬಿ.ಕೆ., ಸಿವಿಲ್ ಕಂಟ್ರಾಕ್ಟರ್ ಜಯ ಕುಮಾರ್ ಆರ್. ನಾಯರ್, ಸಿದ್ದಾರ್ಥ ಜೆ. ನಾಯರ್, ಮುರಲೀಧರ ಮಠಂತಬೆಟ್ಟು, ಸ್ಥಳೀಯ ಪ್ರಮುಖರು ಇದ್ದರು.

ಉಪ್ಪಿನಂಗಡಿ ಶ್ರೀಕ್ಷೇತ್ರ: ಧ್ವಜಾರೋಹಣ, ವಾರ್ಷಿಕ ಉತ್ಸವಾದಿಗಳಿಗೆ ಅದ್ದೂರಿ ಚಾಲನೆ



ಉಪ್ಪಿನಂಗಡಿ: ಇತಿಹಾಸ ಪ್ರಸಿದ್ಧ ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದಲ್ಲಿ ಸೋಮವಾರದಂದು ಧ್ವಜಾರೋಹಣವಾಗಿದ್ದು, ತನ್ಮೂಲಕ ವಾರ್ಷಿಕ ಉತ್ಸವಾದಿಗಳಿಗೆ ಚಾಲನೆ ನೀಡಿದಂತಾಗಿದೆ. ವೇ.ಮೂ. ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಪವಿತ್ರಪಾಣಿ ಕರಾಯ ವಿಷ್ಣುಮೂರ್ತಿ ಕುದ್ದಣ್ಣಾಯರ ಉಪಸ್ಥಿತಿಯಲ್ಲಿ ವೈದಿಕ ವಿಧಿ ವಿಧಾನಗಳೊಂದಿಗೆ ಭಕ್ತಾದಿಗಳು ಕ್ಷೇತ್ರಕ್ಕೆ ಸಮರ್ಪಿಸಿದ ಹಸಿರು ಹೊರೆಕಾಣಿಕೆಗಳನ್ನು ದೇವಳದ ಧ್ವಜ ಸ್ತಂಭದಲ್ಲಿರಿಸಿ ಧ್ವಜಾರೋಹಣ ನಡೆಸಲಾಯಿತು.

ಈ ಸಂದರ್ಭ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್ ಸದಸ್ಯರಾದ ವೆಂಕಪ್ಪ ಪೂಜಾರಿ, ಕೃಷ್ಣ ರಾವ್ ಅರ್ತಿಲ, ಮಾಜಿ ಅಧ್ಯಕ್ಷ ಕರುಣಾಕರ ಸುವರ್ಣ, ಮಾಜಿ ಸದಸ್ಯರಾದ ಡಾ ರಾಜಾರಾಮ ಕೆ.ಬಿ., ಉಷಾ ಮುಳಿಯ, ಪ್ರಮುಖರಾದ ರಾಮಚಂದ್ರ ಮಣಿಯಾಣಿ, ಕೈಲಾರ್ ರಾಜಗೋಪಾಲ ಭಟ್, ಸುಂದರ ಗೌಡ, ಜನಾರ್ದನ ಪೂಜಾರಿ, ಕಿಶೋರ್ ಜೋಗಿ, ರಮೇಶ್ ಭಂಡಾರಿ, ಉಮೇಶ್ ಆಮೀನ್ ಮತ್ತಿತರರು ಉಪಸ್ಥಿತರಿದ್ದರು. ದೇವಳದ ವ್ಯವಸ್ಥಾಪಕ ವೆಂಕಟೇಶ್ ರಾವ್, ಪದ್ಮನಾಭ ಕುಲಾಲ್, ದಿವಾಕರ ಗೌಡ, ಕೃಷ್ಣ ಪ್ರಸಾದ್ ಬಡಿಲ, ಸುಧಾಕರ ಶೆಟ್ಟಿ ವಿವಿಧ ಕಾರ್ಯಕ್ರಮಗಳಲ್ಲಿ ಸಹಕರಿಸಿದರು.

ಆಳ್ವಾಸ್ ಕಾಲೇಜಿನಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ: ವಿವಿಧ ಸ್ಪರ್ಧೆ



ಮೂಡುಬಿದಿರೆ: ವಿಜ್ಞಾನವೆಂಬುದು ನಿನ್ನೆ, ಇಂದಿನ ಮತ್ತು ನಾಳೆಯ ನಡುವೆ ಸೇತುವೆಯಾಗಿರುವ ಶಕ್ತಿ. ಪ್ರಕೃತಿಯ ಸೌಂದರ್ಯ ಅರಿತು ಅನುಭವಿಸುವುದೇ ವಿಜ್ಞಾನ. ಶ್ರಮ, ಸಮರ್ಪಣೆ ಮತ್ತು ಕ್ರಮಬದ್ಧ ಅಧ್ಯಯನದ ಮೂಲಕ ಯಾವುದೇ ವಿದ್ಯಾರ್ಥಿಯೂ ಉತ್ತಮ ವಿಜ್ಞಾನಿಯಾಗಬಹುದು ಎಂದು ಉಡುಪಿ ಶ್ರೀ ಅದಮಾರು ಮಠ ಶಿಕ್ಷಣ ಪರಿಷತ್ತಿನ ಬೆಂಗಳೂರಿನ ಶಾಖೆಯ ಗೌರವ ಕಾರ್ಯದರ್ಶಿ ಡಾ.ಎಸ್. ಅನಂತ ಪದ್ಮನಾಭ ಭಟ್ ಅಭಿಪ್ರಾಯಪಟ್ಟರು.

ಆಳ್ವಾಸ್ ಕಾಲೇಜಿನ ವಿಜ್ಞಾನ ವಿಭಾಗಗಳು ಕುವೆಂಪು ಸಭಾಂಗಣದಲ್ಲಿ ಜಂಟಿಯಾಗಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಿ.ವಿ. ರಾಮನ್‌ರವರ ಜಿಜ್ಞಾಸೆ ಮತ್ತು ಸಂಶೋಧನಾ ಮನೋಭಾವ ಸ್ಮರಿಸಿ, ಪ್ರಕೃತಿಯ ಮೇಲಿನ ಕುತೂಹಲವೇ ಅವರನ್ನು ನೋಬೆಲ್ ಪುರಸ್ಕಾರಕ್ಕೆ ಪಾತ್ರರನ್ನಾಗಿಸಿತು ಎಂದರು.

ಪ್ರಾಚೀನ ಭಾರತದ ಮಹರ್ಷಿಗಳಾದ ಆರ್ಯಭಟ, ವರಹಮಿಹಿರ ಹಾಗೂ ಪತಂಜಲಿಯವರ ವಿಜ್ಞಾನ ಕ್ಷೇತ್ರದ ಕೊಡುಗೆ ಅಪಾರ. ಇಂದಿಗೂ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ ವಿಜ್ಞಾನಿಗಳ ಹಗಲಿರುಳಿನ ಪರಿಶ್ರಮದಿಂದ ಭಾರತವು ಬಾಹ್ಯಾಕಾಶ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡುತ್ತಿದೆ ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ನಿಜವಾದ ರಾಷ್ಟ್ರೀಯತೆ ಕೇವಲ ಮಾತುಗಳಲ್ಲಿ ವ್ಯಕ್ತವಾಗುವುದಲ್ಲ, ಅದು ಸಂಶೋಧನೆ ಮತ್ತು ಆವಿಷ್ಕಾರಗಳ ಮೂಲಕ ರೂಪುಗೊಳ್ಳಬೇಕ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್ ಮಾತನಾಡಿದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸುಕೇಶ್ ಮತ್ತಿತರರು ಇದ್ದರು. ತೃತೀಯ ಬಿಎಸ್ಸಿಯ ಶ್ರಾವ್ಯ ಶೆಟ್ಟಿ ನಿರೂಪಿಸಿ, ವಿನೆಟ್ ವಾಸ್ ಅತಿಥಿಯನ್ನು ಪರಿಚಯಿಸಿದರು. ಗಣಿತಶಾಸ್ತ್ರ ಉಪನ್ಯಾಸಕಿ ವಸುಧಾ ಭಟ್ ಸ್ವಾಗತಿಸಿ, ಜೈವಿಕ ತಂತ್ರಜ್ಞಾನ ವಿಭಾಗದ ಉಪನ್ಯಾಸಕ ಯೋಗೇಂದ್ರ ಎನ್. ಕಾರ್ಯಕ್ರಮ ವಂದಿಸಿದರು.

ಮೆಡಿಕಲ್ ಹಾಸ್ಪಿಟಲ್‌ಗೆ ಕ್ಯಾಬಿನೆಟ್ ಅನುಮೋದನೆ: ಶಾಸಕ ಅಶೋಕ್ ರೈ

ಪುತ್ತೂರು: ಪುತ್ತೂರು ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಪೂರ್ವಭಾವಿಯಾಗಿ ಮೆಡಿಕಲ್ ಹಾಸ್ಪಿಟಲ್‌ಗೆ ಕ್ಯಾಬಿನೆಟ್ ಸಭೆಯಲ್ಲಿ ಅನುಮೋದನೆ ಲಭಿಸಿದೆ.

ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದಲ್ಲಿ ಫೆ.26ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ 300 ಹಾಸಿಗೆಗಳ ವೈದ್ಯಕೀಯ ಆಸ್ಪತ್ರೆ ರೂ.180 ಕೋಟಿ ಅನುದಾನದಲ್ಲಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.



> ಪುತ್ತೂರಿನ ಜನತೆಯ ಬಹುಕಾಲದ ಕನಸು ನನಸಾಗುತ್ತಿದೆ ಎಂಬ ಸಂತೋಷ ನನ್ನಲ್ಲಿದೆ. ಪುತ್ತೂರು ಅಭಿವೃದ್ಧಿಯಾಗಬೇಕು, ಇಲ್ಲಿನವರ ಶಿಕ್ಷಣ, ಆರೋಗ್ಯ, ಉದ್ಯೋಗಕ್ಕೆ ಹೆಚ್ಚು ಒತ್ತು ಕೊಡುವ ಕೆಲಸವನ್ನು ಮಾಡಲಿದ್ದೇನೆ.
> ● ಅಶೋಕ್ ರೈ, ಶಾಸಕ

ನಿರಂತರ ಒತ್ತಡ

ಪುತ್ತೂರಿಗೆ ಸರಕಾರಿ ಮೆಡಿಕಲ್ ಕಾಲೇಜ್ ಬೇಕು ಎಂಬ ಹೋರಾಟವೂ ಆರಂಭವಾಗಿತ್ತು. ಪುತ್ತೂರಿನ ಹಲವು ಮುಖಂಡರು ಮೆಡಿಕಲ್ ಕಾಲೇಜ್‌ಗಾಗಿ ಹೋರಾಟ ಸಮಿತಿ ರಚನೆ ಮಾಡಿಕೊಂಡು ಹೋರಾಟ ಆರಂಭಿಸಿದ್ದರು. ಅಶೋಕ್ ಕುಮಾರ್ ರೈ ಅವರು ಶಾಸಕರಾಗಿ ಆಯ್ಕೆಯಾದ ಆರಂಭದಲ್ಲೇ ಮೆಡಿಕಲ್ ಕಾಲೇಜನ್ನು ಪ್ರಥಮ ಆದ್ಯತೆಯಾಗಿ ಕೈಗೆತ್ತಿಕೊಂಡು ಸರ್ಕಾರದ ಮೇಲೆ ನಿರಂತರ ಒತ್ತಡ ಹೇರಿ ಕಳೆದ ಸಾಲಿನ ಬಜೆಟ್‌ನಲ್ಲಿ ಪುತ್ತೂರಿಗೆ ಮೆಡಿಕಲ್ ಕಾಲೇಜಿಗೆ ಪೂರಕವಾಗಿ 300 ಬೆಡ್ ಆಸ್ಪತ್ರೆಯನ್ನು ನೀಡುವುದಾಗಿ ಘೋಷಿಸಲಾಗಿತ್ತು. ಆ ಬಳಿಕ ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಹಂತ ಹಂತವಾಗಿ ನಡೆಯತೊಡಗಿತು. ಇದೀಗ 300 ಹಾಸಿಗೆಗಳ ಬೋಧನಾ ಆಸ್ಪತ್ರೆಗೆ ಕ್ಯಾಬಿನೆಟ್‌ನಲ್ಲಿ ಅನುಮೋದನೆ ನೀಡಿ ರೂ. 180 ಕೋಟಿ ಅನುದಾನವೂ ಮಂಜೂರುಗೊಂಡಿದೆ.

ಸರಕಾರಕ್ಕೆ ವರದಿ

ಬನ್ನೂರಿನಲ್ಲಿ ನಿಯೋಜಿತ ಸುಮಾರು 40 ಎಕ್ರೆ ಜಾಗದಲ್ಲಿ ಮೆಡಿಕಲ್ ಕಾಲೇಜ್‌ಗೆ ಪೂರ್ವಭಾವಿಯಾಗಿ ವೈದ್ಯಕೀಯ ಆಸ್ಪತ್ರೆಗೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾಲೇಜ್ ಕಟ್ಟಡ ನಿರ್ಮಾಣವಾಗುವಲ್ಲಿ ಬೇಕಾದ ಎಲ್ಲಾ ಸಿದ್ಧತೆಗಳನ್ನು ಪಟ್ಟಿ ಮಾಡಿ ಸರಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಯೋಜಿತ ಪುತ್ತೂರು ಮೆಡಿಕಲ್ ಕಾಲೇಜಿನ ಪಕ್ಕದಲ್ಲೇ 300 ಬೆಡ್ ಆಸ್ಪತ್ರೆ ನಿರ್ಮಾಣವಾಗಲಿದೆ. ಈಗಾಗಲೇ ರೂ.180 ಕೋಟಿ ಅನುದಾನ ಬಿಡುಗಡೆಯಾಗಿರುವುದರಿಂದ ಶೀಘ್ರ ಶಿಲಾನ್ಯಾಸ ಕಾರ್ಯಕ್ರಮ ನಡೆದು ಕಾಮಗಾರಿ ಆರಂಭಗೊಳ್ಳಲಿದೆ. ಈ ಮೂಲಕ ಕ್ಷೇತ್ರದ ಜನರ ಬೇಡಿಕೆ ಎಂದು ಈಡೇರಲಿದೆ ಅಶೋಕ್ ಕುಮಾರ್ ರೈ ತಿಳಿಸಿದ್ದಾರೆ.

ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್‌ಗೆ ಎಸ್‌ಸಿಡಿಸಿಸಿ ಬ್ಯಾಂಕ್‌ನಿಂದ ಅಭಿನಂದನೆ



ಮಂಗಳೂರು: ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರ ಅಧಿಕಾರ ಅವಧಿ ಕೊನೆಗೊಂಡಿದ್ದು, ಇದೀಗ ಸರಕಾರ ಮುಂದಿನ ಆದೇಶದವರೆಗೆ ಹಾಲಿ ಅಧ್ಯಕ್ಷರುಗಳನ್ನೇ ಮರು ನೇಮಿಸಿದೆ. ಈ ಮೂಲಕ ಎಸ್‌ಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸದಾಶಿವ ಉಳ್ಳಾಲ್ ಅವರು ಮುಡಾ ಅಧ್ಯಕ್ಷರಾಗಿ ಮರು ನೇಮಕಗೊಂಡಿದ್ದಾರೆ. ಅಧ್ಯಕ್ಷರಾಗಿ ಮರು ನೇಮಕಗೊಂಡಿರುವ ಸದಾಶಿವ ಉಳ್ಳಾಲ್ ಅವರನ್ನು ಶನಿವಾರ ಎಸ್‌ಸಿಡಿಸಿಸಿ ಬ್ಯಾಂಕ್‌ನಲ್ಲಿ ಬ್ಯಾಂಕ್ ಅಧ್ಯಕ್ಷರಾದ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರಕುಮಾರ್ ಅವರು ಅಭಿನಂದಿಸಿದರು.

ನಿಷ್ಠಾವಂತ ಸೇವೆ

ಸಹಕಾರ ಕ್ಷೇತ್ರದಲ್ಲಿ ನಿಷ್ಠಾವಂತ ಸೇವೆ ಸಲ್ಲಿಸುತ್ತಿರುವ ಸದಾಶಿವ ಉಳ್ಳಾಲ್ ಅವರು ಮುಡಾ ಅಧ್ಯಕ್ಷರಾಗಿ ಎರಡು ವರ್ಷಗಳ ಅಧಿಕಾರ ಅವಧಿಯಲ್ಲಿ ಉತ್ತಮವಾಗಿ ಕೆಲಸ ಮಾಡಿದ್ದು, ಇದೀಗ ಮುಂದಿನ ಅಧಿಕಾರ ಅವಧಿಗೆ ಅಧ್ಯಕ್ಷರಾಗಿ ಮುಂದುವರಿಯುತ್ತಿರುವುದರಿಂದ ಇನ್ನಷ್ಟು ಅಭಿವೃದ್ಧಿ ಕಾರ್ಯಗಳು ಅವರಿಂದ ನಡೆಯಲಿ ಎಂದು ಡಾ.ಎಂ.ಎನ್. ರಾಜೇಂದ್ರಕುಮಾರ್ ಶುಭ ಆಶಿಸಿದರು.

ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್‌ನ ಮೆನೇಜಿಂಗ್ ಟ್ರಸ್ಟಿ ಮೇಘರಾಜ್ ಜೈನ್ ಉಪಸ್ಥಿತರಿದ್ದರು.

ಕಲಾತಪಸ್ವಿ ಸಾಂಸ್ಕೃತಿಕ ತಂಡ: ಮಕ್ಕಳ ಆನ್‌ಲೈನ್ ಭಾವಚಿತ್ರ ಸ್ಪರ್ಧೆಗೆ ಆಹ್ವಾನ

ಮಂಗಳೂರು: ಕಲಾತಪಸ್ವಿ ಸಾಂಸ್ಕೃತಿಕ ತಂಡ ಧರ್ಮನಗರ-ಕಂಬಳಬೆಟ್ಟು ಇದರ ವತಿಯಿಂದ ಮಕ್ಕಳ 'ಕಲಾ ಕಣ್ಮಣಿ' ಆನ್‌ಲೈನ್ ಭಾವಚಿತ್ರ ಸ್ಪರ್ಧೆ ಆಯೋಜಿಸಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ರೂಪವಾಗಿ ಪ್ರಥಮ: 2,001 ರೂ. ಹಾಗೂ ಕಲಾ ಕಣ್ಮಣಿ ಟ್ರೋಫಿ, ಪ್ರಶಸ್ತಿ ಪತ್ರ, ದ್ವಿತೀಯ: 1,001 ರೂ. ಕಲಾ ಕಣ್ಮಣಿ ಟ್ರೋಫಿ, ಪ್ರಶಸ್ತಿ ಪತ್ರ ಹಾಗೂ ತೃತೀಯ: 501ರೂ., ಕಲಾ ಕಣ್ಮಣಿ ಟ್ರೋಫಿ, ಪ್ರಶಸ್ತಿ ಪತ್ರ ಸಿಗಲಿದೆ.

ಸ್ಪರ್ಧೆಯ ನಿಯಮಗಳು ಈ ಕೆಳಗಿನಂತಿದ್ದು, ಪ್ರವೇಶ ಶುಲ್ಕ: 100, 10 ವಯಸ್ಸಿನ ಒಳಗಿನ ಮಕ್ಕಳಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದೆ. ಕಳುಹಿಸುವ ಫೋಟೋ ಎಚ್.ಡಿ ಕ್ವಾಲಿಟಿಯಲ್ಲಿರಬೇಕು., ಎಲ್ಲಾ ಫೋಟೋಗಳನ್ನು kalaa tapaswi ಇನ್ಸ್ಟಾಗ್ರಾಮ್ ಪೇಜ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಫೋಟೋದೊಂದಿಗೆ ಸ್ಪರ್ಧಿಯ ಹೆಸರು, ವಯಸ್ಸು ಮತ್ತು ವಿಳಾಸ, ಆಧಾರ್ ಕಾರ್ಡ್ ಫೋಟೋ ಕಳುಹಿಸತಕ್ಕದ್ದು. ಸ್ಪರ್ಧೆಯಲ್ಲಿ ಒಟ್ಟು 5 ಸುತ್ತುಗಳು ಇರುತ್ತದೆ. ಮೊದಲ ಸುತ್ತಿನಲ್ಲಿ ಅತೀ ಹೆಚ್ಚು ಲೈಕ್ಸ್ ಬಂದ 16 ಮಕ್ಕಳ ಫೋಟೋಗಳು ಎರಡನೇ ಸುತ್ತಿಗೆ ತೇರ್ಗಡೆಯಾಗುತ್ತದೆ. ಸ್ಪರ್ಧಾಳುಗಳಿಗೆ ಈ- ಸರ್ಟಿಫಿಕೇಟ್ ನೀಡಿ ಗೌರವಿಸಲಾಗುವುದು. ಫೋಟೋಗಳಲ್ಲಿ ಫೇಕ್ ಲೈಕ್ಸ್ ಗಳು ಕಂಡುಬಂದಲ್ಲಿ ಸ್ಪರ್ಧೆಯಿಂದ ಹೊರಗಿಡಲಾಗುವುದು. ಫೋಟೋ ಕಳುಹಿಸಲು ಏ.13 ಕಡೆಯ ದಿನ. ಲೈಕ್ ಪಡೆಯಲು ಏ.15 ಕೊನೆಯ ದಿನಾಂಕವಾಗಿದೆ. ಫೋಟೋವನ್ನು ಈ ನಂಬರ್‌ಗೆ ವಾಟ್ಸ್ ಆಪ್ ಮೂಲಕ ಕಳುಹಿಸತಕ್ಕದ್ದು. ದೂ. ಸಂಖ್ಯೆ: 7090615880. ಆಯೋಜಕರ ತೀರ್ಮಾನ ಅಂತಿಮ. ಹೆಚ್ಚಿನ ಮಾಹಿತಿಗಾಗಿ ಜೈದೀಪ್ ಅಮ್ಮೆ 7090615880 ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸತ್ಯಧರ್ಮ ಚಾವಡಿಯಲ್ಲಿ 9 ಮಂದಿ ಮಾತೆಯರಿಗೆ 'ಅಮ್ಮನ ಮಡಿಲು' ಸೇವೆ, ಭಕ್ತಾದಿಗಳಿಗೆ ಪ್ರಸಾದ ವಿತರಣೆ

ಕೋಟಿ-ಚೆನ್ನಯ ಮೂಲಸ್ಥಾನ ಗೆಜ್ಜೆಗಿರಿಯಲ್ಲಿ ವಾರ್ಷಿಕ ಜಾತ್ರೆಗೆ ಸಂಭ್ರಮದ ತೆರೆ

ಪುತ್ತೂರು: ಆದಿದೈವ ಧೂಮಾವತಿ, ಸಾಯನ ಬೈದ್ಯರ ಗುರುಪೀಠ, ದೇಯಿ ಬೈದ್ಯೆತಿ, ಕೋಟಿ-ಚೆನ್ನಯ ಮೂಲಸ್ಥಾನ ಶ್ರೀಕ್ಷೇತ್ರ ಗೆಜ್ಜೆಗಿರಿ ವಾರ್ಷಿಕ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಶನಿವಾರ ವಿಶೇಷವಾಗಿ ಮಡಿಲು ಸೇವೆ, ಪ್ರಸಾದ ವಿತರಣೆ ನಡೆಯಿತು.

ಬೆಳಗ್ಗೆ ಗಣಪತಿ ಹೋಮ, ಸಾನಿಧ್ಯಗಳಿಗೆ ನವಕ ಕಲಶಾಭಿಷೇಕ, ಮಧ್ಯಾಹ್ನ ಸತ್ಯಧರ್ಮ ಚಾವಡಿಯಲ್ಲಿ ಮಹಾಪೂಜೆ, ಪಲ್ಲಪೂಜೆ, ನಡೆದು ಬಳಿಕ ಮಹಾ ಅನ್ನ ಸಂತರ್ಪಣೆ ನಡೆಯಿತು.

ಅಮ್ಮನ ಮಡಿಲ ಪ್ರಸಾದ ವಿತರಣೆ

ಸತ್ಯಧರ್ಮ ಚಾವಡಿಯಲ್ಲಿ ಮಹಾಪೂಜೆಯ ನಂತರ ಮಡಿಲು ಸೇವೆ, ಪ್ರಸಾದ ವಿತರಣೆ ನಡೆಯಿತು. ಆರಂಭದಲ್ಲಿ ಮಾತೆ ದೇಯಿ ಬೈದ್ಯೆತಿ ಅಮ್ಮನವರ ಮಹಾ ಸಂಕಲ್ಪದಂತೆ ಅಮ್ಮನ ಪ್ರೀತಿ ತುಂಬಿದ





ಆಶೀರ್ವಾದ ರೂಪದಲ್ಲಿ 9 ಮಂದಿ ಮಾತೆಯರಿಗೆ ತುಳುನಾಡ ಗೌರವ ರೂಪದಲ್ಲಿ ಅರಸಿನ ಕಂಕುಮ, ತಿಲಕ, ಇಟ್ಟು ಕೈಗೆ ಬಳೆ, ಮಲ್ಲಿಗೆ ಸೀರೆ ಕೊಟ್ಟು ಮಡಿಲು ತುಂಬಿಸುವ ಕಾರ್ಯಕ್ರಮ ನಡೆದು ಬಳಿಕ ಸುಮಾರು 5 ಸಾವಿರಕ್ಕೂ ಮಿಕ್ಕಿ ಮಾತೆಯರಿಗೆ ಅಮ್ಮನ ಮಡಿಲ ಪ್ರಸಾದ ವಿತರಣೆ ಮಾಡಲಾಯಿತು.

ಮೂಲಸ್ಥಾನ ಆಡಳಿತ ಸಮಿತಿ ಗೌರವಾಧ್ಯಕ್ಷ ಪೀತಾಂಬರ ಹೇರಾಜೆ, ಡಾ. ರಾಜಶೇಖರ ಕೋಟ್ಯಾನ್, ಜಯಂತ ನಡುಬೈಲು, ಅಧ್ಯಕ್ಷ ರವಿ ಪೂಜಾರಿ ಚಿಲಿಂಬಿ, ಮೊಕ್ತೇಸರ ಶ್ರೀಧರ ಪೂಜಾರಿ, ಪ್ರಧಾನ ಕಾರ್ಯದರ್ಶಿ ಡಾ. ರಾಜರಾಮ್ ಕೆ.ಬಿ., ಜತೆ ಕಾರ್ಯದರ್ಶಿ ಡಾ. ಸಂತೋಷ್, ಕೋಶಾಧಿಕಾರಿ ಮೋಹನ್‌ದಾಸ್ ವಾಮಂಜೂರು, ಅಭಿವೃದ್ಧಿ ಸಮಿತಿ ಅಧ್ಯಕ್ಷ ಸಂಜೀವ ಪೂಜಾರಿ ಬಿರ್ವ, ಉಪಾಧ್ಯಕ್ಷ ಶೈಲೇಂದ್ರ ವೈ. ಸುವರ್ಣ, ಕಾರ್ಯದರ್ಶಿ ಉಲ್ಲಾಸ್ ಕೋಟ್ಯಾನ್, ದೀಪಕ್ ಕೋಟ್ಯಾನ್, ಹರೀಶ್ ಸಾಲ್ಯಾನ್ ಮುಂಬೈ, ಕುಮಾರ್ ಇರುವೈಲ್, ಗೆಜ್ಜೆಗಿರಿ ಯಕ್ಷಗಾನ ಮೇಳದ ಗೌರವ ಸಂಚಾಲಕ ಪ್ರಶಾಂತ್ ಪೂಜಾರಿ ಮಸ್ಕತ್, ಪ್ರಧಾನ ಸಂಚಾಲಕ ಪ್ರಮಲ್ ಕುಮಾರ್ ಕಾರ್ಕಳ, ಮಾಧ್ಯಮ ಸಂಚಾಲಕ ರಾಜೇಂದ್ರ ಚಿಲಿಂಬಿ, ವಿಶೇಷ ಆಹ್ವಾನಿತರಾಗಿ, ಮಾಜಿ ಶಾಸಕರಾದ ಶಕುಂತಳಾ ಟಿ. ಶೆಟ್ಟಿ, ಸಂಜೀವ ಮಠಂದೂರು, ಕ್ಷೇತ್ರಾಡಳಿತ ಸಮಿತಿ ಸದಸ್ಯರಾದ ಸುರೇಂದ್ರ ಪೂಜಾರಿ ಮುಂಬೈ, ಭಾಸ್ಕರ್ ಎಂ. ಸಾಲ್ಯಾನ್, ಹರೀಶ್ ಕೆ. ಪೂಜಾರಿ, ನಾರಾಯಣ ಮಚ್ಚಿನ, ಜಯಾನಂದ ಎಂ. ಮಂಗಳೂರು, ಲೀಲಾವತಿ ಗೆಜ್ಜೆಗಿರಿ, ರವೀಂದ್ರ ಸುವರ್ಣ ಮತ್ತಿತರರು ಭಾಗವಹಿಸಿದರು.

ಸುತ್ತಮುತ್ತ

ಆಗೇಲು ಸೇವೆ ಇಲ್ಲ

ಬಂಟ್ವಾಳ: ಶ್ರೀ ಕ್ಷೇತ್ರ ಪಣೋಲಿಬೈಲು ಶ್ರೀ ಕಲ್ಲುರ್ಟಿ, ಕಲ್ಕುಡ ದೈವಸ್ಥಾನದಲ್ಲಿ ಮಾ.3,17,20, 22, 24, ರಂದು ಆಗೇಲು ಸೇವೆ ಇರುವುದಿಲ್ಲ, ಉಳಿದಂತೆ ಭಾನುವಾರ, ಮಂಗಳವಾರ, ಶುಕ್ರವಾರ ಆಗೇಲು ಸೇವೆ ನಡೆಯುತ್ತದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಇಂದು ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ

ಮುಲ್ಕಿ: ಚರಂತಿಪೇಟೆ ಸಾರ್ವಜನಿಕ ಸತ್ಯನಾರಾಯಣ ಪೂಜಾ ಸಮಿತಿ ಆಶ್ರಯದಲ್ಲಿ 19ನೇ ವರ್ಷದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಮಾ.1ರ ಬೆಳಿಗ್ಗೆ ವೇದಮೂರ್ತಿ ಶ್ರೀ ಪದ್ಮನಾಭ ಭಟ್ ನೇತೃತ್ವದಲ್ಲಿ ಚರಂತಿಪೇಟೆ ಯುವಕ ವೃಂದ ಕಟ್ಟೋಣದ ಮುಂಭಾಗದ ಡಾ. ಬೋಳ ಸೀತಾರಾಮ ಶೆಟ್ಟಿ ವೇದಿಕೆಯಲ್ಲಿ ನಡೆಯಲಿದೆ.
ಮಾ. 1 ರ ಬೆಳಿಗ್ಗೆ 10ಕ್ಕೆ ಕಲಶ ಪ್ರತಿಷ್ಠೆ, ಸತ್ಯನಾರಾಯಣ ಪೂಜೆ ಕಥಾವಾಚನ, ಮಧ್ಯಾಹ್ನ ಭಜನಾ ಕಾರ್ಯಕ್ರಮ, ಮಂಗಳಾರತಿ, ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.9: ಕೋಲ್ನಾಡು ಸ್ವಾಮಿ ಕೊರಗಜ್ಜ ದೈವದ ನೇಮ

ಮುಲ್ಕಿ: ಕೋಲ್ನಾಡು ಶ್ರೀ ನಾಗದೇವರ ಮತ್ತು ಕೊರಗಜ್ಜ ಪರಿವಾರ ದೈವಗಳ ಜೀರ್ಣೋದ್ಧಾರ ಸಮಿತಿ ಮತ್ತು ಕಾರ್ನಾಡು ಸಣ್ಣ ಕೈಗಾರಿಕೆಗಳ ಸಂಘದ ಆಶ್ರಯದಲ್ಲಿ ಕಾರ್ನಾಡು ಸಣ್ಣ ಕೈಗಾರಿಕೆಗಳ ವಲಯದಲ್ಲಿ ಆರಾಧಿಸಲ್ಪಡುತ್ತಿರುವ ಸ್ವಾಮಿ ಕೊರಗಜ್ಜ ದೈವದ ನೇಮ ಮಾ. 9ರಂದು ನಡೆಯಲಿದೆ. ಮಾ.9ರಂದು ಬೆಳಿಗ್ಗೆ ಗಂಟೆ 9ರಿಂದ ಶ್ರೀ ನಾಗದೇವರಿಗೆ ನವಕ ಪ್ರಧಾನ ಹೋಮ, ಆಶ್ಲೇಷ ಪೂಜೆ, ಪಂಚಾಮೃತ ಅಭಿಷೇಕ ಮತ್ತು ತಂಬಿಲ ಸೇವೆ, ಸಂಜೆ 7 ರಿಂದ ರಾತ್ರಿ 11.30ರವರೆಗೆ ಕೊರಗಜ್ಜ ದೈವದ ನೇಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ. 8ರವರೆಗೆ ಇರುವೈಲು ಜಾತ್ರೆ

ಕೈಕಂಬ: ಮೂಡಬಿದ್ರಿ ತಾಲೂಕಿನ ಪುರಾಣ ಪ್ರಸಿದ್ಧ ಇರುವೈಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಫೆ.28ರಿಂದ ಆರಂಭಗೊಂಡಿದ್ದು, ಮಾ.8ರವರೆಗೆ ಜರಗಲಿದೆ. ಮಾ. 2ರಂದು ಬೆಳಿಗ್ಗೆ 8ರಿಂದ ತಂಬಿಲ ಸೇವೆ, ಸಂಜೆ 6ರಿಂದ ಉತ್ಸವ ಬಲಿ ಅಂಕುರಾರೋಪಣ, 3ರಂದು ಪೂರ್ವಾಹ್ನ 10.15 ಕ್ಕೆ ಧ್ವಜಾರೋಹಣ, ಮಹಾಪೂಜೆ ಗ್ರಹಣ ನಿಮಿತ್ತ ಅನ್ನಸಂತರ್ಪಣೆ ಬದಲಾಗಿ 11.30ರಿಂದ 12.30ರವರೆಗೆ ಫಲಹಾರ. ರಾತ್ರಿ 9.30ರಿಂದ ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ ಇರುವೈಲು ಇವರಿಂದ ಯಕ್ಷಗಾನ ಬಯಲಾಟ. ರಾತ್ರಿ 8ರಿಂದ ಉತ್ಸವ ಬಲಿ, ಕಂಚಿಲಾಲೆ, ಮಾ.4ರಂದು ಬೆಳಿಗ್ಗೆ 8ರಿಂದ ನವಕಲಶಾಭಿಷೇಕ, ಪ್ರಧಾನ ಹೋಮ, ಸತ್ಯನಾರಾಯಣ ಪೂಜೆ, ಅನ್ನಸಂತರ್ಪಣೆ, ಸಂಜೆ 6.30 ರಿಂದ ಶ್ರೀದೇವಿಯ ಆದಿಸ್ಥಳದಲ್ಲಿ ಕಟ್ಟೆ ಪೂಜೆ, ಕೆರೆ ದೀಪೋತ್ಸವ, ರಾತ್ರಿ 7–30ರಿಂದ ಸಾಂಸ್ಕೃತಿಕ ಕಾರ್ಯಕ್ರಮ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ವೈಭವ, ರಾತ್ರಿ 9ರಿಂದ ಭಜರಂಗ ಬಲಿ ತುಳು ಸಾಮಾಜಿಕ ನಾಟಕ. ಮಾ.5ರಂದು ಬೆಳಿಗ್ಗೆ 8ಕ್ಕೆ ಕಲಶ ಪ್ರಧಾನ ಹೋಮ, ಮಧ್ಯಾಹ್ನ ಅನ್ನಸಂತರ್ಪಣೆ, 8 ಕ್ಕೆ ಧಾರ್ಮಿಕ ಸಭೆ, 8.30 ರಿಂದ ಭೇರಿ ತಾಡನೆ, ನಡುಬಲಿ ಉತ್ಸವ, ಚಂದ್ರಮಂಡಲ ಸೇವೆ, ಬಾಕಿಮಾರು ದೀಪೋತ್ಸವ ಹಾಗೂ ಕಟ್ಟೆ ಪೂಜೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ 7.30ರಿಂದ ನೃತ್ಯ ಸಿಂಚನ ಮತ್ತು ಮ್ಯೂಸಿಕಲ್ ನೈಟ್. ಮಾ.6ರಂದು ಬೆಳಿಗ್ಗೆ 10 ರಿಂದ ಕದ್ರಿ ಮಹಿಳಾ ಕೂಟದವರಿಂದ ತಾಳ ಮದ್ದಳೆ. 10.15ಕ್ಕೆ ಮಹಾರಥೋತ್ಸವ, ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ 7ರಿಂದ ರಥೋತ್ಸವ, ಶಯನೋತ್ಸವ, ಕವಾಟ ಬಂಧನ. ರಾತ್ರಿ 7ಗಂಟೆಗೆ ಸುಡುಮದ್ದು ಪ್ರದರ್ಶನ.
ಮಾ.7ರಂದು ಬೆಳಿಗ್ಗೆ 7.15 ಕ್ಕೆ ಕವಾಟ ಉದ್ಘಾಟನೆ, ಪಲ್ಲಪೂಜೆ, ತುಲಾಭಾರ ಸೇವೆ, ಚೂರ್ಣೋತ್ಸವ, ಚಂದ್ರಮಂಡಲ ಸೇವೆ, ಮಹಾಪೂಜೆ ಮಧ್ಯಾಹ್ನ 1.30 ರಿಂದ ಮಹಾ ಅನ್ನಸಂತರ್ಪಣೆ. ರಾತ್ರಿ 7ರಿಂದ ಬ್ರಹ್ಮ ತಂಬಿಲ, 10 ರಿಂದ ಉತ್ಸವ, ಕಟ್ಟೆ ಪೂಜೆ , ಓಕುಳಿ, ಅವಭೃತ, ಮಾಡ್ಲಾಯಿ ದೈವ ಮತ್ತು ದೇವರ ಭೇಟಿ, ಮಾಡ್ಲಾಯಿ ದೈವದ ನೇಮ ನಂತರ ಧ್ವಜಾವರೋಹಣ. ಕಾರ್ಯಕ್ರಮದ ಅಂಗವಾಗಿ ರಾತ್ರಿ 7ರಿಂದ ಸ್ಥಳೀಯ ಮಕ್ಕಳಿಂದ ನೃತ್ಯ ವೈವಿಧ್ಯ , ರಾತ್ರಿ 10ರಿಂದ ಜೈ ಹನುಮಾನ್ ನಾಟಕ ನಡೆಯಲಿದೆ. ಮಾ.8ರಂದು ಬೆಳಿಗ್ಗೆ 8 ರಿಂದ ಮಂಗಳ ಯಾಗ, ನವಕಕಲಶ, ಪ್ರಧಾನ ಹೋಮ, ಮಹಾಪೂಜೆ ನಂತರ ಅನ್ನಸಂತರ್ಪಣೆ,ಸಂಜೆ 5 ಕ್ಕೆ ಹೊಸಮರಾಯ ದೈವದ ಭಂಡಾರ ಇಳಿಸುವುದು. ಸಂಜೆ 5 ರಿಂದ ಹೊಸಮರಾಯ ದೈವದ ಭಂಡಾರ ಇಳಿಸುವುದು, ರಾತ್ರಿ 8ರಿಂದ ಹೊಸಮರಾಯ ದೈವದ ನೇಮ ಜರಗಲಿದೆ ಎಂದು ದೇವಳದ ಪ್ರಕಟಣೆ ತಿಳಿಸಿದೆ

ಮಾ.11ರಿಂದ ಸರ್ಕಾರಿ ವೈದ್ಯರ ಮುಷ್ಕರ

ಮಡಿಕೇರಿ: ತಮ್ಮ ಬೇಡಿಕೆ ಈಡೇರಿಸಲು ಸರ್ಕಾರ ವಿಫಲವಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳು ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ ಎಂದು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ.ಎಂ. ಆನಂದ್ ತಿಳಿಸಿದ್ದಾರೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಮತ್ತು ಇಲಾಖೆಯ ಎಲ್ಲಾ ವೃಂದ ಸಂಘಗಳ ನೇತೃತ್ವದಲ್ಲಿ ನಡೆಯುವ ಅನಿರ್ದಿಷ್ಟ ಮುಷ್ಕರದ ಮೊದಲ ಹಂತವಾಗಿ ಮಾ.11ರಿಂದ 15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳು, ತಾಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಡಿಸ್ಪೆನ್ಸರಿಗಳಲ್ಲಿ ವೈದ್ಯರು ಕಪ್ಪು ಪಟ್ಟಿ ಧರಿಸಿ ಹೊರ ರೋಗಿ ಚಿಕಿತ್ಸೆ ಸ್ಥಗಿತಗೊಳಿಸಿ ಕೇವಲ ತುರ್ತು ಸೇವೆಗಳ ಮಾತ್ರ ನಿರ್ವಹಿಸುವ ಮೂಲಕ ಮುಷ್ಕರದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದಾರೆ ಎಂದು ವಿವರಿಸಿದರು. ಮಾ.16ರಿಂದ ಅನಿರ್ದಿಷ್ಟಾವಧಿವರೆಗೂ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರ ತೀವ್ರಗೊಳಿಸಲು ನಿರ್ಧರಿಸಲಾಗಿದೆ ಎಂದು ಆನಂದ್ ಸ್ಪಷ್ಟಪಡಿಸಿದರು. ಅರುಣ್ ಕುಮಾರ್, ನಾಗಮಣಿ, ಮಹದೇವಪ್ಪ ಚೇತನ್, ಶ್ರೀನಾಥ್ ಗೋಷ್ಠಿಯಲ್ಲಿದ್ದರು.

ಸುಸಜ್ಜಿತ ಬಸ್ಸು ತಂಗುದಾಣ ನಿರ್ಮಾಣವಾದರೂ ಇಲ್ಲಿವೆ ನೂರಾರು ಸಮಸ್ಯೆಗಳು

ಚಂದಕಷ್ಟೇ ಸೀಮಿತವೇ ಬಿ.ಸಿ.ರೋಡ್ ಕೆಎಸ್ಸಾರ್ಟಿಸಿ ನಿಲ್ದಾಣ?

ಬಂಟ್ವಾಳ: ಕಳೆದ ಏಳು ವರ್ಷಗಳ ಹಿಂದೆ ಬಿ.ಸಿ.ರೋಡಿನಲ್ಲಿ ಕೆಎಸ್ಸಾರ್ಟಿಸಿ ಬಸ್ಸು ನಿಲ್ದಾಣ ಸುಂದರವಾಗಿ ನಿರ್ಮಾಣಗೊಂಡಿದ್ದರೂ ಅದು ಪೂರ್ಣಪ್ರಮಾಣದಲ್ಲಿ ಬಳಕೆಯಾಗುವ ರೀತಿಯಲ್ಲಿ ಯಾವುದೇ ವ್ಯವಸ್ಥೆಗೆ ಇನ್ನೂ ಕಾಲ ಕೂಡಿ ಬಂದಿಲ್ಲ. ಬಸ್ ನಿಲ್ದಾಣ ಸುಸಜ್ಜಿತವಾಗಿದ್ದರೂ ನಿಲ್ದಾಣಕ್ಕೆ ಬರುವ ಸಾರ್ವಜನಿಕ ವಾಹನಗಳಿಗೆ ಯಾವುದೇ ಪಾರ್ಕಿಂಗ್ ವ್ಯವಸ್ಥೆ ಇಲ್ಲಿಲ್ಲ, ಮಂಗಳೂರಿನಿಂದ ಬರುವಂತಹ ಯಾವುದೇ ಕೆಎಸ್ಸಾರ್ಟಿಸಿ ಬಸ್ಸುಗಳು ನಿಲ್ದಾಣ ಪ್ರವೇಶಿಸಲು ಬೇಕಾದ ವ್ಯವಸ್ಥೆ ಇನ್ನೂ ಆಗಿಲ್ಲ.

ಉಪಯೋಗಕ್ಕೆ ಬಂದಿಲ್ಲ

ಬಸ್ ನಿಲ್ದಾಣಕ್ಕೆ ವಿವಿಧ ಕೆಲಸಗಳಿಗಾಗಿ ಬರುವ ಸಾರ್ವಜನಿಕರು ತಮ್ಮ ವಾಹನ ನಿಲ್ಲಿಸಲು ಸೂಕ್ತ ವ್ಯವಸ್ಥೆ ನಿಲ್ದಾಣದ ಸುತ್ತ ಎಲ್ಲೂ ಇಲ್ಲ. ನಿಲ್ದಾಣದ ನೆಲ ಅಂತಸ್ತಿನಲ್ಲಿ ವಾಹನ ನಿಲುಗಡೆ ಎಂಬ ವ್ಯವಸ್ಥೆ ನಾಮಫಲಕ ಅಳವಡಿಸಿದ್ದರೂ ಅದಿನ್ನೂ ಉಪಯೋಗಕ್ಕೆ ಬಂದಿಲ್ಲ, ಅದನ್ನು ಗೇಟು ಅಳವಡಿಸಿ ಬಂದ್ ಮಾಡಲಾಗಿದೆ.





ನಿಲ್ದಾಣ ಮುಂಭಾಗ ವಾಹನ ಪಾರ್ಕಿಂಗ್

ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಇಲ್ಲದಿರುವುದರಿಂದ ನಿಲ್ದಾಣದ ಮುಂಭಾಗದಲ್ಲಿ ನಿತ್ಯವೂ ವಾಹನಗಳ ಪಾರ್ಕಿಂಗ್ ಕಂಡು ಬರುತ್ತಿದ್ದು, ನಿಲ್ದಾಣ ಪ್ರವೇಶಿಸಲು ಜನರಿಗೆ ಜಾಗ ಇಲ್ಲದ ಪರಿಸ್ಥಿತಿ ಕಂಡು ಬರುತ್ತಿದೆ. ಮಂಗಳೂರಿನಿಂದ ಬರುವ ಯಾವುದೇ ಬಸ್‌ಗಳು ಬಸ್ ನಿಲ್ದಾಣ ಪ್ರವೇಶ ಮಾಡದೆ ಇರುವುದರಿಂದ ಪ್ರಯಾಣಿಕರು ಪುತ್ತೂರು,ಧರ್ಮಸ್ಥಳ ಮೊದಲಾದ ಊರುಗಳಿಗೆ ತೆರಳುವ ಪ್ರಯಾಣಿಕರು ಖಾಸಗಿ ಬಸ್ ನಿಲ್ದಾಣದ ಎದುರು ಹೆದ್ದಾರಿಯಲ್ಲಿ ನಿಂತು ಕಾಯಬೇಕಾದ ಸನ್ನಿವೇಶ ಕಂಡು ಬರುತ್ತಿದೆ.

ಕಾರ್ಯಗತಗೊಂಡಿಲ್ಲ

ಬಸ್ ನಿಲ್ದಾಣದ ಎದುರು ಹೆದ್ದಾರಿಯಲ್ಲಿ ಬಸ್ಸುಗಳ ತಿರುವಿಗೆ ಅನುಕೂಲವಾಗುವಂತೆ ವೃತ್ತ ನಿರ್ಮಾಣದ ಯೋಜನೆ ಬಗ್ಗೆ ಚರ್ಚೆ ನಡೆಸಲಾಗಿತ್ತಾದರೂ ಅದಿನ್ನೂ ಕಾರ್ಯಗತಗೊಂಡಿಲ್ಲ.

ಜನರ ಪ್ರವೇಶ ಇಲ್ಲದೆ ಇನ್ನೂ ಬಿಕೋ ಎನ್ನುತ್ತಿದೆ ನಿಲ್ದಾಣ

ಬಸ್ ನಿಲ್ದಾಣ ನಿರ್ಮಾಣದ ಆರಂಭದ ಕೆಲ ದಿನಗಳ ಕಾಲ ಮಂಗಳೂರಿನಿಂದ ಬರುವ ಬಸ್ಸುಗಳು ಬಿ.ಸಿ.ರೋಡು ಜಂಕ್ಷನ್‌ನಲ್ಲಿ ತಿರುವು ಪಡೆದುಕೊಂಡು ಬಸ್ ನಿಲ್ದಾಣ ಪ್ರವೇಶಿಸಿ ವಾಪಾಸು ಬರುತ್ತಿತ್ತಾದರೂ ಕ್ರಮೇಣ ಇದು ಬಿ.ಸಿ.ರೋಡು ಪೇಟೆಯ ಟ್ರಾಫಿಕ್ ಜಂಜಾಟದ ಕಾರಣದಿಂದ ಸುತ್ತು ಬಳಸಿ ನಿಲ್ದಾಣ ಪ್ರವೇಶಿಸುವ ಪ್ರಮೇಯ ನಿಂತು ಹೋಗಿದೆ. ಈ ಕಾರಣಕ್ಕಾಗಿ ಸುಸಜ್ಜಿತ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಜನರ ಪ್ರವೇಶ ಇಲ್ಲದೆ ಇನ್ನೂ ಬಿಕೋ ಎನ್ನುತ್ತಲೇ ಇದೆ.

ಅವ್ಯವಸ್ಥೆಗಳ ಸರಿಪಡಿಸಲು ಪ್ರಯಾಣಿಕರ ಆಗ್ರಹ

ಸೂಕ್ತ ವ್ಯವಸ್ಥೆ ಇಲ್ಲದೆ ಬಿ.ಸಿ.ರೋಡ್ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಜನರೇ ಬರುತ್ತಿಲ್ಲ, ಜನ ಸಂಚಾರ ಇಲ್ಲದೆ ಇರುವುದರಿಂದ ಇಲ್ಲಿನ ಅಂಗಡಿಗಳನ್ನು ಪಡೆದುಕೊಳ್ಳಲು ವ್ಯಾಪಾರ- ವಹಿವಾಟು ನಡೆಸಲು ಯಾರೂ ಮುಂದೆ ಬರುತ್ತಿಲ್ಲ, ಸುಸಜ್ಜಿತ ಬಸ್ ನಿಲ್ದಾಣ ಸರಕಾರ ನಿರ್ಮಿಸಿದರೂ, ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಇದ್ಯಾವುದೂ ಕಾರ್ಯರೂಪಕ್ಕೆ ಬಾರದೆ ಎಲ್ಲವೂ ನೆನೆಗುದಿಗೆ ಬಿದ್ದಿದೆ. ಈ ಬಸ್ ನಿಲ್ದಾಣದ ಅವ್ಯವಸ್ಥೆಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಪ್ರಯಾಣಿಕರು ಆಗ್ರಹಿಸಿದ್ದಾರೆ.

ಪೌರ ಕಾರ್ಮಿಕರಿಂದ ಸ್ವಚ್ಛಗೊಂಡಿತು ಬಸ್ರೂರು ಮೂರುಕೈ ಬಳಿಯ ಅಂಡರ್ ಪಾಸ್ ರಸ್ತೆ ಬದಿ





ಕುಂದಾಪುರ: ಜನರು ಪ್ರತಿ ನಿತ್ಯ ಕಸ ಎಸೆಯುತ್ತಿದ್ದ, ಒಂದು ರೀತಿಯಲ್ಲಿ ತ್ಯಾಜ್ಯ ಹಾಕುವ ಡಂಪಿಂಗ್ ಯಾರ್ಡ್ (ಬ್ಲಾಕ್ ಸ್ಪಾಟ್)ನಂತಿದ್ದ ಇಲ್ಲಿನ ಬಸ್ರೂರು ಮೂರುಕೈ ಬಳಿಯ ಅಂಡರ್ ಪಾಸ್ ಎದುರಿನ ರಸ್ತೆ ಬದಿಯ ಪ್ರದೇಶವನ್ನು ಈಗ ಪುರಸಭೆಯ ಪೌರ ಕಾರ್ಮಿಕರು ಸ್ವಚ್ಛಗೊಳಿಸಿ, ಸುಂದರೀಕರಣಗೊಳಿಸಿದ್ದಾರೆ.

ಕಿರು ಉದ್ಯಾನದಂತಾಗಿದೆ

ಕಸದ ಕೊಂಪೆಯಂತಿದ್ದ ಪ್ರದೇಶವು ಈಗ ಸುಂದರವಾದ ಒಂದು ಕಿರು ಉದ್ಯಾನವನದಂತಾಗಿದೆ. ಈ ಕಿರು ಉದ್ಯಾನವನದ ಉದ್ಘಾಟನೆ ಹಾಗೂ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ ನಗರಾಭಿವೃದ್ಧಿ ಕೋಶ, ಕುಂದಾಪುರ ಪುರಸಭೆ, ಸ್ವಚ್ಛ ಭಾರತ್ ಮಿಷನ್‌ನಡಿ ಘನ ತ್ಯಾಜ್ಯ ನಿರ್ವಹಣೆ ಮತ್ತು ಸ್ವಚ್ಛ್ ಭಾರತ್ ಅಭಿಯಾನದಡಿ ಮಾಹಿತಿ ಕಾರ್ಯಾಗಾರವು ನಡೆಯಿತು.

ಪೌರಕಾರ್ಮಿಕರಿಂದಲೇ ಉದ್ಘಾಟನೆ

ಈ ಪ್ರದೇಶವನ್ನು ಬಿದ್ದಬಿದಿರಿಗೆ ಬಣ್ಣ ಬಳಿದು, ನಿಷ್ಪ್ರಯೋಜಕ ಚಕ್ರಗಳಂತಹ ತ್ಯಾಜ್ಯಗಳನ್ನೇ ಬಳಸಿ ಸುಂದರೀಕರಣಗೊಳಿಸಿದ ಪೌರ ಕಾರ್ಮಿಕರೇ ಕಾರ್ಯಕ್ರಮ ಉದ್ಘಾಟಿಸಿದ್ದು ವಿಶೇಷವಾಗಿತ್ತು. ಪುರಸಭೆ ಮುಖ್ಯಾಧಿಕಾರಿ ಆನಂದ ಜೆ. ಮಾತನಾಡಿ, ಪೌರಕಾರ್ಮಿಕರು ಕೇವಲ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ, ಸಂಸ್ಕರಣೆ ಮಾತ್ರವಲ್ಲದೆ, ಇಂತಹ ಒಂದು ಕಲಾಕೃತಿ ನಿರ್ಮಿಸುವ ಚಿಂತನೆ ಕೂಡ ಅವರಲ್ಲಿದೆ ಎಂದು ತೋರಿಸಿಕೊಟ್ಟಿದ್ದಾರೆ ಎಂದ ಅವರು, ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದರು.
ಪರಿಸರ ಎಂಜಿನಿಯರ್ ಗುರುಪ್ರಸಾದ್ ಶೆಟ್ಟಿ, ಸಮುದಾಯ ಸಂಘಟನಾಧಿಕಾರಿ, ಹಿರಿಯ ಆರೋಗ್ಯ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಪೌರಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ, ಪುರಸಭೆ ಸಿಬ್ಬಂದಿ ವರ್ಗ, ಸಾರ್ವಜನಿಕರು ಪಾಲ್ಗೊಂಡಿದ್ದರು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶ: ಇಂದು ಬೃಹತ್ ವಾಹನ ಜಾಥಾ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಳ ಬ್ರಹ್ಮಕಲಶ, ವಿಜಯ ಗೋಪುರ ಲೋಕಾರ್ಪಣೆ, ಬ್ರಹ್ಮರಥ, ಪುಷ್ಪ ರಥ ಸಮರ್ಪಣಾ ಮಹೋತ್ಸವ ಮಾ.3 ರಿಂದ 11ರವರೆಗೆ ವಿವಿಧ ಧಾರ್ಮಿಕ , ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.
ಈ ಹಿನ್ನೆಲೆ ತಾಲೂಕಿನ ಜನತೆಗೆ ಮಹೋತ್ಸವದ ಅರಿವು ಮೂಡಿಸಿ, ಜ್ಞಾಪಿಸುವ ಪ್ರಯುಕ್ತ ಉಜಿರೆಯ ವರ್ತಕರ ಸಂಘ, ಆಟೋರಿಕ್ಷಾ ಮಾಲಕರು ಹಾಗು ಸಾರ್ವಜನಿಕ ಭಕ್ತರ ಸಹಕಾರದಿಂದ ಮಾ.1ರಂದು ಬೆಳಿಗ್ಗೆ 10.45ಕ್ಕೆ ಪುಂಜಾಲಕಟ್ಟೆ ಶ್ರೀ ಬಸವೇಶ್ವರ ದೇವಳದಿಂದ ಹೊರಟು ಧರ್ಮಸ್ಥಳಕ್ಕೆ ಬಂದು ಉಜಿರೆ ಶ್ರೀ ಜನಾರ್ದನ ದೇವಸ್ಥಾನದಲ್ಲಿ ಸಮಾಪನಗೊಳಿಸುವ ಬೃಹತ್ ವಾಹನ ಜಾಥಾ ಹಮ್ಮಿಕೊಳ್ಳಲಾಗಿದೆ. ವಾಹನ ಮಾಲಕರು ತಮ್ಮ ವಾಹನಗಳೊಂದಿಗೆ ಜಾಥಾ ದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಉಜಿರೆ ವರ್ತಕ ಮತ್ತು ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪ್ರಸಾದ್ ಬಿ.ಎಸ್. ತಿಳಿಸಿದ್ದಾರೆ.

ಮಾ 11 :'ಧರ್ಮಯಾನ' ಬೃಹತ್ ಶೋಭಾಯಾತ್ರೆ ಮೆರವಣಿಗೆ

ಬ್ರಹ್ಮಕಲಶದ ಸಂದರ್ಭ ಉಜಿರೆ ಮತ್ತು ಧರ್ಮಸ್ಥಳ ಕ್ಷೇತ್ರಕ್ಕಿರುವ ಧಾರ್ಮಿಕ ಸಂಬಂಧವನ್ನು ಪುನರಪಿ ಸ್ಮರಿಸಿಕೊಳ್ಳುವ ಉದ್ದೇಶದಿಂದ ಮಾ.11 ರಂದು ಸಂಜೆ 4.30ಕ್ಕೆ ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ



ಕಾಲೇಜು ಬಳಿಯಿಂದ ಸರ್ವಾಲಂಕೃತ ಬೃಹತ್ ರಥದಲ್ಲಿ ಸುಬ್ರಹ್ಮಣ್ಯ ಮತ್ತು ಉಡುಪಿ ಸೋದೆ ಮಠದ ಯತಿವರೇಣ್ಯರು ಮತ್ತು ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ವೈಭವ ಪೂರ್ಣ 'ಧರ್ಮಯಾನ' ಮೆರವಣಿಗೆಯಲ್ಲಿ ಉಜಿರೆ ಶ್ರೀ ಜನಾರ್ದನ ದೇವಸ್ಥಾನಕ್ಕೆ ಗೌರವ ಪೂರ್ವಕವಾಗಿ ಬರಮಾಡಿಕೊಳ್ಳಲಾಗುವುದು. ಮೆರವಣಿಗೆಯಲ್ಲಿ ಆಕರ್ಷಕ ಸ್ತಬ್ಧ ಚಿತ್ರಗಳು, 1000 ಕಲಾವಿದರು , 25 ಸಹಸ್ರ ಸಾರ್ವಜನಿಕರು ಭಾಗವಹಿಸಿ ಮೆರವಣಿಗೆಗೆ ವಿಶೇಷ ಮೆರುಗು ನೀಡಲಿದ್ದಾರೆ. ಭಕ್ತಾದಿಗಳು 'ಧರ್ಮಯಾನ' ಮೆರವಣಿಗೆಯಲ್ಲಿ ಭಾಗವಹಿಸುವಂತೆ ಬ್ರಹ್ಮಕಲಶ ಪ್ರಧಾನ ಸಂಚಾಲಕ ಕೆ.ಮೋಹನ ಕುಮಾರ್ ತಿಳಿಸಿದ್ದಾರೆ.
ನಿಕಟಪೂರ್ವ ವರ್ತಕ ಸಂಘದ ಅಧ್ಯಕ್ಷ ಅರವಿಂದ ಕಾರಂತ್,ಪದ್ಮನಾಭ ಶೆಟ್ಟಿಗಾರ್, ವರ್ತಕರು,ರಿಕ್ಷಾ ಚಾಲಕರು , ಸಾರ್ವಜನಿಕರು ಭಾಗವಹಿಸಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಾಣೇಲ ಓಂ ಶ್ರೀ ಗಣೇಶ ಯುವಕ ಮಂಡಲದ ನೂತನ ಕಟ್ಟಡ ಉದ್ಘಾಟನೆ



ಕೊಣಾಜೆ: ನಾವು ವಿವಿಧ ಜಾತಿ ಧರ್ಮಗಳ ನಡುವೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಉತ್ತಮ ಸಾಮರಸ್ಯದ ಸಮಾಜ ಕಟ್ಟಬೇಕಿದೆ. ಪಾಣೆಲದ ಗಣೇಶ್ ಯುವಕ ಮಂಡಲ ಕಳೆದ ಹಲವಾರು ದಶಕಗಳಿಂದ ಸಂತೋಷ್ ಕುಮಾರ್ ರೈ ಅವರ ಮಾರ್ಗದರ್ಶನದಲ್ಲಿ ಅನೇಕ ಸಮಾಜಮುಖಿ ಕಾರ್ಯಗಳೊಂದಿಗೆ ಮಾದರಿ ಸಂಸ್ಥೆಯಾಗಿ ಗುರುತಿಸಿ ಸಮಾಜಕ್ಕೆ ಹೇಗಿರಬೇಕೆಂದು ತೋರಿಸಿಕೊಟ್ಟಿದೆ ಎಂದು ನರಿಂಗಾನ ಕಂಬಳ ಸಮಿತಿ ಕಾರ್ಯಾಧ್ಯಕ್ಷ ಪ್ರಶಾಂತ್ ಕಾಜವ ಹೇಳಿದರು.
ಅವರು ಓಂ ಶ್ರೀ ಗಣೇಶ ಯುವಕ ಮಂಡಲ, ಮಹಿಳಾ ಮಂಡಳಿ ಹಾಗೂ ಭಜನಾ ಮಂಡಳಿ ಪಾಣೇಲ ಶಾಂತಿನಗರ ಇದರ ನೂತನ ಕಟ್ಟಡದ ಉದ್ಘಾಟನೆಯ ಅಂಗವಾಗಿ ದಿ.ಪದ್ಮಾವತಿ ಕೋಚಣ್ಣ ಆಳ್ವ ವೇದಿಕೆಯಲ್ಲಿ ಶುಕ್ರವಾರ ನಡೆದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಜನರ ಕನಸು ನನಸಾಗಿದೆ

ಕಟ್ಟಡ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ಬೋಳಿಯಾರ್ ಮಾತನಾಡಿ, ಓಂ ಶ್ರೀ ಗಣೇಶ ಯುವಕ ಮಂಡಲಕ್ಕೆ ವಿಶೇಷ ಪ್ರಾಧ್ಯಾನ್ಯತೆ ಇದೆ. ಸುಮಾರು 3 ದಶಕಗಳ ಹಿಂದೆ ಆರಂಭವಾದ ಸಂಘಕ್ಕೆ ಭವ್ಯವಾದ ಕಟ್ಟಡ ನಿರ್ಮಾಣವಾಗುವ ಮೂಲಕ ಈ ಭಾಗದ ಜನರ ಕನಸು ನನಸಾಗಿದೆ ಎಂದರು.
ಮುಖಂಡರಾದ ಜಯರಾಮ್ ಸಾಂತ ಅವರು ಮಾತನಾಡಿ, ನಾವೆಲ್ಲರೂ ಜಾತಿ ಮತ ಬೇಧವಿಲ್ಲದೆ ಸಾಮರಸ್ಯದ ಸಂಕೇತವಾಗಿ ಗಣೇಶ ಯುವಕ ಮಂಡಲವು ನಿರ್ಮಾಣಗೊಂಡಿದ್ದು ಮುಂದೆ ಇನ್ನಷ್ಟು ಸಮಾಜಮುಖಿ ಕಾರ್ಯದೊಂದಿಗೆ ಮುನ್ನಡೆಯಲಿ ಎಂದರು.
ಗಣೇಶ ಯುವಕಮಂಡಲದ ಅಧ್ಯಕ್ಷ ಜಗದೀಶ್ ಕೋಟ್ಯಾನ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.
ದ.ಕ.ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ, ಕುರ್ನಾಡು ಪಂಚಾಯತ್ ಮಾಜಿ ಅಧ್ಯಕ್ಷ ಕುರ್ನಾಡುಗುತ್ತು ಗಣೇಶ್ ನಾಯ್ಕ್, ಅರಸುಮುಂಡಿತ್ತಾಯ ದೈವಸ್ಥಾನದ ಪ್ರಧಾನ ಪಾತ್ರಿ ಸುಬ್ರಾಯ ಪೂಜಾರಿ ಭಂಡಾರಿ ಮನೆ, ಧಾರ್ಮಿಕ ಮುಖಂಡ ಉಮೇಶ್ ಶೆಟ್ಟಿ ಪೊಯ್ಯೆ, ಪಜೀರು ಗ್ರಾಮ ಪಂಚಾಯತ್ ನಿಕಟ ಪೂರ್ವ ಅಧ್ಯಕ್ಷರಾದ ರಫೀಕ್ ಪಜೀರು, ಸುರೇಶ್ ಕೊಂಡೆ ಕುವೆತ್ತಬೈಲ್, ಯುವ ಉದ್ಯಮಿ ಪ್ರವೀಣ್ ಶೆಟ್ಟಿ ಜಯರಾಮ ಪೂಂಜ ತದ್ಮ ಬಾಳಿಕೆ, ಅಧ್ಯಾಪಕ ರಾಮಕೃಷ್ಣ ಭಟ್ ಕಂಚಿಲ, ಪ್ರವೀಣ್ ಶೆಟ್ಟಿ ಪಾದೆ, ಪ್ರಗತಿಪರ ಕೃಷಿಕ ಜಗದೀಶ್ ಆಳ್ವ , ಉದ್ಯಮಿ ಸುಜಿತ್ ಶೆಟ್ಟಿ ಕಂಬಳಪದವು, ಹರಿಪ್ರಸಾದ್ ಶೆಟ್ಟಿ ಪಾದೆ, ನವೀನ್ ಶೆಟ್ಟಿ ಕುರ್ನಾಡು, ಮುರಲೀ ಕೊಣಾಜೆ, ಅಜಿತ್ ಪೂಜಾರಿ, ಗ್ರಾ.ಪಂ.ಸದಸ್ಯೆ ಮೀನಾಕ್ಷಿ, ಮೇರಿ ಫೆರ್ನಾಂಡಿಸ್ ಮೊದಲಾದವರು ಉಪಸ್ಥಿತರಿದ್ದರು.
ರವಿ ರೈ ಪಜೀರು ಸ್ವಾಗತಿಸಿ, ಅಮಿತಾ ದಿನೇಶ್ ಪೂಜಾರಿ ವಂದಿಸಿದರು.

ಮಹಿಳೆಯರ ಸ್ವಾವಲಂಬಿ ಬದುಕಿಗೆ ತರಬೇತಿ ಕಾರ್ಯಕ್ರಮ ಸಹಕಾರಿ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಧರ್ಮಸ್ಥಳ, ಗ್ರಾಮೀಣ ಶ್ರೇಷ್ಠತಾ ಕೇಂದ್ರ ಬಂಟ್ವಾಳ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಬಂಟ್ವಾಳ ತಾಲೂಕು ಇದರ ಜಂಟಿ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯಡಿ ಯೋಜನೆ ಪಾಲುದಾರ ಬಂಧುಗಳಿಗೆ ಉಚಿತವಾಗಿ ನಡೆದ 5 ದಿನಗಳ ಸಾರಿ ಫೋಲ್ಡಿಂಗ್ ಹಾಗೂ ಸಾರಿ ಗೊಂಡೆ ತರಬೇತಿ ಸಮಾರೋಪ ಸಮಾರಂಭ ಬಂಟ್ವಾಳ ಯೋಜನಾ ಕಚೇರಿಯ ಉನ್ನತಿ ಸೌಧದಲ್ಲಿ ನಡೆಯಿತು.

ಸದುಪಯೋಗ ಪಡೆದುಕೊಳ್ಳಿ

ಗ್ರಾಮೀಣ ಶ್ರೇಷ್ಠತ ಕೇಂದ್ರ ಪ್ರಾಂಶುಪಾಲ ರಮೇಶ್ ರೂಡ್ಸೆಟ್ ಸಂಸ್ಥೆಯಲ್ಲಿ ಸಿಗುವ ಉಚಿತ ತರಬೇತಿ ಬಗ್ಗೆ ಮಾಹಿತಿ ನೀಡಿದರಲ್ಲದೆ ಮಹಿಳೆಯರನ್ನು ಸ್ವಾವಲಂಬಿ, ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಯೋಜನೆಯ ಈ ಕಾರ್ಯಕ್ರಮ ವಿಶೇಷವಾದದ್ದು ಇದರ ಸದುಪಯೋಗವನ್ನು ಪಡೆದ ಮಹಿಳೆಯರು ಸದೃಢರಾಗಬೇಕು ಎಂದರು.

ಯೋಜನೆ ಕಾರ್ಯಕ್ರಮ ಸಹಕಾರಿ

ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ. ಮಾತನಾಡಿ, ಯೋಜನೆಯಿಂದ ನಡೆಯುವ ಪ್ರತಿ ಕಾರ್ಯಕ್ರಮ ಸಮಾಜಕ್ಕೆ ಪೂರಕವಾದುದು. ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಹೆಗ್ಗಡೆ, ಮಾತೃಶ್ರೀ ಅಮ್ಮನವರ ಪರಿಕಲ್ಪನೆಯಂತೆ ಮಹಿಳೆಯರು ಸ್ವ-ಉದ್ಯೋಗಿಗಳಾಗಬೇಕೆಂಬ ನೆಲೆಯಲ್ಲಿ ಇಂತಹ ತರಬೇತಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.
ಗ್ರಾಮೀಣ ಶ್ರೇಷ್ಠತ ಕೇಂದ್ರದ ಪ್ರಾಧ್ಯಾಪಕಿ ಧರಣಿ , ತರಬೇತಿ ಶಿಕ್ಷಕಿ ವಿಜಯ, ಎಂಐಎಸ್ ಯೋಜನಾಧಿಕಾರಿ ಪ್ರೇಮನಾಥ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ ಇದ್ದರು. ತರಬೇತಿ ಪಡೆದುಕೊಂಡ ಸದಸ್ಯರಿಗೆ ತರಬೇತಿ ಪ್ರಮಾಣ ಪತ್ರ ವಿತರಿಸಲಾಯಿತು.

ಜಿಲ್ಲಾಮಟ್ಟದ ರಸಪ್ರಶ್ನಾ ಸ್ಪರ್ಧೆ: ರೋಟರಿ ಮೈಸೂರು ವಿಜಯನಗರ ಸಂಸ್ಥೆಗೆ ಪ್ರಶಸ್ತಿ



ಮಂಗಳೂರು: ರೋಟರಿ ಮಂಗಳೂರು ಸೆಂಟ್ರಲ್ ಸಂಸ್ಥೆ ಆಶ್ರಯದಲ್ಲಿ ರೋಟರಿ ಜ್ಞಾನ, ಮಾಹಿತಿ, ಜಾಗೃತಿ ಅಭಿಯಾನದ ಅಂಗ ರೋಟರಿ ಜಿಲ್ಲಾ ಮಟ್ಟದ 20ನೇ ವಾರ್ಷಿಕ 'ಅಂತರ್ ರೋಟರಿ ಕ್ಲಬ್ ರಸಪ್ರಶ್ನಾ ಸ್ಪರ್ಧಾಕೂಟ' ನಗರದ ಬಿಜೈ ಓಷಿಯನ್‌ಪರ್ಲ್ ಹೊಟೇಲ್ ಸಭಾಂಗಣದಲ್ಲಿ ಶುಕ್ರವಾರ ಜರಗಿತು.
ರೋಟರಿ ಕ್ಲಬ್ ಮೈಸೂರು ವಿಜಯನಗರ ಸಂಸ್ಥೆ ಪ್ರತಿನಿಧಿಸಿದ ಎಚ್.ಎಂ. ಹರೀಶ್ ಪ್ರಥಮ ಸ್ಥಾನ ಗಳಿಸಿ ರೋಟರಿ ಪ್ರತಿಷ್ಠಿತ ಪ್ರಶಸ್ತಿ ಪಡೆದರು. ರೋಟರಿ ಕ್ಲಬ್ ಮಂಗಳೂರು ಸಿಟಿ ಸಂಸ್ಥೆ ಪ್ರತಿನಿಧಿಸಿದ ಡಾ. ರಂಜನ್, ಸುಮಿತ್ ರಾವ್ ತಂಡ ದ್ವಿತೀಯ ಸ್ಥಾನ ಪಡೆದರು. ರೋಟರಿ ಮಂಗಳೂರು ಕೋಸ್ಟಲ್ ಸಂಸ್ಥೆ ಪ್ರತಿನಿಧಿಸಿದ ಸುಬೋದ್ ಕುಮಾರ್ ದಾಸ್ , ಕಿರಣ್ ಪ್ರಸಾದ್ ರೈ ತೃತೀಯ ಸ್ಥಾನ ಗಳಿಸಿದರು.
ಮಾಜಿ ರೋಟರಿ ಜಿಲ್ಲಾ ಗವರ್ನರ್ ಎಚ್.ಆರ್. ಕೇಶವ್, ಸ್ಪರ್ಧಾ ಕೂಟದ ನಿರೂಪಕ ಡಾ. ದೇವದಾಸ್ ರೈ ರೋಟರಿ ಆಂದೋಲನಕ್ಕೆ ನೀಡಿದ ಕೊಡುಗೆ , ಸಲ್ಲಿಸಿದ ಅನುಪಮ ಸೇವೆ ಅಪಾರ ಮತ್ತು ಅಮೂಲ್ಯ ಎಂದರು. ಸ್ಪರ್ಧಾಕೂಟ ವಿಜೇತರಿಗೆ ರೋಟರಿ ಆಕರ್ಷಕ ಪ್ರಶಸ್ತಿ, ಪ್ರಮಾಣ ಪತ್ರ ಮತ್ತು ನಗದು 3,000 ರೂ. ಬಹುಮಾನ ನೀಡಿ, ಅಭಿನಂದಿಸಿದರು.
ವಲಯ ಸಹಾಯಕ ಗವರ್ನರ್ ಚಿನ್ನಗಿರಿ ಗೌಡ ಸಂಸ್ಥೆ ಸಾಪ್ತಾಹಿಕ ವಾರ್ತಾ ಗೃಹ ಪತ್ರಿಕೆ 'ಸೆಂಟೋರ್' ಬಿಡುಗಡೆಗೊಳಿಸಿದರು. ಕ್ಲಬ್ ಅಧ್ಯಕ್ಷ ಭಾಸ್ಕರ್ ರೈ ಅಧ್ಯಕ್ಷತೆ ವಹಿಸಿದ್ದರು.
ವಲಯ ಪ್ರತಿನಿಧಿ ರವಿ ಜಲಾನ್, ಸಂಸ್ಥೆ ನಿಯೋಜಿತ ಅಧ್ಯಕ್ಷ ರವೀಂದ್ರ ಬಿ.ಎನ್. ಇದ್ದರು. ಮೈಸೂರು, ಕೊಳ್ಳೆಗಾಲ, ಎಳಂದೂರ್, ಮಂಗಳೂರು, ಸುರತ್ಕಲ್, ಪುತ್ತೂರು, ದೇರಳಕಟ್ಟೆ, ಸಿದ್ದಕಟ್ಟೆ ಸೇರಿದಂತೆ ಜಿಲ್ಲೆಯ 14 ತಂಡಗಳು ಅಂತಿಮ, ನಿರ್ಣಾಯಕ ಸ್ಪರ್ಧೆಯಲ್ಲಿದ್ದರು. ವಿಕಾಸ್ ಕೋಟ್ಯಾನ್ ವರದಿ ಮಂಡಿಸಿ, ಸಾಯಿಬಾಬಾ ರಾವ್ ವಂದಿಸಿದರು.

ಹಸಿರು ಕ್ರಿಯಾಸೇನೆ ವಿದ್ಯಾರ್ಥಿ ವೇತನ ವಿತರಣೆ



ಬದಿಯಡ್ಕ: ಬದಿಯಡ್ಕ ಗ್ರಾ.ಪಂ. ಶುಚಿತ್ವ ಕಲಿಕೋತ್ಸವದ ವತಿಯಿಂದ ಹಸಿರು ಕ್ರಿಯಾಸೇನೆ ವಿದ್ಯಾರ್ಥಿ ವೇತನ ವಿತರಣೆ ಶುಕ್ರವಾರ ಬದಿಯಡ್ಕ ಪಂ. ಸಭಾಭವನದಲ್ಲಿ ಜರಗಿತು.
ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಅವಿನಾಶ್ ರೈ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಅವರು ವಿದ್ಯಾರ್ಥಿ ವೇತನ ವಿತರಣೆಗೆ ಚಾಲನೆ ನೀಡಿ ಮಾತನಾಡಿ, ಪಾಠ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡುತ್ತಾ ಮುಂದುವರಿಯಬೇಕು. ನಾಡಿನ ಉತ್ತಮ ಪ್ರಜೆಗಳಾಗಿ ವಿದ್ಯಾರ್ಥಿಗಳು ರೂಪುಗೊಳ್ಳುವಂತಹ ಶಿಕ್ಷಣ ಅವರಿಗೆ ಲಭಿಸಬೇಕು ಎಂದರು.
ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಹಮೀದ್ ಕೆಡೆಂಜಿ, ಕುಂಬಳೆ ಉಪ ಜಿಲ್ಲಾ ಶಿಕ್ಷಣಾಧಿಕಾರಿ ಶಶಿಧರ ಎಂ., ಜಿ.ಪಂ.ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ, ಗ್ರಾ. ಪಂ. ಸದಸ್ಯರು ಶುಭಾಶಂಸನೆಗೈದರು. ಗ್ರಾ.ಪಂ.ಕಾರ್ಯದರ್ಶಿ ಸರಿನ್ ಎ.ಕೆ. ಸ್ವಾಗತಿಸಿ, ಪಿಇಸಿ ಕಾರ್ಯದರ್ಶಿ ಮಂಜುನಾಥ ಬಿ. ವಂದಿಸಿದರು.

ಐಲ ಶ್ರೀ ದುರ್ಗಾಪರಮೇಶ್ವರೀ ಮಹಿಳಾ ಸಂಘದ ಬೆಳ್ಳಿಹಬ್ಬ ಆಚರಣೆ

ಉಪ್ಪಳ: ಐಲ ಶ್ರೀದುರ್ಗಾ ಪರಮೇಶ್ವರೀ ಕ್ಷೇತ್ರದಲ್ಲಿ ಕಳೆದ 25 ವರ್ಷಗಳಿಂದ ಧಾರ್ಮಿಕ, ಸಾಂಸ್ಕೃತಿಕ, ಸೇವೆ ಹಾಗೂ ಸಮಾಜಮುಖಿ ಕಾರ್ಯಕ್ರಮಗಳಿಂದ ತೊಡಗಿಸಿಕೊಂಡಿದ್ದ ಶ್ರೀ ದುರ್ಗಾಪರಮೇಶ್ವರೀ ಮಹಿಳಾ ಸಂಘದ ಬೆಳ್ಳಿಹಬ್ಬವು ಐಲ ಕ್ಷೇತ್ರ ಪರಿಸರದಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ, ಸಭಾ ಕಾರ್ಯಕ್ರಮಗಳಿಂದ ನೆರವೇರಿತು.
ಐಲ ಕ್ಷೇತ್ರದಲ್ಲಿ ಬೆಳಿಗ್ಗೆ ಗಣಪತಿ ಹೋಮದಿಂದ ಆರಂಭಗೊಂಡು, ಶ್ರೀ ದುರ್ಗಾಪರಮೇಶ್ವರೀ ಮಹಿಳಾ ಸಂಘವು ದೀಪ ಪ್ರಜ್ವಲಿಸಿ ಭಜನೆ ಸೇವೆ ನಡೆಸಿದರು. ಬಳಿಕ ಕುಕ್ಕಾಡಿ ಶ್ರೀ ಭಗವತೀ ಮಹಿಳಾ ಸಂಘದ ಸದಸ್ಯೆಯರಿಂದ ಭಜನೆ ನೆರವೇರಿತು. ವೇದಮೂರ್ತಿ ಬ್ರಹ್ಮಶ್ರೀ ಹರಿನಾರಾಯಣ ಮಯ್ಯರ ಪೌರೋಹಿತ್ಯದಲ್ಲಿ ಶ್ರೀ ಲಲಿತ ಸಹಸ್ರನಾಮ ಹವನ ಹಾಗೂ ಶ್ರೀ ಲಲಿತ ಸಹಸ್ರನಾಮ ಪಾರಾಯಣ ಸಾಮೂಹಿಕವಾಗಿ ಮಾತೆಯರಿಂದ ನೆರವೇರಿತು.



'ರಜತ ನೃತ್ಯ ಸಿಂಚನ'

ಸಂಜೆ ಶ್ರೀ ಕ್ಷೇತ್ರದ ಮುಂಭಾಗದ ವೇದಿಕೆಯಲ್ಲಿ ರಜತ ನೃತ್ಯ ಸಿಂಚನ ಎಂಬ ಅಮೋಘ ನೃತ್ಯ ಪ್ರದರ್ಶನವು ನೃತ್ಯ ಶಿಕ್ಷಕಿ ವಿನುತಾ ಎಸ್. ಅವರ ನಿರ್ದೇಶನದಲ್ಲಿ 25 ಗಂಡು ಮಕ್ಕಳು, 25 ಹೆಣ್ಣು ಮಕ್ಕಳು, 25 ಮಾತೆಯರಿಂದ ನೆರವೇರಿತು. ಬಳಿಕ ನಡೆದ ಸಭಾ ಕಾರ್ಯಕ್ರಮವು ಐಲ ಕ್ಷೇತ್ರದ ಆಡಳಿತ ಮೋಕ್ತೇಸರ ಶ್ರೀ ಕೋಡಿಬೈಲು ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.
ಮಹಿಳಾ ಸಂಘದವರು ಕುದುಪುಳು ಐಲ ಕ್ಷೇತ್ರ ಕಾಲುದಾರಿ ಪುನರ್ ನಿರ್ಮಾಣ ಮಾಡಿ ಲೋಕಾರ್ಪಣೆ ಮಾಡುವ ಕಾಯಕದ ಬಗ್ಗೆ ಶ್ಲಾಘಿಸಿ ದರು. ಶ್ರೀ ಸಾಯಿ ಸೇವಾಶ್ರಮ ಧೈಗೋಳಿ ಇದರ ವ್ಯವಸ್ಥಾಪಕಿ ಡಾ. ಶಾರದಾ ಉದಯಕುಮಾರ್, ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹಾಗೂ ಮಂಗಲ್ಪಾಡಿ ಗ್ರಾ.ಪಂ. ಸದಸ್ಯೆ ಸಾಕ್ಷಿ ಶೆಟ್ಟಿ ಅತಿಥಿಗಳಾಗಿದ್ದರು. ಮಹಿಳಾ ಸಂಘದ ಉಪಾಧ್ಯಕ್ಷೆ ಜಲಜಾಕ್ಷಿ ಟೀಚರ್, ಚಲನಚಿತ್ರ ನಟ, ನಿರ್ದೇಶಕ ಪೃಥ್ವಿ ಅಂಬಾರ್ ಮೊದಲಾದವರು ಉಪಸ್ಥಿತರಿದ್ದರು.

ಗುರುವಂದನೆ

ವಿಶೇಷವಾಗಿ ಮಹಿಳಾ ಸಂಘದ ಸದಸ್ಯೆಯರಿಗೆ ವಿವಿಧ ಸಾಂಸ್ಕೃತಿಕ ಕಲೆಗಳನ್ನು ಈ ಮೊದಲು ವೇದಿಕೆಯಲ್ಲಿ ಪ್ರಸ್ತುತ ಪಡಿಸಲು ನೆರವಾದ ಗುರುಗಳಿಗೆ ಗುರುವಂದನೆಯನ್ನು ಸದಸ್ಯೆಯರು ಮಾಡಿದರು. ಕಲಾ ರತ್ನ ಶಂನಾ ಅಡಿಗ ಕುಂಬಳೆ, ಯಕ್ಷಸಿರಿ ಪುರಸ್ಕೃತ ರಾಮ ಸಾಲ್ಯಾನ್ ಮಂಗಲ್ಪಾಡಿ, ಸಂಕೀರ್ತನಕಾರ ಶ್ರೀ ಜಯಾನಂದ ಕುಮಾರ್ ಹೊಸದುರ್ಗ ಅವರು ಗೌರವ ಗುರುವಂದನೆಗೆ ಭಾಜನರಾದರು. ಗುರು ಸೇವೆಯ ಬಗ್ಗೆ ರೋಹಿಣಿ ಸುಂದರ, ನಿಶಾರೇಖಾ ಮನೋಜ್ ಹಾಗೂ ಲಕ್ಷ್ಮಿ ಚಂದ್ರಹಾಸ ಕಿರು ಪರಿಚಯ ನಡೆಸಿದರು. ಇದೇ ವೇಳೆಯಲ್ಲಿ ಬೆಳ್ಳಿ ಹಬ್ಬದ ಪ್ರಯುಕ್ತ ನಡೆಸಿದ್ದ ರಂಗೋಲಿ ಸ್ಪರ್ಧೆಗಳ ಬಹುಮಾನಗಳನ್ನು ವಿಜೇತರಿಗೆ ವಿತರಿಸಲಾಯಿತು. ಸಭೆಯಲ್ಲಿ ಬೆಳ್ಳಿಹಬ್ಬ ಆಚರಿಸುತ್ತಿರುವ ಶ್ರೀ ದುರ್ಗಾ ಪರಮೇಶ್ವರೀ ಮಹಿಳಾ ಸಂಘ ನಡೆದು ಬಂದ ದಾರಿಯನ್ನು ಪದ್ಮಾ ಮೋಹನ್‌ದಾಸ್ ತಿಳಿಸಿದರು.

ಶ್ರದ್ಧಾಂಜಲಿ

ಮಹಿಳಾ ಸಂಘದ ಸದಸ್ಯೆಯರಾಗಿದ್ದು ದಿವಂಗತರಾದ ವಸಂತಿ ಐಲ, ಸುಜಾತ ಅಂಬಾರು, ರಾಜೀವಿ ಪೆರಿಂಗಡಿ ಅವರಿಗೆ ಶ್ರದ್ಧಾಂಜಲಿಯನ್ನು ಧನಲಕ್ಷ್ಮೀ ಕಮಲ್ ಅರ್ಪಿಸಿದರು.
ಹರ್ಷಿಣಿ ಕುಂಬಳೆ ವಂದಿಸಿದರು. ತರುಣ ಕಲಾವೃಂದದ ಸದಸ್ಯ ಕಮಲಾಕ್ಷ ಐಲ ನಿರೂಪಿಸಿದರು.

'ಶಿವದೂತೆ' ನಾಟಕ ಪ್ರದರ್ಶನ

ಮನೋರಂಜನೆಗಾಗಿ ಕಲಾಸಂಗಮ ಮಂಗಳೂರು ಅವರ ವಿಜಯಕುಮಾರ್ ಕೊಡಿಯಾಲ್‌ಬೈಲ್ ಅವರು ರಚಿಸಿ ನಿರ್ದೇಶಿಸಿದ 'ಶಿವದೂತೆ ಗುಳಿಗ ' 789ನೇ ಪ್ರಯೋಗದ ನಾಟಕ ಪ್ರದರ್ಶಿಸಲಾಯಿತು.

ಸುತ್ತಮುತ್ತ

ಇಂದು: ಪಂಜ ದೇಗುಲದಲ್ಲಿ ರಂಗಪೂಜೆ ಬೀದಿ ನೇಮ

ಸುಬ್ರಹ್ಮಣ್ಯ: ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದಲ್ಲಿ ಇಂದು ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವರಿಗೆ ಸಂಜೆ ರಂಗಪೂಜೆ ನಡೆಯಲಿದೆ. ಬಳಿಕ ಶ್ರೀ ಕಾಚು ಕುಜುಂಬ ದೈವದ ನರ್ತನ ಸೇವೆ ನೆರವೇರಲಿದೆ. ಬಳಿಕ ವಿಶೇಷವಾಗಿ ಉಳ್ಳಾಕುಲು ದೈವದ ನರ್ತನ ಸೇವೆ, ಮಹಿಷಂತಾಯ, ವ್ಯಾಘ್ರ ಚಾಮುಂಡಿ, ಕುಪ್ಪೆ ಪಂಜುರ್ಲಿ, ವರ್ಣಾರ ಪಂಜುರ್ಲಿ, ಪುರುಷ ದೈವ, ಪೊಟ್ಟ ಭೂತ ಹಾಗೂ ಗುಳಿಗ ದೈವಗಳ ನೇಮ ನೆರವೇರಲಿದೆ. ಮಾ.2ರಂದು ರಾತ್ರಿ ಆದಿ ಬೈದೇರುಗಳ ನೇಮ ನಡೆಯಲಿದೆ. ಸಂಜೆ ಮುಹೂರ್ತ ತೋರಣ, ಬೈದೇರುಗಳ ಗರಡಿ ಇಳಿಯುವುದು, ಕಿನ್ನಿದಾರು ಗರಡಿ ಇಳಿದು ರಂಗ ಪ್ರವೇಶ ಬೆಳಗ್ಗೆ ಪ್ರಸಾದ ವಿತರಣೆ ನಡೆಯಲಿದೆ. ಅನ್ನ ಸಂತರ್ಪಣೆ ನಡೆಯಲಿದೆ. ಮಾ.9ಕ್ಕೆ ಸಂಜೆ ಗಂಟೆ 5ರಿಂದ ಜಾತ್ರೋತ್ಸವದ ಖರ್ಚು ವೆಚ್ಚಗಳ ಬಗ್ಗೆ ಸಾರ್ವಜನಿಕ ಸಭೆಯು ದೇವಳದ ಪಾರ್ವತಿ ಸಭಾಭವನದಲ್ಲಿ ನಡೆಯಲಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್ ತಿಳಿಸಿದ್ದಾರೆ.

ನೆಲ್ಯಾಡಿ: ಪ್ರೌಢ ಶಾಲೆಗೆ ನೀರಿನ ಘಟಕ ಹಸ್ತಾಂತರ

ಸುಬ್ರಹ್ಮಣ್ಯ: ರೋಟರಿ ಕ್ಲಬ್ ಸುಬ್ರಹ್ಮಣ್ಯದ ವತಿಯಿಂದ ದಾನಿಗಳಾದ ಯುಕೆ ಕಂಪೆನಿಯ ಮಾಲಕ ಉಲ್ಲಾಸ್ ಕಾಮತ್ ಕೊಡ ಮಾಡಿದ ರೂ.50 ಸಾವಿರ ಮೌಲ್ಯದ ಶುದ್ಧ ಕುಡಿಯುವ ನೀರಿನ ಘಟಕ ಮತ್ತು ನ್ಯಾಪ್ಕಿನ್ ಬರ್ನಿಂಗ್ ಮೆಷಿನನ್ನು ನೆಲ್ಯಾಡಿ ಸರ್ಕಾರಿ ಪ್ರೌಢ ಶಾಲೆಗೆ ಹಸ್ತಾಂತರಿಸಲಾಯಿತು. ರೋಟರಿ ಜಿಲ್ಲಾ ಸಹಾಯಕ ರಾಜ್ಯಪಾಲ ಪ್ರೊ. ಬಾಲಕೃಷ್ಣ ಪೈ ನೀರಿನ ಘಟಕವನ್ನು ಉದ್ಘಾಟಿಸಿದರು. ಸುಬ್ರಹ್ಮಣ್ಯ ರೋಟರಿ ಅಧ್ಯಕ್ಷ ಜಯಪ್ರಕಾಶ್ ಆರ್., ಇನ್ನರ್ ವ್ಹೀಲ್ ಕ್ಲಬ್ ಪೂರ್ವಾಧ್ಯಕ್ಷೆ ಸೌಮ್ಯಾ ಬಿ. ಪೈ, ರೋಟರಿ ಪೂರ್ವಾಧ್ಯಕ್ಷ ಚಂದ್ರಶೇಖರ ನಾಯರ್, ವಲಯ ಸೇನಾನಿ ವಿಜಯ ಕುಮಾರ್ ಅಮೈ ಉಪಸ್ಥಿತರಿದ್ದರು. ಈ ವೇಳೆ ಪ್ರೊ. ಬಾಲಕೃಷ್ಣ ಪೈ ಮತ್ತು ಸೌಮ್ಯಾ ಬಿ. ಪೈ ದಂಪತಿಯನ್ನು ಸನ್ಮಾನಿಸಲಾಯಿತು.

ಭಾರತ್ ಸ್ಕೌಟ್ ಮತ್ತು ಗೈಡ್ಸ್ ಸೋಪಾನ ಪರೀಕ್ಷೆ

ಕಡಬ: ಭಾರತ್ ಸ್ಕೌಟ್ ಮತ್ತು ಗೈಡ್ಸ್ 2024–25ನೇ ಸಾಲಿನ ಉಪ್ಪಿನಂಗಡಿ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷೆ ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಿತು. ಸ್ಥಳೀಯ ಸಂಸ್ಥೆಯ ಅಧ್ಯಕ್ಷ, ರಾಮಕುಂಜದ ಶ್ರೀ ರಾಮಕುಂಜೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಕೆ. ಸೇಸಪ್ಪ ರೈ ಧ್ವಜಾರೋಹಣಗೈದು ಶುಭ ಹಾರೈಸಿದರು. ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ಉಮೇಶ್ ಸಾಯಿರಾಂ, ಕಾರ್ಯದರ್ಶಿ ಪ್ರೇಮ ಬಿ., ಕೋಶಾಧಿಕಾರಿ ಜನಾರ್ದನ ಟಿ. ಮತ್ತು ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್. ಉಪಸ್ಥಿತರಿದ್ದರು. ಪರೀಕ್ಷೆಯಲ್ಲಿ ಒಟ್ಟು 39 ಸ್ಕೌಟ್, 50 ಗೈಡ್ಸ್ ವಿದ್ಯಾರ್ಥಿಗಳು ಮತ್ತು 6 ಸ್ಕೌಟ್ ಮಾಸ್ಟರ್ಸ್ ಮತ್ತು 15 ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು. ಮುಂದಿನ ವರ್ಷದ ವಾರ್ಷಿಕ ಚಟುವಟಿಕೆಗಳನ್ನು ಸ್ಥಳೀಯ ಸಂಸ್ಥೆಗೆ ಒಳಪಟ್ಟ ಶಾಲೆಗಳಿಗೆ ಸಭೆಯಲ್ಲಿ ಹಂಚಿಕೊಡಲಾಯಿತು.

ರಾಷ್ಟ್ರೀಯ ವಿಜ್ಞಾನ ದಿನ

ಬಂಟ್ವಾಳ: ಮಾನವೀಯ ಮೌಲ್ಯಗಳಿಲ್ಲದ ಜ್ಞಾನಕ್ಕೆ ಬೆಲೆಯಿಲ್ಲ, ಕೇವಲ ಪಠ್ಯಕ್ರಮವಷ್ಟೇ ಶಿಕ್ಷಣವಲ್ಲ, ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವುದೇ ಶಿಕ್ಷಣ ಎಂದು ಪುತ್ತೂರು ಸಂತಫಿಲೋಮಿನಾ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಚಂದ್ರಶೇಖರ್ ಹೇಳಿದ್ದಾರೆ.

ಬಂಟ್ವಾಳ ಶ್ರೀ ವೆಂಕಟರಮಣಸ್ವಾಮೀ ಕಾಲೇಜಿನ ವಿಜ್ಞಾನ ಸಂಘ, ಐ.ಐ.ಸಿ ಹಾಗೂ ಐ.ಕ್ಯು.ಎ.ಸಿ. ಯ ಸಂಯುಕ್ತಾಶ್ರಯದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತ ಸರ್ ಸಿ.ವಿ.ರಾಮನ್ ಜನ್ಮದಿನದ ಅಂಗವಾಗಿ ನಡೆದ ರಾಷ್ಟ್ರೀಯ ವಿಜ್ಞಾನ ದಿನ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ಪ್ರಾಂಶುಪಾಲ ಪ್ರೊ.ಎಂ.ಡಿ.ಮಂಚಿ ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನ ಸಂಘದ ಸಂಯೋಜಕರಾದ ಡಾ.ವಿನಾಯಕ ಕೆ.ಎಸ್. ಸ್ವಾಗತಿಸಿ, ಶ್ರೀದೇವಿ ವಂದಿಸಿದರು. ಸುಪ್ರೀತ್ ಕಡಕೋಳ್ ಅತಿಥಿಗಳ ಪರಿಚಯಿಸಿದರು. ಕು.ವೀಕ್ಷಿತಾ ಗಟ್ಟಿ ನಿರೂಪಿಸಿದರು. ವಿದ್ಯಾರ್ಥಿನಿ ವಂದಿತ ಹಾಗೂ ನಿಧಿ ಪ್ರಾರ್ಥಿಸಿದರು.ಈ ಸಂದರ್ಭ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಸಾರ್ವಜನಿಕ ಸತ್ಯನಾರಾಯಣ ಪೂಜೆ

ಸುಬ್ರಹ್ಮಣ್ಯ: ಸುಬ್ರಹ್ಮಣ್ಯದ ಕುಕ್ಕೆಶ್ರೀ ಆಟೋ ಚಾಲಕ ಮಾಲಕರ ಸಂಘದ ವತಿಯಿಂದ ಸುಬ್ರಹ್ಮಣ್ಯದ ವನದುರ್ಗಾ ದೇವಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ 15ನೇ ವರ್ಷದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ನೆರವೇರಿತು. ಬೆಳಗ್ಗೆ ಶ್ರೀ ಮಹಾಗಣಪತಿ ಹೋಮ, ಬಳಿಕ ಶ್ರೀ ಸತ್ಯನಾರಾಯಣ ಸ್ವಾಮಿ ದೇವರ ವ್ರತಕ್ಕೆ ಸಂಕಲ್ಪ ನೆರವೇರಿತು. ನಂತರ ಗಾನ ಸುರಭಿ ಕಲಾ ತಂಡದ ಕಲಾವಿದೆ ಲಿಖಿತಾ ಸುಬ್ರಹ್ಮಣ್ಯ ಅವರಿಂದ ಸ್ಯಾಕ್ಸೋಫೋನ್ ವಾದನ ನಡೆಯಿತು. ಅವರಿಗೆ ತವಿಲ್‌ನಲ್ಲಿ ಶ್ರುತನ್ ಸುಬ್ರಹ್ಮಣ್ಯ ಹಿಮ್ಮೇಳ ಸಹಕಾರ ನೀಡಿದರು. ಬಳಿಕ ಶ್ರೀ ಸತ್ಯನಾರಾಯಣ ದೇವರ ಪೂಜೆ ನಡೆದು ಪ್ರಸಾದ ವಿತರಣೆ ನೆರವೇರಿತು. ಶ್ರೀ ವನದುರ್ಗಾ ದೇವಳದ ಪ್ರಧಾನ ಅರ್ಚಕ ಶ್ರೀಕರ ಉಪಾಧ್ಯಾಯರ ನೇತೃತ್ವದಲ್ಲಿ ವೈದಿಕ ವಿಧಿ ವಿಧಾನಗಳು ನೆರವೇರಿತು. ಈ ಸಂದರ್ಭ ಸಂಘದ ಅಧ್ಯಕ್ಷ ಸಂತೋಷ್ ಕುಲ್ಕುಂದ, ಗೌರವಾಧ್ಯಕ್ಷ ಉಮೇಶ್ ಕೆ.ಎನ್., ಸ್ಥಾಪಕ ಕಾರ್ಯದರ್ಶಿ ನವೀನ್ ಕುಮಾರ್ ಕೆ.ವಿ., ಕಾರ್ಯದರ್ಶಿ ರಮಾಕಾಂತ್ ನಾಯಕ್, ಸಂಘಟನಾ ಕಾರ್ಯದರ್ಶಿ ಯಶೋಧರ ಕಂದಡ್ಕ, ಉಪಾಧ್ಯಕ್ಷ ಕರುಣಾಕರ ನೂಚಿಲ, ಕೋಶಾಧಿಕಾರಿ ಭರತ್ ದೇವರಗದ್ದೆ ಮತ್ತಿತರರಿದ್ದರು.

ಕೋಟಿ ಚೆನ್ನಯರು ಈಜಾಡಿದ ಕೆರೆ | ರಾಜ್ಯ ಸರ್ಕಾರದಿಂದ 1.5 ಕೋ.ರೂ. ಅನುದಾನ ಮಂಜೂರು

600 ವರ್ಷಗಳ ಪುರಾತನ ಪಾಂಗಾಳ ಕಟ್ಟಿಕೆರೆಗೆ ಕಾಯಕಲ್ಪ

■ ಮರಾಠಿ ಶಿರ್ವ



ಶಿರ್ವ: ಶಂಕರಪುರ ಸಮೀಪದ ಮೂಡಬೆಟ್ಟು–ಪಾಂಗಾಳ ರಾಷ್ಟ್ರೀಯ ಹೆದ್ದಾರಿ 66 ಪಕ್ಕದಲ್ಲಿ ಪುರಾತನ ಐತಿಹಾಸಿಕ ಹಿನ್ನೆಲೆ ಇರುವ ಪಾಂಗಾಳ ಕಟ್ಟಿಕೆರೆ ಒಂದು ಕಾಲದಲ್ಲಿ ಈ ಪರಿಸರ ದಲ್ಲಿ ಅಂತರ್ಜಲದ ಒರತೆಯಿಂದ ಕೃಷಿ ಕುಟುಂಬಗಳಿಗೆ ವರದಾನವಾಗಿತ್ತು. ಸರಿಯಾದ ದುರಸ್ತಿ ಕಾರ್ಯ ನಡೆಯದೆ ಕ್ರಮೇಣ ಹೂಳು ತುಂಬಿ ನೀರಿನ ಮಟ್ಟ ಕಡಿಮೆಯಾಗಿ ಬೇಸಿಗೆಯಲ್ಲಿ ಒಣಗಿದ್ದು ಮಳೆಗಾಲದಲ್ಲಿ ತುಂಬಿ ತುಳುಕುತ್ತದೆ. ಜಾನಪದ ಹಿನ್ನಲೆ ಇರುವ ಈ ಕೆರೆಯ ಕಾಲುಭಾಗ ಈಗಾಗಲೇ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿಲೀನಗೊಂಡಿದೆ...!

ಕಾಪು ಕ್ಷೇತ್ರದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಇವರ ವಿಶೇಷ ಮುತುವರ್ಜಿಯಿಂದ ಸಣ್ಣ ನೀರಾವರಿ ಇಲಾಖೆಯಿಂದ ಕೆರೆ ದುರಸ್ತಿಗೆ 1.5 ಕೋಟಿ ರೂ. ಮಂಜೂರಾಗಿದ್ದು, ಗುದ್ದಲಿಪೂಜೆ ನಡೆಯುವ ಮೂಲಕ ಅಭಿವೃದ್ಧಿಗೆ ಚಾಲನೆ ದೊರೆದಂತಾಗಿದೆ.

ಐತಿಹಾಸಿಕ ಹಿನ್ನೆಲೆ

600 ವರ್ಷಗಳ ಹಿಂದೆ ಪಡುಮಲೆಯಿಂದ ಬಿಲ್ಲು ವಿದ್ಯೆಯನ್ನು ಕಲಿಯಲು ಕೋಟಿ ಚೆನ್ನಯರು ಪಾಂಗಾಳ ಕಟ್ಟಿಕೆರೆ ಸಮೀಪದ ನಾನಯರ ಗರಡಿಗೆ ಬಂದಿರುವುದು ಜಾನಪದ ಇತಿಹಾಸದಲ್ಲಿ ಉಲ್ಲೇಖವಿದೆ. ಕೋಟಿ ಚೆನ್ನಯ್ಯರು ಪ್ರಾಯ ಪ್ರಬುದ್ಧರಾದಾಗ ತಮ್ಮ ಮಾವ ಸಾಯನ ಬೈದ್ಯರಲ್ಲಿ ಬಿಲ್ಲು ವಿದ್ಯೆಯನ್ನು ಕಲಿಯಲು ಯಾವ ಗರಡಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದಾಗಿ ಪ್ರಶ್ನಿಸಿದರು. ಈ ವೇಳೆ ಸಾಯನ ಬೈದ್ಯರು ತೆಂಕಣದಲ್ಲಿ ಪುತ್ತೂರು ತಾಲೂಕಿನ ಪೇರ್ ಪೆರ್ಮುಂಡೆ ಗರಡಿಯಿದೆ. ಬಡಗಿನಲ್ಲಿ ಉಡುಪಿ ತಾಲೂಕಿನ ಪಾಂಗಾಳ ನಾನಯರ ಗರಡಿಯಿದೆ ಎಂಬುದಾಗಿ ಮಾಹಿತಿ ನೀಡಿದ್ದರು. ಅಂತಿಮವಾಗಿ ಕೋಟಿ ಚೆನ್ನಯರು ಪಾಂಗಾಳ ನಾನಯರ ಗರಡಿ ಆಯ್ಕೆ ಮಾಡಿ ಇಲ್ಲಿಯೇ 12 ವರ್ಷಗಳ ಕಾಲ ಗುರು ಬಲಿಪ ನಾನಯ ಮತ್ತು ಪಿಲಿಪ ನಾನಯರಲ್ಲಿ ಬಿಲ್ಲು ವಿದ್ಯೆ, ಮಲ್ಲ ವಿದ್ಯೆ ಕಲಿತು ಈ ಕಟ್ಟಿಕೆರೆಯಲ್ಲಿ ಜಲಕ್ರೀಡೆ ಆಡುತ್ತಿದ್ದುದು ಇಂದಿಗೂ ಒಂದು ಇತಿಹಾಸ. ಈ ಕಟ್ಟಿಕೆರೆಯಲ್ಲಿ ಅನೇಕ ಮಲ್ಲ ಜಟ್ಟಿಗಳು ಈಜಾಟ ನಡೆಸಿದ್ದರಿಂದ 'ಜಟ್ಟಿಕೆರೆ' ಎಂಬ ಹೆಸರೂ ಸೇರಿಕೊಂಡಿದೆ.

> **ಐತಿಹಾಸಿಕ ಆಸ್ತಿ ಉಳಿಸಿಕೊಳ್ಳುವ ಪ್ರಯತ್ನ**
>
> ಪುರಾತನ ಹಾಗೂ ಜನಪದ ಇತಿಹಾಸ ಹೊಂದಿರುವ ಮತ್ತು ವೀರ ಪುರುಷರಾದ ಕೋಟಿ ಚೆನ್ನಯರು ಸಾಧಕ ವಿದ್ಯೆಗಳನ್ನು ಕಲಿತಂತಹ ಪವಿತ್ರವಾದ ಕಟ್ಟಿಕೆರೆ ಆಧುನಿಕವಾಗಿ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ. ಸಣ್ಣ ನೀರಾವರಿ ಅಭಿವೃದ್ಧಿಗೊಳಿಸುವ ಮೂಲಕ ಪುರಾತನ ಕಾಲದ ಐತಿಹಾಸಿಕ ಆಸ್ತಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ.
>
> ● ಸುರೇಶ್ ಶೆಟ್ಟಿ ಗುರ್ಮೆ, ಕಾಪು ಶಾಸಕ

ಕಾಯಕಲ್ಪಕ್ಕೆ ಸ್ಥಳೀಯರ ಆಗ್ರಹ

2000–2001ರ ಅವಧಿಯಲ್ಲಿ ಸ್ಥಳೀಯ ಸಂಘಟನೆಗಳು ನಾಗರಿಕರ ಸಹಭಾಗಿತ್ವದಲ್ಲಿ ಕೆರೆಯ ಹೂಳೆತ್ತುವ ಕಾರ್ಯ ನಡೆದಿತ್ತು. ಇದೇ ಕೆರೆಯಲ್ಲಿ ತಾಲೂಕು ಮಟ್ಟದ ಈಜು ಸ್ಪರ್ಧೆಯೂ ನಡೆದಿತ್ತು. ಐತಿಹಾಸಿಕ ನಾನಯರ ಗರಡಿ ಇತ್ತೀಚೆಗೆ ಸಂಪೂರ್ಣವಾಗಿ ಪುನರ್ ನವೀಕರಣಗೊಂಡು ಭವ್ಯವಾಗಿ ಕಂಗೊಳಿಸುತ್ತಿದೆ. ಈ ಗರಡಿಗೆ ಸಂಬಂಧಪಟ್ಟ ಕಟ್ಟಿಕೆರೆಗೆ ಕಾಯಕಲ್ಪ ದೊರೆಯಬೇಕು ಎಂಬುದು ನಾನಯರ ಗರಡಿಗೆ ಸಂಬಂಧ ಪಟ್ಟವರ ಮತ್ತು ಗ್ರಾಮಸ್ಥರ ಆಗ್ರಹ ಹಾಗೂ ಮಹತ್ವಾಕಾಂಕ್ಷೆಯೂ ಆಗಿತ್ತು. ಈ ಕಟ್ಟಿಕೆರೆಯು ಕಟಪಾಡಿ ಇತಿಹಾಸ ಪ್ರಸಿದ್ಧ ಕಂಬಳ ನಡೆಯುವ ಕಟಪಾಡಿ ಬೀಡು ಮನೆತನ ಹಾಗೂ ಮೂಡಬೆಟ್ಟು ಮಹಾಲಿಂಗೇಶ್ವರ ದೇವಸ್ಥಾನಕ್ಕೂ ಸಂಬಂಧಪಟ್ಟಿರುತ್ತದೆ. 30 ಅಡಿಗಳಿಗೂ ಅಧಿಕ ಆಳವಿರುವ ವಿಶಾಲವಾದ ಈ ಕೆರೆಯಲ್ಲಿ ಬೇಸಿಗೆಯಲ್ಲಿ ನೀರಿನ ಪ್ರಮಾಣ ಕಡಿಮೆಯಿದ್ದರೂ ಮಳೆಗಾಲದಲ್ಲಿ ನೀರು ತುಂಬಿ ತುಳುಕುತ್ತಿದೆ.

ನೂರಾರು ವರ್ಷಗಳಷ್ಟು ಹಳೆಯ ರಾಜವಂಶಸ್ಥರ ಕಾಲದಲ್ಲಿ ಕೇರಳ ಮಾದರಿ ಕೆಂಪುಕಲ್ಲಿನ ಆವರಣ ಗೋಡೆಯೊಂದಿಗೆ ನಿರ್ಮಾಣಗೊಂಡಿದ್ದ ಈ ಕಟ್ಟಿಕೆರೆ ಅದೇ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಕಾಣದ ಪಳೆಯುಳಿಕೆಯಾಗಿ ಉಳಿದುಕೊಂಡಿತ್ತು. ಮತ್ತೆ ಈಗ ಕೆರೆಗೆ ಕಾಯಕಲ್ಪ ದೊರೆತಿರುವುದು ಈ ಭಾಗದ ನಾಗರಿಕರಿಗೆ ಸಂತಸ ತಂದಿದೆ.

ವಾರಾಹಿ ಯೋಜನೆ ಸಮರ್ಪಕ ಜಾರಿಗೆ 2 ದಿನ ಜನಜಾಗೃತಿ: ಗೋಪಾಲ ಪೂಜಾರಿ

ಕುಂದಾಪುರ: ವಾರಾಹಿ ಬಲದಂಡೆ ಯೋಜನೆ ತ್ವರಿತ ಅನುಷ್ಠಾನ ಮತ್ತು ಸಿದ್ಧಾಪುರ ಹಾಗೂ ಸೌಕೂರು ಏತ ನೀರಾವರಿ ಯೋಜನೆಯಲ್ಲಿ ಬಿಟ್ಟು ಹೋದ ಕೃಷಿ ಭೂಮಿಗೆ ಮತ್ತು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವಂತೆ ರೈತರ ಪರವಾಗಿ ಸರ್ಕಾರದ ಗಮನ ಸೆಳೆಯಲು ಮತ್ತು ಜನಜಾಗೃತಿ ಮೂಡಿಸಲು ವಂಡ್ಸೆ ಮತ್ತು ಬೈಂದೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಂಡ್ಲೂರಿನಿಂದ ಸಿದ್ಧಾಪುರದವರೆಗೆ ಮಾ.3 ಮತ್ತು 4ರಂದು ಎರಡು ದಿನಗಳ ಕಾಲ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಹೇಳಿದ್ದಾರೆ.

ಅವರು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ, ವಾರಾಹಿ ನೀರಾವರಿ ಮೂಲ ಯೋಜನೆ ದಾರಿ ತಪ್ಪುತ್ತಿದೆ. ಮೂಲ ಯೋಜನೆಯಂತೆ ವಾರಾಹಿ ಯೋಜನೆ ಅನುಷ್ಠಾನಗೊಳ್ಳಬೇಕು. ಆ ಬಳಿಕ ಉಪ ಯೋಜನೆಗಳ ಬಗ್ಗೆ ಗಮನ ಹರಿಸಬೇಕು. 47 ವರ್ಷಗಳಿಂದ ವಾರಾಹಿ ಬಲದಂಡೆ ಪೂರ್ಣಗೊಂಡಿಲ್ಲ, ಸಿದ್ಧಾಪುರ ಏತ ನೀರಾವರಿ ಯೋಜನೆ ವಿರೋಧ ವ್ಯಕ್ತಪಡಿಸಲಾಗುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದ್ದು, ಯಾವುದೇ ಕಾರಣಕ್ಕೂ ಸಿದ್ಧಾಪುರ ಏತ ನೀರಾವರಿ ಯೋಜನೆ ರದ್ದು ಮಾಡಲು ಬಿಡುದಿಲ್ಲ, ಸಿದ್ಧಾಪುರ ಮತ್ತು ಸೌಕೂರು ಏತ ನೀರಾವರಿ ಯೋಜನೆಯಲ್ಲಿ ಬಿಟ್ಟು ಹೋದ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಬೇಕು. ಜಲಜೀವನ್ ಮಿಷನ್ ಯೋಜನೆಯಡಿ ನೀರು ನೀಡಲು ಪೈಪ್‌ಲೈನ್ ಮಾತ್ರ ಅಳವಡಿಸಲಾಗಿದ್ದು, ಇದಕ್ಕೆ ವಾರಾಹಿ ನೀರು ನೀಡಲು ಗಮನಹರಿಸಬೇಕು ಎಂದು ಆಗ್ರಹಿಸಿದರು.

ಉಡುಪಿ ಜಿಲ್ಲೆಯಲ್ಲಿ ಹರಿಯುವ ವಾರಾಹಿ ಅಲ್ಲದೆ ಇತರ ನದಿಗಳ ನೀರನ್ನು ಉಪಯೋಗಿಸಿಕೊಂಡು ಜಿಲ್ಲೆಯ ಜನರ ನೀರಿನ ಅವಶ್ಯಕತೆ ಪೂರೈಸಲು ಅಗತ್ಯ ಯೋಜನೆ ರೂಪಿಸಲು ಕ್ರಮ ಕೈಗೊಳ್ಳುವಂತೆ, ಮೂಲ ಯೋಜನೆಯಲ್ಲಿ ಪ್ರಾಸ್ತಾವಿಕವಾಗಿರುವ ಪ್ರದೇಶಗಳಿಗೆ ಮೊದಲು ನೀರು ನೀಡಬೇಕು. ವಿವಿಧ ಗ್ರಾಮಗಳಿಗೆ ನೀರು ನೀಡುವ ಸಿದ್ಧಾಪುರ ಏತ ನೀರಾವರಿ ಯೋಜನೆಯ ಮೂಲ ಉದ್ದೇಶ ಯಾವುದೇ ಕಾರಣಕ್ಕೂ ಬದಲಾಗಬಾರದು ಎಂದು ಅವರು ಒತ್ತಾಯಿಸಿದರು.

ವಾರಾಹಿ ಯೋಜನೆ ಸಂಬಂಧ ಸರಕಾರ ತಜ್ಞರ ಸಮಿತಿ ರಚಿಸಿದ್ದು, ಸಮಿತಿ ಈಗಾಗಲೇ ಸ್ಥಳಕ್ಕೆ ಭೇಟಿ ನೀಡಿ ವರದಿ ಸಿದ್ಧಪಡಿಸುತ್ತಿದೆ. ತಜ್ಞರ ಸಮಿತಿ ನೀಡುವ ವರದಿಗೆ ತಲೆಬಾಗುತ್ತೇವೆ. ವಾರಾಹಿ ನದಿ ಉಳಿಸಿ ಕಮಿಟಿ ಮೂಲಕ ರೈತರ ಪರವಾಗಿ ಹೋರಾಟಕ್ಕೆ ಚಾಲನೆ ನೀಡಲಾಗಿದ್ದು ಸಮಿತಿಯ ಪ್ರಮುಖರೊಂದಿಗೆ ಸಿಎಂ ಹಾಗೂ ಡಿಸಿಎಂ ಅವರನ್ನು ಭೇಟಿ ಮಾಡಿ ಮೂಲ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಲು ನಿರ್ಧರಿಸಿದ್ದೇವೆ ಎಂದು ಅವರು ಹೇಳಿದರು.

ಜಿಲ್ಲಾ ಕಾಂಗ್ರೆಸ್ ವಕ್ತಾರ ವಿಕಾಸ್ ಹೆಗ್ಡೆ, ಪ್ರದೀಪ ಕುಮಾರ್ ಶೆಟ್ಟಿ ಗುಡಿಬೆಟ್ಟು, ವಂಡ್ಸೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಪೂಜಾರಿ, ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸತೀಶ್ ಕೊಠಾರಿ ಉಪಸ್ಥಿತರಿದ್ದರು.

ಧಾರ್ಮಿಕತೆ ಜೊತೆಗೆ ಸಂಸ್ಕೃತಿ ಸಂಸ್ಕಾರ ಉಳಿಸುವ ಕಾರ್ಯವಾಗಲಿ: ಕೋಟ್ಯಾನ್



ಮುಲ್ಕಿ: ದೈವ ದೇವಸ್ಥಾನಗಳ ಅಭಿವೃದ್ಧಿಯಿಂದ ಗ್ರಾಮದ ಅಭಿವೃದ್ಧಿ ಸಾಧ್ಯ. ಯುವ ಜನಾಂಗ ಶಿಕ್ಷಣ ಜೊತೆಗೆ ಧಾರ್ಮಿಕತೆ ಮೈಗೂಡಿಸಿಕೊಳ್ಳಬೇಕಾಗಿದೆ ಎಂದು ಕದ್ರಿ ಮಂಜುನಾಥ ದೇವಸ್ಥಾನದ ಪ್ರಧಾನ ಅರ್ಚಕ ಕೃಷ್ಣ ಅಡಿಗ ಹೇಳಿದರು

ಅವರು ಮಾನಾಡಿಗೋಳಿ ದೈವರಾಜ ಶ್ರೀ ಕೋರ್ದಬ್ಬು ದೈವಸ್ಥಾನದ ಕಲಶಾಭಿಷೇಕದ ಪ್ರಯುಕ್ತ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಧಾರ್ಮಿಕತೆ ಜೊತೆಗೆ ಸಂಸ್ಕೃತಿ ಸಂಸ್ಕಾರ ಉಳಿಸಿ ಬೆಳೆಸುವ ಕಾರ್ಯವಾಗಲಿ ಎಂದರು. ಕಾರ್ಯಕ್ರಮದಲ್ಲಿ ಭೋಜ ಗುತ್ತಿನಾರ್ ಮಾನಾಡಿ, ಸಮಿತಿಯ ಅಧ್ಯಕ್ಷ ದಿನೇಶ್ ಹೆಗ್ಡೆ, ಕಾರ್ಯಾಧ್ಯಕ್ಷ ಚಂದ್ರಶೇಖರ ಟಿ. ಅವರನ್ನು ಸನ್ಮಾನಿಸಲಾಯಿತು. ಸಹಕಾರ ನೀಡಿದ ದಾನಿಗಳನ್ನು ಗೌರವಿಸಲಾಯಿತು.

ಮಾನಂಪಾಡಿ ಕೊರ್ದಬ್ಬು ದೈವಸ್ಥಾನದ ಗಡಿಕಾರ ವಿಶ್ವನಾಥ ಬಿ., ಗಡಿಕಾರರು ಮತ್ತು ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಭೋಜ ಗುತ್ತಿನಾರ್, ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ನ.ಪಂ. ಮಾಜಿ ಅಧ್ಯಕ್ಷ ಸತೀಶ್ ಅಂಚನ್, ಸುಭಾಷ್ ಶೆಟ್ಟಿ ವಿಜಯ ರೈತ ಸೇವಾ ಸಹಕಾರಿ ಸಂಘದ ಅಧ್ಯಕ್ಷ ರಂಗನಾಥ ಶೆಟ್ಟಿ, ರಂಗಕರ್ಮಿ ಚಂದ್ರ ಶೇಖರ ಸುವರ್ಣ, ಜೀರ್ಣೋದ್ಧಾರ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಎಂ., ಸಮಿತಿಯ ಪ್ರಧಾನ ಕಾರ್ಯದರ್ಶಿ ಸಚ್ಚಿದಾನಂದ, ಕಾರ್ಯದರ್ಶಿ ರಾಮಚಂದ್ರ ಟಿ. ಕೋಟ್ಯಾನ್, ಲಯನ್ಸ್ ಕ್ಲಬ್ ಅಧ್ಯಕ್ಷ ಹರ್ಷರಾಜ ಶೆಟ್ಟಿ, ಉಮೇಶ್ ಮಾನಂಪಾಡಿ, ದಿನೇಶ್ ಶೆಟ್ಟಿ, ರವೀಂದ್ರ, ಗಣೇಶ್ ಮತ್ತಿತರರು ಇದ್ದರು. ಸಮಿತಿಯ ಅಧ್ಯಕ್ಷ ದಿನೇಶ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ನವೀನ್ ಶೆಟ್ಟಿ ಪೆರ್ಮಾರ್ ಗುತ್ತು ಸ್ವಾಗತಿಸಿ, ಬಬಿತಾ ಪ್ರಕಾಶ್ ಧನ್ಯವಾದ ಸಮರ್ಪಿಸಿದರು ಕೆ.ಕೆ. ಪೇಜಾವರ ಮತ್ತು ರವೀಂದ್ರ ಕೆರೆಕಾಡು, ವಿಶ್ವನಾಥ ಶಣೈ ನಿರೂಪಿಸಿದರು.

ಉಡುಪಿ: ಜನಪದ ದೇಶೀಯ ಕಲೆಗಳ ಕಾರ್ಯಾಗಾರ ಉದ್ಘಾಟನೆ



ಉಡುಪಿ: ಭಾವನಾ ಫೌಂಡೇಶನ್ ಹಾವಂಜೆ ಹಾಗೂ ಭಾಸ ಗ್ಯಾಲರಿ ಮತ್ತು ಸ್ಟುಡಿಯೋ, ಉಡುಪಿಯ ವೆಂಟನಾ ಫೌಂಡೇಶನ್‌ನ ಸಹಯೋಗದಲ್ಲಿ ಆಯೋಜಿಸುತ್ತಿರುವ ಜನಪದ ದೇಶೀಯ ಕಲೆಗಳ ಕಾರ್ಯಾಗಾರವನ್ನು ಫೌಂಡೇಶನ್‌ನ ನಿರ್ದೇಶಕಿ ಶಿಲ್ಪಾ ಭಟ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಕಲೆ, ಸಂಸ್ಕೃತಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ವಿವಿಧ ನೂತನ ಪ್ರಯೋಗ ಹಾಗೂ ಕಾರ್ಯಕ್ರಮಗಳಿಗೆ ವೆಂಟನಾ ಫೌಂಡೇಶನ್ ಸಹಕಾರ ನೀಡುತ್ತದೆ. ದೇಶೀಯ ಕಲೆಗಳು ಉಳಿಯುವಂತಾಗಲು ಈ ತೆರನಾದ ಕಾರ್ಯಾಗಾರಗಳು ಬಹು ಸಹಕಾರಿ. ಇದೊಂದು ಉಡುಪಿಯಂತಹ ಪುಟ್ಟ ಪಟ್ಟಣಕ್ಕೆ ರಾಷ್ಟ್ರಮಟ್ಟದಲ್ಲಿ ಮಾದರಿ ಯಾಗಬಹುದಾದ ಕಾರ್ಯಕ್ರಮ. ಎಂಬುದಾಗಿ ಅಭಿಪ್ರಾಯಪಿತ್ತರು.

ಇನ್ನೋರ್ವ ಅತಿಥಿ ಕದಿಕೆ ಟ್ರಸ್ಟ್‌ನ ಸ್ಥಾಪಕ ನಿರ್ದೇಶಕ ಮಮತಾ ರೈ, ಬಟ್ಟೆಯ ಮೇಲಿನ ಮಾತಾ ನಿ ಪಚೇಡಿ ಶೋಷಣೆಗೆ ಒಳಪಟ್ಟ ಒಂದು ಸಮುದಾಯದ ನೋವೇ ಕಲೆಯಾಗಿ ಮಾರ್ಪಾಟಾದ ಹಿನ್ನೆಲೆಯುಳ್ಳದ್ದು. ನಮ್ಮಲ್ಲಿನ ವಿನ್ಯಾಸಗಾರಿಕೆಯ ಪದವಿ ಪಡೆಯುತ್ತಿರುವ ಯುವ ಸಮುದಾಯಕ್ಕೆ ಈ ಭಾರತೀಯ ಕಲೆಗಾರಿಕೆಯ ತಾಂತ್ರಿಕ ಅಂಶಗಳು ವಿನೂತನ ಪ್ರಯೋಗಕ್ಕೆ ಎಡೆಮಾಡಿಕೊಡಬಲ್ಲುದು. ಈ ತೆರನಾದ ಕಾರ್ಯಕ್ರಮ ಇನ್ನಷ್ಟು ನಡೆಯಲಿ ಎಂಬುದಾಗಿ ಹಾರೈಸಿದರು. ಬಡಗುಪೇಟೆ ಗ್ಯಾಲರಿಯ ಸಂತೋಷ್ ಪೈ ಉಪಸ್ಥಿತರಿದ್ದರು. ಕಾರ್ಯಾಗಾರದ ಸಂಯೋಜಕ ಜನಾರ್ದನ ಹಾವಂಜೆ ಕಾರ್ಯಕ್ರಮ ನಿರ್ವಹಿಸಿದರು.

ಭಾನುವಾರ ಮಾತಾ ನಿ ಪಚೇಡಿ ಕಾರ್ಯಾಗಾರಗಳು ಬಡಗುಪೇಟೆಯ ಗ್ಯಾಲರಿಯಲ್ಲಿ ನಡೆಯಲಿದೆ.

> **ದ್ರಾವಣ ತಯಾರಿಯೇ ವಿಶೇಷವಾಗಿದೆ!**
>
> ಬಟ್ಟೆಗೆ ಅಳಲೇಕಾರಿಯ ರಸವನ್ನು ಸವರಿ, ಬೆಲ್ಲ ಮತ್ತು ಕಬ್ಬಿಣದ ತುಕ್ಕನ್ನು ಕೊಳೆಸಿ ತಯಾರಿಸಿದ ದ್ರಾವಣದಿಂದ ಕಪ್ಪು ವರ್ಣವನ್ನು ಬರುವಂತೆ ಮಾಡಿಕೊಂಡು ಈ ಕಲಂಕಾರಿ ಕಲೆಯ ಚಿತ್ತಾರಗಳು ಬಟ್ಟೆಯ ಮೇಲೆಲ್ಲ ಹರಡಿಕೊಳ್ಳುತ್ತದೆ. ಈ ಕಲೆಯನ್ನು ಸುಮಾರು ನಾಲ್ಕು ದಶಕಗಳಿಗಿಂತಲೂ ಮಿಕ್ಕಿ ರಚಿಸುತ್ತಿರುವ ಜಗದೀಶ್ ಚಿತ್ತಾರವರು ಈ ಸರಣಿ ಕಲಾ ಕಾರ್ಯಾಗಾರದ ಭಾಗವಾಗಿ ಬಟ್ಟೆಯ ಮೇಲೆ ರಚಿಸಲ್ಪಡುವ ಗುಜರಾತ್‌ನ ಕಲಂಕಾರಿ ಹಾಗೂ ಮಾತಾ ನಿ ಪಚೇಡಿ ಈ ಬಾರಿ ಆಸಕ್ತರಿಗೆ ಕಲಿಸಿಕೊಡುತ್ತಿದ್ದಾರೆ.

ಪಡು ಭಟ್ರಕೋಡಿ ದೇವಳದಲ್ಲಿ ಚಂಡಿಕಾಯಾಗ: ಆಮಂತ್ರಣ ಬಿಡುಗಡೆ



ಮಂಗಳೂರು: ಪಡು ಭಟ್ರಕೋಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆಯಲಿರುವ ಚಂಡಿಕಾ ಯಾಗದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಭಾನುವಾರ ನಡೆಯಿತು.

ಶ್ರೀ ಅಮೃತೇಶ್ವರ ದೇವಸ್ಥಾನದ ಅರ್ಚಕ ಬಾಲಕೃಷ್ಣ ಭಟ್, ದೇವಸ್ಥಾನದ ಮೊಕ್ತೇಸರ ರಾದ ತಾರಾನಾಥ ಭಟ್, ಕುಂಞಣ್ಣ ಶೆಟ್ಟಿ ಕೋರೆಟ್ಟುಗುತ್ತು, ನೀರುಮಾರ್ಗ ಗ್ರಾಮ ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಶ್ರೀಧರ್ ಚಿಕ್ಕಬೆಟ್ಟು, ಗ್ರಾಮ ಪಂಚಾಯತ್ ನಿಕಟಪೂರ್ವ ಸದಸ್ಯರಾದ ಹರೀಶ್ ಕುಮಾರ್ ಹೊಸಮನೆ, ಗೋಕುಲ್ ದಾಸ್ ಶೆಟ್ಟಿ ಪಡುಪಳ್ಳಿ, ಅಶ್ವಿನಿ ಶೆಟ್ಟಿ ಬೊಂಡಂತಿಲ, ದೀಪಕ್ ಶೆಟ್ಟಿ ಲಿಂಗಮಾರುಗುತ್ತು, ನವೀನ್ ಚೌಟ ಪೆಜತಬೆಟ್ಟು, ಸುರೇಶ್ ಶೆಟ್ಟಿ ಕಾಪೆಟ್ಟುಗುತ್ತು, ಜಗನ್ನಾಥ್ ಮಾರ್ತ ಉಳಬೈಲು, ದುರ್ಗಾಪರಮೇಶ್ವರಿ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಕಿಶೋರ್ ಕುಮಾರ್ ಉಗ್ಗಕೋಡಿ, ಕೋಶಾಽಕಾರಿ ಸಚಿನ್ ಹೆಗ್ಡೆ ಪಡು ಹೊಸಮನೆ, ಭಜನಾ ಸಮಿತಿ ಅಧ್ಯಕ್ಷ ಚಂದ್ರಹಾಸ ಚಿಲ್ಪಾಡಿ, ಮಹಿಳಾ ಸಮಿತಿ ಅಧ್ಯಕ್ಷೆ ಶಶಿಕಲ ಬೊಂಡಂತಿಲ, ಸಲಹಾ ಸಮಿತಿಯ ಸದಸ್ಯ ಗೋಪಾಲಕೃಷ್ಣಭಂಡಾರಿ, ಸನತ್ ಕುಮಾರ್ ರೈ, ದುರ್ಗಾಪರಮೇಶ್ವರಿ ಸೇವಾ ಸಮಿತಿ ಸಂಚಾಲಕ ಬಾಲಕೃಷ್ಣ, ಸಹ ಸಂಚಾಲಕ ಸೂರಜ್ ಆಳ್ವ ಪಡು ಹಾಗೂ ಊರಿನ ಪ್ರಮುಖರು ಉಪಸ್ಥಿತರಿದ್ದರು.

ಗೋಮಾತೆ, ರಾಷ್ಟ್ರ ರಕ್ಷಣೆಗೆ ಸಮಯ ಮೀಸಲಿಡಿ: ಪ್ರಸಾದ್ ಕುಮಾರ್ ರೈ



ಬಂಟ್ವಾಳ: ನಾವು ಸಣ್ಣತನದ ಟೀಕೆಗಳನ್ನು ಬಿಟ್ಟು ಸಂಘಟಿತರಾಗದಿದ್ದರೆ ಮುಂದಿನ ದಿನದಲ್ಲಿ ದೇಶದ ಅಸ್ತಿತ್ವಕ್ಕೆ ಧಕ್ಕೆ ಬರಲಿದೆ. ಭಾರತವು ವಿಶ್ವಗುರುವಾಗಿ ಉಳಿದರೆ ಮಾತ್ರ ಜಗತ್ತಿಗೆ ಉಳಿಗಾಲವಿದ್ದು,ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ 'ವಂದೇ ಮಾತರಂ' ಮಂತ್ರದೊಂದಿಗೆ ರಾಷ್ಟ್ರಕ್ಕಾಗಿ ದಿನಕ್ಕೆ ಒಂದು ಗಂಟೆಯನ್ನಾದರೂ ಮೀಸಲಿಡಬೇಕು ಮತ್ತು ಗೋಮಾತೆಯ ರಕ್ಷಣೆಗೆ ಪಣತೊಡಬೇಕು ಎಂದು ವಿ.ಹಿಂ.ಪ. ಮುಖಂಡ,ಬಿ.ಸಿ.ರೋಡಿನ ಖ್ಯಾತ ಯುವ ನ್ಯಾಯವಾದಿ ಪ್ರಸಾದ್ ಕುಮಾರ್ ರೈ ಅವರು ಕರೆ ನೀಡಿದ್ದಾರೆ.

ಬಂಟ್ವಾಳ ತಾಲೂಕಿನ ಅಲ್ಲಿಪಾದೆ ಶ್ರೀರಾಮ ಭಜನಾ ಮಂದಿರದಲ್ಲಿ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಆಯೋಜಿಸಲಾದ 'ಹಿಂದೂ ರಾಷ್ಟ್ರ ಜಾಗೃತಿ ಸಭೆ'ಯಲ್ಲಿ ಅವರು ದಿಕ್ಸೂಚಿ ಭಾಷಣಗೈದರು.

ಜನಜಾಗೃತಿ ಸಮಿತಿಯ ಸಮನ್ವಯಕ ವಿಜಯಕುಮಾರ್ ಮಾತನಾಡಿ, ಲವ್ ಜಿಹಾದ್, ಮತಾಂತರ, ವಕ್ಫ್ ಕಾಯ್ದೆ ಮತ್ತು ದೇವಸ್ಥಾನಗಳ ಸರ್ಕಾರೀಕರಣದಂತಹ ಆಪತ್ತುಗಳಿಂದ ಹಿಂದೂ ಸಮಾಜವನ್ನು ರಕ್ಷಿಸಲು ಭಾರತವನ್ನು ಸಂವಿಧಾನಬದ್ಧ 'ಹಿಂದೂ ರಾಷ್ಟ್ರ'ವನ್ನಾಗಿ ಘೋಷಿಸುವುದೇ ಏಕೈಕ ಪರ್ಯಾಯವಾಗಿದೆ ಎಂದರು.

ಹಿಂದೂ ರಾಷ್ಟ್ರ ಸತ್ವಗುಣಿ ಸಾತ್ವಿಕ ಜನರ ರಾಷ್ಟ್ರವಾಗಿದೆ. ಇದನ್ನು ವಿರೋಧಿಸುವುದು ಮತಾಂಧರ ನಿತ್ಯದ ಕೆಲಸವಾಗಿದೆ ಎಂದ ಅವರು ಎಂದರು. ಕಳೆದ 20 ವರ್ಷಗಳಿಂದ ಸಮಿತಿಯು ಜನರಲ್ಲಿ ಧರ್ಮಜಾಗೃತಿ ಮೂಡಿಸುವಲ್ಲಿ ಶ್ರಮಿಸುತ್ತಿದೆ ಎಂದರು.

ಸನಾತನ ಸಂಸ್ಥೆಯ ಗಣಪತಿ ಹೆಗಡೆ ಮಾತನಾಡಿ, ನಮ್ಮ ಪ್ರತಿಯೊಂದು ಕೃತಿ ಮತ್ತು ಆಚರಣೆಗಳಲ್ಲಿ ಹಿಂದುತ್ವ ಪ್ರತಿಫಲಿಸಬೇಕು,ಪಾಶ್ಚಾತ್ಯ ಅಂಧಾನುಕರಣೆ ಬಿಟ್ಟು ಶಾಸ್ತ್ರಬದ್ಧವಾಗಿ ಧರ್ಮಾಚರಣೆ ಮಾಡಿದಾಗ ಮಾತ್ರ ಆತ್ಮಬಲ ವೃದ್ಧಿಯಾಗಿ ಸಂಸ್ಕೃತಿ ಉಳಿಯಲು ಸಾಧ್ಯ ಎಂದರು.

ಸ್ಥಳೀಯ ಪ್ರಮುಖರು, ಧಾರ್ಮಿಕ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.



ಬಂಟ್ವಾಳ ತಾಲೂಕಿನ ಶ್ರೀಕ್ಷೇತ್ರ ಏರಮಲೆಯ ವಾರ್ಷಿಕ ಜಾತ್ರೆ ಪ್ರಯುಕ್ತ ಕ್ಷೇತ್ರದಲ್ಲಿ ಬಾಲಾನ್ನ ಭೋಜನ ನಡೆಯಿತು. ಆಡಳಿತ ಸಮಿತಿ ಅಧ್ಯಕ್ಷ ರಾಜ್ ಬಂಟ್ವಾಳ್, ತಂತ್ರಿ ಕೇಶವ ಶಾಂತಿ, ಪ್ರಮುಖರು ಉಪಸ್ಥಿತರಿದ್ದರು.

ಕ್ರೀಡಾ ಜ್ಯೋತಿ ಬೆಳಗಿದ ಕಂಬಳ ಓಟಗಾರ ಅಶ್ವತ್ಥಪುರ ಶ್ರೀನಿವಾಸ ಗೌಡ | ನೂರಾರು ಮಂದಿ ಗಣ್ಯರು ಭಾಗಿ

ಎರ್ಮಾಳು ತೆಂಕ-ಬಡಾ ಜೋಡುಕರೆ ಚೊಚ್ಚಲ ಕಂಬಳಕೂಟಕ್ಕೆ ಅದ್ದೂರಿ ಚಾಲನೆ

ಪಡುಬಿದ್ರಿ: ಎರ್ಮಾಳು ಶ್ರೀ ಜನಾರ್ದನ ಕಂಬಳ ಸಮಿತಿ ವತಿಯಿಂದ ನಮ್ಮ ಕಂಬಳ ಎರ್ಮಾಳು ಕಂಬಳ ಎರ್ಮಾಳು ತೆಂಕ–ಬಡಾ ಜೋಡುಕರೆ ಕಂಬಳಕ್ಕೆ ಅಧ್ಯಕ್ಷ ಎರ್ಮಾಳು ರೋಹಿತ್ ಹೆಗ್ಡೆ ಮುಂದಾಳತ್ವದಲ್ಲಿ ಫೆ.28ಕ್ಕೆ ಚಾಲನೆ ನೀಡಲಾಯಿತು.

ಎರ್ಮಾಳು ಗ್ರಾಮ ದೇವರಾದ ಶ್ರೀ ಜನಾರ್ದನ ದೇವಳದಿಂದ ಮೆರವಣಿಗೆಯ ಮೂಲಕ ತರಲಾದ ಕ್ರೀಡಾ ಜ್ಯೋತಿಯನ್ನು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕಂಬಳ ಓಟಗಾರ ಅಶ್ವತ್ಥಪುರ ಶ್ರೀನಿವಾಸ ಗೌಡ ಕ್ರೀಡಾ ಜ್ಯೋತಿ ಬೆಳಗಿಸಿದರು.

ಎರ್ಮಾಳು ದೇವಳದ ಆಡಳಿತ ಮೊಕ್ತೇಸರ ಅಶೋಕ್‌ರಾಜ್ ಎರ್ಮಾಳು ಬೀಡು ಉಪಸ್ಥಿತಿಯಲ್ಲಿ ನಡೆದ ಕಂಬಳದ ಉದ್ಘಾಟನೆ ಸಮಾರಂಭದಲ್ಲಿ ಎರ್ಮಾಳು ದೇವಳದ ಅನುವಂಶಿಕ ಅರ್ಚಕ ವೇ.



ಮೂ. ಕೃಷ್ಣಮೂರ್ತಿ ಭಟ್, ಅರ್ಚಕರದಾ ವೇ. ಮೂ. ಕೆ.ವಿ ವಿಷ್ಣುಮೂರ್ತಿ ಉಪಾಧ್ಯಾಯ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು. ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ. ಕೆ.ವಿ. ರಾಘವೇಂದ್ರ ಉಪಾಧ್ಯಾಯ, ಮಹಾರಾಷ್ಟ್ರ ಸಂಸದ ಗೋಪಾಲ ಶೆಟ್ಟಿ, ತುಮಕೂರು ಶಾಸಕ ಸುರೇಶ್ ಬಾಬು, ಮುಂಬಯಿ ಉದ್ಯಮಿ ಮುಂಡಪ್ಪ ಪೈಯ್ಯಡೆ, ಮತ್ತಿತರರು ಎರ್ಮಾಳು ಕಂಬಳಕ್ಕೆ ಶುಭವನ್ನು ಹಾರೈಸಿದರು. ಕಾರ್ಯಾಧ್ಯಕ್ಷ ಸೀತಾರಾಮ ಎಲ್. ಶೆಟ್ಟಿ, ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಜಿ. ಶೆಟ್ಟಿ, ಗೌರವ ಪ್ರಧಾನ ಕೋಶಾಧಿಕಾರಿ ಚಂದ್ರಹಾಸ ಎಲ್. ಶೆಟ್ಟಿ ಮುಂಬಯಿ ಸಮಿತಿಯ ಅಧ್ಯಕ್ಷ ಎರ್ಮಾಳು ಹರೀಶ್ ಶೆಟ್ಟಿ, ಗೌರವ ಕಾರ್ಯದರ್ಶಿ ಡಾ.ಚಿಂತನ್ ರೋಹಿತ್ ಹೆಗ್ಡೆ ಎರ್ಮಾಳು, ಅನಿವಾಸಿ ಭಾರತೀಯ ಸಮಿತಿಯ ಅಧ್ಯಕ್ಷ ಕರ್ಣ ಪ್ರಭಾಕರ ಹೆಗ್ಡೆ ಎರ್ಮಾಳು, ಸಂಚಾಲಕ ಜಗಜೀವನ್ ಎನ್. ಚೌಟ ಎರ್ಮಾಳು, ಸ್ವಾಗತ ಸಮಿತಿಯ ಅಧ್ಯಕ್ಷ ಪುಚ್ಚೊಟ್ಟು ಬೀಡು ಬಾಲಚಂದ್ರ ಎಲ್.ಶೆಟ್ಟಿ, ಪ್ರಚಾರ ಸಮಿತಿಯ ಅಧ್ಯಕ್ಷ ಶಿವಪ್ರಸಾದ್ ಶೆಟ್ಟಿ ಎಲ್ಲದಡಿ, ಕಾರ್ಯದರ್ಶಿ ಸಂತೋಷ್ ಜೆ.ಶೆಟ್ಟಿ ಬರ್ಪಾಣಿ ಎರ್ಮಾಳು, ಮುಂಬಯಿ ಉದ್ಯಮಿಗಳಾದ ಪದ್ಮನಾಭ ಪಯ್ಯಡೆ, ಸತೀಶ್ ಶೆಟ್ಟಿ ಪೂಲ, ನಾರಾಯಣ ಶೆಟ್ಟಿ ನೈಮಾಡಿ, ವೈ. ಪ್ರಫುಲ್ಲ ಶೆಟ್ಟಿ, ರಾಜ್ಯ ಕಂಬಳ ಅಸೋಸಿಯೇಶನ್ ಅಧ್ಯಕ್ಷ ಡಾ. ಐಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳಪು, ಹರಿಪ್ರಸಾದ್ ರೈ, ಉಚ್ಚಿಲ ಚರ್ಚ್‌ನ ಜೋಸೆಫ್ ಫೆರ್ನಾಂಡಿಸ್, ಎರ್ಮಾಳು ಜಾಮೀಯಾ ಮಸೀದಿಯ ಶರೀಫ್ ಫೈಝಿ ಅಲ್ ಮಹಬರಿ, ಬಡಾ ಗ್ರಾ. ಪಂ. ಮಾಜಿ ಅಧ್ಯಕ್ಷ ಶಿವಕುಮಾರ್ ಮೆಂಡನ್, ತೆಂಕ ಗ್ರಾ. ಪಂ. ಮಾಜಿ ಅಧ್ಯಕ್ಷೆ ಸುರೇಖಾ ಪೂಜಾರಿ, ಜಗಜ್ಜೀವನ್ ಚೌಟ, ದೀಪಕ್ ಎರ್ಮಾಳು, ಎರ್ಮಾಳು ಶೀಲಾ ಕೆ. ಶೆಟ್ಟಿ ಮತ್ತಿತರರು ಇದ್ದರು.

ಮುಂಜಾನೆ ಕಂಬಳ ಕರೆಯಲ್ಲಿ ಪಡುಬಿದ್ರಿ ಮುರಳೀಧರ ಆಚಾರ್ಯ ಸಹಕಾರದಲ್ಲಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಬೆಳ್ಮಣ್ ಇಲ್ಲಿನ ಆಡಳಿತ ಮೊಕ್ತೇಸರ ಜ್ಯೋತಿಷ್ಯ ವಿದ್ವಾನ್ ವಿಘ್ನೇಶ ಭಟ್ ಗಣಯಾಗ ನಡೆಸಿದರು. ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಆಡಳಿತ ಮೊಕ್ತೇಸರ ಅಶೋಕರಾಜ ಎರ್ಮಾಳುಬೀಡು ಅವರು ಕಂಬಳ ಧ್ವಜಾರೋಹಣ ನಡೆಸಿದರು.

ಸಿಬ್ಬಂದಿಗಳ ಕೊರತೆಯಿಂದ ಸ್ಮಾರ್ಟ್ ಗ್ರಾಮಗಳಲ್ಲೂ ಕಡತಗಳಿಗಿಲ್ಲ ಪರಿಹಾರ
ಬಾಕಿ ಇರುವ ಭೂ ಪರಿವರ್ತನೆ ಅರ್ಜಿ ವಿಳಂಬದಿಂದ ಸಮಸ್ಯೆ

ಕಾಸರಗೋಡು: ರಾಜ್ಯದ ಗ್ರಾಮ ಕಚೇರಿಗಳು ಡಿಜಿಟಲ್ 'ಸ್ಮಾರ್ಟ್' ಆಗಿದ್ದರೂ ಬಾಕಿಯಿರುವ ಭೂ ಪರಿವರ್ತನೆ ಅರ್ಜಿಗಳಿಂದ ಜನರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ರಾಜ್ಯದಾದ್ಯಂತ ಕಂದಾಯ ಕಚೇರಿಗಳಲ್ಲಿ ಸುಮಾರು ಮೂರು ಲಕ್ಷ ಅರ್ಜಿಗಳು ಪ್ರಸ್ತುತ ಬಾಕಿ ಇವೆ. ಕಂದಾಯ ಇಲಾಖೆಯಲ್ಲಿನ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರಕಾರ ಸೂಕ್ತ ಕ್ರಮ ಕೈಗೊಳ್ಳದಿರುವುದೇ ಈ ಬಿಕ್ಕಟ್ಟಿಗೆ ಪ್ರಮುಖ ಕಾರಣವಾಗಿದೆ.

ಜಿಲ್ಲೆಯಲ್ಲಿ 10000 ಅರ್ಜಿಗಳು ಬಾಕಿ

ಸರಕಾರವು ಕಡತಗಳನ್ನು ಪರಿಹರಿಸಲು ಹಲವಾರು ಅದಾಲತ್‌ಗಳನ್ನು ಆಯೋಜಿಸುತ್ತದೆ. ಆದರೆ ಸಾಕಷ್ಟು ಸಿಬ್ಬಂದಿಗಳ ಕೊರತೆಯು ಸಮಸ್ಯೆಯ ಪರಿಹಾರಕ್ಕೆ ಅಡ್ಡಿಯಾಗುತ್ತಿದೆ. ಕಾಸರಗೋಡು ಜಿಲ್ಲೆಯೊಂದರಲ್ಲೇ ವಿವಿಧ ಕಂದಾಯ ವಿಭಾಗದ ಕಚೇರಿಗಳಲ್ಲಿ ಸುಮಾರು ಹತ್ತು ಸಾವಿರ ಅರ್ಜಿಗಳು ಬಾಕಿ ಉಳಿದಿವೆ.
ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳಲ್ಲಿ ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಾಕಿ ಉಳಿದಿದ್ದು,



ಇದರಲ್ಲಿ ಎರಡು ವರ್ಷಗಳಿಗಿಂತ ಹಳೆಯದಾದ ಅರ್ಜಿಗಳು ಸೇರಿವೆ. ಅರ್ಜಿದಾರರು ಹೆಚ್ಚಾಗಿ ಮಂಜೇಶ್ವರ ತಾಲೂಕಿನ ಕೊಯಿಪ್ಪಾಡಿ ಮತ್ತು

ಕೆಲಸದ ಒತ್ತಡದಲ್ಲಿ ಕಂದಾಯ ನೌಕರರು

ಎರಡನೇ ಪಿಣರಾಯಿ ಸರಕಾರದ ನಾಲ್ಕು ವರ್ಷಗಳಲ್ಲಿ ಸುಮಾರು ಮೂರು ಕುಂದುಕೊರತೆ ಪರಿಹಾರ ಅದಾಲತ್‌ಗಳನ್ನು ನಡೆಸಲಾಗಿದ್ದರೂ ಭೂ ಸಂಬಂಧಿತ ಕಡತಗಳಲ್ಲಿ ಯಾವುದೇ ಗಮನಾರ್ಹ ಪ್ರಗತಿ ಕಂಡುಬಂದಿಲ್ಲ. ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಗ್ರಾಮ ಕಚೇರಿಗಳಿಗೆ ಭೇಟಿ ನೀಡಿ ದೂರುಗಳನ್ನು ಪರಿಹರಿಸಲು ಪ್ರಯತ್ನಿಸಿದರು. ಆದರೆ ಸಿಬ್ಬಂದಿ ಕೊರತೆಯು ಹಿನ್ನಡೆಯನ್ನು ಉಂಟುಮಾಡಿದೆ.
ಆರ್ಥಿಕ ಬಿಕ್ಕಟ್ಟಿನಿಂದಾಗಿ ಹೊಸ ನೇಮಕಾತಿಗಳನ್ನು ಮಾಡಲು ಸರ್ಕಾರ ನಿರಾಕರಿಸುತ್ತಿರುವುದು ಅಸ್ತಿತ್ವದಲ್ಲಿರುವ ನೌಕರರಿಗೆ ಅತಿಯಾದ ಕೆಲಸದ ಹೊರೆಯನ್ನು ಸೃಷ್ಟಿಸುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಗೆ ಅಧಿಕಾರಿಗಳು ಸಿದ್ಧತೆ ನಡೆಸುತ್ತಿರುವಾಗ, ಚುನಾವಣೆಮುಗಿಯುವವರೆಗೂ ಈ ಕಡತಗಳ ಮೇಲೆ ಕ್ರಮ ಕೈಗೊಳ್ಳಲಾಗದು ಎಂದು ಅರ್ಜಿದಾರರು ಚಿಂತಿತರಾಗಿದ್ದಾರೆ.

ಅರ್ಜಿದಾರರು ಸಂಕಷ್ಟದಲ್ಲಿ

ಆದಾಯ ಮತ್ತು ವೆಚ್ಚದ ಕಾರ್ಯವಿಧಾನಗಳು ಪೂರ್ಣಗೊಳ್ಳದ ಕಾರಣ ಭೂ ತೆರಿಗೆಗಳು ಸ್ವೀಕರಿಸಲ್ಪಡುತ್ತಿಲ್ಲ ಎಂಬ ಅಂಶದಿಂದ ಅರ್ಜಿದಾರರು ತೊಂದರೆಗೀಡಾಗಿದ್ದಾರೆ. ಬ್ಯಾಂಕ್ ಸಾಲ ಬಾಕಿಯಾಗಿ ಮುಟ್ಟುಗೋಲು ಹಾಕಿಕೊಳ್ಳುವ ಬೆದರಿಕೆ ಎದುರಿಸುತ್ತಿರುವವರು ಭೂ ವರ್ಗ ಬದಲಾಯಿಸಲು ಅನುಮತಿ ಪಡೆಯಲಾಗದೆ ಕಚೇರಿಗಳಿಗೆ ತೆರಳುತ್ತಿದ್ದಾರೆ.

ಸರಕಾರ ಪ್ರಾಯೋಗಿಕ ಕ್ರಮ ಕೈಗೊಳ್ಳುತ್ತಿಲ್ಲ

ಪ್ರತಿಯೊಂದು ಕಡತವೂ ಒಂದು ಜೀವ ಎಂದು ಸರಕಾರ ಹೇಳಿಕೊಂಡರೂ, ಯಾವುದೇ ಪ್ರಾಯೋಗಿಕ ಕ್ರಮಗಳ ತೆಗೆದು ಕೊಳ್ಳುತ್ತಿಲ್ಲ ಎಂದು ಸ್ಥಳೀಯರು ದೂರುತ್ತಿದ್ದಾರೆ. ಮನೆ ನಿರ್ಮಾಣ, ಮಕ್ಕಳ ವಿವಾಹ, ಶಿಕ್ಷಣಕ್ಕಾಗಿ ಸಾಲ ಪಡೆಯಲು, ಭೂಮಿ ಮಾರಾಟ ಮಾಡಲು ಸಾಧ್ಯ ವಾಗದ ಕಾರಣ ಸಾಮಾನ್ಯ ಜನರು ಸಂಕಷ್ಟದಲ್ಲಿದ್ದಾರೆ.

- **ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳಲ್ಲಿ ಎರಡು ವರ್ಷಗಳಿಂದ ಹಳೆಯದಾದ ಕಡತಗಳು ವಿಲೇವಾರಿಯಾಗದೆ ಬಾಕಿ**
- **ಆರ್ಥಿಕ ಬಿಕ್ಕಟ್ಟಿನಿಂದ ಹೊಸ ನೇಮಕಾತಿಗಳ ಕೊರತೆಯಿಂದ ನೌಕರರಿಗೆ ಹೆಚ್ಚಿನ ಕೆಲಸದ ಹೊರೆ**
- **ಚುನಾವಣಾ ಸಿದ್ಧತೆಗಳು ಪ್ರಾರಂಭ ವಾಗುತ್ತಿದ್ದಂತೆ ಕಡತ ನಿರ್ವಹಣೆ ಯಲ್ಲಿ ಮತ್ತಷ್ಟು ವಿಳಂಬ**
- **ಸಾಲ ಪಡೆಯಲು ಮತ್ತು ಭೂಮಿ ಮಾರಾಟ ಮಾಡಲು ಸಾಧ್ಯವಾಗದ ಕಾರಣ ಬಿಕ್ಕಟ್ಟಿನಲ್ಲಿ ಜನಸಾಮಾನ್ಯರು**

ಸುತ್ತಮುತ್ತ

ಇಂದಿನಿಂದ ಬಲ್ಲಂಗುಡೇಲು ಶ್ರೀ ಭಗವತೀ ಕ್ಷೇತ್ರದಲ್ಲಿ ಕಳಿಯಾಟ ಮಹೋತ್ಸವ

ಮಂಜೇಶ್ವರ: ಪಟ್ಟತ್ತೂರು ಬಲ್ಲಂಗುಡೇಲು ಶ್ರೀ ಪಾಡಾಂಗರೆ ಭಗವತೀ ಕ್ಷೇತ್ರದಲ್ಲಿ ವರ್ಷಾವಧಿ ಕಳಿಯಾಟ ಮಹೋತ್ಸವವು ಮಾ.1ರಿಂದ 8ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಮಾ.1ರಂದು ಬೆಳಿಗ್ಗೆ 7 ಗಂಟೆಗೆ ಗಣಪತಿಹೋಮ, 9.30ಕ್ಕೆ ಭಂಡಾರ ಏರುವುದು, ಮಧ್ಯಾಹ್ನ ಅನ್ನದಾನ, ಸಂಜೆ 4ರಿಂದ 5ರ ತನಕ ಭಜನೆ, ಮಾ.2ರಂದು ಮುಂಜಾನೆ 5.30ಕ್ಕೆ ಕೆಂಡಸೇವೆ, ಬಲಿ ಮೂರ್ತಿ ದರ್ಶನ, ಬೆಳಿಗ್ಗೆ 9ಕ್ಕೆ ಧ್ವಜಾರೋಹಣ, ಮಧ್ಯಾಹ್ನ 2ರಿಂದ 3ರ ತನಕ ಭಜನೆ, ಸಂಜೆ 6ಕ್ಕೆ ತಾನಂ ಮುಂಬಯ ತೆಯ್ಯಂ, ರಾತ್ರಿ 7ಗಂಟೆಗೆ ಮಲೆ ಚಾಮುಂಡಿ ದೈವದ ತೋಟ್ಟಂ ಮೊದಲಾದ ಕಾರ್ಯಕ್ರಮಗಳೊಂದಿಗೆ ಮಾ.8ರಂದು ಕಳಿಯಾಟ ಮಹೋತ್ಸವ ಸಮಾಪ್ತಿಗೊಳ್ಳಲಿದೆ.

ಪುತ್ತಿಗೆ ಹಿಂದು ಸಂಗಮ ಪ್ರಚಾರಾರ್ಥ ಬೈಕ್ ರ್‍ಯಾಲಿ

ಕುಂಬಳೆ: ಪುತ್ತಿಗೆ ಪಂಚಾಯತ್ ಮಟ್ಟದ ವಿರಾಟ್ ಹಿಂದು ಸಂಗಮ ಮಾ.8ರಂದು ಸೂರಂಬೈಲು ಶ್ರೀ ಸಾಯಿರಾಮ್ ಭಟ್ ನಗರದಲ್ಲಿ ಜರಗಲಿದೆ.
ಇದರ ಪ್ರಚಾರಾರ್ಥ ಬೃಹತ್ ಬೈಕ್ ರ್‍ಯಾಲಿ ಮಾ.1ರಂದು ಬೆಳಿಗ್ಗೆ 10 ಗಂಟೆಗೆ ಧರ್ಮತ್ತಡ್ಕದಿಂದ ಆರಂಭಗೊಂಡು ಸೂರಂಬೈಲಿನಲ್ಲಿ ಸಮಾಪ್ತಿಗೊಳ್ಳಲಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಹಿಂದು ಬಾಂಧವರು, ಮಾತೆಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಬೇಕೆಂದು ಹಿಂದು ಏಕೋಪನಾ ಸಮಿತಿ ಅಧ್ಯಕ್ಷರಾದ ದಾಮೋದರ ದೇಲಂಪಾಡಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಇಂದು, ನಾಳೆ ಕೊಡ್ಯಮೆ ಪುಂಡಿಕಟ್ಟೆ ಗುತ್ತು ದೈವಸ್ಥಾನದಲ್ಲಿ ನೇಮ

ಕಾಸರಗೋಡು: ಕೊಡ್ಯಮೆ ಪುಂಡಿಕಟ್ಟೆ ಗುತ್ತು ಶ್ರೀ ಧೂಮಾವತೀ ಹಾಗೂ ಪರಿವಾರ ದೈವಗಳ ದೈವಸ್ಥಾನದಲ್ಲಿ ನೇಮ ಹಾಗೂ ಪರಿವಾರ ದೈವಗಳಿಗೆ ಕೋಲ ಮಾ.1 ಮತ್ತು 2ರಂದು ಜರಗಲಿದೆ. ಮಾ.1 ರಂದು ಬೆಳಗ್ಗೆ 7.30ಕ್ಕೆ ಗಣಪತಿಹೋಮ, 8.30ಕ್ಕೆ ತಂಬಿಲ ಸೇವೆ, 9.30ಕ್ಕೆ ವೆಂಕಟ್ರಮಣ ದೇವರಮುಡಿಪು ಸೇವೆ, 10.30ಕ್ಕೆ ಭಂಡಾರ ಇಳಿಯುವುದು, ಮಧ್ಯಾಹ್ನ 12.30ಕ್ಕೆ ಶ್ರೀ ಧೂಮಾವತಿ ದೈವದ ನೇಮ, 1 ಗಂಟೆಗೆ ಅನ್ನ ಸಂತರ್ಪಣೆ, ಸಂಜೆ 5 ಕ್ಕೆ ಕೊರತಿ ಅಮ್ಮನ ಕೋಲ, ರಾತ್ರಿ 9 ಕ್ಕೆ ಕಲ್ಲುರ್ಟಿ, ಪಂಜುರ್ಲಿ ದೈವದ ಕೋಲ, ಮಾ.2ರಂದು ಮುಂಜಾನೆ 4 ಕ್ಕೆ ಗುಳಿಗ ದೈವದ ಕೋಲ, ರಾತ್ರಿ 7 ಕ್ಕೆ ಕಲ್ಲುರ್ಟಿ, ಕೊರತಿ ಅಮ್ಮನ ಅಗೆಲು ಸೇವೆ, ಗುರುಹಿರಿಯರಿಗೆ ಬಡಿಸುವ ಕಾರ್ಯಕ್ರಮ ಜರಗಲಿದೆ.

ನಾಳೆ ಕೊರತಿಪಾರೆ ದೈವಸ್ಥಾನದಲ್ಲಿ ನೇಮ

ಉಪ್ಪಳ: ವೈವಳಿಕೆ ಕೊಮ್ಮಂಗಳ ಕೊರತಿಪಾರೆ ಶ್ರೀ ಕೊರತಿ ಗುಳಿಗ, ಕೊರಗ ತನಿಯ ದೈವಸ್ಥಾನದಲ್ಲಿ ದೈವಗಳ ವರ್ಷಾವಧಿ ನೇಮ ಮಾ.2ರಂದು ಜರಗಲಿದೆ. ಬೆಳಿಗ್ಗೆ 10ಕ್ಕೆ ಗಣಪತಿ ಹೋಮ, 11ಕ್ಕೆ ಶ್ರೀ ದೈವಗಳಿಗೆ ತಂಬಿಲ ಸೇವೆ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಶ್ರೀ ಕೊರತಿ, ಗುಳಿಗ ದೈವಗಳ ಭಂಡಾರ ಇಳಿಯುವುದು, 6.30ರಿಂದ ಶ್ರೀ ಕೊರತಿ ಗುಳಿಗ ಮತ್ತು ಕೊರಗ ತನಿಯ ದೈವಗಳ ವರ್ಷಾವಧಿ ನೇಮ, 6.30ರಿಂದ ಶ್ರೀ ಕೊರತಿ ದೈವದ ಕೋಲ, ರಾತ್ರಿ 8.30ರಿಂದ ಅನ್ನಸಂತರ್ಪಣೆ, 9.30ರಿಂದ ಶ್ರೀ ಕೊರಗ ತನಿಯ ದೈವದ ಕೋಲ, ರಾತ್ರಿ 1ರಿಂದ ಕೆಂಡ ಸೇವೆಯೊಂದಿಗೆ ಗುಳಿಗ ದೈವದ ಕೋಲ ಜರಗಲಿದೆ.

ನಂಬರ್ ಪ್ಲೇಟ್ ಇಲ್ಲದ ವಾಹನಗಳ ವಿರುದ್ಧ ಕ್ರಮ: ಕುಂಬಳೆಯಲ್ಲಿ ಬೈಕ್ ವಶ

ಕುಂಬಳೆ: ನಂಬರ್ ಪ್ಲೇಟ್ ಇಲ್ಲದ ಬೈಕ್‌ಗಳಲ್ಲಿ ರಾತ್ರಿ ವೇಳೆ ಯುವಕರು ಸುತ್ತಾಡುವುದು ಹೆಚ್ಚಿದ ಹಿನ್ನೆಲೆಯಲ್ಲಿ ಆದರ ವಿರುದ್ಧ ಕುಂಬಳೆ ಪೊಲೀಸರು ಕಾರ್ಯಾಚರಣೆ ತೀವ್ರಗೊಳಿಸಿದ್ದಾರೆ. ಅದರಂತೆ ಶುಕ್ರವಾರ ತಡರಾತ್ರಿ 12 ಗಂಟೆಗೆ ಎಸ್‌ಐ ಕೆ.ಶ್ರೀಜಿತ್ ನೇತೃತ್ವದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ನಂಬರ್ ಪ್ಲೇಟ್ ಇಲ್ಲದ ಬೈಕೊಂದನ್ನು ಕುಂಬಳೆ ಶಾಲಾ ರಸ್ತೆಯಿಂದ ವಶಪಡಿಸಲಾಗಿದೆ.
ನಂಬರ್ ಪ್ಲೇಟ್ ಇಲ್ಲದ ವಾಹನಗಳನ್ನು ವಿವಿಧ ರೀತಿಯ ಮಾದಕ ವಸ್ತುಗಳ ಸಾಗಾಟ ಸಹಿತ ಅನಧಿಕೃತ ಚಟುವಟಿಕೆಗಳಿಗೆ ಬಳಸಲಾಗುತ್ತಿರುವ ಬಗ್ಗೆ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬದಿಯಡ್ಕ ಗ್ರಾ.ಪಂ. ವಿರಾಟ್ ಹಿಂದೂ ಸಮಾಜೋತ್ಸವ: ವಾಹನ ಪ್ರಚಾರಕ್ಕೆ ಚಾಲನೆ




ಬದಿಯಡ್ಕ: ಬದಿಯಡ್ಕ ಗ್ರಾ.ಪಂ.ವಿರಾಟ್ ಹಿಂದೂ ಸಮಾಜೋತ್ಸವ ಮಾ.1ರಂದು ಭಾರತೀ ನಗರ ಬೋಳುಕಟ್ಟೆ ಮೈದಾನದಲ್ಲಿ ಜರಗಲಿದ್ದು, ಸಮಾಜೋತ್ಸವದ ವಾಹನ ಪ್ರಚಾರಕ್ಕೆ ಉದ್ಯಮಿ ನಿತ್ಯಾನಂದ ಶೆಣೈ ಅವರು ನಾರಾಯಣ ಭಟ್ ಮೈರ್ಕಳ ಅವರಿಗೆ ಧ್ವಜ ಹಸ್ತಾಂತರಿಸುವ ಮೂಲಕ ಚಾಲನೆ ನೀಡಿದರು.
ಮಾ.1ರಂದು ಸಂಜೆ 4 ಗಂಟೆಯಿಂದ ವಿವಿಧ ಭಜನಾ ತಂಡಗಳಿಂದ ಕುಣಿತ ಭಜನೆ, 5ರಿಂದ ಸಭಾ ಕಾರ್ಯಕ್ರಮ, ಜಗದ್ಗುರು ಶಂಕರಾಚಾರ್ಯ ಸಂಸ್ಥಾನ ಶ್ರೀಮದ್ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರಿಂದ ಆಶೀರ್ವಚನ, ಭಾರತೀಯ ಅಭಿಭಾಷಕ ಪರಿಷತ್ ಕೇರಳ ರಾಜ್ಯ ಸಮಿತಿ ಸದಸ್ಯ, ವಕೀಲ ಎ.ವಿ.ಕೇಶವನ್ ಅವರಿಂದ ದಿಕ್ಸೂಚಿ ಭಾಷಣ, ಸಂಜೆ 6.30ಕ್ಕೆ ಮೆಗಾ ತಿರುವಾದಿರ, ರಾತ್ರಿ 7.15ರಿಂದ 8.30 ರವರೆಗೆ ಸ್ಥಳೀಯ ಪ್ರತಿಭೆಗಳಿಂದ ವೈವಿಧ್ಯಮಯ ನೃತ್ಯ ಪ್ರದರ್ಶನ ನಡೆಯಲಿದೆ.

ಇಂದು ಹಿಂದೂ ಏಕತಾ ಸಮ್ಮೇಳನ

ಕುಂಬಳೆ: ಕುಂಬಳೆ ಪಂಚಾಯತ್ ಹಿಂದೂ ಏಕತಾ ಸಮ್ಮೇಳನ ಮಾ.1ರಂದು ಅಪರಾಹ್ನ 3 ಗಂಟೆಗೆ ಕೃಷ್ಣನಗರ ಕುಂಬಳೆಯಲ್ಲಿ ಸಭಾ ಕಾರ್ಯಕ್ರಮ ಜರಗಲಿದೆ. ಅಖಿಲ ಭಾರತೀಯ ಸಾಹಿತ್ಯ ಪರಿಷತ್ ದ.ಕ.ಜಿಲ್ಲಾ ಕಾರ್ಯದರ್ಶಿ ಲತೇಶ್ ಬಾಕ್ರಬೈಲು ಮುಖ್ಯ ಭಾಷಣ ಮಾಡುವರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿದೆ.

ಮೂಸೋಡಿ ರಸ್ತೆಯಲ್ಲಿ ವಿದ್ಯುತ್ ತಂತಿ ಮೇಲೆ ಬಾಗಿದ ಬೃಹತ್ ಮರಗಳು: ಸ್ಥಳೀಯರಲ್ಲಿ ಭೀತಿ



ಉಪ್ಪಳ: ರಸ್ತೆ ಬದಿಯಲ್ಲಿರುವ ಮರದ ರೆಂಬೆಗಳು ವಿದ್ಯುತ್ ತಂತಿ ಮೇಲೆ ಯಾವುದೇ ಕ್ಷಣದಲ್ಲಿ ಮುರಿದು ಬೀಳುವ ಆತಂಕ ಸ್ಥಳೀಯರನ್ನು ಕಾಡುತ್ತಿದೆ. ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ಉಪ್ಪಳ ರೈಲ್ವೆ ಗೇಟ್ ಮೂಲಕ ಹಾದು ಹೋಗುವ ಮೂಸೋಡಿ ರಸ್ತೆಯಲ್ಲಿ ಅಪಾಯಕಾರಿ ಮರಗಳ ರೆಂಬೆಗಳು ರಸ್ತೆಗೆ ಬಾಗಿಕೊಂಡು ಆತಂಕವನ್ನು ಸೃಷ್ಟಿಸುತ್ತಿವೆ.
ಈ ಪರಿಸರದಲ್ಲಿ ಬೃಹತ್ ಮರಗಳು, ತೆಂಗಿನ ಮರಗಳು ವಿದ್ಯುತ್ ತಂತಿ ಮೇಲೆ ವಾಲಿಕೊಂಡಿದೆ. ಭಾರೀ ಪ್ರಮಾಣದಲ್ಲಿ ಪ್ರಮುಖ ವಿದ್ಯುತ್ ತಂತಿಗಳು ಅಡ್ಡಾದಿಡ್ಡಿಯಾಗಿ ಮನೆಗಳಿಗೆ ವ್ಯಾಪಾರ ಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಮರಗಳ ರೆಂಬೆಗಳು ಜೋರಾಗಿ ಗಾಳಿ ಬಂದರೆ ಯಾವುದೇ ಕ್ಷಣದಲ್ಲೂ ಮುರಿದು ಬೀಳುವ ಸ್ಥಿತಿಯಲ್ಲಿದೆ. ಮರದ ರೆಂಬೆಗಳು ಬಿದ್ದರೆ ಹಲವು ಕಂಬಗಳು, ತಂತಿ ಧರಾಶಾಹಿಯಾಗಿ ಅನಾಹುತ ಸಂಭವಿಸಬಹುದು.
ಈ ರಸ್ತೆಯಿಂದ ಮೂಸೋಡಿ, ಹಾರ್‌ಬಾರ್, ಮಣಿಮುಂಡ, ಶಾರದಾನಗರ ಸಹಿತ ಹಲವು ಪ್ರದೇಶಗಳಿಗೆ ನೂರಾರು ವಾಹನ ಸಂಚಾರ ಸಹಿತ ನಡೆದುಹೋಗುವವರು ಭಯಭೀತರಾಗುತ್ತಿದ್ದಾರೆ. ಮಳೆ ಗಾಳಿಗೆ ಪದೇ ಪದೇ ತಂತಿ ಮೇಲೆ ಸಣ್ಣಪುಟ್ಟ ರೆಂಬೆಗಳು ಬೀಳುವುದು ಸಾಮಾನ್ಯವಾಗಿರುವುದಾಗಿ ದೂರಲಾಗಿದೆ. ಸಂಬಂಧಪಟ್ಟ ವಿದ್ಯುತ್ ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ವಿದ್ಯುತ್ ತಂತಿ ಮೇಲೆ ಹಾದುಹೋದ ಮರದ ರೆಂಬೆಗಳ ಕಡಿದು ಉಂಟಾಗುವ ಅನಾಹುತ ತಪ್ಪಿಸಬೇಕೆಂದು ಊರವರು ಆಗ್ರಹಿಸಿದ್ದಾರೆ.

- **ಆತಂಕ ಸೃಷ್ಟಿಸುತ್ತಿವೆ ಮೂಸೋಡಿ ರಸ್ತೆಯಲ್ಲಿರುವ ಅಪಾಯಕಾರಿ ಮರಗಳು**
- **ಇಲಾಖೆ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಲು ನಾಗರಿಕರ ಆಗ್ರಹ**

ಪೆರಿಂಗಡಿ, ಕುಬಣೂರು: ಹಗಲಿನಲ್ಲೇ ಉರಿಯುತ್ತಿವೆ ಬೀದಿ ದೀಪಗಳು!



ಉಪ್ಪಳ: ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ವಿವಿಧ ಕಡೆಗಳಲ್ಲಿ ಬೀದಿ ದೀಪಗಳು ಹಗಲು ಹೊತ್ತಿನಲ್ಲಿ ಉರಿಯುತ್ತಿದ್ದರೂ ನಂದಿಸಲು ಗಮನ ಹರಿಸದೆ ಇರುವುದು ಅಮಿತ ವಿದ್ಯುತ್ ವ್ಯರ್ಥವಾಗುತ್ತಿದೆ.

ಪಂಚಾಯತ್‌ಗೆ ನಷ್ಟ

ಪೆರಿಂಗಡಿ ರಸ್ತೆಯ ಜನಪ್ರಿಯ ಎಂಬಲ್ಲಿ ಸರ್ವೀಸ್ ರಸ್ತೆ ಬದಿಯಲ್ಲಿ ಹಾಗೂ ಕುಬಣೂರು ರಸ್ತೆಯ ಪುಳಿಕುತ್ತಿ ಸ್ಮಶಾನದ ಬಳಿಯಲ್ಲಿ ಸ್ಥಾಪಿಸಲಾದ ಲೋ ಮಾಸ್ಟ್ ಬೀದಿ ದೀಪಗಳು ಒಂದು ತಿಂಗಳಿಂದಲೂ ರಾತ್ರಿ ಹಗಲೂ ಉರಿಯುತ್ತಲೇ ಇದೆ. ಕೆಲವು ದಿನಗಳು ಮಾತ್ರವೇ ನಂದುತ್ತಿದೆ. ಹಗಲು ಉರಿಯುತ್ತಿರುವ ದೀಪವನ್ನು ನಂದಿಸುವ ವ್ಯವಸ್ಥೆ ಇಲ್ಲದೆ ಇರುವುದರಿಂದ ಭಾರೀ ಪ್ರಮಾಣದ ವಿದ್ಯುತ್ ವ್ಯರ್ಥಗೊಂಡು ಪಂಚಾಯತ್‌ಗೆ ಭಾರೀ ಪ್ರಮಾಣದ ಹೊಡೆತ ಉಂಟಾಗಬಹುದೆಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ

ಈ ಪ್ರದೇಶ ಮಾತ್ರವಲ್ಲದೆ ಇತರ ಕಡೆಗಳಲ್ಲಿಯೂ ಹಲವಾರು ಬೀದಿ ದೀಪಗಳು ಹಗಲು ಉರಿಯುತ್ತಿರುವುದಾಗಿ ದೂರಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಹಗಲು ಹೊತ್ತಿನಲ್ಲಿ ಉರಿಯುತ್ತಿರುವ ಬೀದಿ ದೀಪಗಳನ್ನು ನಂದಿಸುವ ವ್ಯವಸ್ಥೆ ಮಾಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಾಯಿತು. ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ. ಸುರೇಂದ್ರನ್ ಅವರು ಮಂಗಲ್ಪಾಡಿ ಸೋಂಕಾಲ್‌ನಲ್ಲಿ ಗೋಡೆ ಬರಹ ಬರೆಯುವ ಮೂಲಕ ಎನ್‌ಡಿಎ ಪ್ರಚಾರ ಉದ್ಘಾಟಿಸಿದರು. ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಎನ್‌ಡಿಎ ಸಂಚಾಲಕ, ಬಿಜೆಪಿ ಉತ್ತರ ವಲಯ ಅಧ್ಯಕ್ಷ ಎಂ.ವಿಜಯಕುಮಾರ್ ರೈ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಣಿಕಂಠ ರೈ ಪಟ್ಲ, ಜಿಲ್ಲಾ ಕಾರ್ಯದರ್ಶಿ ಲೋಕೇಶ್ ನೋಂಡ, ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ., ಕುಂಬಳೆ ಮಂಡಲ ಅಧ್ಯಕ್ಷ ಸುನಿಲ್ ಅನಂತಪುರ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ವಲಸರಾಜ್ ಕೆ.ಪಿ. ಮತ್ತಿತರರಿದ್ದರು.

ಕೋಟೆಕಣಿಯಲ್ಲಿ ಕನ್ನಡ ಹಬ್ಬ ಅಭಿಯಾನ: ಕಾಸರಗೋಡು ಜಾನಪದದ ಸಂಭ್ರಮ



ಕಾಸರಗೋಡು: ಕಾಸರಗೋಡಿನ ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ಶಾಲಾ ಪಾಠ ಪುಸ್ತಕಗಳಲ್ಲೂ ನೋಡಲಾಗದ ದುಸ್ಥಿತಿ ಸನ್ನಿಹಿತ. ಭೌಗೋಳಿಕವಾಗಿ ಕನ್ನಡತನವನ್ನು ಕಳೆದುಕೊಂಡ ನಾವು ಸಾಂಸ್ಕೃತಿಕ, ಶೈಕ್ಷಣಿಕವಾಗಿ ನಮ್ಮನ್ನು ಕಳೆದುಕೊಳ್ಳುತ್ತಿದ್ದೇವೆ. ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ನಮ್ಮ ಅಸ್ಮಿತೆಗೆ ದಾಖಲೆಯೇ ಇಲ್ಲದಂತಾಗುವುದು ಎಂದು ಕನ್ನಡ ಹೋರಾಟಗಾರ, ಮುಂದಾಳು ಸತ್ಯನಾರಾಯಣ ತಂತ್ರಿ ಹೇಳಿದ್ದಾರೆ.
ಕೋಟೆಕಣಿ ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿಯಿಂದ ಗುರುವಾರ ಸಂಜೆ ಕಾಸರಗೋಡು ಕನ್ನಡ ಹಬ್ಬ ಅಭಿಯಾನದ ಕಾಸರಗೋಡು ಜಾನಪದ ಸಂಭ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯ ಎಂ.ಪಿ.ರಾಮಪ್ಪ ಮಂಜೇಶ್ವರ ಸಮಾರಂಭ ಉದ್ಘಾಟಿಸಿ ಮಾತನಾಡಿ, ಔದ್ಯೋಗಿಕವಾಗಿ ಕನ್ನಡಕ್ಕೆ ಆಡಳಿತಾತ್ಮಕ ಪೆಟ್ಟು ಬೀಳುತ್ತಿದ್ದು ಅದನ್ನು ಎದುರಿಸಿ ಹೋರಾಡಲು ಕನ್ನಡಿಗರೆಲ್ಲರ ಬೆಂಬಲ ಅತ್ಯಗತ್ಯ. ಇಂತಹ ಕಾರ್ಯಕ್ರಮ ಅಲ್ಲಲ್ಲಿ ಆಗಾಗ ನಡೆದರೆ ಎಚ್ಚರಿಸುವ ಕೆಲಸವಾದಿತು ಎಂದರು.
ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅತಿಥಿಯಾಗಿದ್ದರು. ನೃತ್ಯ ವಿದುಷಿ ಸೌಮ್ಯಾ ಶ್ರೀಕಾಂತ್ ಮಧೂರು, ಯುವ ಸಂಘಟಕ, ಗಾಯಕ ಸಿದ್ದೇಶ್ ಕೋಲಾರ ಅತಿಥಿಗಳಾಗಿದ್ದರು. ಹಿರಿಯ ಕವಿ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಉಪಸ್ಥಿತರಿದ್ದರು. ದಿವಾಕರ ಕಾಸರಗೋಡು ಪ್ರಾರ್ಥಿಸಿ, ಸಾಂಸ್ಕೃತಿಕ ಭವನದ ಸಂಚಾಲಕ ಗುರುಪ್ರಸಾದ್ ಕೋಟೆಕ್ಕಣಿ ಸ್ವಾಗತಿಸಿ, ಕಾವ್ಯ ಕುಶಲ ವಂದಿಸಿ, ಜಯ ಮಣಿಯಂಪಾರೆ ನಿರೂಪಿಸಿದರು. ಬಳಿಕ ಸೌಮ್ಯಾ ಶ್ರೀಕಾಂತ್ ಶಿಷ್ಯವೃಂದ, ವಿದುಷಿ ಅಂಕಿತಾ ಬದಿಯಡ್ಕರಿಂದ ಜಾನಪದ, ಭರತನಾಟ್ಯ ನಡೆಯಿತು.

ನೀರ್ಚಾಲು ಭಜನಾ ಮಂದಿರ ನವೀಕರಣ ಪುನರ್ ಪ್ರತಿಷ್ಠೆ: ಹಸಿರುವಾಣಿ ಮೆರವಣಿಗೆ



ಬದಿಯಡ್ಕ: ನೀರ್ಚಾಲು ಶ್ರೀ ಕುಮಾರಸ್ವಾಮಿ ಭಜನಾ ಮಂದಿರದ ನವೀಕರಣ ಪುನರ್ ಪ್ರತಿಷ್ಠಾ ಮಹೋತ್ಸವ ಅಂಗವಾಗಿ ಶನಿವಾರ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಜರಗಿತು. ಕುಮಾರಮಂಗಲ ಶ್ರೀ ಸುಬ್ರಹ್ಮಣ್ಯ ಸ್ವಾಮಿದೇವಸ್ಥಾನದಿಂದಹೊರಟುಬದಿಯಡ್ಕ ಪೇಟೆಯಲ್ಲಿ ಸಾಗಿ ನೀರ್ಚಾಲು ಶ್ರೀ ಧರ್ಮಶಾಸ್ತಾ ಭಜನಾ ಮಂದಿರಕ್ಕೆ ಆಗಮಿಸಿ ನೀರ್ಚಾಲು ಪೇಟೆ ಮೂಲಕ ಶ್ರೀ ಕುಮಾರ ಸ್ವಾಮಿ ಭಜನಾ ಮಂದಿರಕ್ಕೆ ತಲುಪಿತು.
ಮಾ.1ರಂದು ಬೆಳಿಗ್ಗೆ 6 ಗಂಟೆಗೆ ಗಣಪತಿ ಹೋಮ, ದೀಪ ಪ್ರತಿಷ್ಠೆ ಧಾರ್ಮಿಕ ಮುಂದಾಳು ಪಿ.ಎಸ್.ಗೋಪಾಲ ಭಟ್ ಪಟ್ಟಾಜೆ ಇವರಿಂದ ದೀಪ ಪ್ರಜ್ವಲನೆ, ವಿವಿಧ ಭಜನಾ ಸಂಘಗಳಿಂದ ಭಜನೆ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಭೋಜನ ಪ್ರಸಾದ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಜ್ಯೋತಿಷ್ಯ ವಿದ್ವಾನ್ ವೆಂಕಟೇಶ್ವರ ಭಟ್ ಕುಂಜಾರು ಮೈಸೂರು ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, 1.15ರಿಂದ ಸೂರ್ಯನಾರಾಯಣ ಪದಕಣ್ಣಾಯ ಬಾಯಾರು ಇವರ ಶಿಷ್ಯವೃಂದ ಶ್ರೀ ಕುಮಾರಸ್ವಾಮಿ ಯಕ್ಷಗಾನ ಕಲಾಕೇಂದ್ರ ನೀರ್ಚಾಲು ಇವರಿಂದ ರಂಗಸಿರಿ ಸಾಂಸ್ಕೃತಿಕ ವೇದಿಕೆ ಬದಿಯಡ್ಕ ಇದರ ಸಹಕಾರದಲ್ಲಿ ಯಕ್ಷಗಾನ ಬಯಲಾಟ, ಸಂಜೆ 3.50ಕ್ಕೆ ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಶ್ರೀ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿಳ ಆಗಮನ, ಪೂರ್ಣಕುಂಭ ಸ್ವಾಗತ, 4 ರಿಂದ ಧಾರ್ಮಿಕ ಸಭೆಯಲ್ಲಿ ಸ್ವಾಮೀಜಿಯವರಿಂದ ಆಶೀರ್ವಚನ ನಡೆಯಲಿದೆ. ಶ್ರೀಮದ್ ಎಡನೀರು ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ವೇ.ಮೂ. ಶಿವಶಂಕರ ಭಟ್ ಕಿಳಿಂಗಾರು ನೇತೃತ್ವದಲ್ಲಿ ಧಾರ್ಮಿಕ ಕಾರ್ಯ ಜರಗಲಿದೆ.



ಕ್ಯಾಂಪ್ಕೋ ಸಂಸ್ಥೆಯ ಸಾಂತ್ವನ ಯೋಜನೆಯಡಿಯಲ್ಲಿ ಕ್ಯಾಂಪ್ಕೋ ಮುಳಿಯಾರು ಶಾಖೆಯ ಸಕ್ರಿಯ ಸದಸ್ಯ ಗೋಪಾಲನ್ ನಾಯರ್ ಅವರ ಆಸ್ಪತ್ರೆ ವೆಚ್ಚಕ್ಕಾಗಿ ಸಹಾಯಧನ ರೂ. 52,479 ರೂಪಾಯಿಯ ಚೆಕ್‌ನ್ನು ಕ್ಯಾಂಪ್ಕೋ ನಿರ್ದೇಶಕ ಸತ್ಯನಾರಾಯಣ ಪ್ರಸಾದ್ ಅವರು ಶನಿವಾರ ಸದಸ್ಯರ ನಿವಾಸದಲ್ಲಿ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಪ್ರಾದೇಶಿಕ ವ್ಯವಸ್ಥಾಪಕ ಚಂದ್ರ ಎಂ., ಬದಿಯಡ್ಕ ಹಾಗೂ ಮುಳಿಯಾರು ಶಾಖಾ ವ್ಯವಸ್ಥಾಪಕ ಸಂದೀಪ್ ರೈ ಉಪಸ್ಥಿತರಿದ್ದರು.

ಮಿಂಚಿಪದವು ಶ್ರೀ ದೇವಸ್ಥಾನದ ಬ್ರಹ್ಮಕಲಶ | ಎಡನೀರು ಶ್ರೀ ಆಶೀರ್ವಚನ
ದುಶ್ಚಟಗಳ ಬದಿಗಿಟ್ಟು ಉತ್ತಮ ನಾಗರಿಕರಾಗಿ ಬೆಳೆಯಿರಿ

ಮುಳ್ಳೇರಿಯ: ನಾವು ಪ್ರಕೃತಿಯನ್ನು ಆರಾಧಿಸುವ ಮೂಲಕ ಸಮಾಜದಲ್ಲಿ ಉನ್ನತಿ ಸಾಧಿಸಬೇಕು. ಅಲ್ಲದೆ ನಮ್ಮಲ್ಲಿನ ದುಶ್ಚಟಗಳನ್ನು ಬದಿಗಿಟ್ಟು ಉತ್ತಮ ನಾಗರಿಕರಾಗಿ ಬೆಳೆಯಬೇಕು ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಹೇಳಿದ್ದಾರೆ.
ಮಿಂಚಿಪದವು ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಸ್ಥಾನದ ಕೊನೆಯ ದಿನವಾದ ಶುಕ್ರವಾರ ಸಂಜೆ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.
ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಮಧುಸೂಧನ ಆಯರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಹಾಗೂ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಆಶೀರ್ವಚನ ನೀಡಿದರು.



ಕಾರ್ಯಕ್ರಮದಲ್ಲಿ ಡಾ.ಶ್ರೀನಿವಾಸ ಕಕ್ಕಿಲಾಯ, ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್, ಉದ್ಯಮಿ ಕೃಷ್ಣ ಕಾಮತ್ ಸುಳ್ಯ, ಉದ್ಯಮಿ ಅಶೋಕ ಪ್ರಭು, ಪ್ರಭಾಕರ ಕಲ್ಲೂರಾಯ ಬನದಗದ್ದೆ, ಕಾಟುಕುಕ್ಕೆ ದೇಗುಲ ಸಮಿತಿ ಸದಸ್ಯ ನಾರಾಯಣ ಮಣಿಯಾಣಿ ಕಾಟುಕುಕ್ಕೆ, ಯಾದವ ಸಭಾ ಅಧ್ಯಕ್ಷ ಬಾಬು ಮಣಿಯೂರು, ನೆಟ್ಟಣಿಗೆ ದೇಗುಲ ಸಮಿತಿ ಅಧ್ಯಕ್ಷ ಶಿವಪ್ರಸಾದ್ ನಾಕೂರು, ಶಿವಕಾವೇರಿ ಕ್ಲಬ್‌ನ ಅಧ್ಯಕ್ಷ ಕುಂಞಿರಾಮ ಮಣಿಯಾಣಿ ಮಿಂಚಿಪದವು ಮೊದಲಾದವರು ಅತಿಥಿಗಳಾಗಿ ಭಾಗವಹಿಸಿದ್ದರು.

ಗೌರವ

ಪದ್ಮಶ್ರೀ ಪುರಸ್ಕೃತ ಸತ್ಯನಾರಾಯಣ ಮಣಿಯಾಣಿ ಬೆಳೇರಿ, ವಾಸ್ತುಶಿಲ್ಪಿ ಮಹೇಶ್ ಮುನಿಯಂಗಳ, ವಿದ್ವಾನ್ ನಾರಾಯಣ ಮಣಿಯಾಣಿ ಬೆಳ್ಳಿಗೆ, ಮೇಸ್ತ್ರಿ ಶಶಿಧರನ್ ತಚ್ಚಂಗಾಡ್, ಮೇಸ್ತ್ರಿ ಸುಧೀರ್ ಕುಮಾರ್ ಮಿಂಚಿಪದವು, ಮೇಸ್ತ್ರಿ ರಾಮಚಂದ್ರ ಮಿಂಚಿಪದವು ಅವರನ್ನು ಗೌರವಿಸಲಾಯಿತು.

ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಸದಾನಂದ ಕೆದಿಲ್ಲಾಯ ಸ್ವಾಗತಿಸಿ, ಶಿವರಾಮ ಮಣಿಯಾಣಿ ವಂದಿಸಿದರು. ಯತೀಶ್‌ಕುಮಾರ್ ರೈ ನಿರೂಪಿಸಿದರು. ಕುಮಾರಿ ಶ್ರೀಯಾ ಪ್ರಾರ್ಥನೆ ಹಾಡಿದರು.

ಅನಂತಪುರ ಶ್ರೀ ಕ್ಷೇತ್ರದ ಜಾತ್ರೆ: ಜನಮನಸೂರೆಗೊಂಡ ಕಾಸರಗೋಡು ರಾಗಮಾಲಿಕ ತಂಡದ ಭಕ್ತಿ ರಸಮಂಜರಿ

ಕುಂಬಳೆ: ಅನಂತಪುರ ಶ್ರೀ ಅನಂತ ಪದ್ಮನಾಭಸ್ವಾಮಿ ಕ್ಷೇತ್ರದ ಜಾತ್ರೋತ್ಸವದ ಪ್ರಯುಕ್ತ ಸಾಂಸ್ಕೃತಿಕ ವೇದಿಕೆಯಲ್ಲಿ ಪ್ರಕೃತಿ ಯುವ ತಂಡ ಅನಂತಪುರ ಇದರ ಪ್ರಾಯೋಜಕತ್ವದಲ್ಲಿ ರಾಗಮಾಲಿಕ ಕಾಸರಗೋಡು ಸಾದರಪಡಿಸಿದ ಭಕ್ತಿರಸಮಂಜರಿ ಕಾರ್ಯಕ್ರಮವು ಜನಮನ ಸೂರೆಗೊಂಡಿತು.
ಕಾಸರಗೋಡು ರಾಗಮಾಲಿಕ ತಂಡದ ಗಾಯಕರುಗಳಾದ ಕಮಲಾಕ್ಷ ಮಲ್ಲ, ಪ್ರಶಾಂತ್ ಎದುರ್ತೋಡು, ಹರೀಶ್ ಕೋಳಿಯಡ್ಕ ಲಚ್ಚು ಲಕ್ಷ್ಮಣ್ ಕಾಮನಬೈಲು ಕಣ್ಣೂರು,



ಮನೀಶ್ ವಿದ್ಯಾಗಿರಿ, ಸುಚಿತ್ರ ಸುನಿಲ್ ಪಯ್ಯನ್ನೂರು, ಶ್ರೀದೇವಿ ಎ.ಎಸ್.ಮುಳಿಯಾರು, ವರ್ಷಾ ಸೂರಂಬೈಲು ಮೊದಲಾದವರು ಕಾರ್ಯಕ್ರಮ ನಡೆಸಿಕೊಟ್ಟರು.

ಅಭಿನಂದನೆ

ಅನಂತಪುರಪದ್ಮನಾಭಸ್ವಾಮಿಕ್ಷೇತ್ರದ ಆಡಳಿತಸಮಿತಿ, ಪ್ರಕೃತಿ ಯುವತಂಡ ಅನಂತಪುರದ ಸದಸ್ಯರು ರಾಗಮಾಲಿಕ ತಂಡವನ್ನು ಅಭಿನಂದಿಸಿದರು.

ಸುತ್ತ ಮುತ್ತ

ಇಂದು ಬಜಗೋಳಿಯಲ್ಲಿ 'ಹಿಂದೂ ರಾಷ್ಟ್ರ ಜಾಗೃತಿ ಸಭೆ' ಆಯೋಜನೆ

ಉಡುಪಿ: ಹಿಂದೂ ಧರ್ಮ, ಸಂಸ್ಕೃತಿ ಹಾಗೂ ರಾಷ್ಟ್ರ ಚಿಂತನೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ 'ಹಿಂದೂ ರಾಷ್ಟ್ರ ಜಾಗೃತಿ ಸಭೆ'ಯನ್ನು ಇಂದು (ಮಾ.1) ಭಾನುವಾರ ಆಯೋಜಿಸಲಾಗಿದೆ.

ಬಜಗೋಳಿಯ ದಿಡಿಂಬಿರಿಯಲ್ಲಿರುವ ಶ್ರೀ ಗಣಪತಿ ಸಭಾಭವನದಲ್ಲಿ ಸಂಜೆ 5ಕ್ಕೆ ಈ ವಿಶೇಷ ಸಭೆ ನಡೆಯಲಿದೆ. ಕಾರ್ಯಕ್ರಮದಲ್ಲಿ ರಾಷ್ಟ್ರ ಜಾಗೃತಿ, ಸಾಂಸ್ಕೃತಿಕ ಮೌಲ್ಯಗಳ ರಕ್ಷಣೆ ಹಾಗೂ ದೇಶಭಕ್ತಿಯ ವಿಷಯಗಳ ಕುರಿತು ಪ್ರಬೋಧನಾತ್ಮಕ ಉಪನ್ಯಾಸಗಳು ಜರುಗಲಿವೆ. ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳಲ್ಲಿ ಧರ್ಮ ಮತ್ತು ರಾಷ್ಟ್ರ ರಕ್ಷಣೆಯ ಮಹತ್ವವನ್ನು ಸಾರುವ ನಿಟ್ಟಿನಲ್ಲಿ ಈ ಸಭೆ ಆಯೋಜಿಸಲಾಗಿದೆ. ಹಿಂದೂ ಸಮಾಜದ ಎಲ್ಲಾ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಜಾಗೃತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹಿಂದೂ ಜನಜಾಗೃತಿ ಸಮಿತಿಯ ಉಡುಪಿ ಜಿಲ್ಲಾ ಸಮನ್ವಯಕ ಬಾಲಕೃಷ್ಣ ನಾಯಕ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುನಿಯಾಲು: ನಾಳೆಯಿಂದ ಉಚಿತ ತಪಾಸಣೆ

ಉಡುಪಿ: ಇಲ್ಲಿನ ಮುನಿಯಾಲು ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಶಾ ಲಾಕ್ಯ ತಂತ್ರ ವಿಭಾಗದ ವತಿಯಿಂದ ಮೈಗ್ರೇನ್ ಹಾಗೂ ವಿವಿಧ ರೀತಿಯ ತಲೆನೋವುಗಳ ಕುರಿತು ಉಚಿತ ತಪಾಸಣೆ ಮತ್ತು ಸಲಹಾ ಶಿಬಿರವನ್ನು ಆಯೋಜಿಸಲಾಗಿದೆ.

ಈ ವಿಶೇಷ ಚಿಕಿತ್ಸಾ ಶಿಬಿರವು ಮಾ.2ರಿಂದ ಮಾ.7ರವರೆಗೆ ನಡೆಯಲಿದೆ. ಮಣಿಪಾಲದ ಶಿವಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಮುನಿಯಾಲು ಆಯುರ್ವೇದ ಆಸ್ಪತ್ರೆ ಹಾಗೂ ಉಡುಪಿಯ ಅಜ್ಜರಕಾಡಿನಲ್ಲಿರುವ ಕುಟುಂಬ ಚಿಕಿತ್ಸಾಲಯದಲ್ಲಿ ಈ ಸೌಲಭ್ಯ ಲಭ್ಯವಿರಲಿದೆ.

ಶಿಬಿರದಲ್ಲಿ ಮೈಗ್ರೇನ್ ಮತ್ತು ತಲೆನೋವಿನ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ತಜ್ಞ ವೈದ್ಯರಿಂದ ಸಲಹೆ ನೀಡಲಾಗುವುದು. ಅಲ್ಲದೆ, ಅಗತ್ಯವಿರುವ ಚಿಕಿತ್ಸೆಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುವುದು ಎಂದು ಸಂಸ್ಥೆಯ ಪತ್ರಿಕಾ ಪ್ರಕಟಣೆ ತಿಳಿಸಿದೆ. ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ನೋಂದಣಿಗಾಗಿ 8123403233 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಆಸ್ಪತ್ರೆಯು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ವಿಹಿಂಪ, ಬಜರಂಗದಳದಿಂದ 'ಬಡವರಿಗಾಗಿ ಸೂರು' ಸಂಕಲ್ಪ ಯೋಜನೆ

ಬಡ ಮಹಿಳೆ ಕುಟುಂಬಕ್ಕೆ ಸೂರಿನ ಭಾಗ್ಯ

ಉಡುಪಿ: ನಮ್ಮ ಪ್ರಾಮಾಣಿಕ ಆದಾಯದ ಐದನೇ ಒಂದಂಶ ಮಾತ್ರ ನಾವು ಬಳಸಿಕೊಂಡು ಉಳಿದ ಭಾಗ ಧರ್ಮ ಕಾರ್ಯ, ದೇವಕಾರ್ಯ, ಸತ್ಪಾತ್ರರಿಗೆ ದಾನ, ತನ್ನವರಿಗಾಗಿ ವಿನಿಯೋಗ ಮಾಡಬೇಕು. ಊರಿಗೆ ಒಳ್ಳೆಯದಾಗುವ ಕಾರ್ಯವೇ ದೇಶಸೇವೆ. ಒಳ್ಳೆಯ ಮನಸ್ಸುಗಳು ಸೇರಿದಾಗ ಉತ್ತಮ ಕಾರ್ಯಗಳು ನಡೆಯುತ್ತವೆ ಎಂದು ಉಡುಪಿ ಅದಮಾರು ಮಠದ ಕಿರಿಯ ಯತಿವರ್ಯ ಶ್ರೀ ಈಶಪ್ರಿಯತೀರ್ಥ ಶ್ರೀಪಾದರು ನುಡಿದರು.

ಅವರು ಶುಕ್ರವಾರ ವಿಶ್ವ ಹಿಂದೂ ಪರಿಷತ್ ಉಡುಪಿ ಜಿಲ್ಲೆ, ಬಜರಂಗದಳ ಉಡುಪಿ ಜಿಲ್ಲೆ, ಶ್ರೀರಾಮ ಸೇವಾ ಟ್ರಸ್ಟ್ ಮತ್ತು ಉಡುಪಿ ಅದಮಾರು ಮಠದ ವತಿಯಿಂದ 'ಬಡವರಿಗಾಗಿ ಸೂರು' ಸಂಕಲ್ಪದಡಿಯಲ್ಲಿ ಮಣಿಪಾಲ ನೆಹರೂ ನಗರದ ಕಾಲನಿಯ ರೇಣುಕಾ ಕುಟುಂಬಕ್ಕೆ ನೂತನವಾಗಿ ನಿರ್ಮಿಸಿದ ಮನೆಯ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಿದರು.



ಪ್ರತಿ ಮನೆಯಲ್ಲೂ ಎಲ್ಲರೂ ಜೊತೆಯಾಗಿ ನಿತ್ಯ ಪ್ರಾರ್ಥನೆ, ಭಜನೆ ನಡೆಯಬೇಕು. ಮನೆಯೇ ಸಂಸ್ಕಾರದ ಕೇಂದ್ರ ಬಿಂದು ಎಂದರು.

ವಿಹಿಂಪ ಜಿಲ್ಲಾ ಕಾರ್ಯದರ್ಶಿ ದಿನೇಶ್ ಮೆಂಡನ್ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ವಿಶ್ವ ಹಿಂದೂ ಪರಿಷತ್ ಜಿಲ್ಲಾ ಸಹಕಾರ್ಯದರ್ಶಿ ವಿಖ್ಯಾತ್ ಭಟ್ ಸ್ವಾಗತಿಸಿದರು. ಸಂಘಟನೆಗಳ ಪ್ರಮುಖರಾದ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್, ಪ್ರಾಂತ ಗೋರಕ್ಷಾ ಪ್ರಮುಖ್ ಸುನಿಲ್ ಕೆ.ಆರ್, ಜಿಲ್ಲಾ ಅಧ್ಯಕ್ಷ ವಿಷ್ಣುಮೂರ್ತಿ ಆಚಾರ್ಯ, ಬಜರಂಗದಳ ಪ್ರಾಂತ ಸಾಪ್ತಾಹಿಕ ಮಿಲನ್ ಪ್ರಮುಖ್ ಪುನೀತ್ ಅತ್ತಾವರ, ರಾಜೇಂದ್ರ ಶೆಣೈ, ಮನೋಜ್ ಮಲ್ಪೆ, ರಾಕೇಶ್ ಮಲ್ಪೆ, ಪ್ರಾಣೇಶ್ ಪರ್ಕಳ, ಪ್ರಕಾಶ್ ಮಲ್ಪೆ, ಸುಧಾಕರ್ ಆಚಾರ್ಯ, ದಿಲೇಶ್ ಶೆಟ್ಟಿ, ಪುರಂದರ ಕೋಟ್ಯಾನ್, ದೀಪಕ್ ಕೋಟ್ಯಾನ್, ಜಯಪ್ರಕಾಶ್ ಪ್ರಭು ಮಟಪಾಡಿ, ಆನಂದ್, ನಗರಸಭಾ ಸದಸ್ಯೆ ವಿಜಯಲಕ್ಷ್ಮಿ, ಸೂರ್ ಹಿರೇಬೆಟ್ಟು, ಕುಶಲ್ ಪೆರ್ಡೂರು, ಅದಮಾರು ಮಠದ ಗೋವಿಂದರಾಜ್, ಸಂಘಟನೆಗಳ ಸದಸ್ಯರು ಉಪಸ್ಥಿತರಿದ್ದರು.

> 'ಬಡವರಿಗಾಗಿ ಸೂರು' ಎಂಬ ಸಂಕಲ್ಪದ ಅಡಿಯಲ್ಲಿ ಈ ಮನೆಯನ್ನು ನಿರ್ಮಿಸಲಾಗಿದೆ. ಉಡುಪಿ ವಿಶ್ವ ಹಿಂದೂ ಪರಿಷತ್, ಬಜರಂಗದಳ, ಶ್ರೀರಾಮ ಸೇವಾ ಟ್ರಸ್ಟ್ ಮತ್ತು ಉಡುಪಿ ಅದಮಾರು ಮಠದ ಜಂಟಿ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ. ಆದಾಯದ ಒಂದು ಭಾಗವನ್ನು ಸಮಾಜ ಸೇವೆ, ಧರ್ಮ ಕಾರ್ಯ ಮತ್ತು ಬಡವರ ನೆರವಿಗಾಗಿ ವಿನಿಯೋಗಿಸಬೇಕು ಎಂಬ ಶ್ರೀಗಳ ಆಶಯದಂತೆ ಸೂರು ಕಟ್ಟಿಕೊಡಲಾಗಿದೆ.
>
> ● ದಿನೇಶ್ ಮೆಂಡನ್, ವಿಶ್ವ ಹಿಂದು ಪರಿಷತ್ ಉಡುಪಿ

ಉಡುಪಿಯ ಯಕ್ಷಗಾನ ಕಲಾರಂಗದಿಂದ ಐದು ದಿನಗಳ 'ಜೀವನ ವಿದ್ಯಾ' ಶಿಬಿರ ಸಮಾರೋಪ

ಕೌಶಲ ವೃದ್ಧಿಸಿಕೊಂಡರೆ ಉದ್ಯೋಗಾವಕಾಶ ಹೆಚ್ಚು: ಹರಿಕೃಷ್ಣ ಭಟ್

ಉಡುಪಿ: ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಹೊಸ ಕೌಶಲಗಳನ್ನು ಮೈಗೂಡಿಸಿಕೊಂಡು ಸದಾ ಜ್ಞಾನವೃದ್ಧಿ ಮಾಡಿಕೊಳ್ಳಬೇಕು. ಅಂತಹ ಕೌಶಲವಂತ ವಿದ್ಯಾರ್ಥಿಗಳನ್ನು ಉದ್ಯೋಗಾವಕಾಶಗಳು ತಾವಾಗಿಯೇ ಹುಡುಕಿಕೊಂಡು ಬರುತ್ತವೆ ಎಂದು ಹರಿಕೃಷ್ಣ ಭಟ್ ಜಪಾನ್ ತಿಳಿಸಿದರು.

ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಥಮ ಪಿಯುಸಿ ಮುಗಿಸಿದ ವಿದ್ಯಾಪೋಷಕ್ ವಿದ್ಯಾರ್ಥಿಗಳ ಐದು ದಿನಗಳ 'ಜೀವನ ವಿದ್ಯಾ' ಶೈಕ್ಷಣಿಕ ಸನಿವಾಸ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಗರಿಕ ಪ್ರಜ್ಞೆ, ಪರಿಸರ ಪ್ರೀತಿ ಮತ್ತು ಸಾಮಾಜಿಕ ಕಳಕಳಿ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಇರಬೇಕಾದ ಮೂಲಭೂತ ಗುಣಗಳು. ಈ ನಿಟ್ಟಿನಲ್ಲಿ ಯಕ್ಷಗಾನ ಕಲಾರಂಗದ ಕಾರ್ಯಕರ್ತರ ಶ್ರಮ ಶ್ಲಾಘನೀಯ ಎಂದರು.



ಅಂಬಲಪಾಡಿ ದೇವಳದ ಧರ್ಮದರ್ಶಿ ಡಾ. ನಿ. ಬೀ. ವಿಜಯ ಬಲ್ಲಾಳ್ ಅವರು ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿದರು. ಉದ್ಯಮಿ ಶ್ರೀಕಾಂತ ಅರಿಮಣಿತ್ತಾಯರು ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ಪೂರಕವಾದ ವೃತ್ತಿಪರ ಕೌಶಲ ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಅನುಭವ ಹಂಚಿಕೊಂಡ ಮಕ್ಕಳು

ಉಡುಪಿ ಜಿಲ್ಲೆಯ ಸುಮಾರು 244 ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಈ ಶಿಬಿರದಲ್ಲಿ ಹತ್ತು ವಿದ್ಯಾರ್ಥಿಗಳು ತಮ್ಮ ಕಲಿಕೆಯ ಅನುಭವ ಹಂಚಿಕೊಂಡರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಗ್ರೂಪ್ ಫೋಟೋ ವಿತರಿಸಲಾಯಿತು. 5 ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ನೇಮಿಚಂದ್ರ, ಡಾ. ವಿರೂಪಾಕ್ಷ ದೇವರಮನೆ ಸೇರಿದಂತೆ ಹದಿನೈದಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶನ ನೀಡಿದ್ದರು.

'ಶಿಬಿರದ ವಿಶೇಷತೆಯಾಗಿ ನಾಲ್ಕನೇ ದಿನ ರಾತ್ರಿ ಬನ್ನಂಜೆ ಸಂಜೀವ ಸುವರ್ಣ ಮತ್ತು ತಂಡದಿಂದ ಯಕ್ಷಗಾನ ಪ್ರದರ್ಶನ ಹಾಗೂ ಕೊನೆಯ ದಿನ ಸಾರ್ವಜನಿಕ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ಶಿಬಿರದ ನಿರ್ದೇಶಕ ಗುರುದತ್ತ ಬಂಟ್ವಾಳಕರ್ ಹಾಗೂ ಸಹನಾ ಕಿಣಿ ದಂಪತಿಯನ್ನು ಗೌರವಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿ, ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ನಿರೂಪಿಸಿದರು.

ಕಲ್ಲಡ್ಕ: ನಾಳೆ ರಾಷ್ಟ್ರೀಯ ವಿಚಾರ ಸಂಕಿರಣ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಕನ್ನಡ ವಿಭಾಗದ ವತಿಯಿಂದ ಐಕ್ಯೂಎಸಿ ಸಹಯೋಗದಲ್ಲಿ 'ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರಭಾವದ ಪ್ರತಿಬಿಂಬ' ಎಂಬ ವಿಷಯದ ಕುರಿತು ಆಯೋಜಿಸಲಾದ ರಾಷ್ಟ್ರೀಯ ವಿಚಾರ ಸಂಕಿರಣವು ಮಾ.2ಕ್ಕೆ ನಡೆಯಲಿದೆ. ಆಧ್ಯಾತ್ಮಿಕ ಚಿಂತಕರು ಮತ್ತು ಭಗವದ್ಗೀತಾ ವ್ಯಾಖ್ಯಾನಕಾರರಾದ ಪಾವಗಡ ಪ್ರಕಾಶ್ ರಾವ್ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ ಇದರ ಸಹಾಯಕ ಪ್ರಾಧ್ಯಾಪಕ ಡಾ. ರೋಹಿಣಾಕ್ಷ ಶಿರ್ಲಾಲು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಮಾಹಿತಿ ನೀಡಲಿದ್ದಾರೆ. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.